# ಕರ್ನಾಟಕ ವಿಧಾನ ಪರಿಷತ್ತು

## ಗುರುವಾರ, 13ನೇ ಡಿಸೆಂಬರ್ 2012

**ಸದನವು ಬೆಳಗಾವಿನಗರದ ಸುವರ್ಣ ವಿಧಾನಸೌಧದಲ್ಲಿರುವ**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 10 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

## 1. ಸಂತಾಪ ಸೂಚನೆ

### ಶ್ರೀ ಪಂಡಿತ್ ರವಿಶಂಕರ್‌ರವರ ನಿಧನದ ಕುರಿತು

**ಸಭಾಪತಿಯವರು:–** ಭಾರತ ರತ್ನ ಪದವಿಯನ್ನು ಸ್ವೀಕಾರ ಮಾಡಿದಂತಹ ಒಬ್ಬ ಹಿರಿಯ ವ್ಯಕ್ತಿ ನಮ್ಮನ್ನಗಲಿದ್ದಾರೆ. ಹಾಗಾಗಿ ಮನಸ್ಸಿಗೆ ದುಃಖವಾದಂತಹ ಒಂದು ರೆಸಲ್ಯೂಶನ್ ಅನ್ನು ತಮ್ಮ ಎದುರಿಗೆ ಇಡುತ್ತಿದ್ದೇನೆ.

ಜಗತ್ಪ್ರಸಿದ್ಧ ಸಿತಾರ್ ವಾದಕ ಶ್ರೀ ಪಂಡಿತ್ ರವಿಶಂಕರ್ ಅವರು ದಿನಾಂಕ: 12.12.2012ರಂದು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

ಶ್ರೀಯುತರು ೧೯೨೦ರಲ್ಲಿ ವಾರಣಾಸಿಯಲ್ಲಿ ಜನಿಸಿದ್ದರು. ಬಾಲ್ಯದಲ್ಲಿಯೇ ಸಂಗೀತದ ಆಸಕ್ತಿ ತಳೆದ ಇವರು ಉಸ್ತಾದ್ ಅಲ್ಲಾವುದ್ದೀನ್ ಖಾನ್ ಅವರ ಬಳಿ ಸಿತಾರ್ ಕಲಿಯಲು ಆರಂಭಿಸಿದರು. ಶ್ರೀಯುತರು ರಾಗ ಜೋಗೇಶ್ವರಿ, ಪರಮೇಶ್ವರಿ, ತಿಲಕ್ ಶ್ಯಾಮ್ ನಂತಹ ಅಪರೂಪದ ರಾಗಗಳನ್ನು ಸೃಷ್ಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಸಿತಾರ್ ನಾದದಲ್ಲಿ ಹಲವಾರು ರಾಗಗಳ ಎಳೆಯನ್ನು ಸೃಷ್ಟಿಸಿ ಒಂದು ಅದ್ಭುತ ರಾಗ ರಸ ಉಣಿಸುತ್ತಿದ್ದರು. ಸಿತಾರ್ ಮೂಲಕ ವಿಶ್ವಮಟ್ಟದಲ್ಲಿ ಭಾರತೀಯ ಸಂಗೀತ ಜನಪ್ರಿಯಗೊಳಿಸಿದ ಖ್ಯಾತಿ ಇವರದ್ದಾಗಿದೆ. ಇವರ ಶಾಸ್ತ್ರೀಯ ಸಂಗೀತ ಮತ್ತು ಪ್ರಯೋಗಾತ್ಮಕ ಸಂಗೀತಕ್ಕೆ ಜನ ಸಾಗರೋಪಾದಿಯಲ್ಲಿ ನೆರೆಯುತ್ತಿದ್ದುದು ವಿಶೇಷ. ದಕ್ಷಿಣಾದಿ ಮತ್ತು ಉತ್ತರಾದಿ ಎರಡೂ ಸಂಗೀತ ಶೈಲಿಗಳಲ್ಲಿ ಇರುವ 'ಖಮಾಜ್' ರಾಗವನ್ನು ಸುಲಲಿತವಾಗಿ ನುಡಿಸುತ್ತಿದ್ದುದು ಅಧ್ಭುತ.

ಶ್ರೀಯುತರು ಭಾರತ ರತ್ನ, ಪದ್ಮಭೂಷಣ, ಪದ್ಮವಿಭೂಷಣ, ಮೂರು ಬಾರಿ ಗ್ರ್ಯಾಮಿ ಪ್ರಶಸ್ತಿ, ಕಾಳಿದಾಸ್ ಸಮ್ಮಾನ, ಮ್ಯಗ್ಸೆಸೆ ಪ್ರಶಸ್ತಿ ಹಾಗೂ ಘುಕವೊಕ ಏಷ್ಯಾ ಸಂಸ್ಕೃತಿ ಪ್ರಶಸ್ತಿ ಇತರೆ ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಇವರ ನಿಧನದಿಂದಾಗಿ ರಾಷ್ಟ್ರವು ಒಬ್ಬ ಅಂತರರಾಷ್ಟ್ರೀಯ ಸ್ವರ ಮಾಂತ್ರಿಕ ಸಿತಾರ್ ವಾದಕರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯ ಮಂತ್ರಿಗಳು):–** ಜಗತ್ಪ್ರಸಿದ್ಧ ಸಿತಾರ್ ವಾದಕ ಶ್ರೀ ಪಂಡಿತ್ ರವಿಶಂಕರ್ ಅವರು ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಅವರು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದಂತಹವರು. ಸಿತಾರ್ ಮತ್ತು ರವಿಶಂಕರ್ ಈ ಎರಡೂ ಪದಗಳು ಒಂದಕ್ಕೊಂದು ಜೋಡಣೆ ಆಗಿದೆ. ಬಹುಶಃ ಇವತ್ತು ಯಾರಾದರು ಸಿತಾರ್ ಕಲಿಯುವವರು ಇದ್ದರೆ ಅಥವಾ ಅದರ ಬಗ್ಗೆ ಹೇಳುವವರಿದ್ದರೆ ಮೊದಲು ರವಿಶಂಕರ್ ಅವರನ್ನು ನೆನಪು ಮಾಡಿಕೊಳ್ಳಬೇಕು. ಅಷ್ಟು ಒಂದು ಹೋಲಿಕೆ ಸಾಧ್ಯವಿತ್ತು ಅಂದರೆ ಅವರು ಸಿತಾರ್ ವಾದಕದಲ್ಲಿ ಅಷ್ಟೊಂದು ತಲ್ಲೀನರಾಗಿದ್ದರು. ಅವರು ಕೇವಲ ಭಾರತದಲ್ಲಿ ಮಾತ್ರವಲ್ಲ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಸಹ ಅವರು ಸಿತಾರ್ ವಾದಕರು ಎಂದು ಹೆಸರುವಾಸಿಯಾಗಿದ್ದರು. ಹೀಗಾಗಿ ಅವರಿಗೆ ಎಲ್ಲಾ ರೀತಿಯಾದಂತಹ ಗೌರವ ಪ್ರಶಸ್ತಿಗಳು ಬಂದಿವೆ. ಅವರ ಒಂದು ಪ್ರತಿಭೆ, ಸಂಗೀತದಲ್ಲಿರುವಂತಹ ತಲ್ಲೀನತೆಯಿಂದಾಗಿ ಶ್ರೀಯುತರಿಗೆ ಭಾರತ ರತ್ನ, ಪದ್ಮಭೂಷಣ, ಪದ್ಮವಿಭೂಷಣ, ಮೂರು ಬಾರಿ ಗ್ರ್ಯಾಮಿ ಪ್ರಶಸ್ತಿ, ಕಾಳಿದಾಸ್ ಸಮ್ಮಾನ, ಮ್ಯಗ್ಸೆಸೆ ಪ್ರಶಸ್ತಿ ಹಾಗೂ ಫುಕುವೊಕ ಏಷ್ಯಾ ಸಂಸ್ಕೃತಿ ಪ್ರಶಸ್ತಿ ಇತರೆ ಹತ್ತು ಹಲವಾರು ಅಂದರೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಹೀಗಾಗಿ ಈ ಭಾಗದ ಸಂಗೀತ ರಸಿಕರಿಗೂ ಸಹ ತಮ್ಮ ಸಿತಾರ್ ವಾದಕದ ಸಂಗೀತದ ಊಟವನ್ನು ಉಣಬಡಿಸಿದರು. ಹುಬ್ಬಳ್ಳಿ ಮಹಾನಗರಕ್ಕೆ ಎರಡು ಸಲ ಭೇಟಿ ನೀಡಿದ್ದರು. ಅಲ್ಲದೆ ಬೆಂಗಳೂರು ಹಾಗೂ ಇನ್ನಿತರ ಸ್ಥಳಗಳಿಗೂ ಸಹ ಭೇಟಿ ನೀಡಿದ್ದರು. ಅದರಲ್ಲೂ ನಮ್ಮ ಧಾರವಾಡದ ಸಂಗೀತ ರತ್ನ ಶ್ರೀಮತಿ ಗಂಗೂಬಾಯಿ ಹಾನಗಲ್‌ರವರನ್ನು ಸಹ ಈ ಸಂದರ್ಭದಲ್ಲಿ ನೆನಪುಮಾಡಿಕೊಳ್ಳಬೇಕಾಗಿದೆ. ಆ ಒಂದು ಪರಂಪರೆಯಲ್ಲಿ ಬೆಳೆದು ಬಂದಂಥವರು ಇವರೆಲ್ಲ. ಶ್ರೀ ಪಂಡಿತ್ ರವಿಶಂಕರ್ ಅವರು ಇವತ್ತು ನಮ್ಮ ಮಧ್ಯೆ ಇಲ್ಲ ಎನ್ನುವಂಥದ್ದು ನೆನಪು ಮಾಡಿಕೊಂಡರೆ ಬಹಳ ದುಃಖವಾಗುತ್ತದೆ. ಸಮಾಜ ಇವತ್ತು ಬಹಳ ದೊಡ್ಡ

ವ್ಯಕ್ತಿಯನ್ನು ಕಳೆದುಕೊಂಡಿದೆ, ಅದರಲ್ಲೂ ಸಂಗೀತ ಲೋಕಕ್ಕೆ ಅವರ ನಿಧನದಿಂದಾಗಿ ಬಹಳ ದೊಡ್ಡ ನಷ್ಟ ಉಂಟಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ಸಿತಾರ್ ವಾದಕದಲ್ಲಿ ಬಹಳ ದೊಡ್ಡ ಅಧ್ಯಯನ ಮಾಡಿ ಅದರಲ್ಲಿ ಹೆಚ್ಚಿನ ಸಾಧನೆ ಮಾಡಿದರು. ಹೀಗಾಗಿ ಇವರು ಎಲ್ಲಾ ಸಂಗೀತಗಾರರಿಗೂ ಮಾರ್ಗದರ್ಶಕರಾಗಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೆಯೇ, ಸಂಗೀತದ ಬಗ್ಗೆ ಆಸಕ್ತಿಯನ್ನು ಹೊಂದಿದಂತಹ ಅಭಿಮಾನಿಗಳಿಗೆ ಅವರು ಮಾರ್ಗದರ್ಶಕರಾಗಿದ್ದರು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪಂಡಿತ್ ರವಿಶಂಕರ್ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇನೆ. ಅವರ ಅಗಲಿಕೆಯ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತನು ನೀಡಲಿ, ಅವರ ಲಕ್ಷಾಂತರ ಅಭಿಮಾನಿ ವರ್ಗದವರಿಗೂ ಈ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ಭಗವಂತನು ನೀಡಲಿ ಎನ್ನುತ್ತಾ ತಾವು ಮಂಡಿಸಿರತಕ್ಕ ಸಂತಾಪಸೂಚನೆಗೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ತಾವು ಮಂಡಿಸಿರತಕ್ಕ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಜಗತ್ಪ್ರಸಿದ್ಧರಾದ ಸಿತಾರ್ ವಾದಕ ಶ್ರೀ ಪಂಡಿತ್ ರವಿಶಂಕರ್‌ರವರ ನಿಧನ ಇಡೀ ವಿಶ್ವದ ಸಂಗೀತ ಲೋಕಕ್ಕೆ ದಿಗ್ಭ್ರಮೆಯನ್ನು ಹುಟ್ಟಿಸಿದೆ. 12–12–12 ರಂದು ಇಡೀ ವಿಶ್ವಕ್ಕೆ ಈ ದೊಡ್ಡದಾದ ಹಾನಿಯಾಗಿದೆ. ಸಂಗೀತ ಲೋಕಕ್ಕೆ ದೊಡ್ಡದಾದ ಹಾನಿಯಾಗಿದೆ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಸಿತಾರ್ ಮೂಲಕ ವಿಶ್ವಮಟ್ಟದಲ್ಲಿಯೇ ಭಾರತದ ಸಂಗೀತವನ್ನು ಜನಪ್ರಿಯಗೊಳಿಸಿದಂತಹ ಕೀರ್ತಿ ಇವರಿಗೆ ಸಲ್ಲುತ್ತದೆ. ಪಂಡಿತ್ ರವಿಶಂಕರ್‌ರವರು ಸಿತಾರ್ ವಾದನದ ಮೂಲಕ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿ ಇಡೀ ಪ್ರಪಂಚದ ಗಮನವನ್ನು ಸೆಳೆದಿದ್ದರು. 1999ರಲ್ಲಿ ಭಾರತರತ್ನ ಪ್ರಶಸ್ತಿಗೆ ಭಾಜನರಾಗಿದ್ದವರು. 1986ರಿಂದ 1992ರವರೆಗೆ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದನ್ನು ನಾವಿಲ್ಲಿ ಸ್ಮರಿಸಬಹುದು. ಇಂತಹ ಒಬ್ಬ ಸಂಗೀತಗಾರರ ಕಚೇರಿಗೆ ಲಕ್ಷಾಂತರ ಜನ

ಸೇರುವುದನ್ನು ನಾವು ಕಂಡಿದ್ದೇವೆ. ಇಂತಹವರ ನಿಧನ ವಿಶ್ವದ ಸಂಗೀತ ಲೋಕಕ್ಕೆ ದೊಡ್ಡದಾದ ಹಾನಿಯೆಂದು ನಾನಂತೂ ಭಾವಿಸಿದ್ದೇನೆ. ಶ್ರೀಯುತರು ಭಾರತರತ್ನ ಮಾತ್ರವಲ್ಲದೇ, ಪದ್ಮಭೂಷಣ, ಪದ್ಮವಿಭೂಷಣ, ಮೂರು ಬಾರಿ ಗ್ರ್ಯಾಮಿ ಪ್ರಶಸ್ತಿ, ಕಾಳಿದಾಸ್ ಸಮ್ಮಾನ, ಮ್ಯಗ್ಸೆಸೆ ಪ್ರಶಸ್ತಿ ಹಾಗೂ ಫುಕುವೊಕ ಏಷ್ಯಾ ಸಂಸ್ಕೃತಿ ಪ್ರಶಸ್ತಿ ಹೀಗೆ ಹತ್ತು ಹಲವಾರು ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು. ಇದರ ಜೊತೆಗೆ 2013ರ ಗ್ರ್ಯಾಮಿ ಪ್ರಶಸ್ತಿಗೂ ಕೂಡ ನಾಮನಿರ್ದೇಶಿತರಾಗಿದ್ದರು. ಈಗ ಅವರು ಇಲ್ಲದಿರುವುದು ನಮ್ಮ ದುರ್ದೈವ. ಕಳೆದ ನವೆಂಬರ್‌ನಲ್ಲಿ ಅವರ ಮಗಳು ಅನುಷ್ಕಾ ಜೊತೆಯಲ್ಲಿ ತಮ್ಮ ಕೊನೆಯ ಕಚೇರಿಯನ್ನು ನಡೆಸಿಕೊಟ್ಟಿದ್ದರು. ಇಂತಹ ಒಬ್ಬ ಜಗದ್ವಿಖ್ಯಾತಿಯನ್ನು ಗಳಿಸಿದಂತಹ ಅಂತರರಾಷ್ಟ್ರೀಯ ಮಟ್ಟದ ಹಾಗೂ ಹಿಂದಿನ ರಾಜ್ಯಸಭಾ ಸದಸ್ಯರೂ ಆದ ರವಿಶಂಕರ್‌ರವರು ತಮ್ಮ ಸಂಗೀತದಿಂದ ವಿಶ್ವವನ್ನೇ ಬೆರಗುಗೊಳಿಸುವುದರ ಜೊತೆಗೆ ಭಾರತೀಯ ಸಂಗೀತದ ಪರಿಚಯವನ್ನು ವಿಶ್ವದಲ್ಲಿಯೇ ಛಾಪು ಮೂಡಿಸಿದ್ದರು. ಇಂತಹವರ ನಿಧನದಿಂದ ಭಾರತದ ಸಂಗೀತ ಲೋಕ ಮಾತ್ರವಲ್ಲದೇ ವಿಶ್ವದ ಸಂಗೀತ ಲೋಕಕ್ಕೆ ಹಾನಿಯಾಗಿದೆ ಎನ್ನುವ ಮಾತನ್ನು ಹೇಳುತ್ತಾ, ಪಂಡಿತ್ ರವಿಶಂಕರ್‌ರವರು ಧಾರವಾಡದ ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಆಲಿಖಾನ್, ಇಂತಹವರ ಜೊತೆಯಲ್ಲಿ ಉತ್ತಮ ಬಾಂಧವ್ಯವನ್ನು ಹೊಂದಿದ್ದರು. ಹಾನಗಲ್ ಗಂಗೂಬಾಯಿಯವರು ಸಹ ಅವರ ಸಮಕಾಲೀನವರು, ಈ ದೇಶದ ಹೆಸರನ್ನು ಇಡೀ ಜಗತ್ತಿನ ಸಂಗೀತ ಲೋಕದಲ್ಲಿ ಮೂಡಿಸಿದ್ದರು. ಸಂಗೀತದಲ್ಲಿ ಅವರ ಕೊಡುಗೆ ಬಹಳ ದೊಡ್ಡದು ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರ ಅಗಲಿಕೆಯ ನೋವನ್ನು ಅವರ ಕುಟುಂಬ ವರ್ಗದವರಿಗೆ ಮತ್ತು ಸಂಗೀತದ ಅಭಿಮಾನಿಗಳಿಗೆ ಭಗವಂತನು ನೀಡಲಿ ಮತ್ತು ನಮ್ಮನ್ನು ಅಗಲಿದೆ ಹಿರಿಯ ಚೇತನಕ್ಕೆ ಭಗವಂತ ಸದ್ಗತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ದಿವಂಗತರುಗಳಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು.)

**ಸಭಾಪತಿಯವರು:–** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

**ಸಭಾಪತಿಯವರು:–** ಈಗ ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(10 ಗಂಟೆ 35 ನಿಮಿಷದಲ್ಲಿ ಮುಂದೂಡಲ್ಪಟ್ಟ ಸದನವು ಪುನಃ 10 ಗಂಟೆ 53 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದ್ದರು)**

**ಸಭಾಪತಿಯವರು:–** ಇಂದು ಪ್ರಶ್ನೋತ್ತರ ಅವಧಿ ಇಲ್ಲ. ಆದ್ದರಿಂದ ಪ್ರಾರಂಭದಲ್ಲಿ ವಿಶೇಷ ಪ್ರಸ್ತಾವವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಮೊದಲನೆಯದಾಗಿ ಶ್ರೀ ಎಂ.ಸಿ. ನಾಣಯ್ಯನವರು ಪ್ರಸ್ತಾಪ ಮಾಡಿ,

## 2. ವಿಶೇಷ ಪ್ರಸ್ತಾವ

**ವಿಷಯ:–** ಮಂಗಳೂರಿನ ಪೆಡಿಲ್ ಪ್ರದೇಶದ ಹೋಂಸ್ಟೇಯಲ್ಲಿ ನಡೆದ ಘಟನೆ ಬಗ್ಗೆ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ

"ಈಗ್ಗೆ ಕೆಲವು ತಿಂಗಳುಗಳ ಹಿಂದೆ ಮಂಗಳೂರಿನ ಪಡಿಲ್ ಎಂಬ ಪ್ರದೇಶದಲ್ಲಿ ಹೋಂಸ್ಟೇ ಒಂದರಲ್ಲಿ ಕೆಲವು ಯುವಕರು ಮತ್ತು ಯುವತಿಯರು ಹುಟ್ಟುಹಬ್ಬ

ಸಮಾರಂಭದಲ್ಲಿ ಭಾಗಿಯಾಗಿದ್ದಾಗ, ಕರ್ನಾಟಕ ಜನ ಜಾಗೃತಿ ವೇದಿಕೆಯ ಕಾರ್ಯಕರ್ತರು ಏಕಾಏಕಿಯಾಗಿ ಸಮಾರಂಭ ನಡೆಯುತ್ತಿದ್ದ ಹೋಂಸ್ಟೇಗೆ ಅಕ್ರಮ ಪ್ರವೇಶ ಮಾಡಿ, ಸಂತೋಷ ಕೂಟದಲ್ಲಿ ಭಾಗಿಯಾಗಿದ್ದ ಗೌರವಾನ್ವಿತ ಹೆಣ್ಣು ಮಕ್ಕಳನ್ನು ಅಮಾನುಷವಾಗಿ ಥಳಿಸಿ, ಲೈಂಗಿಕ ಕಿರುಕುಳ ಕೊಟ್ಟು, ಮಾನಸಿಕ ಹಿಂಸೆಗೆ ಒಳಪಡಿಸಿ ಮತ್ತು ಅವರ ಜೊತೆಯಲ್ಲಿದ್ದ ಯುವಕರನ್ನೂ ಸಹ ಹಿಗ್ಗಾಮುಗ್ಗ ಥಳಿಸಿ, ಅತ್ಯಂತ ಅಮಾನುಷ ಮತ್ತು ಅಮಾನವೀಯ ಕೃತ್ಯವನ್ನು ಮಾಡಿರುತ್ತಾರೆ. ಈ ಒಂದು ಕ್ರಿಮಿನಲ್ ಕೃತ್ಯದ ಮಾಹಿತಿಯನ್ನು ಪಡೆದ ಮಂಗಳೂರಿನ ಕಸ್ತೂರಿ ದೃಶ್ಯ ಮಾಧ್ಯಮದ ವರದಿಗಾರ ಮತ್ತು ವಿಡಿಯೋ ಚಿತ್ರಗ್ರಾಹಕರು ಅವೆಲ್ಲವುಗಳನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಭಿತ್ತರಿಸಿದ ಹಿನ್ನೆಲೆಯಲ್ಲಿ ಮಂಗಳೂರಿನ ಪೊಲೀಸರು ಹೋಂಸ್ಟೇಗೆ ಬಂದು, ಈ ಕೃತ್ಯದಲ್ಲಿ ಭಾಗಿಯಾಗಿದ್ದ ಕಾರ್ಯಕರ್ತರ ಮೇಲೆ ಕೂಡಲೇ ಕ್ರಮ ಕೈಗೊಳ್ಳುವ ಬದಲಾಗಿ ಅವರ ಜೊತೆ ಶಾಮೀಲಾಗಿ ಅವರನ್ನು ಸ್ಥಳದಿಂದ ಫಲಾಯನ ಮಾಡಲು ಅವಕಾಶ ಕೊಟ್ಟು, ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದು, ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದ ಶ್ರೀ ನವೀನ್‌ರವರ ಮೇಲೆಯೇ ಕ್ರಿಮಿನಲ್ ಮೊಕದ್ದಮ್ಮೆ ಹೂಡಲಾಗಿದೆ. ಈ ವಿಷಯವನ್ನು ಕಳೆದ ಅಧಿವೇಶನದ ಸಂದರ್ಭದಲ್ಲಿ ನಾನು ಪ್ರಸ್ತಾಪಿಸಿದಾಗ, ಮಾನ್ಯ ಗೃಹ ಸಚಿವರು ವರದಿಗಾರ ಶ್ರೀ ನವೀನ್‌ರವರಿಗೆ ಸೂಕ್ತ ರಕ್ಷಣೆ ನೀಡುವುದಾಗಿಯೂ ಮತ್ತು ಡಿ.ಡಿ.ಜಿ.ಪಿ ಶ್ರೀ ಬಿಪಿನ್ ಗೋಪಾಲಕೃಷ್ಣರವರನ್ನು ತನಿಖಾಧಿಕಾರಿಯಾಗಿ ನೇಮಿಸಿ, ತನಿಖೆ ಆರಂಭಿಸಿ, ತಪ್ಪಿತಸ್ಥ ಆರೋಪಿಗಳನ್ನು ಬಂಧಿಸಿ ಅವರ ವಿರುದ್ಧ ಐ.ಪಿ.ಸಿ ಕಲಂಗಳಡಿ ದರೋಡೆ, ಮಾರಣಾಂತಿಕ ಹಲ್ಲೆ, ಲೈಂಗಿಕ ಶೋಷಣೆ ಅಪರಾಧಗಳನ್ನು ದಾಖಲಿಸಿದ್ದರು. ಆದರೆ ಈ

ದೃಶ್ಯಗಳನ್ನು ಸೆರೆಹಿಡಿದ ವರದಿಗಾರ ಶ್ರೀ ನವೀನ್‌ರವರನ್ನು ಶ್ಲಾಘಿಸುವುದರ ಬದಲು ಇತರ ಅಪರಾಧಿಗಳ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಆರೋಪಗಳನ್ನು ಇವರ ಮೇಲೂ ಹೊರಿಸಿ, ತಮ್ಮ ಎಫ್‌ಐಆರ್‌ನಲ್ಲಿ ಪ್ರಥಮ ಆರೋಪಿಯನ್ನಾಗಿ ದಾಖಲಿಸಿರುತ್ತಾರೆ. ಅಲ್ಲದೇ ಇಂದಿಗೂ ಸಹ ಬಂಧನದಲ್ಲಿರುವಂತೆ ಮಾಡಲಾಗಿದೆ. ಇದು ತನಿಖಾಧಿಕಾರಿಗಳ ಖಂಡನೀಯ ಕೃತ್ಯ. ಇದು ಪತ್ರಿಕಾ ಸ್ವಾತಂತ್ರ್ಯದ ಮೇಲೆ ಮಾಡಿರುವ ಹಲ್ಲೆ. ಈ ಹಿಂದೆ ಮಾನ್ಯ ಗೃಹ ಸಚಿವರು ಸಹ ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿ, ರಕ್ಷಣೆ ನೀಡಲು ಒಪ್ಪಿದ್ದರೂ, ತನಿಖಾಧಿಕಾರಿಗಳ ಈ ನಡವಳಿಕೆಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಅತ್ಯಂತ ವಿಷಾಧಕರ. ಹೀಗಾಗಿ ಮಾನ್ಯ ಗೃಹ ಸಚಿವರು ಕಸ್ತೂರಿ ವಾಹಿನಿಯ ಶ್ರೀ ನವೀನ್‌ರವರ ಮೇಲೆ ಹೂಡಿರುವ ಎಲ್ಲಾ ಮೊಕದ್ದಮೆಗಳನ್ನು ಅಭಿಯೋಗದಿಂದ ಕೂಡಲೇ ಹಿಂದಕ್ಕೆ ಪಡೆಯಬೇಕೆಂದು ಆಗ್ರಹಿಸಲು ಮತ್ತು ಈ ನಿಟ್ಟಿನಲ್ಲಿ ಮಾನ್ಯ ಗೃಹ ಸಚಿವರು ಆದೇಶಿಸಬೇಕೆಂಬ ಈ ವಿಷಯವನ್ನು ಇಂದು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ."

**ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಹಿಂದೆ ಬಹಳ ಚರ್ಚೆಯಾಗಿದ್ದು, ಅಂದು ಈ ವಿಚಾರವಾಗಿ ಸರ್ಕಾರವು ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ ಎಂದು ನಾನು ಹೇಳಿದ್ದೆನು. ಸದನದಲ್ಲಿ ಹೇಳಿದಂತೆ ಅವರ ಮೇಲೆ ಕೇಸ್‌ಗಳನ್ನು ದಾಖಲಿಸಿದ್ದು, ಇನ್ನೂ ಅವರಿಗೆ ಬಿಡುಗಡೆಗೆ ಅವಕಾಶ ನೀಡದೇ ಅವರು ಬಂಧನದಲ್ಲಿದ್ದಾರೆ. ಅಷ್ಟು ಕಟ್ಟುನಿಟ್ಟಾಗಿ ತನಿಖಾಧಿಕಾರಿಗೆ ಪೂರ್ತಿ ಸ್ವಾತಂತ್ರ್ಯ ಕೊಟ್ಟು ತನಿಖೆ ಮಾಡಿಸಲಾಗಿದೆ. ಇದರ ಬಗ್ಗೆ ಕೋರ್ಟ್ ಸಹ ಮಾನಿಟರ್ ಮಾಡುತ್ತಿದೆ ಹಾಗೂ ಫಿರ್ಯಾದು ಕ್ರಮದ ಬಗ್ಗೆ ಒಂದು PIL ಸಹ ದಾಖಲಾಗಿದೆ. ಇದರಿಂದ ಸರ್ಕಾರ ಯಾವುದೇ

ರೀತಿ ಹಸ್ತಕ್ಷೇಪ ಮಾಡಿಲ್ಲ ಎಂಬುದು ಕಾಣುತ್ತದೆ. ಮಾನ್ಯ ನಾಣಯ್ಯನವರು ಈ ವಿಚಾರವಾಗಿ ನಿನ್ನೆ ನನ್ನ ಜೊತೆ ಮಾತನಾಡಿದ್ದಾರೆ. ನಾನೂ ಸಹ ಪತ್ರಿಕಾ ವರದಿಗಾರರ ಮೇಲೆ ಹಾಕಿರುವ ಕೇಸ್‌ಗಳ ಬಗ್ಗೆ ಪೊಲೀಸರು ಎಫ್‌ಐಆರ್ ದಾಖಲು ಮಾಡಿದ್ದಾರೆ. ಕೋರ್ಟಿಗೂ ಛಾರ್ಜ್‌ಶೀಟ್ ಸಹ ಸಲ್ಲಿಸಿದ್ದೇವೆ. ಆದರೂ ಮಾನ್ಯ ನಾಣಯ್ಯನವರು ವ್ಯಕ್ತ ಮಾಡಿರುವ ಭಾವನೆಯಂತೆ ಎಲ್ಲ ಸದಸ್ಯರ ಭಾವನೆಗಳು ಇವೆ ಎಂದು ತಿಳಿದುಕೊಂಡಿದ್ದೇನೆ. ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ, ಕಾನೂನು ಇಲಾಖೆಯ ಜೊತೆ ಚರ್ಚಿಸಿ, ಕಾನೂನಿನಡಿಯಲ್ಲಿ ಮುಂದಿನ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:-** ದಯವಿಟ್ಟು ಅಭಿಯೋಗದಿಂದ ಹಿಂದಕ್ಕೆ ಪಡೆಯಲು ಒಪ್ಪಿಗೆ ಸೂಚಿಸಬೇಕು. ನಂತರ ಕಾನೂನಿನಡಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಿ. ಹಿಂದಕ್ಕೆ ಪಡೆಯಬೇಕು ಎಂಬುದು ನನ್ನ ಆಗ್ರಹ. ಆದ್ದರಿಂದ ಹಿಂದಕ್ಕೆ ಪಡೆಯಲು ಒಪ್ಪಿಗೆ ಕೊಡಬೇಕು. ಹಿಂದಕ್ಕೆ ಪಡೆಯಬೇಕು ಎಂಬುದು ಅವರ ಒಪ್ಪಿಗೆಯಾದರೆ ಕಾನೂನಿನಡಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಿ.

**ಶ್ರೀ ಆರ್. ಅಶೋಕ್:-** ಹೌದು, ಕಾನೂನಿನಡಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರ ಭಾವನೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದೇನೆ. ನಾನೂ ಅವರ ಪರವಾಗಿದ್ದೇನೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:-** ಸರಿ.

## 3. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಒಂದು ಸಂದೇಶ ಬಂದಿದೆ. ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2012ನೇ ಸಾಲಿನ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 121ರ ಮೇರೆಗೆ ವಿಧಾನ ಸಭೆಯು ದಿನಾಂಕ 12/12/2012ರಂದು ಯಾವುದೇ ತಿದ್ದುಪಡಿಗಳಿಲ್ಲದೇ ಅನುಮೋದಿಸಿತೆಂಬ ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

## 4. ಸಭೆಯ ಮುಂದಿಡಲಾದ ಕಾಗದಪತ್ರಗಳು

**ಕಾರ್ಯದರ್ಶಿ:–** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ:4) ವಿಧೇಯಕವನ್ನು ಸಭೆಯ ಮುಂದಿಡುತ್ತಿದ್ದೇನೆ.

## 5. ವಿತ್ತೀಯ ಕಾರ್ಯಕಲಾಪ

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನ 205(1)(ಎ)ನೆಯ ಅನುಚ್ಛೇದದ ಮೇರೆಗೆ 2012–13ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತನ್ನು) ಮಂಡಿಸುತ್ತೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

## 6. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

**ಕರ್ನಾಟಕ ಧನವಿನಿಯೋಗ (ಸಂಖ್ಯೆ: 4) ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ: 4) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೆ, ಈ ವಿಧೇಯಕವು ಪೂರಕ ಬಜೆಟ್‌ನ ಒಪ್ಪಿಗೆಯನ್ನು ಪಡೆದುಕೊಳ್ಳುವ ಮಂಡಿಸಿದ್ದು, ಇದರಲ್ಲಿ ಪ್ರಮುಖವಾಗಿ ಒಟ್ಟು 9 ಸಾವಿರ ಕೋಟಿ ರೂಪಾಯಿಗಳಿಗೆ ಒಪ್ಪಿಗೆ ಪಡೆದುಕೊಳ್ಳಲು ಮಂಡಿಸಿದ್ದೇನೆ.

(11.00 ಗಂಟೆ)

**ಶ್ರೀ ಜಗದೀಶ್ ಶೆಟ್ಟರ್:–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಧನ ವಿನಿಯೋಗ (ಸಂಖ್ಯೆ:4) ವಿಧೇಯಕ 2012, ಈ ಒಂದು ಪೂರಕ ಆಯವ್ಯಯಕ್ಕೆ ಸದನದ ಒಪ್ಪಿಗೆಯನ್ನು ಪಡೆದುಕೊಳ್ಳುವುದಕ್ಕಾಗಿ ಈ ವಿಧೇಯಕವನ್ನು ಮಂಡನೆ ಮಾಡಿದ್ದೇನೆ. ಇದರಲ್ಲಿ ಪ್ರಮುಖವಾಗಿ ಒಟ್ಟು 9197 ಕೋಟಿ ರೂಪಾಯಿಗಳಷ್ಟು ಪೂರಕವಾಗಿರುವಂತಹ ಆಯವ್ಯಯವನ್ನು ಪಡೆದುಕೊಳ್ಳಲು ಈ ವಿಧೇಯಕವನ್ನು ಮಂಡನೆ ಮಾಡಿದ್ದೇನೆ. ಈ ಪೂರಕ ಆಯವ್ಯಯವನ್ನು ಮಂಡನೆ ಮಾಡಲು ಮತ್ತು ಅದಕ್ಕೆ ಒಪ್ಪಿಗೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಮುಖವಾಗಿರುವಂತಹ ಕಾರಣಗಳು ಮತ್ತು ವಿಚಾರಗಳನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಇದರಲ್ಲಿ ಪ್ರಮುಖವಾಗಿ ಬೆಳೆ ಸಾಲ ಮನ್ನಾದ ಬಗ್ಗೆ ಹೇಳಬೇಕಾಗಿದೆ. ಕಳೆದ ಬಾರಿ

ವಿಧಾನ ಮಂಡಲದ ಅಧಿವೇಶನ ನಡೆದ ಸಂದರ್ಭದಲ್ಲಿ ರಾಜ್ಯದಲ್ಲಿರುವಂತಹ ಬರಗಾಲದ ಬವಣೆಯ ಬಗ್ಗೆ ಚರ್ಚೆ ಮಾಡಲಾಯಿತು. ನಮ್ಮ ರಾಜ್ಯದ ಸುಮಾರು 145 ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದಂತಹ ಸಂದರ್ಭದಲ್ಲಿ ನಮ್ಮ ರೈತರ ನೆರವಿಗೆ ಬರಬೇಕು ಎನ್ನುವ ದೃಷ್ಟಿಯಿಂದ ಸೊಸೈಟಿಗಳ ಮೂಲಕ ಕೃಷಿ ಸಾಲವನ್ನು ಮಾಡಿದಂತಹ ರೈತರಿಗೆ 25 ಸಾವಿರ ರೂಪಾಯಿಗಳ ಸಾಲ ಮನ್ನಾವನ್ನು ಘೋಷಣೆ ಮಾಡಲಾಗಿದೆ. ಇದರಿಂದಾಗಿ ಸರ್ಕಾರದ ಮೇಲೆ ಹೆಚ್ಚುವರಿಯಾಗಿ 3600 ಕೋಟಿ ರೂಪಾಯಿಗಳಷ್ಟು ಹೊರೆ ಬೀಳುತ್ತದೆ ಎನ್ನುವುದನ್ನು ಆ ದಿನವೂ ನಾನು ಹೇಳಿದ್ದೆ. ಇದಕ್ಕೆ ಇವತ್ತು ಆಯವ್ಯಯದಲ್ಲಿ ನಾವು ಹಣವನ್ನು ಒದಗಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಈ ಪೂರಕ ಅಂದಾಜಿನಲ್ಲಿ ಬೆಲೆ ಸಾಲ ಮನ್ನಾಕ್ಕಾಗಿ 1815 ಕೊಟಿ ರೂಪಾಯಿಗಳನ್ನು ಕೇಳುತ್ತಿದ್ದೇನೆ. ಏಕೆಂದರೆ, ಪ್ರತಿ ತಿಂಗಳು ಸೊಸೈಟಿಗಳಿಗೆ ಮತ್ತು ಡಿ.ಸಿ.ಸಿ. ಬ್ಯಾಂಕ್‌ಗಳಿಗೆ ಹಣವನ್ನು ಕಳುಹಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಪ್ರಮುಖವಾಗಿ 1815 ಕೋಟಿ ರೂಪಾಯಿಗಳನ್ನು ಪೂರಕ ಅಂದಾಜಿನಲ್ಲಿ ಕೇಳುತ್ತಿದ್ದೇನೆ. ಪರಿಷ್ಕೃತ ವೇತನ ಶ್ರೇಣಿಯಿಂದ ಉಂಟಾಗಿರುವಂತಹ ಹಣಕಾಸಿನ ಸೌಲಭ್ಯವನ್ನು ನೀಗಿಸುವ ಸಲುವಾಗಿ 1448 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದೇನೆ. ಮತ್ತೊಂದು ಪ್ರಮುಖವಾಗಿರುವಂತಹ ಅಂಶವೇನೆಂದರೆ, ಗ್ರಾಮೀಣ ವಿದ್ಯುದೀಕರಣದಿಂದ ಉಂಟಾಗಿರುವ ನಷ್ಟವನ್ನು ಭರಿಸುವುದಕ್ಕಾಗಿ 1250 ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜಿನಲ್ಲಿ ನಾನು ಕೇಳುತ್ತಿದ್ದೇನೆ. ಕರ್ನಾಟಕ ವಿದ್ಯುತ್ ಮಂಡಲಿಗೆ ಸಹಾಯಧನವನ್ನು ನೀಡುವ ನಿಟ್ಟಿನಲ್ಲಿ ಕೆ.ಇ.ಆರ್.ಸಿ. ನಿರ್ದೇಶನದಂತೆ ಗ್ರಾಮೀಣ ವಿದ್ಯುದೀಕರಣ ಯೋಜನೆಗಾಗಿ ನೀಡಲಾಗಿದ್ದ ಸಹಾಯಧನದ ಪಾವತಿಗಾಗಿ 1750 ಕೋಟಿ ಹಣವನ್ನು ಈ ಪೂರಕ ಅಂದಾಜಿನಲ್ಲಿ ಕೇಳುತ್ತಿದ್ದೇನೆ. ಭಾರತೀಯ ಮಾರುಕಟ್ಟೆ ಸಾಲಗಳ ಭವಿಷ್ಯದ ಹೊಣೆಗಾರಿಕೆಗಳನ್ನು ನೋಡಿಕೊಳ್ಳುವ ಸಲುವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಯನ್ವಯ ಋಣ ಪರಿಹಾರ ನಿಧಿಗೆ ಕೊಡುಗೆಯಾಗಿ

100 ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜುಗಳ ಮೂಲಕ ಕೊಡುತ್ತಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಮತ್ತೊಂದು ಪ್ರಮುಖವಾಗಿರುವಂತಹ ಯೋಜನೆಯೆಂದರೆ, National Rural Employment Guarantee Act (NREGA) ಉದ್ಯೋಗ ಖಾತರಿ ಯೋಜನೆ. ಈ ಯೋಜನೆಗಾಗಿ ಕೇಂದ್ರ ಸರ್ಕಾರದಿಂದ 720 ಕೋಟಿ ಹಣ ಬಂದಿದೆ ಅದರಲ್ಲಿ ರಾಜ್ಯ ಸರ್ಕಾರದ ಪಾಲು 80 ಕೋಟಿ ರೂಪಾಯಿಗಳನ್ನು ಸೇರಿಸಿ ಒಟ್ಟು 800 ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜಿನ ಮೂಲಕ ಕೇಳುತ್ತಿದ್ದೇವೆ. ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ರಸ್ತೆ ಮತ್ತು ಕಟ್ಟಡ ದುರಸ್ತಿ ಮತ್ತು ನಿರ್ವಹಣೆಗಾಗಿ 610 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದೇವೆ. ಮಾನ್ಯ ಸಭಾ ನಾಯಕರು ವಸತಿ ಇಲಾಖೆಯ ಮಂತ್ರಿಗಳಾಗಿದ್ದಾರೆ. ಅವರು ವಸತಿ ಇಲಾಖೆಯ ಮಂತ್ರಿಗಳಾದ ಮೇಲೆ ಬಹಳ ಹೆಚ್ಚು ಒತ್ತು ಕೊಟ್ಟು ಅನೇಕ ಕಡೆಗಳಲ್ಲಿ ಆಶ್ರಯ ನಿವೇಶನಗಳನ್ನು ಮತ್ತು ಮನೆಗಳನ್ನು ನಿರ್ಮಾಣ ಮಾಡಿ ಹಂಚಿಕೆ ಮಾಡುವಂತಹ ಕಾರ್ಯವನ್ನು ಬಹಳ ತೀವ್ರಗತಿಯಿಂದ ಮಾಡಿದ್ದಾರೆ. ಆಯವ್ಯಯದಲ್ಲಿ ಯಾವ ಪ್ರಮಾಣದ ಹಂಚಿಕೆ ಘೋಷಣೆ ಮಾಡಲಾಗಿತ್ತು ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮನೆ ಮತ್ತು ನಿವೇಶನಗಳನ್ನು ಹಂಚಿಕೆ ಮಾಡಿದ ಕಾರಣ ಹೆಚ್ಚಿನ ಹಣದ ಅವಶ್ಯಕತೆ ಉಂಟಾಗಿದೆ. ಆದ್ದರಿಂದ ಗುಲ್ಬರ್ಗಾ ಜಿಲ್ಲೆಯಲ್ಲಿ ಸಚಿವ ಸಂಪುಟ ಸಭೆಯನ್ನು ಮಾಡುವಂತಹ ಸಂದರ್ಭದಲ್ಲಿ 1000 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಮೊತ್ತ ಬೇಕೆನ್ನುವ ವಿಚಾರವನ್ನು ಹೇಳಿದ್ದರು, ಅದಕ್ಕೆ ಅಂದಿನ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆಯನ್ನು ನೀಡಲಾಗಿತ್ತು. ಆ ಕಾರಣದ ಹಿನ್ನೆಲೆಯಲ್ಲಿ 400 ಕೋಟಿ ರೂಪಾಯಿಗಳನ್ನು ತಕ್ಷಣವೇ ನೀಡಲಾಯಿತು. ಆ 400 ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜಿನಲ್ಲಿ ಕೇಳುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ರಾಷ್ಟ್ರೀಯ ವಿಪತ್ತು ನಿಧಿಯ ಮೊತ್ತಕ್ಕೆ Matching grant ನ್ನು ರಾಜ್ಯ ಸರ್ಕಾರದವರು ಕೊಡಬೇಕಾಗುತ್ತದೆ. ಈ ಪೂರಕ ಅಂದಾಜಿನಲ್ಲಿ ಅದಕ್ಕಾಗಿ 250 ಕೋಟಿ ರೂಪಾಯಿಗಳನ್ನು

ಮೀಸಲಾಗಿಟ್ಟಿದ್ದೇವೆ. ಈ ಪೂರಕ ಅಂದಾಜಿನಲ್ಲಿ ಅದಕ್ಕಾಗಿ ಹಣವನ್ನು ಕೇಳುತ್ತಿದ್ದೇವೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ವಿವಿಧ ಉಪ ಅಂಶಗಳಿಗಾಗಿ ಅಗತ್ಯವಿರುವ 188 ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜಿನಲ್ಲಿ ಕೇಳುತ್ತಿದ್ದೇನೆ. ಗ್ರಾಮೀಣ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವುದಕ್ಕಾಗಿ 128 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದೇವೆ. ಇವುಗಳ ಜೊತೆಗೆ ಕೆರೆಗಳ ದುರಸ್ತಿ ಮತ್ತು ಪುನಃಶ್ಚೇತನಕ್ಕಾಗಿ 100 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದೇವೆ. ಕುಡಿಯುವ ನೀರಿನ ಸರಬರಾಜು ಯೋಜನೆ ಸಲುವಾಗಿ ಅದರಲೂ ಬರಪೀಡಿತ ಪ್ರದೇಶಗಳಲ್ಲಿ ಕೊಳವೆ ಬಾವಿ ಪುನಃಶ್ಚೇತನಕ್ಕಾಗಿ ಪೂರಕ ಅಂದಾಜಿನಲ್ಲಿ 62 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಹೀಗೆ ಒಟ್ಟು 9197 ಕೋಟಿ ರೂಪಾಯಿಗಳ ಪೂರಕ ಅಂದಾಜಿಗೆ ಸಭೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ಪೂರಕ ಅಂದಾಜು ಬಹಳ ಅವಶ್ಯಕತೆ ಇರುವಂತಹ ಅಂದಾಜು ಆಗಿದೆ. ಇದರಿಂದ ಬಹಳ ಪ್ರಮುಖವಾಗಿರುವಂತಹ ಯೋಜನೆಗಳನ್ನು ಚಾಲನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಮತ್ತು ರೈತರಿಗೆ ಸಾಲ ಮನ್ನಾ ಮಾಡುವುದಕ್ಕೆ ಮತ್ತು ಮರು ಪಾವತಿ ಮಾಡುವುದಕ್ಕೆ ಮತ್ತು ವಸತಿ ಇಲಾಖೆಗೆ ಸಂಬಂಧಿಸಿದಂತೆ ಇರಬಹುದು, **NREGA** ಯೋಜನೆಗಳಿಗೆ ಸಂಬಂಧಪಟ್ಟಂತೆ ಇರಬಹುದು ಇನ್ನು ಹಲವಾರು ವಿಚಾರಗಳಿಗೆ ಸಂಬಂಧಪಟ್ಟಂತೆ ಪ್ರಮುಖವಾಗಿರುವಂತಹ ಯೋಜನೆಗಳಿಗೆ ಹೊಸದಾಗಿ ಪೂರಕ ಅಂದಾಜಿನ ಮೂಲಕ ಹಣವನ್ನು ಕೇಳುತ್ತಿದ್ದೇವೆ. ದಯವಿಟ್ಟು ಈ ಸದನದ ಎಲ್ಲ ಸದಸ್ಯರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸುಮಾರು 9197 ಕೋಟಿ ರೂಪಾಯಿಗಳಷ್ಟು ಪೂರಕ ಅಂದಾಜನ್ನು ಈ ಸದನದ ಮುಂದೆ ಮಂಡಿಸಿದ್ದಾರೆ. ಈ ರಾಜ್ಯದ ಆರ್ಥಿಕ ಪ್ರಗತಿ ತೃಪ್ತಿದಾಯಕವಾಗಿಲ್ಲ. ಇದನ್ನು ಹೇಳಬೇಕೆಂದು ಹೇಳುತ್ತಿಲ್ಲ. ಕೆಲವು

ಅಂಕಿಅಂಶಗಳ ಆಧಾರದ ಮೇಲೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ತೆರಿಗೆಯೇತರ ಆದಾಯ ಎನ್ನುವುದು 2010–11ರಲ್ಲಿ ಶೇಕಡಾ 0.88 ರಷ್ಟು ಇತ್ತು, ನಂತರ 2011–12ನೇ ಸಾಲಿನಲ್ಲಿ ಇದರ ಪ್ರಮಾಣ ಶೇಕಡಾ 0.61ಕ್ಕೆ ಇಳಿಕೆಯಾಯಿತು. 2012–13ರಲ್ಲಿ ಇದರ ಪ್ರಮಾಣ ಶೇಕಡಾ 0.46 ಕ್ಕೆ ಇಳಿಕೆಯಾಯಿತು. The non-tax revenue has been consistently decreasing which is not a health sign. ಇಡೀ ದೇಶದಲ್ಲಿಯೇ ಅತೀ ಹೆಚ್ಚು ತೆರಿಗೆ ಪಾವತಿ ಮಾಡುವಂತಹ ರಾಜ್ಯ ನಮ್ಮ ಕರ್ನಾಟಕ ರಾಜ್ಯವಾಗಿದೆ. ರಾಜ್ಯ ಸರ್ಕಾರದ ವಿಧಿಸುವ ತೆರಿಗೆಗಳಲ್ಲಿ ವಾಣಿಜ್ಯ ತೆರಿಗೆ ಇರಬಹುದು, ಅಬಕಾರಿ ಸುಂಕ ಇರಬಹುದು ಅಥವಾ ವಾಹನ ತೆರಿಗೆ ಇರಬಹುದು ಇವುಗಳು ಕೂಡ 2010–11ನೇ ಸಾಲಿನಲ್ಲಿ ಶೇಕಡಾ 10.2ರಷ್ಟು ಇದ್ದರೆ, 2011–12ರಲ್ಲಿ ಶೇಕಡಾ 9.25 ರಷ್ಟು ಇತ್ತು, ಈ ಅಂಕಿ ಸಂಖ್ಯೆಗಳನ್ನು ನೋಡಿದರೆ ಇಲ್ಲಿಯೂ ಸಹ ಇಳಿಕೆ ಆಗಿರುವುದು ಕಂಡು ಬರುತ್ತದೆ. ಸಂಪನ್ಮೂಲಗಳನ್ನು ಕ್ರೋಡೀಕರಣ ಮಾಡುವುದರಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎನ್ನುವುದು ನನ್ನ ಭಾವನೆಯಾಗಿದೆ. ಇನ್ನು ಸಾಲದ ಬಗ್ಗೆ ಹೇಳಬೇಕಾದರೆ, the total liability for the year 2011-12 is around ₹ 1,02,561 Crores. This is the total liability of the State. ಇದು ಸಾಲದ ಪ್ರಮಾಣವಾಗಿದೆ. It is almost equal to the Budget. 2012–13ನೇ ಸಾಲಿನಲ್ಲಿ 1,00,000 ಕೋಟಿ ರೂಪಾಯಿಗಳ ಆಯವ್ಯಯದ ಗಾತ್ರ ಏನಿತ್ತು ಅದಕ್ಕೆ ಸುಮಾರು ಸರಿಸಮಾನವಾದ ಪ್ರಮಾಣದಲ್ಲಿ ಸಾಲವೂ ಇದೆ. ಭಾರತ ಸರ್ಕಾರದಿಂದ ಬರುವಂತಹ ಅನುದಾನಗಳ ಪ್ರಮಾಣ ಮಾತ್ರ ಏರಿಕೆಯ ರೂಪದಲ್ಲಿದೆ. ಕೇಂದ್ರ ಸರ್ಕಾರದವರು ರಾಜ್ಯಕ್ಕೆ ಅನೇಕ ಯೋಜನೆಗಳಿಗಾಗಿ ಕೊಡುವಂತಹ ಅನುದಾನ ಏರಿಕೆಯ ಪ್ರಮಾಣದಲ್ಲಿದೆ. 2012–13ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯದ ಯೋಜನೆಗಳಿಗೆ ಬರುವಂತಹ ಹಣದ ಪ್ರಮಾಣ ಶೇಕಡಾ 2.56ರಷ್ಟು ಏರಿಕೆಯ ರೂಪದಲ್ಲಿದೆ. ಅದೇ ರೀತಿಯಲ್ಲಿ 2012–13ನೇ ಸಾಲಿನಲ್ಲಿ ಪ್ಲಾನ್ ಸ್ಕೀಂನ ಭಾಗ 'ಎ'ನಲ್ಲಿ 6970 ಕೋಟಿ ರೂಪಾಯಿಗಳನ್ನು ಮತ್ತು ಭಾಗ 'ಬಿ' ನಲ್ಲಿ 2023 ಕೋಟಿ ರೂಪಾಯಿಗಳನ್ನು ನಾನ್ ಪ್ಲಾನ್

ಸ್ಕೀಂನಲ್ಲಿ 13,736 ಕೋಟಿ ರೂಪಾಯಿಗಳು. ಅಂದರೆ ಒಟ್ಟು 22,730 ಕೋಟಿ ರೂಪಾಯಿಗಳು. The grant from Government of India is gradually increasing. Expenditure on Capital formation; ಅಂದರೆ, Asset creation ನ್ನು ನೋಡಿದರೆ ತಮಗೆ ಆಶ್ಚರ್ಯವಾಗಬಹುದು. 2010–11ರಲ್ಲಿ ಶೇಕಡಾ 3.97ರಷ್ಟು ಇದ್ದರೆ, 2011–12ರಲ್ಲಿ ಶೇಕಡಾ 3.68ರಷ್ಟಿದೆ. ಹಿಂದಿನ ವರ್ಷಕ್ಕೆ ಹೋಲಿಕೆ ಮಾಡಿ ನೋಡಿದರೆ, ಇದರ ಪ್ರಮಾಣ ಇಳಿಮುಖವಾಗಿದೆ ಎಂದು ಹೇಳಬಹುದಾಗಿದೆ. 2012–13ರಲ್ಲಿ projected ಶೇಕಡಾ 3.18 ಆಗಿದೆ. ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಅಭಿವೃದ್ಧಿಪರವಾಗಿರುವಂತಹ ರಾಜ್ಯವೆಂದು ನಾವು ಹೇಳುತ್ತೇವೆ. ಆದರೆ, ಇದರ ಕಥೆ ಬೇರೆಯೇ ಇದೆ. ವಾಸ್ತವಿಕಾಂಶಗಳೇ ಬೇರೆ ಇವೆ. "ನಮ್ಮ ಸರ್ಕಾರ ಅಭಿವೃದ್ಧಿಪರವಾಗಿದೆ ಮತ್ತು ಸದಾ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡುತ್ತದೆ" ಎಂದು ಅವರು ಹೇಳುತ್ತಾರೆ. ಆದರೆ, ವಾಸ್ತವಿಕಾಂಶಗಳನ್ನು ನೋಡಿದರೆ, financial position of the State is not good ಎನ್ನುವಂತಹ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಆರ್ಥಿಕ ಸಾಲದ ಹೊರೆ (Fiscal Deficit) ಏರಿಕೆಯ ಪ್ರಮಾಣದಲ್ಲಿ ಇದೆ. 2010–11ರಲ್ಲಿ ಶೇಕಡಾ 2.8 ಇತ್ತು 2011–12ರಲ್ಲಿ ಅದರ ಪ್ರಮಾಣ ಶೇಕಡಾ 2.92ಗೆ ಏರಿಕೆ ಆಯಿತು. 2012–13ರಲ್ಲಿ ಶೇಕಡಾ 2.94ರಷ್ಟು ಆಗಿದೆ. ಮುಂದೆ 2015–16ರ ಹೊತ್ತಿಗೆ ಇದರ ಪ್ರಮಾಣ ಶೇಕಡಾ 3ರಷ್ಟು ಆಗುವಂತಹ ಸಾಧ್ಯತೆಗಳು ಇವೆ. ಈಗಾಗಲೇ ಸಾಲದ ಹೊರೆ ಹೆಚ್ಚಾಗಿದೆ. ಆರ್ಥಿಕವಾಗಿ ಸಾಲದ ಹೊರೆ ಹೆಚ್ಚಾಗುವುದರಿಂದ, ಈ ಸರ್ಕಾರ ಸಾಲದ ಕಡೆಗೆ ಮುನ್ನಡೆಯುತ್ತಿದೆ ಎಂದು ನಾನು ಹೇಳಬೇಕಾಗುತ್ತದೆ. The State is moving towards debt trap.

ಸನ್ಮಾನ್ಯ ಸಭಾಪತಿಯವರೇ, ರಸ್ತೆ ಮತ್ತು ಕಟ್ಟಡಗಳ ಬಗ್ಗೆ ಹೇಳಬೇಕಾದರೆ, ರಸ್ತೆಗಳು ಮತ್ತು ಅವುಗಳ ನಿರ್ವಹಣೆಗೆ ಕೊಟ್ಟಿರುವಂತಹ ಅನುದಾನ ಸಹ ಇಳಿಕೆಯ ಪ್ರಮಾಣದಲ್ಲಿ ಇದೆ. 2010–11ರಲ್ಲಿ ಶೇಕಡಾ 0.19 ರಷ್ಟು ಇದ್ದರೆ, 2011–12ರಲ್ಲಿ ಶೇಕಡಾ 0.14ರಷ್ಟಿದೆ ಮತ್ತು 2012–13ರಲ್ಲಿ ಶೇಕಡಾ 0.11ರಷ್ಟು ಇದೆ. ಇಷ್ಟೆಲ್ಲಾ ಸಾಲ ತೆಗೆದುಕೊಂಡಿರುವುದರಿಂದ

ರೆವಿನ್ಯೂ ಸರ್‌ಪ್ಲಸ್ ಕೂಡ ತುಂಬಾ ಕಡಿಮೆ ಆಗಿದೆ. ರಾಜ್ಯದಲ್ಲಿ ಆರ್ಥಿಕ ಶಿಸ್ತು ಎನ್ನುವುದು ಇದೆಯೋ ಇಲ್ಲವೋ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. In spite of taking huge loans, the revenue surplus is decreasing. ಇದು ಬಹಳ ಆಶ್ಚರ್ಯದ ಸಂಗತಿಯಾಗಿದೆ. ರೆವಿನ್ಯೂ ಸರ್‌ಪ್ಲಸ್ ಎನ್ನುವುದು 2010–11ರಲ್ಲಿ ಶೇಕಡಾ 0.11 ರಷ್ಟು ಇತ್ತು, 2012–13ರಲ್ಲಿ ಅದರ ಪ್ರಮಾಣ ಶೇಕಡಾ 0.18ರಷ್ಟಿತ್ತು, 2013–14ರಲ್ಲಿ ಅದರ ಪ್ರಮಾಣ ಶೇಕಡಾ 0.05ರಷ್ಟಾಗಿದೆ. ಇದನ್ನು ನೋಡಿದರೆ ಏತಕ್ಕಾಗಿ ನಾವು ಪೂರಕ ಅಂದಾಜಿನಲ್ಲಿ ಇವರಿಗೆ ಹಣ ಕೊಡಬೇಕು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಅನೇಕ ಯೋಜನೆಗಳಿಗೆ 9197 ಕೋಟಿ ರೂಪಾಯಿಗಳ ಹಣವನ್ನು ಈ ಪೂರಕ ಅಂದಾಜಿನಲ್ಲಿ ಕೇಳುತ್ತಿದ್ದಾರೆ. ಸೆಪ್ಟೆಂಬರ್ ತಿಂಗಳವರೆಗೆ ಇವರು ಮಾಡಿರುವ ವೆಚ್ಚದ ಬಗ್ಗೆ ನಮಗೆ ಅಂಕಿಅಂಶಗಳು ದೊರೆತಿವೆ. ಅಂದರೆ, ಆರು ತಿಂಗಳ ಅವಧಿಯಲ್ಲಿ ಇವರು ಖರ್ಚು ಮಾಡಿರುವ ಪ್ರಮಾಣ ಕೇವಲ ಶೇಕಡಾ 37ರಷ್ಟಾಗಿದೆ. ಜಲ ಸಂಪನ್ಮೂಲ ಇಲಾಖೆಯ ಸಣ್ಣ ನೀರಾವರಿಗೆ ಕಡಿಮೆ ಖರ್ಚು ಮಾಡಿದ್ದಾರೆ. ಬೃಹತ್ ಪ್ರಮಾಣದ ನೀರಾವರಿ ಯೋಜನೆಗಳಿಗೆ ಕಡಿಮೆ ಖರ್ಚು ಮಾಡಲಾಗಿದೆ. NREGA, ಹಾಗೆಯೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಸಹ ಹಣವನ್ನು ಖರ್ಚು ಮಾಡಿಲ್ಲ. ಮಹಿಳೆಯರ ಬಗ್ಗೆ ಇವರಿಗೆ ಎಷ್ಟರಮಟ್ಟಿಗೆ ಕಾಳಜಿ ಇದೆ ಎನ್ನುವುದನ್ನು ಇದು ತೋರಿಸುತ್ತದೆ. ನಮ್ಮ ನಿಕಟಪೂರ್ವ ಪ್ರತಿಪಕ್ಷದ ನಾಯಕಿಯವರು ಇದರ ಬಗ್ಗೆ ನಂತರ ಮಾತನಾಡಬೇಕಾಗಿದೆ. ಭಾರತದ ಸಂವಿಧಾನದ ಅನುಚ್ಛೇಧ 14ರಲ್ಲಿ "Equality before law and equal protection of law" ಎನ್ನುವ ಒಂದು ಪ್ರಾವಿಜನ್ ಇದೆ. ಅದರಲ್ಲಿ,

"Special provision can be made for women and children development" ಎಂದಿದೆ. ಮಕ್ಕಳು ಮತ್ತು ಮಹಿಳೆಯರಿಗಾಗಿ ವಿಶೇಷವಾಗಿ ಸೌಲಭ್ಯಗಳನ್ನು ಒದಗಿಸುವುದಕ್ಕೆ ಮತ್ತು ಹಣವನ್ನು ಕೊಡುವುದಕ್ಕೆ ಅವಕಾಶವಿದೆ. ಇಲ್ಲಿ ಸಮಾನತೆಗೆ ಯಾವುದೇ ಸಂಬಂಧವಿಲ್ಲ. ಈ ಸರ್ಕಾರ ಇಲ್ಲಿಯೂ ಸಹ ಹಣವನ್ನು ಕಡಿಮೆ ಖರ್ಚು ಮಾಡಿದೆ. ಸಂವಿಧಾನದ

ಆಶೋತ್ತರಗಳು ಏನಿವೆ ಅವುಗಳನ್ನು ಈಡೇರಿಸುವುದಕ್ಕೆ ಈ ಸರ್ಕಾರ ವಿಫಲವಾಗಿದೆ ಎಂದು ಹೇಳಬೇಕಾಗಿದೆ. A special provision can be made for the development of women and children development. ಅನುಚ್ಛೇಧ 14 ಏನು ಹೇಳುತ್ತದೆ ಎಂದರೆ, "Equality before law and equal protection of law." ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ಎನ್ನುತ್ತದೆ. ಸಂವಿಧಾನ ರಚನೆ ಮಾಡುವಂತಹ ಸಂದರ್ಭದಲ್ಲಿ ಮಹಿಳೆಯರ ಬಗ್ಗೆ ಮತ್ತು ಮಕ್ಕಳ ಬಗ್ಗೆ ಚಿಂತನೆ ಇರಲಿ ಎನ್ನುವ ದೃಷ್ಟಿಯಿಂದ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಂವಿಧಾನದಲ್ಲಿ ವಿಶೇಷವಾದ ವಿನಾಯಿತಿ ಅನುಚ್ಛೇಧವನ್ನು ಇಟ್ಟಿದ್ದಾರೆ. ಅದೇ ಇಲಾಖೆಗೆ ಸಂಬಂಧಪಟ್ಟಂತೆ ಇವರು ಕಡಿಮೆ ಹಣ ಖರ್ಚು ಮಾಡಿದ್ದಾರೆ. Is it good on your part? ಯೋಜನೆ ಮತ್ತು ಯೋಜನೇತರ ವೆಚ್ಚಗಳನ್ನು ಗಮನಿಸಿದರೆ, ಯೋಜನೆಯ ವೆಚ್ಚಗಳಲ್ಲಿ ಬಹಳಷ್ಟು ಕಡಿಮೆ ಖರ್ಚು ಮಾಡಲಾಗಿದೆ. ಒಟ್ಟು ಯೋಜನೆ ಮತ್ತು ಯೋಜನೇತರ ವೆಚ್ಚದ ಗಾತ್ರ ಶೇಕಡಾ 37ರಷ್ಟು ಮಾತ್ರ ಇದೆ. ಅರ್ಧ ವರ್ಷದ ವೆಚ್ಚದ ಪ್ರಮಾಣ ಶೇಕಡಾ 50ರಷ್ಟಾದರೂ ಆಗಬೇಕಾಗಿತ್ತು. ಇನ್ನಷ್ಟು ಆಳಕ್ಕೆ ಹೋದರೆ ಇಂತಹ ಬಹಳಷ್ಟು ಲೋಪದೋಷಗಳು ಕಂಡು ಬರುತ್ತವೆ.

The performance of the State is not good and there is no financial discipline. ಈಗ ತಾನೇ ಮಾನ್ಯ ಮುಖ್ಯಮಂತ್ರಿಗಳು, 'Loan waive off scheme ನಲ್ಲಿ ಸಾಲ ಮನ್ನಾಗಾಗಿ 3600 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ' ಎಂದು ಹೇಳಿದರು. ಅದಕ್ಕಾಗಿ ಪೂರಕ ಅಂದಾಜಿನಲ್ಲಿ 1800 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಇಲ್ಲಿಯವರೆಗೆ ಸಾಲ ಮನ್ನಾ ಮಾಡಲು ಕೇವಲ 350 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವರ ಸರ್ಕಾರ ಇದುವವರೆಗೂ ಬಾಕಿ ಎನ್ನುವುದು ಇದ್ದೇ ಇರುತ್ತದೆ. ಸುಮಾರು 3600 ಕೋಟಿ ರೂಪಾಯಿಗಳ ಸಹಕಾರಿ ಸಾಲವನ್ನು ಮನ್ನಾ ಮಾಡಲಾಗಿದೆ, ಇದು ರೈತರಿಗೆ ನಮ್ಮ ಸರ್ಕಾರ ಕೊಟ್ಟಿರುವ ದೊಡ್ಡ ಕೊಡುಗೆ ಎಂದು ಹೇಳಿದ್ದರು. ಆದರೆ, ಜುಲೈಯಿಂದ ಇಲ್ಲಿಯವರೆಗೆ ಸಾಲ ಮನ್ನಾ ಮಾಡಲು ಸಹಕಾರ ಸಂಘಗಳಿಗೆ ಕೇವಲ 350 ಕೋಟಿ ರೂಪಾಯಿಗಳನ್ನು ಮಾತ್ರ ನೀಡಿದ್ದಾರೆ.

ಇವರು ನಮಗೆ ಕನ್ನಡಿಯೊಳಗಿನ ಗಂಟು ತೋರಿಸಿದ್ದಾರೆ. ನಮ್ಮ ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಹೋಗಿ, 'ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್‌ರವರು 25 ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಿದ್ದಾರೆ, ನಮಗೆ ಸಾಲ ಕೊಡಿ' ಎಂದು ಕೇಳಿದರೆ, 'ನಿಮ್ಮದು ಇನ್ನೂ ಮರುಪಾವತಿ ಆಗಿಲ್ಲ ಹೋಗಿ' ಎಂದು ಅವರು ಹೇಳುತ್ತಾರೆ. ಏಕೆಂದರೆ ಅದು ಇನ್ನೂ ಬಾಕಿ ಇದೆ. ನಾನೊಬ್ಬ ಸಹಕಾರಿಯಾಗಿ ಅದರ ಪ್ರಕ್ರಿಯೆಯ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ, ಮಾರ್ಚ್ 31ನೇ ತಾರೀಖಿನೊಳಗಾಗಿ ಎಲ್ಲ ಸಾಲವನ್ನು ಕಟ್ಟಿಬಿಡುತ್ತಾರೆ. ಆರ್ಥಿಕ ವರ್ಷದ ಕೊನೆಗೆ ಶೇಕಡಾವಾರು ರಿಕವರಿಯ ಪ್ರಮಾಣವನ್ನು ನೋಡುತ್ತಾರೆ. ಮುಂದೆ ಏಪ್ರಿಲ್ ಮೇ ತಿಂಗಳಲ್ಲಿ ಖರ್ಚು ಮಾಡಿಕೊಳ್ಳುತ್ತಾರೆ. ಬಾಕಿ ಉಳಿದಾಗ ಆ ಹಣವನ್ನು ರಾಜ್ಯ ಸರ್ಕಾರ ತುಂಬುತ್ತದೆ. ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಬಾಕಿ ಉಳಿಯುತ್ತದೆ. ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಯಾರು ಅಧಿಕಾರದಲ್ಲಿ ಇರುತ್ತಾರೆ. ಇವರೇ ಇರಲಿ, ಯಾರೇ ಇರಲಿ ನಾನು ಅದರ ಬಗ್ಗೆ ಭವಿಷ್ಯ ಹೇಳುವುದಕ್ಕೆ ಹೋಗುವುದಿಲ್ಲ. ಅವರ ಸಮಾಧಾನಕ್ಕೆ ನಾವೇ ಇರುತ್ತೇವೆಂದು ಅವರು ಅಂದುಕೊಳ್ಳಲಿ. ಈಗ ನಾವು ಅಘಾತಕಾರಿ ಮಾತನ್ನು ಹೇಳಿದರೆ ಅವರಿಗೆ ನೋವಾಗಬಹುದು. ಇವತ್ತಿನ ಕನ್ನಡಪ್ರಭ ದಿನಪತ್ರಿಕೆಯನ್ನು ಓದಿದರೆ ಅವರ ಹಣೆಬರಹ ಏನಿದೆ ಎನ್ನುವುದು ಗೊತ್ತಾಗುತ್ತದೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಮುಂದಿನ ಮೇ ತಿಂಗಳಿನಲ್ಲಿ ನಾವೇ ಅಧಿಕಾರದಲ್ಲಿ ಇರುತ್ತೇವೆ.

**ಶ್ರೀ ಉಮೇಶ್ ವಿ. ಕತ್ತಿ:–** ಸನ್ಮಾನ್ಯ ಸಭಾಪತಿಯವರೇ ಏಪ್ರಿಲ್–ಮೇನಲ್ಲಿಯೂ ನಾವೇ ಇರುತ್ತೇವೆ ಆನಂತರವೂ ನಾವೇ ಅಧಿಕಾರದಲ್ಲಿ ಇರುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಉಮೇಶ್ ಕತ್ತಿ ಅವರ ಮಾತನ್ನು ನಾನು ಒಪ್ಪುತ್ತೇನೆ. ಅವರು ಇರುತ್ತಾರೆ. ಆದರೆ, ಅಲ್ಲಿರುವುದಿಲ್ಲ ಇಲ್ಲಿರುತ್ತಾರೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಅಲ್ಲಿದ್ದು (ವಿರೋಧ ಪಕ್ಷದಲ್ಲಿ) ಅನುಭವವಾಗಿದೆ ಅವರು ಅಲ್ಲಿಯೇ ಇರಲಿ. ಒಳ್ಳೆಯ ಮಾರ್ಗದರ್ಶನವನ್ನು ಮಾಡುತ್ತಾರೆ.

**ಶ್ರೀ ದಯಾನಂದ:-** ಸನ್ಮಾನ್ಯ ಸಭಾಪತಿಯವರೇ, ನಾವು ಇಲ್ಲಿದ್ದು ಅವರಿಗೆ ಒಳ್ಳೆಯ ಮಾರ್ಗದರ್ಶನವನ್ನು ಮಾಡುತ್ತೇವೆ. ಆದರೆ ಅವರು ಅದನ್ನು ಕೇಳುವುದಿಲ್ಲ, ಅದಕ್ಕಾಗಿ ನಾವೇ ಅಲ್ಲಿ ಕುಳಿತುಕೊಳ್ಳೋಣ ಎಂದಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಇವರು ನಮ್ಮ ಬೆನ್ನು ಹತ್ತಿ ಬಾಗಿಲು ಬಡಿಯುತ್ತಿದ್ದರೆ ನಾವು ಏನು ಮಾಡುವುದು.

**ಶ್ರೀ ಕೆ.ಬಿ. ಶಾಣಪ್ಪ:-** ಸನ್ಮಾನ್ಯ ಸಭಾಪತಿಯವರೇ, ನಾವು ಬಹಳ ವರ್ಷ ಆ ಕಡೆ ಕುಳಿತು ಕೆಲಸ ಮಾಡಿದ್ದೇವೆ. ಈಗ ಈ ಕಡೆ ಕುಳಿತಿದ್ದೇವೆ. ಆನಂದ ಆಗುತ್ತಿದೆ. ಒಂದು ಹತ್ತು ವರ್ಷ ಇರುವುದಕ್ಕಾದರು ಬಿಡಿ ಸುಮ್ಮನೆ ಯಾಕೆ ಕಿರಿಕಿರಿ ಮಾಡುತ್ತೀರಿ?

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶಾಣಪ್ಪನವರದು ಸಹಾ ನಿಶ್ಚಿತ ಇಲ್ಲ. ಅವರ ಬಗ್ಗೆ ನಾನು ಸರ್ಟಿಫಿಕೇಟ್ ಕೊಡುತ್ತೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಸನ್ಮಾನ್ಯ ಸಭಾಪತಿಯವರೇ, 'ಐದು ವರ್ಷಗಳಾದರೂ ಅಧಿಕಾರದಲ್ಲಿ ಇರಿ' ಎಂದು ನಾವು ಹೇಳುತ್ತಿದ್ದೇವೆ. ಆದರೆ, ಐದು ವರ್ಷಗಳ ಕಾಲ ಇವರಿಂದ ಇರುವುದಕ್ಕೆ ಆಗುತ್ತಿಲ್ಲ. ಇನ್ನು ಹತ್ತು ವರ್ಷ ಹೇಗೆ ಇರುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಶ್ರೀ ಲೇಹರ್ ಸಿಂಗ್‌ರವರು ಮಾತನಾಡುವುದರಿಂದ ಕನ್ನಡ ಭಾಷೆಗೂ ಕೂಡ ತೊಂದರೆಯಾಗುತ್ತದೆ. ಕನ್ನಡ ಭಾಷೆಯ ಕೊಲೆಯಾಗುತ್ತದೆಂದು ನಾನು ಹೇಳುವುದಿಲ್ಲ.

**ಡಾ॥ ಎಸ್.ಆರ್. ಲೀಲಾ:-** ಮಾನ್ಯ ಸಭಾಪತಿಯವರೆ, ....

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಶ್ರೀಮತಿ ಎಸ್.ಆರ್. ಲೀಲಾರವರು ಕನ್ನಡ ಪಂಡಿತರು ಅವರ ಬಗ್ಗೆ ಏನು ಇಲ್ಲ.

**ಸಭಾಪತಿಯವರು:-** ಅದೆಲ್ಲಾ ಆಮೇಲೆ ಈಗ ಪೂರಕ ಬಜೆಟ್‌ನ್ನು ಏನು ಮಾಡೋಣ ಹೇಳಿ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಪೂರಕ ಬಜೆಟ್ ಮಾಡೋಣ. ಅದಕ್ಕೆ ಡಾ॥ ಎ.ಹೆಚ್. ಶಿವಯೋಗಿಸ್ವಾಮಿಗಳು ಮುಂದಿನ ಸಾರಿಯ ಚುನಾವಣೆಯಲ್ಲಿಯೂ ಕೂಡ ನಮ್ಮ ಪಕ್ಷವೇ ಗೆದ್ದು ಮತ್ತೆ ಅಧಿಕಾರಕ್ಕೆ ಬರುತ್ತೇವೆಂದು ಹೇಳಿಬಿಟ್ಟರು. ಅದಕ್ಕೆ ನಾನು ಇವತ್ತಿನ ದಿವಸ ಕನ್ನಡ ಪ್ರಭಾ ಪತ್ರಿಕೆಯವರು ಮಾಡಿರುವಂತಹ ಸಮೀಕ್ಷೆಯ ವರದಿ ಪತ್ರಿಕೆಯಲ್ಲಿ ಬಂದಿದೆ ಅದನ್ನು ನೋಡಿ ಎಂದು ಹೇಳುತ್ತಿದ್ದೇನೆ. Congress Party is going to get absolute majority. ಆದರೆ ನಾನು ಏಕೆ ಅವರಿಗೆ ಹೇಳಿಲಿಲ್ಲ ಎಂದರೆ, . . .

**Dr. A.H. SHIVAYOGISWAMY:-** Mr. Chairman sir, it is too early.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಪಾಪ ಇನ್ನೊಂದಷ್ಟು ದಿವಸ ಅರಾಮವಾಗಿರಲಿ ಇಂತಹ ಆಘಾತಕಾರಿ ವಿಷಯಗಳನ್ನು ಹೇಳುವುದು ಬೇಡ ಎಂದು ಸುಮ್ಮನಿದ್ದೆ. ಹೋಗುವಂತಹ ಸಂದರ್ಭದಲ್ಲಿ ಖುಷಿಯಿಂದ ಹೋಗಲಿ ಎಂದು. ಇವತ್ತು ಅಧಿವೇಶದ ಕೊನೆಯ ದಿವಸ ಬೇರೆ ಹೋಗುವ ಮುನ್ನ ಮುಖವನ್ನು ಸಪ್ಪಗೆ

ಮಾಡಿಕೊಂಡು ಹೋಗುವುದು ಬೇಡ. ಶ್ರೀಮತಿ ಭಾರತಿಶೆಟ್ಟಿಯವರು ಕೆಜೆಪಿ ಪರಿಸ್ಥಿತಿಯು ಯಾವ ರೀತಿಯಾಗಿದೆ ಎನ್ನುವುದನ್ನು ನೋಡಲಿ. ನೀವು ಎಷ್ಟು ಸೀಟ್‌ಗಳು ಬರುತ್ತೇವೆಂದು ಹೇಳುತ್ತಿದ್ದೀರಿ ಅಷ್ಟು ಬರುವುದಿಲ್ಲವೆಂದು ಸಮೀಕ್ಷೆಯಲ್ಲಿ ಹೇಳಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಭಾರತಿಶೆಟ್ಟಿಯವರು ತಾಯಿ ಭುವನೇಶ್ವರಿಯವರು ಎಲ್ಲಿ ಇರುತ್ತಾರೋ ಗೊತ್ತೇ ಇಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಸದ್ಯಕ್ಕೆ ಎರಡು ಕಡೆಯಲ್ಲಿಯೂ ಇರುತ್ತಾರೆ.

**ಸಭಾಪತಿಯವರು:–** ಈಗ ಸ್ವಲ್ಪ ರಾಜಕೀಯವನ್ನು ಬಿಟ್ಟು ಪೂರಕ ಬಜೆಟ್ ಬಗ್ಗೆ ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಮ್ಮನ್ನು ಅವರೇ deviate ಮಾಡುತ್ತಾರೆ. ಏನು ಮಾಡುವುದು?

**ಸಭಾಪತಿಯವರು:–** ಪೂರಕ ಬಜೆಟ್‌ನ್ನು pass ಮಾಡೋಣ ಅನ್ನುತ್ತೀರೋ ಅಥವಾ ಬೇಡ ಅನ್ನುತ್ತೀರೋ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದ grant ಬಹಳಷ್ಟು ಪ್ರಮಾಣದಲ್ಲಿ ಹೆಚ್ಚಾಗುತ್ತಿರುವುದರಿಂದ ರಾಜ್ಯ ಸರ್ಕಾರಕ್ಕೆ ಹಣಕಾಸಿನ ಸಹಾಯವಾಗಿದೆ. ಕೇಂದ್ರ ಸರ್ಕಾರದ ಪರವಾಗಿ ಮಾತನಾಡುವಾಗ ನಾನು ರಾಜಕೀಯವಾಗಿ ಮಾತನಾಡುವುದಿಲ್ಲ. ಅಂಕಿ ಸಂಖ್ಯೆಗಳನ್ನು ಕೊಟ್ಟು ಮಾತನಾಡುತ್ತೇನೆ. ಕೇಂದ್ರದಲ್ಲಿರುವಂತಹ UPA ಸರ್ಕಾರ ನಾಲ್ಕುವರೆ ವರ್ಷಗಳಲ್ಲಿ 89,000 ಕೋಟಿ ರೂಪಾಯಿಗಳ ಹಣವನ್ನು ನಮ್ಮ ರಾಜ್ಯ ಸರ್ಕಾರಕ್ಕೆ ಕೊಟ್ಟಿದೆ.

**ಶ್ರೀ ಉಮೇಶ್ ವಿ. ಕತ್ತಿ:–** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದವರು ಯಾರ ಉಪಕಾರಕ್ಕಾಗಿ ರಾಜ್ಯ ಸರ್ಕಾರಕ್ಕೆ ಹಣವನ್ನು ಕೊಟ್ಟಿದ್ದಾರೆ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಯಾರ ಉಪಕಾರಕ್ಕಾಗಿ ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ. We have got a right.

**ಶ್ರೀ ಉಮೇಶ್ ವಿ. ಕತ್ತಿ:–** ರಾಜ್ಯ ಸರ್ಕಾರದ ಪಾಲನ್ನು ಹಣವನ್ನು ಕೊಡಲೇಬೇಕಾಗಿತ್ತು ಕೊಟ್ಟಿದ್ದಾರೆ ಅಷ್ಟೇ. ಅದು ಅವರ ಕರ್ತವ್ಯ. It is the mandate. ಅವರೇನು ಹೆಚ್ಚಾಗಿ ಹಣವನ್ನು ಕೊಟ್ಟು ಉಪಕಾರವನ್ನು ಮಾಡಿದ್ದಾರೆಯೇ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದವರು ಕೊಡುವಂತಹ ಹಣವನ್ನು ರಾಜ್ಯ ಸರ್ಕಾರ ಸರಿಯಾಗಿ ಉಪಯೋಗವನ್ನು ಮಾಡಬೇಕು.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, . . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಿ.ಹೆಚ್. ವಿಜಯಶಂಕರ್‌ರವರು ಈ ಅಧಿವೇಶನದಲ್ಲಿ ಇಲ್ಲಿಯವರೆಗೂ ಮಾತನಾಡಿಲ್ಲ. ಇವತ್ತು ಅಧಿವೇಶನದ ಕೊನೆಯ ದಿನವಾಗಿದೆ. ಇವತ್ತು ಏಕೆ ಮಾತನಾಡುತ್ತೀರಿ? ನಾನು ಮಾತನಾಡಿ ಮುಗಿಸಿಬಿಡುತ್ತೇನೆ. ನಾನು ಮೊನ್ನೆಯ ದಿವಸ ನಿಮಗೆ ಹೇಳಿದೆ. ಏಕೋ ನೀವು ಬಹಳ ಶಾಂತವಾಗಿದ್ದೀರಿ ಎಂದು. ಅದಕ್ಕೆ ಇವತ್ತು ಮಾತನಾಡದೇ ಇದ್ದರೆ ಒಂದು ರೆಕಾರ್ಡ್ ಅಗುತ್ತದೆ. ಅದು ದಾಖಲೆಯಾಗಲಿ ಕುಳಿತುಕೊಂಡು ಬಿಡಿ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ಕಳೆದ ನಾಲ್ಕುವರೆ ವರ್ಷಗಳಿಂದ ಕೇಂದ್ರ ಯುಪಿಎ ಸರ್ಕಾರ ಬೇರೆ ಬೇರೆ ರೂಪದಲ್ಲಿ ರಾಜ್ಯ ಸರ್ಕಾರಕ್ಕೆ ಹಣವನ್ನು ಕೊಟ್ಟಿದೆ ಎಂದು ಪಟ್ಟಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡುತ್ತಿದ್ದಾರೆ. 1999ನೇ ಇಸವಿಯಿಂದ 2004ನೇ

ಇಸವಿಯವರೆ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ನೇತೃತ್ವದ ಸರ್ಕಾರ ಕೇಂದ್ರದಲ್ಲಿತ್ತು. ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿತ್ತು. ಆ ಸಮಯದಲ್ಲಿ ಯಾವ ಪ್ರಮಾಣದಲ್ಲಿ ರಾಜ್ಯಕ್ಕೆ ಹಣ ಹರಿದು ಬಂದಿದೆ ಎನ್ನುವುದನ್ನು ಕೂಡ ತಾವು ದಯಮಾಡಿ percentage ಅನ್ನು quote ಮಾಡಿ. ಆಗ ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಬಂದಂತಹ ಸಹಾಯಧನ ಮತ್ತು ಈಗ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕೊಟ್ಟಿರುವಂತಹ ಸಹಾಯಧನ ಅವರೆಡನ್ನು ಸಮಾಧಾನದಿಂದ ನೋಡಿದರೆ ಅರ್ಥವಾಗುತ್ತದೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಿ.ಹೆಚ್. ವಿಜಯಶಂಕರ್‌ರವರು ದೊಡ್ಡಸ್ಥಿಕೆಗೆ ಒಂದು ಲಕ್ಷ ಕೋಟಿ ಬಜೆಟ್ ಮಂಡಿಸಿದ್ದೇವೆಂದು ಹೇಳಿಕೊಳ್ಳುತ್ತಾರೆ. Plan outlay ಹೆಚ್ಚಾಗಿದೆ ಎನ್ನುತ್ತೀರಲ್ಲಾ?

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೆ, ತಮ್ಮ ಮುಖಾಂತರ ನಾನು ಹೇಳುವುದೇನೆಂದರೆ, ನಾಲ್ಕು ವರ್ಷಗಳ ಹಿಂದಿನಿಂದ ನಮ್ಮ ರಾಜ್ಯ ಸರ್ಕಾರದ ಗಾತ್ರ ಏನಿತ್ತು ಅದು ಹೆಚ್ಚಾಯಿತು. ಆ ಗಾತ್ರ ಹೆಚ್ಚಾಗಿದ್ದರಿಂದಲೇ ಮತ್ತು ಅಂದು ಕೇಂದ್ರ ಸರ್ಕಾರದಲ್ಲಿ ಯೋಜನಾ ಸಚಿವರಾಗಿದ್ದಂತಹ ಸನ್ಮಾನ್ಯ ಶ್ರೀ ಎಂ.ವಿ. ರಾಜಶೇಖರಮೂರ್ತಿಯವರು ಇಂದು ನಮ್ಮ ಸದನದಲ್ಲಿ ಹಿರಿಯ ಸದಸ್ಯರು. ಅವರು ಇದ್ದು ಬಹಳಷ್ಟು ಅದಕ್ಕೆ ಪೂರಕವಾಗಿ ಕೆಲಸವನ್ನು ಮಾಡಿದರು. ಅಂದಿನ ಮುಖ್ಯಮಂತ್ರಿಗಳಾದಂತಹ ಶ್ರೀ ಧರ್ಮಸಿಂಗ್‌ರವರು ತದನಂತರ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ತದನಂತರ ಶ್ರೀ ಬಿ.ಎಸ್. ಯಡಿಯೂರಪ್ಪನವರು ಅದನ್ನು appreciate ಮಾಡಿದ್ದಾರೆ. ಶ್ರೀ ಬಿ.ಎಸ್. ಯಡಿಯೂರಪ್ಪನವರು ಇದೇ ಸದನದಲ್ಲಿ ಹಲವಾರು ಬಾರಿ ಕೇಂದ್ರದಲ್ಲಿರುವಂತಹ ಶ್ರೀ ಮನಮೋಹನ್‌ಸಿಂಗ್‌ರವರು ಸರ್ಕಾರ ನಮ್ಮ

ರಾಜ್ಯಕ್ಕೆ ಅತ್ಯಂತ ಪೂರಕವಾಗಿದೆ ಎಂದು ಹೇಳಿದ್ದಾರೆ. ಸಾರಿಗೆ ಇಲಾಖೆಗೆ ಕೇಂದ್ರದಿಂದ ಎಷ್ಟು ಹಣ ಬಂದಿದೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಆರ್. ಅಶೋಕ್‌ರವರಿಗೆ ಗೊತ್ತಿದೆ.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೆ, ಅಂದಿಗೂ ಇಂದಿಗೂ ಗಾತ್ರ ಕೂಡ ದೊಡ್ಡದಾಗುತ್ತಾ ಹೋಗಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಗಾತ್ರ ದೊಡ್ಡದಾಗಿದೆ. ಅದಕ್ಕೆ ನಾವೆಲ್ಲರೂ ಪೂರಕವಾಗಿ ಕೆಲಸವನ್ನು ಮಾಡೋಣ. ನಾನು ಹೇಳುವುದೇನೆಂದರೆ ನಮ್ಮ ಶ್ರೀ ಉಮೇಶ್ ವಿ. ಕತ್ತಿಯವರು ಯಾರ ಸಲುವಾಗಿ ಕೊಟ್ಟರು, ಯಾರಪ್ಪನ ಸಲುವಾಗಿ ಕೊಟ್ಟರು ಎಂದು ಹೇಳಿದರು. ಯಾರಪ್ಪನ ಸಲುವಾಗಿಯೂ ನಾವು ಮಾಡುವುದು ಬೇಡ. ಅದಕ್ಕೆ ಆ ವಿಚಾರ ಬೇಡ. ನಾವೆಲ್ಲರೂ ಸೇರಿ ಅಭಿವೃದ್ಧಿಯಾಗುವುದಕ್ಕೆ ಪೂರಕವಾಗಿ ಕೆಲಸವನ್ನು ಮಾಡೋಣ. ಇವತ್ತು VAT ಮತ್ತು ಹಲವಾರು ನಿರ್ಧಾರಗಳಿಂದ ಸಂಪನ್ಮೂಲಗಳು ಜಾಸ್ತಿಯಾಗಿದೆ. ಅಂದು ನಾವು ಮೊದಲನೇ ಸಲ ಶಾಸಕರಾಗಿದ್ದಂತಹ ಸಂದರ್ಭದಲ್ಲಿ ಬಜೆಟ್ 9,000 ಕೋಟಿ ರೂಪಾಯಿಗಳು, 12,000 ಕೋಟಿ ರೂಪಾಯಿಗಳಿತ್ತು. ಅಂದು ನೀವು ಕೂಡ ಇದ್ದುದರಿಂದ ಇದು ತಮಗೂ ಗೊತ್ತಿದೆ. ಇವತ್ತು ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡಿಸುತ್ತೇವೆ. ಇವತ್ತು ನಮ್ಮ ಯೋಜನಾ ಗಾತ್ರ 28,000 ಕೋಟಿ ರಾಪಾಯಿಗಳೋ 32,000 ಕೋಟಿ ರೂಪಾಯಿಗಳೋ ಏನೋ ಅಗಿದೆ. ಮೊದಲು ಕೇಂದ್ರ ಸರ್ಕಾರದಿಂದ 2,000 ಅಥವಾ 3,000 ಕೋಟಿ ರೂಪಾಯಿಗಳು ಮಾತ್ರ ಬರುತ್ತಿತ್ತು. ಇವತ್ತು 36,000 ಕೋಟಿ ರೂಪಾಯಿಗಳವರೆಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹಣ ಬರುತ್ತಿದೆ. ಇದೆಲ್ಲಾ ಬದಲಾವಣೆಯಾಗಿದೆ. ರಾಷ್ಟ್ರ ಅಭಿವೃದ್ಧಿಗೆ ಪೂರಕವಾಗಿ ನಾವು ಕೂಡ ಅಭಿವೃದ್ಧಿಯನ್ನು ಹೊಂದುತ್ತಿದ್ದೇವೆ. ಅದಕ್ಕೆ ಈ ಸದನಗಳಲ್ಲಿ ಪೂರಕವಾಗಿ ಚರ್ಚೆಯಾಗಬೇಕು. ಅವರ ಅಪ್ಪ ಏಕೆ ಮಾಡಿದ, ಇವರ ಅಪ್ಪ ಏಕೆ ಮಾಡಿದ ಎನ್ನುವ ಭಾಷೆಯನ್ನು ದಯಮಾಡಿ ಉಪಯೋಗ

ಮಾಡುವುದು ಬೇಡ. ನಾವೆಲ್ಲರೂ ಸೇರಿ ರಾಜ್ಯ ಜನತೆಗೆ ಒಳ್ಳೆಯದನ್ನು ಮಾಡೋಣ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಹೇಳುತ್ತಿದ್ದೇನೆ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, . . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ದಯಮಾಡಿ ನಾನು ಮಾತನಾಡಿ ಮುಗಿಸುತ್ತೇನೆ. Deviate ಅಗುವುದು ಬೇಡ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರ ರಾಜ್ಯದ ಸರ್ಕಾರದ ಪಾಲಿನ ಹಣ ಏನು ಕೊಡಬೇಕಾಗಿದೆ ಅದು ಅನಿವಾರ್ಯತೆಯಿಂದ ರಾಜ್ಯಕ್ಕೆ ಹಣ ಬಂದಿದೆ. ಇವತ್ತು ದಕ್ಷಿಣ ಭಾಗದಲ್ಲಿ ಕೇಂದ್ರ ಸರ್ಕಾರದಿಂದ ವಿಶೇಷವಾದಂತಹ ಅನುದಾನಗಳು ಏನಾದರು ಹೋಗಿದ್ದರೆ, ಅದು ತಮಿಳು ನಾಡಿಗೆ ಮತ್ತು ಆಂಧ್ರ ಪ್ರದೇಶ ರಾಜ್ಯಗಳಿಗೆ ಹೋಗಿದೆಯೇ ವಿನಃ, ನಮ್ಮ ಕರ್ನಾಟಕ ರಾಜ್ಯಕ್ಕೆ ಏನು ಬಂದಿಲ್ಲ. ಅಂಕಿ ಸಂಖ್ಯೆಗಳನ್ನು ತೆಗೆದು ನೋಡಿ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದ ಸಂಸದರುಗಳಿದ್ದಾರೆ. ಆ ರಾಜ್ಯಗಳ ಎಂ.ಪಿ.ಗಳನ್ನು pull-up ಮಾಡುತ್ತಾರೆ. ಅದಕ್ಕಾಗಿ ಕೇಂದ್ರ ಸರ್ಕಾರದಲ್ಲಿ ನಾವು ಯಾವ ರೀತಿಯಾಗಿ ಮಾಡಬೇಕು ಎಂಬುವುದರ ಬಗ್ಗೆ ಚಿಂತನೆಯನ್ನು ಮಾಡಿ, ಹೊಸ ಹೊಸ ಯೋಜನೆಗಳಿಗೆ ಪೂರಕವಾಗಿ ಕಳುಹಿಸಿಕೊಡುತ್ತಾರೆ. ಆ ರೀತಿಯ ಕೆಲಸವನ್ನು ನಾವು ಪಕ್ಷಾತೀತವಾಗಿ ಮಾಡಬೇಕು. ಅದಕ್ಕಾಗಿಯೇ ಒಬ್ಬರನ್ನು ನಾವು ದೆಹಲಿಯಲ್ಲಿ ನೇಮಿಸಬೇಕು. ನಮ್ಮಲ್ಲಿರುವಂತಹ ಮುಖ್ಯ ಕಾರ್ಯದರ್ಶಿಯವರ ಲೇವಲ್‌ನ ಅಂದರೆ Additional Chief Secretary level ನ ಒಬ್ಬ ಅಧಿಕಾರಿಯನ್ನು ಅಲ್ಲಿ ಹಾಕಿ ನಾವು ಯಾವ್ಯಾವ ಹೊಸ ಯೋಜನೆಗಳನ್ನು ಮಾಡಿ ಅದನ್ನು ಕೇಂದ್ರದಲ್ಲಿ move ಮಾಡಿದರೆ ಕೇಂದ್ರ ಸರ್ಕಾರದಿಂದ ಹೆಚ್ಚು ಅನುದಾನ ಬರುತ್ತದೆ ಎನ್ನುವುದರ ಬಗ್ಗೆ ಚಿಂತನೆ ಮಾಡಿ ಕೆಲಸ ಮಾಡಬೇಕು. ಕೇಂದ್ರ ಸರ್ಕಾರದಿಂದ ಅನುದಾನವನ್ನು ತೆಗೆದುಕೊಳ್ಳುವುದು ನಮ್ಮ ಮತ್ತು ಈ

ರಾಜ್ಯದ ಕೆಲಸ. ಬೇರೆ ರಾಜ್ಯದವರು ಅದನ್ನು ಮಾಡುತ್ತಾರೆ. ಅದನ್ನು ನೀವು ಕೂಡ ಮಾಡಿ. ಅದಕ್ಕಾಗಿ ನಾನು ಪಕ್ಷಾತೀತವಾಗಿ ಹೇಳುತ್ತೇನೆ. ಆ ಕೆಲಸವನ್ನು ಕರ್ನಾಟಕ ರಾಜ್ಯದವರು ಮಾಡಬೇಕು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದ ಮಂತ್ರಿಗಳು ಅಂತಹ ಕೆಲಸವನ್ನು ಎಲ್ಲಿ ಮಾಡಿದ್ದಾರೆ? ನಮ್ಮ ರಾಜ್ಯದ ಮಂತ್ರಿಗಳು ಬರಿ ಗದ್ದಲದ ಬಗ್ಗೆ ಅವರ ಪಕ್ಷದ ಹೈಕಮಾಂಡ್ ಭೇಟಿಯಾಗುತ್ತಿದ್ದರು. ಅವರುಗಳು ಏನು ಕೇಂದ್ರದ ಮಂತ್ರಿಗಳನ್ನು ಮತ್ತು ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿದ್ದಾರೆಯೇ, ಎಷ್ಟು ಸಾರಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ? ದೆಹಲಿಗೆ ಹೋದಾಗ ಒಂದು ಗುಂಪು ಹೈಕಮಾಂಡ್ ಹೋಗಿ ಭೇಟಿ ಮಾಡಿ ಬರುವುದು, ಇನ್ನೊಂದು ಸಾರಿ ಮತ್ತೊಂದು ಗುಂಪು ಹೋಗಿ ಹೈಕಮಾಂಡ್ ಭೇಟಿ ಮಾಡುವುದು. ಇವರುಗಳು ಯಾವುದೇ ಅಭಿವೃದ್ಧಿಗೋಸ್ಕರವಾಗಿ ಭೇಟಿ ಮಾಡಿಲ್ಲ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಪೂರಕ ಬಜೆಟ್ ಮೇಲೆ ಮಾತನಾಡಿ, ಮಾನ್ಯ ಮುಖ್ಯಮಂತ್ರಿಗಳು ಪೂರಕ ಬಜೆಟ್‌ನ್ನು pass ಮಾಡಿಕೊಡಿ ಎಂದು ಹೇಳುತ್ತಿದ್ದಾರೆ. ಅಷ್ಟು ಮಾಡಿದರೆ ಬಾಕಿ ಕೆಲಸವನ್ನು ನಾವು ಮಾಡಬಹುದು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, pass ಮಾಡಿಕೊಡುವುದಕ್ಕೆ ಮುಂಚೆ ವಸ್ತುಸ್ಥಿತಿಯನ್ನಾದರು ಹೇಳಬೇಕಲ್ಲವೇ?

**ಸಭಾಪತಿಯವರು:–** ಇಷ್ಟು ಹೊತ್ತು ಹೇಳಿದ್ದೀರಿ. ಬರೀ ರಾಜಕೀಯ ಚರ್ಚೆಗೆ ಹೋಗಿಬಿಟ್ಟರೆ ಕಷ್ಟ.

**ಶ್ರೀ ಆರ್.ವಿ. ವೆಂಕಟೇಶ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ದೆಹಲಿಯಲ್ಲಿ ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿ ಎಂದು ನೇಮಿಸಿದ್ದರು. ಅವರು ಏನು ಕೆಲಸವನ್ನು ಮಾಡಿದರು? ಅವರು ಅಲ್ಲಿ ಬರೀ ರಾಜಕೀಯವನ್ನು ಮಾಡಿಕೊಂಡಿದ್ದರೇ ಹೊರತು ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಏನು ಮಾಡಲಿಲ್ಲ. ಇದೆಲ್ಲಾ ಕಾರಣಗಳಿಂದ ರಾಜ್ಯಕ್ಕೆ ಹೆಚ್ಚು

ಅಭಿವೃದ್ಧಿಗೆ ಅನುಕೂಲವಾಗಲಿಲ್ಲ. ಆದರೆ ತಮಿಳುನಾಡಿನವರು ಮತ್ತು ಬೇರೆ ರಾಜ್ಯದವರು ಆ ರೀತಿಯಾಗಿ ಮಾಡದೇ ಅನುಕೂಲವನ್ನು ಮಾಡಿಕೊಂಡರು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಬಹಳಷ್ಟು ಸದಸ್ಯರುಗಳು ಮಾತನಾಡುತ್ತಾರೆ. ನಮ್ಮ ಮುಖ್ಯಮಂತ್ರಿಗಳು ಬಹಳ ಮೌನವಾಗಿದ್ದಾರೆಂದರೆ, ಮೌನಂ ಸಮ್ಮತಿ ಲಕ್ಷಣ ಎಂದೇ. ಅವರು ಒಪ್ಪಿಕೊಂಡಿದ್ದಾರೆ. ನೀವು ಖಾಲಿ ಮಾತನಾಡಬೇಡಿ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಈಗ ತಕ್ಷಣ ಉತ್ತರವನ್ನು ಕೊಡೋಬೇಕೋ ಅಥವಾ ನಂತರ ಉತ್ತರವನ್ನು ಕೊಡಬೇಕೋ? ನಾನು ಸುಮ್ಮನೆ ಕುಳಿತುಕೊಂಡರು ಕೂಡ ಒಪ್ಪಿಗೆ ಎಂದು ತಿಳಿದುಕೊಂಡರೆ ಏನು ಮಾಡುವುದು? ಅವರು ಪದೇ ಪದೇ ಒಂದೊಂದು point ಹೇಳಿದಾಗಲೂ ನಾನು ಎದ್ದು ಉತ್ತರವನ್ನು ಕೊಡುವುದಕ್ಕೂ ಕೂಡ ನಾನು ರೆಡಿಯಾಗಿದ್ದೇನೆ. ಈ ರೀತಿಯಾಗಿ ವಿರೋಧ ಪಕ್ಷದವರು ಹೇಳುವುದು ಸರಿಯಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಚೇಡಿಸಬೇಕೆಂದು ಹೇಳಲಿಲ್ಲ.

(11.30 ಗಂಟೆ)

ನಾನು ಈ ಮಾತನ್ನು ಏಕೆ ಹೇಳಿದೆ ಎಂದರೆ, now the Central Government is bound to release grants to our State. In the Federal Structure, Karnataka is within the territory of India. ಕಾನೂನು ಬದ್ಧವಾಗಿ ನಮ್ಮ ರಾಜ್ಯಕ್ಕೆ ಕೊಡತಕ್ಕಂಥಾದ್ದೆಲ್ಲವನ್ನೂ ಕೊಡಬೇಕು. ಮಾನ್ಯ ಕತ್ತಿಯವರು ಹೇಳಿದ ಹಾಗೆ ನಿಮಗಿಂತ ಅತ್ಯಂತ ಉಗ್ರವಾದ ಶಬ್ದಗಳಿಂದ ಮಾನ್ಯ ಜಯರಾಂ ರಮೇಶ್ ಅವರನ್ನು, ಮಾನ್ಯ ಶರದ್‌ಪವಾರ್ ಅವರನ್ನು ಕೇಳುತ್ತೇವೆ. ಮಾನ್ಯ ಜಯರಾಂ ರಮೇಶ್ ಅವರು ಬಂದಿದ್ದಾಗ ನಾವು ಬರದಿಂದ ತತ್ತರಿಸುತ್ತಿದ್ದೇವೆ ಮಾನವ ದಿನ – man days ಏನು ಇವೆ ಇದು ನೂರು ದಿನಗಳು ಇದ್ದದ್ದನ್ನು 150 ದಿನಗಳೆಂದು ಮಾಡಿ ಎಂದು ಹೇಳಿದ್ದೇವೆ.

ಜನ ಗುಳೆ ಹೋಗುತ್ತಿದ್ದಾರೆ ಹೆಚ್ಚಿನ ಹಣ ಕೊಡಿ ಎಂದು ಹೇಳಿದೆವು. ಆವತ್ತೇ 700 ಕೋಟಿ ರೂಪಾಯಿ ಕೊಡುತ್ತೇವೆ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ. Hundred per cent we have co-operated with

the Government. When we are getting grants from the Centre, it is our duty. ಈ ನೆಲದಲ್ಲಿ ಹುಟ್ಟಿದ್ದೇವೆ. ಈ ನೆಲದ ಜನರಿಗೆ ಶ್ರೇಯಸ್ಕರವಾಗುವ ಹಾಗೆ ನಾವೆಲ್ಲರೂ ನಡೆದುಕೊಳ್ಳಬೇಕಾಗುತ್ತದೆ. ಕೇಂದ್ರದಲ್ಲಿ ಯಾವುದೇ ಸರ್ಕಾರ ಇರಲಿ, ನಾವು ಈ ಬಗ್ಗೆ ಒತ್ತಾಯ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ Utilisation Certificate (UC) ಅನ್ನು ಬೇಗನೆ ಕೊಡಿ ಎಂದು ಸಾಕಷ್ಟು ಒತ್ತಾಯ ಮಾಡಿದರು. ನಾವು ಅವರಿಗೆ ಸಾಕಷ್ಟು ಸಹಾಯವನ್ನು ಮಾಡಿದ್ದೇವೆ. ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಬರತಕ್ಕಂಥ ಹಣದಲ್ಲಿ ಒಂದು ಪೈ ಅನ್ನು ಕೂಡ ಬಿಡಲಾರದೆ ಅವರು ಎಷ್ಟು ಹಕ್ಕಿನಿಂದ ಕೇಳುತ್ತಾರೆ ಅದಕ್ಕಿಂತ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಕೇಳುತ್ತೇವೆ. ನಮ್ಮ ರಾಜ್ಯದ ನೆಲ, ಜಲ, ಜನರ ಕ್ಷೇಮಾಭಿವೃದ್ಧಿ ನಮಗೆ ಬಹಳ ಮುಖ್ಯ. ಕೇಂದ್ರದವರು ಮಲತಾಯಿ ಧೋರಣೆ ಅನುಸರಿಸುತ್ತಾರೆ ನಮಗೆ ಹೆಚ್ಚಿನ ಸಹಾಯವನ್ನು ಮಾಡುವುದಿಲ್ಲ ಎಂದು ಒಮ್ಮೊಮ್ಮೆ ಹೇಳುತ್ತಾರೆ. ಇದರಿಂದ ನಮಗೆ ಬಹಳ ನೋವಾಗುತ್ತದೆ. ಕೇಂದ್ರದಲ್ಲಿ N.D.A., ಸರ್ಕಾರ ಇದ್ದಾಗ, ಕಳೆದ 5 ವರ್ಷಗಳಲ್ಲಿ ನಮ್ಮ ರಾಜ್ಯಕ್ಕೆ ಸುಮಾರು 30,000 ಕೋಟಿ ರೂಪಾಯಿಯನ್ನು ಕೊಟ್ಟಿದ್ದರು. ನಾವು 90,000 ಕೋಟಿ ಕೋಟ್ಟಿದ್ದೇವೆ ಎಂದರೆ, ಇದನ್ನು ನೋಡಿದರೆ ಮೂರು ಪಟ್ಟು ಹೆಚ್ಚಾಗಲಿಲ್ಲವೇ? ಇಂತಹ ಟೀಕೆ ಬೇಡ. ಮಾನ್ಯ ವಿಜಯಶಂಕರ್ ಅವರೇ ನಾವೂ ನೀವೂ ಒಟ್ಟಾಗಿ ಕೇಂದ್ರಕ್ಕೆ ಹೋಗಿ ನಮಗೆ ಬರುವಂಥ ಹಣವನ್ನು ತೆಗೆದುಕೊಂಡು ಬರೋಣ. We can snatch the money. ಇನ್ನೂ ಹೆಚ್ಚಿಗೆ ಹಣವನ್ನು ಕೇಳೋಣ. ರಾಜ್ಯದ ಅಭಿವೃದ್ಧಿಯ ವಿಚಾರದಲ್ಲಿ ನಾವು ರಾಜಕಾರಣವನ್ನು ಮಾಡೋಣ. ನೆಲ, ಜಲ, ವಿಚಾರದಲ್ಲಿ ಹೇಗೆ ನಾವು ಬದ್ಧತೆಯಿಂದ ಇದ್ದೇವೆಯೋ ಹಾಗೆಯೇ ರಾಜ್ಯದ ಅಭಿವೃದ್ಧಿಯ ವಿಚಾರದಲ್ಲಿ ಮತ್ತು ಕೇಂದ್ರದಿಂದ ಪ್ರಕೃತಿ ವಿಕೋಪದ ಪರಿಹಾರದ ಸಲುವಾಗಿ ಬರುವ ಹಣ ಇನ್ನಿತರ ಅನುದಾನವಾಗಲೀ ಹೆಚ್ಚಿನ ಪ್ರಮಾಣದಲ್ಲಿ ತರುವುದಕ್ಕೆ ನಾವು

ನಿಮ್ಮ ಜೊತೆಯಲ್ಲಿ ಇದ್ದೇವೆ. ಆದರೆ ನೀವು ಅವರು ಯಾರ ಉಪಕಾರಕ್ಕೆ ಕೊಡುತ್ತಾರೆ ಎಂದು ಹೀಗೆಲ್ಲಾ ಮಾತನಾಡುವುದು ಬೇಡ. ಇದು ನಿಮಗೆ ಒಳ್ಳೆಯದಲ್ಲ. ಇದು ಭೂಷಣವೂ ಅಲ್ಲ. ಹಿಂದೆ ಕೇಂದ್ರದಲ್ಲಿ N.D.A, ಸರ್ಕಾರ ಇದ್ದಾಗ, ಕಳೆದ 5 ವರ್ಷಗಳಲ್ಲಿ ನಮ್ಮ ರಾಜ್ಯಕ್ಕೆ ಸುಮಾರು 30,000 ಕೋಟಿ ರೂಪಾಯಿಯನ್ನು ಕೊಟ್ಟಿದ್ದರು. ನಾವು 90,000 ಕೋಟಿ ಕೊಟ್ಟಿದ್ದೇವೆ ಎಂದರೆ, ಇದನ್ನು ನೋಡಿದರೆ ಮೂರು ಪಟ್ಟು ಹೆಚ್ಚಾಗಿದೆ. ಇದನ್ನು ನೋಡಿ ಖುಷಿ ಪಡೋಣ. ನಾವು ನಿಮ್ಮ ಜೊತೆಯಲ್ಲಿ ಯಾವಾಗಲೂ ಇರುತ್ತೇವೆ. ಮಾನ್ಯ ಕೃಷಿ ಮಂತ್ರಿಗಳು ಈ ಕುರಿತು ಯೋಚನೆ ಮಾಡಬೇಕು. Today, financial discipline should be maintained in a systematic way. Fiscal deficit ಹೆಚ್ಚಾಗುವುದಾಗಲೀ ಇವತ್ತು expenditure ಸರಿಯಾಗಿ book ಆಗುವುದರಲ್ಲಾಗಲೀ ನೀವು ಇದರ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ನೀವು 90,197 ಕೋಟಿ ರೂಪಾಯಿಗೆ ಪೂರಕ ಅಂದಾಜುಗಳ ಮುಖಾಂತರ ಮಂಜೂರಾತಿ ಮಾಡಿಕೊಡಿ ಎಂದು ಇಲ್ಲಿ ಕೇಳಿದ್ದೀರಿ. ಮಹತ್ತರವಾದ ವೇತನ ಶ್ರೇಣಿಯನ್ನು ನೀಡುವ ಸಲುವಾಗಿ ಇರಬಹುದು, ಬೆಳೆ ಸಾಲ ಮನ್ನಾ ಸಲುವಾಗಿ ಇರಬಹುದು, ಮತ್ತು ಇನ್ನು ಅನೇಕ ವಿಚಾರಗಳ ಬಗ್ಗೆ ಇರಬಹುದು. ಇಲ್ಲವೇ ಗ್ರಾಮೀಣ ವಿದ್ಯುದೀಕರಣ ಸಹಾಯಧನ ಕೊಡುವ ವಿಚಾರದಲ್ಲಿ ಇರಬಹುದು major sector ಗೆ ಸಹಾಯ ಮಾಡುವ ಸಲುವಾಗಿ ನೀವು ಈ ಪೂರಕ ಅಂದಾಜನ್ನು ಇಲ್ಲಿ ಮಂಡಿಸಿದ್ದೀರಿ. Our State should not go to the debt trap. ಅದಕ್ಕೆ ಅತ್ಯುತ್ತಮವಾದಂತಹ financial management ಅನ್ನು ಮಾಡಿ. ಈ ರಾಜ್ಯ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯಲಿ. ಇಲ್ಲಿ ಮಂಜೂರಾಗುವಂತಹ ಹಣದ ಒಂದೊಂದು ಪೈಸೆಯೂ ಸದ್ಬಳಕೆ ಆಗಬೇಕು. It must reach the needy people. ಈ ಸರ್ಕಾರ ಹೆಚ್ಚು ಕ್ರಿಯಾಶೀಲವಾಗಿ ಕೆಲಸವನ್ನು ಮಾಡಬೇಕು. Financial discipline ಅನ್ನು ಸರಿಯಾದ ರೀತಿಯಲ್ಲಿ maintain ಮಾಡಬೇಕು. ಹಣಕಾಸಿನ ಶಿಸ್ತು ಸರಿಯಾಗಿಲ್ಲ ಇದರ ಬಗ್ಗೆ ಸರ್ಕಾರ ಹೆಚ್ಚಿನ ಲಕ್ಷ್ಯವನ್ನು ವಹಿಸಬೇಕು ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಈ ಪೂರಕ ಅಂದಾಜುಗಳು ಯಾವುದು ಇದೆ ಇದು ಯಾವುದೇ ಸರ್ಕಾರ ಅಧಿಕಾರಗಳಲ್ಲಿ ಇದ್ದರೂ ಕೂಡ ಇದನ್ನು ಮಾಡಲೇಬೇಕಾದಂಥ ಸಂದರ್ಭ, ಅನಿವಾರ್ಯತೆ ಎಲ್ಲಾ ಸಂದರ್ಭಗಳಲ್ಲೂ ಬರುತ್ತದೆ. ಆ ಕೆಲಸವನ್ನು ಈ ರಾಜ್ಯ ಸರ್ಕಾರದವರು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಇಷ್ಟೇ ಕೇಳುತ್ತೇನೆ. ತಾವು ಹೊಸದಾಗಿ ಅಧಿಕಾರವನ್ನು ಸ್ವೀಕಾರ ಮಾಡಿಯಾದ ಮೇಲೆ ಬಹುಶಃ ಇದು ನಿಮ್ಮ ಮೊದಲನೆಯ Supplementary Estimates ಆಗಿದ್ದು ಅದನ್ನು ಈ ಸದನದ ಮುಂದೆ ತರುತ್ತಿದ್ದೀರಿ. ಈ ಹಿಂದೆ ಒಂದು ಪೂರಕ ಅಂದಾಜನ್ನು ಈ ಸದನದ ಮುಂದೆ ತಂದಿದ್ದು ಅದಕ್ಕೆ ಅನುಮೋದನೆಯನ್ನು ಕೊಟ್ಟಿದ್ದೆವು. ಇದು ಎರಡನೆಯ ಪೂರಕ ಅಂದಾಜು ಆಗಿರುತ್ತದೆ. ಈ ಪೂರಕ ಅಂದಾಜು ತರತಕ್ಕಂಥಾದ್ದು ಸಂವಿಧಾನಬದ್ಧವಾದ ಕರ್ತವ್ಯ. ಈ ಮುಂಗಡ ಪತ್ರವನ್ನು ನಾವು ಈ ಸದನದಲ್ಲಿ ಮಂಡಿಸುವ ಸಂದರ್ಭದಲ್ಲಿ ಇಷ್ಟು ದೊಡ್ಡ ಪ್ರಮಾಣದ ಮೊತ್ತಕ್ಕೆ ವಿಧಾನಮಂಡಲವು ಅದಕ್ಕೆ ಅಂಗೀಕಾರವನ್ನು ಕೊಡುತ್ತದೆ. ಅದು ಆದ ಮೇಲೆ ಯಾವುದಾದರೂ ಒಂದು ಸೇವೆಗೆ ಸಂಬಂಧಿಸಿದಂತೆ ಅನಿವಾರ್ಯವಾಗಿ ಕೆಲವು ಪರಿಸ್ಥಿತಿಗಳು ನಿರ್ಮಾಣವಾದಾಗ ಅಥವಾ ಹೊಸ ಸೇವೆಗಳಿಗೆ ಸಂಬಂಧಪಟ್ಟ ಹಾಗೆ ಅನಿವಾರ್ಯವಾದ ಪರಿಸ್ಥಿತಿ ನಿರ್ಮಾಣವಾದಾಗ ನಾವು ಈ ಹಣವನ್ನು ಖರ್ಚು ಮಾಡಲೇಬೇಕಾಗುತ್ತದೆ. ನೀವು ಮುಖ್ಯವಾಗಿ ಯಾವುದಕ್ಕೆ ಈ ಹಣವನ್ನು ಖರ್ಚು ಮಾಡಿದ್ದೀರಿ ಎಂದು ನಾವು ನೋಡಬೇಕಾಗುತ್ತದೆ. ಈ ವರ್ಷ ಅನಿವಾರ್ಯವಾಗಿ ಬಂದಿರತಕ್ಕಂತಹ ಎರಡು ಸ್ಥಿತಿಗಳ ಬಗ್ಗೆ ನಾನು ಹೇಳುತ್ತೇನೆ. ನಮ್ಮ ಸಿಬ್ಬಂದಿಗಳ ಮೇಲೆ ಅವರ ಪೇಕಮಿಷನ್ನಿಗೆ ಸಂಬಂಧಪಟ್ಟಂತೆ ಆ ಪೇ ಕಮಿಟಿಯವರು ಕೊಟ್ಟಿರತಕ್ಕಂಥ ಸಂಪೂರ್ಣ ಶಿಫಾರಸ್ಸನ್ನು ಸರಿ ಸುಮಾರು ಯಥಾವತ್ತಾಗಿ ಒಪ್ಪಿದ್ದೀರಿ. ಅವರಿಗೆ ಕೊಡಬೇಕಾದ ಸಂಬಳ ಸಾರಿಗೆಗೆ ಸಂಬಂಧಪಟ್ಟಂತೆ ಅವರು ನೀಡಿರುವ ವರದಿ ಏನು ಇದೆ ಆ ವರದಿಯನ್ನು ಹಿಂದೆ ಮುಖ್ಯಮಂತ್ರಿಗಳಾಗಿದ್ದ ಮಾನ್ಯ

ಸದಾನಂದಗೌಡ ಅವರು ಇದೇ ಸದನದಲ್ಲಿ ಮಂಡನೆ ಮಾಡಿದ್ದರು. ಅಂದರೆ ಅವರು ಎಷ್ಟನ್ನು ಶಿಫಾರಸ್ಸು ಮಾಡಿದ್ದರು ಅಷ್ಟನ್ನೂ ಅಂದರೆ ಪೂರ್ತಿಯಾಗಿ ಒಪ್ಪಿಗೆಯನ್ನು ನೀಡಿದರು. ನಾನು ಆ ಸಮಯದಲ್ಲಿ ಅವರನ್ನು ಕೇಳಿದೆ. ದಯವಿಟ್ಟು ನೀವು ಇದರ ಬಗ್ಗೆ ವಿಚಾರ ಮಾಡಬೇಕಾಗಿತ್ತು ಎಂದು ಹೇಳಿದೆ. ಶೇಕಡ 25 ರಷ್ಟನ್ನು ಕೊಟ್ಟಾಗ ಇದರಿಂದಾಗಿ 4400 ಕೋಟಿ ರೂಪಾಯಿ ರಾಜ್ಯ ಸರ್ಕಾರಕ್ಕೆ ಹೊರೆ ಆಯಿತು. ಅದನ್ನು ಜಾರಿಗೆ ತಂದದ್ದರಿಂದ ಈ ಹೊರೆ ನಿಮ್ಮ ಮೇಲೆ ಬಂತು. ಇನ್ನು ಎರಡು ವರ್ಷ phase ಮಾಡಿದ್ದರೂ ತಪ್ಪಾಗುತ್ತಿರಲಿಲ್ಲ. ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಯಾರೂ ಇದನ್ನು ತಪ್ಪಾಗಿ ಭಾವಿಸಬೇಡಿ. ಕೆಲವು ಸಂದರ್ಭದಲ್ಲಿ ಅನಿವಾರ್ಯವಾಗಿ ನಮ್ಮ ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಇದು ನಡೆಯುತ್ತಿರತಕ್ಕಂಥಾದ್ದು ಏನು ಇದೆ, ಇದು ಸಿಬ್ಬಂದಿಗಳ ಮುಖಾಂತರವೇ ನಡೆಯುತ್ತಿದೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಸಿಬ್ಬಂದಿಗಳಿಗೆ ನಾವು ಖರ್ಚು ಮಾಡುತ್ತಿರತಕ್ಕಂತಹ ಹಣ ವೆಚ್ಚ ನಮ್ಮ ಪೂರ್ತಿ ಆದಾಯ ಏನು ಇದೆ ಇದನ್ನು ನಾವು ಸಮತೋಲನ ಮಾಡಿಕೊಂಡು ಹೋದರೆ ಒಳ್ಳೆಯದು. ಎಷ್ಟು ದೊಡ್ಡ ಪ್ರಮಾಣದ ಹಣವನ್ನು ನಾವು ಈ ಸಿಬ್ಬಂದಿ ವರ್ಗಕ್ಕೆ ಕೊಡುತ್ತಿದ್ದೇವೆ ಎನ್ನುವುದನ್ನು ನಾವು ಪದೇ ಪದೇ ಚರ್ಚೆ ಮಾಡಿದರೂ ಕೂಡ ಈ ಬಗ್ಗೆ ಹೆಚ್ಚು ಗಮನಹರಿಸಲಿಲ್ಲ. ನಮ್ಮ ರಾಜ್ಯದಲ್ಲಿ 6 ಕೋಟಿ ಜನಸಂಖ್ಯೆ ಇದೆ. ಈ ಪೈಕಿ ನಮ್ಮ ರಾಜ್ಯದಲ್ಲಿ ಕೇವಲ ಐದೂವರೆ ಲಕ್ಷ ಜನಸಂಖ್ಯೆ ಸರ್ಕಾರಿ ನೌಕರರಿದ್ದಾರೆ. ಈ 'bureaucrats' ಎಂದು ಹೇಳತಕ್ಕಂಥಾದ್ದು ಏನು ಇದೆ ಇದು higher level ಆಗಿದೆ. I.A.S., I.F.S., I.P.S., ಇರತಕ್ಕಂತಾದ್ದು ಬಹಳ ಕಡಿಮೆ ಜನಸಂಖ್ಯೆ ಆಗಿದೆ. ಒಂದು ಕಡೆ 295 ಜನ ಇದ್ದಾರೆ. ಈ I.F.S., 220 ಇದ್ದಾರೆ. ಎಲ್ಲ ಒಟ್ಟಾರೆ ಸೇರಿದರೂ ಕೂಡ 1000 ಆಗುವುದಿಲ್ಲ. ಆದರೆ ಬಾಕಿ ಇರತಕ್ಕಂಥಹವರು ಸುಮಾರು ಐದೂವರೆ ಲಕ್ಷ, ಐದೂ ಮುಕ್ಕಾಲು ಲಕ್ಷ. ಅಂದರೆ ನಮ್ಮ ಜನಸಂಖ್ಯೆಗೆ ಶೇಕಡ 1 ರಷ್ಟು ಇರತಕ್ಕಂಥ ಈ ಸಿಬ್ಬಂದಿ ವರ್ಗಕ್ಕೆ ನಮ್ಮ ರಾಜ್ಯದ ಇಡೀ ಆದಾಯದ ಹಣ ಅವರ ಸಂಬಳ ಸಾರಿಗೆ pension ಮತ್ತಿತರೆ ಸೌಲಭ್ಯಗಳಿಗೆ

ಖರ್ಚಾಗುತ್ತಿದೆ. It works out to nearly about 40% ಶೇಕಡ 40 ಭಾಗ ಹೋಗುತ್ತದೆ. ನಿಮ್ಮ subsidy, debt servicing ಎಲ್ಲವನ್ನೂ ತೆಗೆದುಕೊಂಡರೆ it works out to about 67% of your total Budget. ಇದನ್ನು ನಾವು ಇಲ್ಲಿಯವರೆಗೂ ಯೋಚನೆ ಮಾಡಲಿಲ್ಲ. ಇದನ್ನು ಕಡಿಮೆ ಮಾಡಬೇಕು ಎಂದು ಹೇಳುವ ಪರಿಸ್ಥಿತಿ ನಿರ್ಮಾಣವಾಗಲಿಲ್ಲ. ಇದರಿಂದ ಒಂದು ವರ್ಷಕ್ಕೆ 4400 ಕೋಟಿ ಖರ್ಚು ಹೆಚ್ಚಿನ ಹೊರೆಯಾಗಿ ಬರುತ್ತದೆ. ಇನ್ನು ಎರಡನೆಯ ಹೊರೆಯ ಬಗ್ಗೆ ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರು ನಿಮಗೆ ಸವಾಲನ್ನು ಹಾಕಿದರು, ಸಾಲ ಮನ್ನಾ ಮಾಡಬೇಕೆಂದು ಹೇಳಿದರು. ರೈತರ ಸಾಲ ಮನ್ನಾ ಮಾಡಬೇಕೆಂದು ಸರ್ವೇ ಸಾಮಾನ್ಯವಾಗಿ ಎಲ್ಲರೂ ಇದನ್ನು ಕೇಳುತ್ತಿದ್ದರು. ಆ ಸಂದರ್ಭದಲ್ಲಿ 25,000 ರೂಪಾಯಿಯನ್ನು ಮನ್ನಾ ಮಾಡುವುದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಂಡಿರಿ. ಇದರ ಪರಿಣಾಮವಾಗಿ ಸರ್ಕಾರಕ್ಕೆ 3750 ಕೋಟಿ ಹೆಚ್ಚಿನ ಹೊರೆ ಬಂದಿತು. ಮೂರನೇ ಹೊರೆ ಏನು ಎಂಬುದರ ಬಗ್ಗೆ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ ಚುನಾವಣಾ ಕಾಲ ಬಂತು. ದಯವಿಟ್ಟು ಇದನ್ನು ತಾವು ಯೋಚನೆ ಮಾಡಿ. ನಿಮಗೆ ಇನ್ನು 3–4 ತಿಂಗಳು ಕಾಲಾವಕಾಶ ಇದೆ. ಆ ಸಮಯದ ಒಳಗಡೆ 2012–13ಕ್ಕೆ 1 ಲಕ್ಷದ 3000 ಕೋಟಿ ರೂಪಾಯಿಯ ಮುಂಗಡ ಪತ್ರವನ್ನು ಮಂಡಿಸುತ್ತೇವೆ ಎಂಬ ಒಂದು ಹೆಗ್ಗಳಿಕೆ ಬೇಡ. ಪೈಪೋಟಿಯಲ್ಲಿ ಮಾಡಿರತಕ್ಕಂಥ ಮುಂಗಡ ಪತ್ರ ಅದಾಗಿತ್ತು. ಹಿಂದೆ 83,000 ಕೋಟಿ ರೂಪಾಯಿಯ ಆಯವ್ಯಯವನ್ನು ಮಂಡನೆ ಮಾಡಿದ್ದರು ಅದರ ನಂತರ 1 ಲಕ್ಷ ಕೋಟಿ ರೂಪಾಯಿಯ ಆಯವ್ಯಯವನ್ನು ಮಂಡಿಸುತ್ತೇನೆ ಆ ಒಂದು ಗುರಿ ನನಗೆ ಇದೆ ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದ್ದರು. ಅದನ್ನು ನಾನು ಮಾಡಿಯೇ ಮಾಡುತ್ತೇನೆ ಎಂದು ಹೇಳಿದರು. ಕಡೆಗೆ ಅವರಿಗೆ ಆಗಲಿಲ್ಲ. ನಂತರ ಅವರು ರಾಜೀನಾಮೆ ನೀಡಿ ಹೋದರು. ಮಾನ್ಯ ಸದಾನಂದಗೌಡರವರು ಮುಖ್ಯಮಂತ್ರಿಯಾದರು. ಅವರು ಇಲ್ಲ ನಾನು 1 ಲಕ್ಷ ಕೋಟಿಯ ಆಯವ್ಯಯವನ್ನು ಮಂಡಿಸುತ್ತೇನೆ ಎಂದು ಹೇಳಿದರು. ಒಂದು ಲಕ್ಷ ಕೋಟಿಗೆ ನೀವು ಆಯವ್ಯಯವನ್ನು

ಮಂಡಿಸುವ ಸಂದರ್ಭದಲ್ಲಿ revenue receipt, ನಿಮ್ಮ ಆದಾಯ 2011–12ಕ್ಕೆ ಎಷ್ಟು ಇತ್ತು ಮತ್ತು 2012–13 ಕ್ಕೆ ನಿಮ್ಮ ಆದಾಯವನ್ನು ನೀವು ಎಷ್ಟು anticipate ಮಾಡಿದಿರಿ ಈ ಎಲ್ಲಾ ವಿಚಾರಗಳನ್ನು ಮತ್ತು ಈ ಎಲ್ಲಾ accounts ಅನ್ನು ಗಣನೆಗೆ ತೆಗೆದುಕೊಂಡು ತಾನೆ ನಿಮ್ಮ ಮುಂಗಡ ಪತ್ರವನ್ನು ಮಂಡಿಸಬೇಕಾಗಿತ್ತು. ನಮ್ಮ Budget ನಮ್ಮ ಮುಂದೆ ಇದೆ. ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ನಮ್ಮ ಮುಂದೆ 2012–13ನೇ ಸಾಲಿನ ಬಜೆಟ್ ಇದೆ. ದಯವಿಟ್ಟು 2011–12ನೇ ಇಸವಿಯ ನಿಮ್ಮ Revenue Receipt ಮಾತ್ರ ಹೇಳುತ್ತಿದ್ದೇನೆ. ನಮ್ಮ Revenue Receipt ನಿಂದ ನಮ್ಮ ರಾಜ್ಯಕ್ಕೆ ಬರತಕ್ಕಂತಹ ಆದಾಯ ಕೇವಲ ನಾಲ್ಕು ಇಲಾಖೆಗಳಿಂದ ಮಾತ್ರ. ನಾಲ್ಕು ಇಲಾಖೆಗಳಿಂದ ಬಿಟ್ಟರೆ ಯಾವುದೇ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಆದಾಯ ಬರುವುದಿಲ್ಲ. First is the Commercial Tax Department, that is the highest revenue earning department. ಇನ್ನು ಎರಡನೆಯ ಇಲಾಖೆ ನಮ್ಮ ರೇಣುಕಾ ಚಾರ್ಯರವರ ಇಲಾಖೆಯಾದ kick ಕೊಡುವಂತಹ ಅಬಕಾರಿ ಇಲಾಖೆಯಿಂದ, ದಯಮಾಡಿ ತಾವು ಯೋಚನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಸುಮಾರು 10 ವರ್ಷಗಳ ಹಿಂದೆ ಮದ್ಯದಿಂದ ಬರತಕ್ಕಂತಹ ಆದಾಯ ಎಷ್ಟು ಇತ್ತು? ಕೇವಲ 1,800 ಕೋಟಿ ರೂಪಾಯಿಗಳು ಮಾತ್ರ. ಅಂದರೆ 2,000 ಕೋಟಿ ರೂಪಾಯಿಗಳು. ಅಲ್ಲಿಂದ ಮದ್ಯದ ಮೇಲೆ ತೆರಿಗೆಯನ್ನು ಹೆಚ್ಚು ಹೆಚ್ಚು ಮಾಡಿ 3,000 ಕೋಟಿ ರೂಪಾಯಿಗಳು, 4,000 ಕೋಟಿ ರೂಪಾಯಿಗಳಾಯಿತು. ಈ ವರ್ಷ ಸುಮಾರು 11,000 ಕೋಟಿ ರೂಪಾಯಿಗಳಾಗಿದೆ. ನೀವು ಎಷ್ಟೇ ಪ್ರಮಾಣದ ಸೌಕರ್ಯ ಮತ್ತು ಸೌಲಭ್ಯಗಳನ್ನು ಆ ಕೆಳ ಹಂತದಲ್ಲಿರತಕ್ಕಂತಹ ಜನರಿಗೆ ಕೊಡುತ್ತಿದ್ದರಲ್ಲಾ ಅದು ನಿಮ್ಮ ಬಿಪಿಎಲ್ ಆಗಲಿ, ನೀವು ಕೊಡುತ್ತಿರುವಂತಹ ಇತರ ಯಾವುದೇ ಸಬ್ಸಿಡಿಯಾಗಲಿ, ಯಾವುದೇ ರೀತಿಯ ಸೌಲಭ್ಯಗಳಾಗಲಿ ಶೇಕಡ 60 ರಷ್ಟು ಆ ಭಾಗದ ಜನರಿಗೆ ಕೊಡುತ್ತಿರುವಂತಹ ಸೌಕರ್ಯ, ಸೌಲಭ್ಯಗಳು ಯಾವುದುಂಟು below poverty line ಇರತಕ್ಕಂತಹ ಜನರಿಗೆ ಕೊಡುತ್ತಿರುವಂತಹ ಸೌಲಭ್ಯ ಎಷ್ಟು ಕೊಡಲಾಗುತ್ತಿದೆ, ಅವರು ಎಷ್ಟು

ಸಂಪಾದನೆ ಅವರು ಎಷ್ಟು ತೆರಿಗೆ ಹಣವನ್ನು ಕೊಡುತ್ತಿದ್ದಾರೆ ಅವರ ಹಣದಿಂದಲೇ ಕೊಡುತ್ತಿರುವುದೆಂದು ನಾನು ಹೇಳುತ್ತಿದ್ದೇನೆ. ನಮ್ಮ ಅಬಕಾರಿ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಬರುವಂತಹ ಆದಾಯ ಏನು 11,000 ಕೋಟಿ ರೂಪಾಯಿಗಳಿದೆ ಅದರ ಶೇಕಡ 80 ರಷ್ಟು ಆ ವರ್ಗದ ಜನರು ಅಬಕಾರಿ ತೆರಿಗೆ ರೂಪದಲ್ಲಿ ಕೊಡುತ್ತಿದ್ದಾರೆ. ನೀವು ಕೊಟ್ಟಿರತಕ್ಕಂಥದ್ದರಲ್ಲಿ ಅವರು ಮದ್ಯವನ್ನು ಸೇವನೆ ಮಾಡುವುದರ ಮುಖಾಂತರ ಪುನಃ ಹಿಂದಕ್ಕೆ ಶೇಕಡ 80 ರಷ್ಟು ರಾಜ್ಯಕ್ಕೆ ಬರತಕ್ಕಂತಹ ಆದಾಯವೆನ್ನುವುದನ್ನು ನಾವು ನೀವು ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಲ್ಲವೇ? ಒಪ್ಪಿಕೊಳ್ಳಲೇಬೇಕು. ಮದ್ಯದ ಮೇಲೆ ಇನ್ನು ತೆರಿಗೆಯನ್ನು ಹೆಚ್ಚಿಗೆ ಮಾಡಬೇಕು, ಹೆಚ್ಚಿಗೆ ಮಾಡಬೇಕು ಎನ್ನುವ ಪರಿಸ್ಥಿತಿ ನಿರ್ಮಾಣವಾದಾಗ ಯಾರ ಮೇಲೆ ಈ ಹೋರೆ? ಇದನ್ನು ದಯವಿಟ್ಟು ಯೋಚನೆ ಮಾಡಬೇಕು. ಇನ್ನು ನಮ್ಮ ರಾಜ್ಯಕ್ಕೆ ಮೂರನೆಯ ಇಲಾಖೆ ಎಂದರೆ ನಮ್ಮ ಶ್ರೀ ಆರ್. ಅಶೋಕ್‌ರವರು ಮಂತ್ರಿಯಾಗಿರುವ ಸಾರಿಗೆ ಇಲಾಖೆಯಿಂದ, ನಾಲ್ಕನೆಯ ಇಲಾಖೆ ಎಂದರೆ Stamps and Registration Department ನಿಂದ. ಈ ನಾಲ್ಕು ಇಲಾಖೆಗಳಿಂದ ರಾಜ್ಯ ಸರ್ಕಾರಕ್ಕೆ ಆದಾಯ ಬರುತ್ತಿರುವುದು ನಿಜ. ಈ ಇಲಾಖೆಗಳು ಬಿಟ್ಟರೆ ಬೇರೆ ಯಾವುದೇ ಇಲಾಖೆಯಿಂದ ಆದಾಯ ಬರುವುದಿಲ್ಲ. ಈ ನಾಲ್ಕು ಇಲಾಖೆಯಿಂದ 2011–12ನೇ ಸಾಲಿನ ಬಜೆಟ್‌ನ್ನು ನೋಡಿ. ಇಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ದಯಿವಿಟ್ಟು ವಿಚಾರ ಮಾಡಿ. 2011–12ನೇ ಸಾಲಿನಲ್ಲಿ ನೀವು anticipate ಮಾಡಿದ್ದು 66,000 ಕೋಟಿ ರೂಪಾಯಿಗಳು. ಆದರೆ ರಾಜ್ಯ ಸರ್ಕಾರಕ್ಕೆ ಸಿಕ್ಕಿರತಕ್ಕಂತಹ ಆದಾಯ 68,000 ಕೋಟಿ ರೂಪಾಯಿಗಳು ಮಾತ್ರ. This is the Revenue Receipt. ಇದೇ ರಾಜ್ಯ ಸರ್ಕಾರಕ್ಕೆ ಸಿಕ್ಕಿರತಕ್ಕಂತಹ ನಿಜವಾದ ಆದಾಯ. ಬಾಕಿಇರತಕ್ಕಂಥದ್ದು ಎಲ್ಲಾ ಕೇಂದ್ರ ಸರ್ಕಾರದಿಂದ ತಂದಿರತಕ್ಕಂತಹ ಸಾಲ, ಕೇಂದ್ರ ಸರ್ಕಾರ ಕೊಡುತ್ತಿರುವಂತಹ assistance ಮಾತ್ರ. ಆದರೆ ನಮ್ಮ ರಾಜ್ಯ ಸರ್ಕಾರಕ್ಕೆ 2012ನೇ ಇಸವಿಯ ಮಾರ್ಚ್ ಅಂತ್ಯದ ವೇಳೆಗೆ ಸಿಕ್ಕಿರತಕ್ಕಂತಹ ಆದಾಯ ಕೇವಲ 68,000 ಕೋಟಿ ರೂಪಾಯಿಗಳು ಮಾತ್ರ.

ಆದರೆ ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರು ಬಜೆಟ್‌ನ್ನು 83,000 ಕೋಟಿ ರೂಪಾಯಿಗಳ ಬಜೆಟ್‌ನ್ನು ಮಂಡನೆ ಮಾಡಲಾಗಿತ್ತು. ಅಂದರೆ 15,000 ಕೋಟಿ ರೂಪಾಯಿಗಳು ಆ ವರ್ಷ ಆದಾಯ ಬರಲಿಲ್ಲ. ಆದಾಯ ಬರದಿದ್ದಾಗಲೂ ಕೂಡ ಹಿಂದೆ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಮಾನ್ ಸದಾನಂದಗೌಡರು ಮಾರ್ಚ್ 2012–13ನೇ ಸಾಲಿಗೆ 81,000 ಕೋಟಿ ರೂಪಾಯಿಗಳು ಬರುತ್ತದೆಂದು ಹೇಳಿದರು. ರಾಜ್ಯ ಸರ್ಕಾರಕ್ಕೆ ಸಿಕ್ಕಿರತಕ್ಕಂತಹ ಆದಾಯ 68,000 ಕೋಟಿ ರೂಪಾಯಿಗಳು ಮಾತ್ರ. ಇನ್ನು 13,000 ಕೋಟಿ ರೂಪಾಯಿಗಳು ಹೆಚ್ಚುವರಿ ಆದಾಯ ಬರುತ್ತದೆಂದು ಅವರು ನಿರೀಕ್ಷೆ ಮಾಡಿದರು. Sir, it is impossible. ಸಾಧ್ಯವಿಲ್ಲದೇ ಇರುವುದನ್ನು ಇವರು ಮಾಡುವುದರ ಮುಖಾಂತರ ಇಷ್ಟು ಹಣ ಬರುತ್ತದೆಂದು ತೀರ್ಮಾನವನ್ನು ಮಾಡಿದರು. 83,000 ಕೋಟಿ ಬರುತ್ತದೆಂದಾಗ ಮೇಲೆ 2012–13ನೇ ಸಾಲಿನ ಬಜೆಟ್‌ನ್ನು 1,03,000 ಕೋಟಿ ರೂಪಾಯಿಗಳಿಗೆ ಯಾವ ರೀತಿಯಾಗಿ ಹೆಚ್ಚಿಗೆ ಮಾಡಿದರು? ಬಜೆಟ್‌ನ್ನು ಮಾಡಿದ್ದೇವೆಂದು ಯಾವ್ಯಾವೋ ಸೇವೆಗಳಿಗೆ ಹಣವನ್ನು ಕೊಟ್ಟಿದ್ದೀರಿ. These are all populist programmes. ದಯವಿಟ್ಟು ಇದಕ್ಕೆ ಕಡಿವಾಣ ಹಾಕಿ. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಚುನಾವಣೆ ಬಂತು ಎಂದು ಇನ್ನು ಬಾಕಿ ಇರತಕ್ಕಂತಹ ಮೂರ್ನಾಲ್ಕು ತಿಂಗಳುಗಳಲ್ಲಿ ಶಾಸಕರುಗಳು ಬರುತ್ತಾರೆ, ಅವರು ಬರುತ್ತಾರೆ, ಇವರು ಬರುತ್ತಾರೆಂದು ಎಲ್ಲಿಯಾದರು ನನ್ನ ಕ್ಷೇತ್ರಕ್ಕೆ ಹಣ ಕೊಡಿ, ನನ್ನ ಕ್ಷೇತ್ರಕ್ಕೆ ಹಣ ಕೊಡಿ ಎಂದು ಬರುತ್ತಾರೆಂದು ಈ ಹಣವನ್ನು ಮುಂದಿನ ಮೂರ್ನಾಲ್ಕು ತಿಂಗಳಿಗೆ ಆ ಹಣವನ್ನು ಪೋಲು ಮಾಡುವುದಕ್ಕೆ ಇರತಕ್ಕಂತಹ ಆ ದುಸ್ಸಾಹಸಕ್ಕೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಕೈ ಹಾಕಬಾರದು. ಶ್ರೀ ಎಂ.ಸಿ. ನಾಣಯ್ಯನವರು ಬಂದರೂ ಕೊಡಬೇಡಿ, ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್. ಪಾಟೀಲ್‌ರವರು ಬಂದರೂ ಕೊಡಬೇಡಿ. ನಿಮ್ಮ ಪಕ್ಷದಲ್ಲಿರತಕ್ಕಂತಹ ಶಾಸಕರುಗಳು ಒತ್ತಡ ತಂದರು ಕೂಡ ದಯವಿಟ್ಟು ಈ ಹಣವನ್ನು ಕೊಡಬೇಡಿ. Now, we are not in a very safe position. Fiscal Deficit ಇದ್ದೇ ಇರುತ್ತದೆ. ಆ ಪದ್ಧತಿ ಕೇಂದ್ರ ಸರ್ಕಾರದಲ್ಲಿಯೂ ಇದೆ,

ನಮ್ಮ ರಾಜ್ಯದಲ್ಲಿಯೂ ಕೂಡ ಇದೆ. ನಾನು ಇಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. ನಮ್ಮ GDP ಯನ್ನು ಯಾವ ಹಂತದಲ್ಲಿ ಎತ್ತಿಕೊಂಡು ಹೋಗಬೇಕೆಂದು ಉಂಟು. ನಾನು ಆ ಮಟ್ಟಕ್ಕೆ ಹೋಗಿ debt trap ಎನ್ನುವಂತಹ ಪದವನ್ನು ಬಳಸುವುದಕ್ಕೆ ಹೋಗುವುದಿಲ್ಲ. ಶ್ರೀ ಎಸ್.ಆರ್. ಪಾಟೀಲ್‌ರವರು "We are entering into a debt trap" ಎಂದು ಹೇಳಿಬಿಟ್ಟರು. ಇಲ್ಲ. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾಲ್ಕು ವರ್ಷಗಳಲ್ಲಿ ಈ ಸರ್ಕಾರ ಮಾಡಿರತಕ್ಕಂತಹ ಸಾಲಗಳನ್ನು ಒಟ್ಟಾರೆ ತೆಗೆದುಕೊಂಡಾಗ the total debt in the year 2008 was to the extent of about ₹ 67,000 crores. That was our debt. Now this is the fifth year. But within a period of four years, why should the debt go right up to ₹ 1,16,000 crores? Why should it go? ಪ್ರತಿ ಬಜೆಟ್‌ನಲ್ಲಿ 10,000 ಕೋಟಿ ರೂಪಾಯಿಗಳಿಂದ 12,000 ಕೋಟಿ ರೂಪಾಯಿಗಳ ವರೆಗೆ ಸಾಲವನ್ನು ಮಾಡುವಂತಹ ಪರಿಸ್ಥಿತಿಯನ್ನು ಏಕೆ ನಿರ್ಮಾಣ ಮಾಡಲಾಗುತ್ತದೆ. It is on account of certain populist programmes which were brought by the Government. ಆ ಪ್ರೊಗ್ರಾಮ್‌ಗಳನ್ನು ಹತ್ತಾರು ಬಾರಿ ಹೇಳಿಕೊಂಡು ಹೋಗಬಹುದು. Don't, for heaven's sake, enter into populist programmes now. In the present situation, the Central Government is in a very deep financial crisis. Their fiscal deficit has gone beyond the accepted level. That is the reason there is inflation on one side. Money has lost its buying power. There is an international recession. We are also seeing its impact in all the states. ಇಲ್ಲವೆಂದು ನಾನು ಹೇಳುವುದಕ್ಕೆ ತಯಾರಿಲ್ಲ. Therefore, what is required is prudence in governance. ಕೆಲವು ಸಂದರ್ಭದಲ್ಲಿ ದುಂದು ವೆಚ್ಚವನ್ನು ಮಾಡುತ್ತಿರುವಂತಹ let it be one crore rupees or five crore rupees or fifteen crore rupees or whatever it may be. ಆ ಸಂದರ್ಭದಲ್ಲಿ ನೀವು ಗಮನಕ್ಕೆ ತೆಗೆದುಕೊಳ್ಳದೇ ಹೋದರೆ, ಇನ್ನು ಮುಂದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನನ್ನ ಕ್ಷೇತ್ರಕ್ಕೆ ಐದು

ಕೋಟಿ ರೂಪಾಯಿಗಳನ್ನು ಕೊಟ್ಟು ಬಿಡಿ ಸಾರ್ ಎಂದಾಗ ನಿಮ್ಮ ಪಕ್ಷದಲ್ಲಿರತಕ್ಕಂತಹ 150 ಜನರಿಗೆ ಅಥವಾ ಎಷ್ಟು ಜನ ನಿಮ್ಮ ಹತ್ತಿರ ಬರುತ್ತಾರೆ ಅವರಿಗೆಲ್ಲಾ ಕೊಟ್ಟರೆ ಅದೊಂದು 500 ರಿಂದ 600 ಕೋಟಿ ರೂಪಾಯಿಗಳಾದರೆ ಆ ಹಣವನ್ನು ಯಾವುದರಿಂದ ತೆಗೆದುಕೊಂಡು ಬರುತ್ತೀರಿ? In your budget itself you have made it clear. ಮುಂದಿನ ವರ್ಷಕ್ಕೆ ನೀವು borrowing ಎಂದು ಹೇಳುತ್ತಿರುವಂಥದ್ದಕ್ಕೆ ಸುಮಾರು 7000 ಕೋಟಿ ರೂಪಾಯಿಗಳು borrow ಮಾಡಬೇಕೆಂದು ಹೇಳಿಬಿಟ್ಟಿದ್ದಾರೆ. ಇಷ್ಟನ್ನು ಹೇಳಿಯಾದ ಮೇಲೆ ಇನ್ನು ಈ ಬಜೆಟ್‌ಗೆ ಬಂದಾದ ಮೇಲೆ ಇದನ್ನು ಯಾವ ರೀತಿಯಾಗಿ ವಸೂಲಾತಿಯನ್ನು ಮಾಡುತ್ತೀರಿ? ನಿಮ್ಮನ್ನು debt trap ಎಂದು ಹೇಳತಕ್ಕಂಥದ್ದು ನಿಜ. 1,16,000 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯದ ಜನತೆಯ ಮೇಲೆ on an average the per capita debt will be to the extent of about ₹ 26,000-27,000. ಇದಕ್ಕೆ ಇವರು ಹೇಳುತ್ತಿರುವಂಥದ್ದು, ಪೂರಕ ಅಂದಾಜಿನಲ್ಲಿ ಇಷ್ಟು ದೊಡ್ಡ ಪ್ರಮಾಣದ ಹಣವನ್ನು ಎರಡಕ್ಕೆ ತೋರಿಸಲಾಗಿದೆ. 3,700 ಕೋಟಿ ರೂಪಾಯಿಗಳನ್ನು ರೈತರ ಸಾಲದ ಮೇಲಿನ ಮನ್ನಾಕ್ಕೆ ಹಣವನ್ನು ಕೊಡಬೇಕಾಗಿರುವುದು. ಆದರೆ ಇಲ್ಲಿ provide ಮಾಡಿರತಕ್ಕಂಥದ್ದು 1,800 ಕೋಟಿ ರೂಪಾಯಿಗಳನ್ನು ಮಾತ್ರ. ಇನ್ನು ಹಣವನ್ನು ಕೊಡಬೇಕಲ್ಲವೇ? 4,000 ಕೋಟಿ ರೂಪಾಯಿಗಳು ಸಿಬ್ಬಂದಿಗಳಿಗೆ ಕೊಡುವಂತಹ ಸಂಬಳವನ್ನು ಕೊಡಲೇಬೇಕು. ಅವರಿಗೆ ಕೊಡಬೇಕಾಗಿರುವುದರಿಂದ necessarily let me tell you, you need have to resort to borrowing. ನೀವು borrowing ಮಾಡಿದ ಮೇಲೆ ನಿಮ್ಮ debt servicing ಬಗ್ಗೆ ನಾನು ಹೇಳುತ್ತೇನೆ. Your debt servicing is increasing every year. ಆದ್ದರಿಂದ ನಾನು ಹೇಳುವುದೇನೆಂದರೆ, ಹಿಂದೆ ಮಾಡಿರತಕ್ಕಂತಹದ್ದು ಇರಬಹುದು ಆದರೆ ಈ populist programmes ಗಳಿಂದ I think you can't project a rosy picture of the Karnataka State by borrowing money. Borrowed amount to be repaid for debt servicing... ಅದು ಎಲ್ಲಿಗೆ ತಲುಪುತ್ತದೆ? That means your revenue buoyancy has not increased at all. ಆದರೆ ಸರ್ಕಾರ ಅವರ

ಅಧಿಕಾರಿಗಳ ಮುಖಾಂತರ ಏನನ್ನು ಬರೆಸಿಬಿಟ್ಟಿದ್ದಾರೆಂದರೆ, 205ನಲ್ಲಿ ಒಟ್ಟಾರೆ ಕೇಳುತ್ತಿರುವಂಥದ್ದು ಎಷ್ಟು ಹಣ ಎಂದರೆ, 8,800 ಕೋಟಿ ರೂಪಾಯಿಗಳಿಗೆ ಪೂರಕ ಅಂದಾಜಿನಲ್ಲಿ ಅನುಮತಿಯನ್ನು ಕೇಳುತ್ತಿದ್ದೀರಿ. It is the outflow from the Consolidated Fund of India. The total amount is ₹ 9,197 crores. Of which the Central Assistance... that is the assistance. ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ, ಅದನ್ನು ಉಪಯೋಗ ಮಾಡುತ್ತೇವೆಂದು ನನ್ನ ಸ್ನೇಹಿತರು ಹೇಳಿದರು. ನಾನು ಹೇಳುತ್ತೇನೆ ಕೇಂದ್ರ ಸರ್ಕಾರ ಕೊಡುತ್ತಿರುವಂತಹ ಹಣ it is a legitimate amount every State Government is entitled to get it. They can't say no to thet. ಏಕೆಂದರೆ, Finance Commissionb ನಲ್ಲಿ Devolution of Taxes ಉಂಟಲ್ಲಾ, ಆ Devolution of Taxes ನಲ್ಲಿ ನಮ್ಮ ಷೇರು ಎಷ್ಟು ಇರುತ್ತದೆ ಅದನ್ನು ಮಾತ್ರ ಕೊಡುತ್ತಾರೆ. This is not a charity. Let me make it very clear to my friends here. Whatever the Central Government gives, be it the BJP Government or the Congress Government or tomorrow even if a Communist Government comes to power; let me tell yuo, it is not a charity which any Central Government gives it to you. It is a legitimate share of each State Government. ಅವರು ಕೊಡುತ್ತಿರುವಂತಹ additionality ಏನು? Additionality ಎಲ್ಲಿಯಾದರು ಬರುವುದಿದ್ದರೆ, ಬಂದರೆ flood and drought ಗೆ ಬಂದಾಗ ಅದು Calamity Relief Fund ಕೆಳಗಡೆಯಲ್ಲಿ ಬರುವಂತದ್ದು. It has been fixed already. Calamity Relief Fund ಕೆಳಗಡೆಯಲ್ಲಿ ಬರುವಂತದ್ದು ಅದನ್ನು Planning Commission ರವರು ಪ್ರತಿ ರಾಜ್ಯಕ್ಕೆ ಎಷ್ಟೆಷ್ಟು ಹಣವೆಂದು fix ಮಾಡಿಬಿಟ್ಟಿದ್ದಾರೆ. We are entitled to get it every year whether you get flood or drought. ಆ ಹಣ ನಮಗೆ ಬರಲೇಬೇಕಾಗುತ್ತದೆ. ಕಳೆದ ವರ್ಷ ನಮ್ಮ ರಾಜ್ಯದಲ್ಲಿ ನೆರೆ ಹಾವಳಿ ಬಂತು. ಈ ವರ್ಷ ನಮ್ಮ ರಾಜ್ಯಕ್ಕೆ ಬರಗಾಲ ಕೂಡ ಬಂದಿದೆ. So whatever amount we got it, Calamity Relief Fund ನಲ್ಲಿ ಬರಬೇಕಾಗಿರುವಂತಹ

ಹಣವನ್ನು ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ಇನ್ನು second installment ಕೊಡುವಲ್ಲಿ ಅದನ್ನು ಮುಂಚಿತವಾಗಿಯೇ ಕೊಟ್ಟು ಬಿಟ್ಟಿದ್ದಾರೆ. Subsequently, they will get it adjusted. But what is the additionality? ಕೇಂದ್ರ ಸರ್ಕಾರದವರು ತಮಿಳುನಾಡಿಗೆ ಮತ್ತು ಆಂಧ್ರ ಪ್ರದೇಶಕ್ಕೆ ಹೆಚ್ಚು ಹಣವನ್ನು ಕೊಟ್ಟು ಬಿಟ್ಟರು ಎಂದು ಹೇಳಿದರು. ದಯವಿಟ್ಟು ಒಂದನ್ನು ತಿಳಿದುಕೊಳ್ಳಬೇಕು the magnitude of the drought, the magnitude of the flood, ಅದನ್ನು ನೋಡಿಕೊಂಡು ಕೇಂದ್ರ ಸರ್ಕಾರ 1,000 ಕೋಟಿ ರೂಪಾಯಿಗಳು ಕಳುಹಿಸಿದೆ. ಕೇಂದ್ರ ಸರ್ಕಾರ ಈ ಹಿಂದೆ ಆಂಧ್ರಪ್ರದೇಶಕ್ಕೆ, ತಮಿಳುನಾಡಿಗೆ, ಓರಿಸ್ಸಾ ರಾಜ್ಯಕ್ಕೆ ಕೊಟ್ಟಿದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೂ ಕೂಡ ಹಣವನ್ನು ಕೊಟ್ಟಿದೆ. But the maximum amount they had given during different years never exceeded more then ₹ 500 crores to any State. ಕೇಂದ್ರ ಸರ್ಕಾರದವರು ಹಣವನ್ನು ಕೊಡಬೇಕಾದರೆ ಅವರಿಗೆ ಎಲ್ಲಿಂದಲಾದರು ಬರಬೇಕಲ್ಲವೇ? ಕೇಂದ್ರ ಸರ್ಕಾರದವರು ಹಣವನ್ನು ಕೊಡುತ್ತಾರೆಂದು ಯೋಚನೆ ಮಾಡಬೇಕಾಗಿಲ್ಲ. ಮುಂದೆ ನಮ್ಮ ರಾಜ್ಯ ಸಾಲವನ್ನು ಮಾಡಬೇಕಾಗುವಂಥದ್ದು ಏನಾದರು ಬಂದರೆ, ಬಹುಶಃ ನೀವು ಆ ರೀತಿಯ crisis ಬಂದರೆ, ಬಹುಶಃ ನಿಮಗೆ ಎಲ್ಲಿಯಾದರು debt servicing ಗೆ ಮಾಡಬೇಕಾದಂತಹ ಅನಿವಾರ್ಯ ನಿರ್ಮಾಣವಾಗಿ ಬಿಟ್ಟರೆ, ಅಂತಹ ಸಂದರ್ಭದಲ್ಲಿ ನಿಮಗೆ ಎಲ್ಲಿಯಾದರು ಹಣ ಇಲ್ಲದೇ ಹೋದರೆ, necessarily you need have to resort to very prudent borrowing. ಕೃಷ್ಣ ಜಲಭಾಗ್ಯ ನಿಗಮದ ಬಾಂಡ್‌ಗಳನ್ನು ಕೊಟ್ಟು ಬಿಟ್ಟಿದ್ದೀರಿ. ಭಾರಿ ನೀರಾವರಿ ಸಚಿವರಾದ ಶ್ರೀ ಎಸ್.ಆರ್. ಬೊಮ್ಮಾಯಿಯವರು ಯಾವ ಹಣ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಬಂತು ಅದನ್ನು debt servicing ಗೆ ಕೊಡಲಾಯಿತು ಎಂದು ಹೇಳಿದರು. That means, whatever amount we are getting it ಅದನ್ನು ನಾವು debt servicing ಗೆ ಕೊಡುವಂತಹ ಪರಿಸ್ಥಿತಿಯನ್ನು ಮಾಡಿದರೆ that means our financial position is really not that sound ಎಂದಾಯಿತು. ಸಾಲ ಮಾಡಿರತಕ್ಕಂತಹ ಹಣವನ್ನು, ಹಣವನ್ನು

ತೀರಿಸುವುದಕ್ಕೆ ಖರ್ಚು ಮಾಡಿದರೆ ultimately where will it lead to? ಇದನ್ನು ನಾನು ಮೂರ್ನಾಲ್ಕು ವರ್ಷಗಳಿಂದ ಹೇಳುತ್ತಲೇ ಬಂದಿದ್ದೇನೆ. ಆದ್ದರಿಂದ ಇನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಸಲಹೆಯನ್ನು ಮಾಡುವುದೇನೆಂದರೆ, ಯಾರು ಏನೇ ಹೇಳಿಕೊಳ್ಳಲಿ don't resort to borrowing unless it has become absolutely necessary. ಈಗ ಏನು ಪೂರಕ ಅಂದಾಜಿನಲ್ಲಿ 9,19,765.24 ಲಕ್ಷ ರೂಪಾಯಿಗಳನ್ನು ಪಾಸ್ ಮಾಡಿಕೊಡಿ ಎಂದು ಹೇಳುತ್ತಿದ್ದಾರೆ, ಇದರಲ್ಲಿ the money you are getting from the Central Government is about ₹ 1,320 crores. That is in the from of assistance. 1,320 ಕೋಟಿ ರೂಪಾಯಿಗಳು, ಅದು ಕೇಂದ್ರ ಸರ್ಕಾರದಿಂದ ನಿಮಗೆ legitimate ಆಗಿ ಬರಬೇಕಾಗಿದೆ, ಅದು ಬರುತ್ತದೆ. This is to be adjusted. ಇತರ ವೆಚ್ಚಗಳಿಗೆ ಸಂಬಂಧಪಟ್ಟಂತೆ ₹ 118 crores is adjustment of accounts. ಇದಲ್ಲದೇ ₹ 228 crores. ಅದು ಕೂಡ ವಸೂಲಿ ಮಾಡಬೇಕಾಗಿರುವಂಥದ್ದು ಆದ್ದರಿಂದ ನಿಮ್ಮ net outflow ಎಷ್ಟಾಗುತ್ತದೆ? I am only worried about the net outflow from the Consolidated Fund of India. Consolidated Fund of India ನಲ್ಲಿ ಇರತಕ್ಕಂತಹ ಹಣ ಯಾವುದಿದೆ ಅದರಿಂದ ಬರುವ net outflow. These expenditures not provided for in the budget is approximately ₹ 5,572 crores. This is your net outflow from the Consolidated Fund of India. ಇದನ್ನು ನೀವು ನಿಮ್ಮ ಬಜೆಟ್‌ನಲ್ಲಿ ತೆರಿಗೆ ಮತ್ತು ತೆರಿಗೇತರ ರಾಜಸ್ವದಿಂದ ಉಂಟಾಗಬಹುದಾದ ಸಾಮಾನ್ಯ ಬೆಳವಣಿಗೆಯಿಂದ, because revenue buoyancy... ಈಗಾಗಲೇ ತೆರಿಗೆಯನ್ನು ಹಾಕಲಾಗಿದೆ. ಮತ್ತೆ ಹೆಚ್ಚಿಗೆ ತೆರಿಗೆಯನ್ನು ಹಾಕಲಾಗುವುದಿಲ್ಲ. ಆದ್ದರಿಂದ ನಿಮ್ಮ fiscal discipline ತರುವುದರಿಂದ ಎಷ್ಟು ತೆರಿಗೆ ನಮಗೆ ವಾಣಿಜ್ಯ ತೆರಿಗೆಯಿಂದ ಮತ್ತೊಂದು ಇಲಾಖೆಯ ತೆರಿಗೆಯಿಂದ, buoyancy of revenue, ಅದರಿಂದ ಮಾಡುತ್ತೇವೆಂದು ಹೇಳಿದ್ದಾರೆ. Let me tell you very honestly to all of you including the bureaucrats and your Finance Department, it is well

neigh impossible for you to have your revenue buoyancy to the extent of about ₹ 5,500 crores now because we are in the month of December. You can't expect a revenue buoyancy of another ₹ 5,500 crores. So necessarily what happens is, before the end of March, you need have to resort to borrowing. ಈ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ, ದಯವಿಟ್ಟು ಇನ್ನು ಮುಂದೆ ಈ ರೀತಿಯಾಗಿ ಮಾಡಬೇಡಿ. ರೈತರಿಗೆ ಸಾಲ ಮನ್ನಾ ಮಾಡಿದ ಹಣವನ್ನು ಬ್ಯಾಂಕ್‌ಗಳಿಗೆ ಕೊಡಲೇಬೇಕು, ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕಡೆಗೆ ನಿಮಗೆ ಒಂದು ಮಾತು ಹೇಳುತ್ತೇನೆ, don't destroy the cooperative institutions, please. ನಾವು ಸಾಲ ಮನ್ನಾ, ಬಡ್ಡಿ ಎನ್ನುವ concept ನ್ನು ತಂದು, ತಂದು populist measures ನೆಪದಲ್ಲಿ ನಾವು ಇದನ್ನು all along ಮಾಡುವುದಕ್ಕೆ ಹೋಗಿ the cooperative institutions are absolutely on the verge of bankruptcy. ಏನಾಗಿದೆ ಎಂದರೆ ಪೂರ್ತಿ adjustment. Nobody pays the money. Every year, it is nothing but book adjustment of the amount. ಬೆಳೆ ಸಾಲವನ್ನು ತೆಗೆದುಕೊಳ್ಳುವಂಥವರು ಇವತ್ತು ಯಾವುದೇ ಸಂಸ್ಥೆಯಲ್ಲಿ ಒಂದು ಲಕ್ಷ ರೂಪಾಯಿಗಳವರೆಗೆ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ಕೊಡಲಾಗುತ್ತದೆ. ಮೂರು ಲಕ್ಷ ರೂಪಾಯಿಗಳವರೆಗೆ 1% ಬಡ್ಡಿ ದರದಲ್ಲಿ ಕೊಡಲಾಗುತ್ತದೆ. ಅದನ್ನು ಮಾಡಬೇಕಾದರೆ ಒಂದು ವರ್ಷದಲ್ಲಿ ಸಿಕ್ಕಿರತಕ್ಕಂತಹ ಆದಾಯ ಮತ್ತು ನನ್ನ ಉಳಿಕೆ ಅದನ್ನು ಸೊಸೈಟಿಗೆ ಕಟ್ಟಿ ತಾನೇ ನಾನು ಹೊಸ ಸಾಲವನ್ನು ಪಡೆಯಬೇಕಾಗಿರುವುದು. ಆದರೆ ಇವತ್ತು ಅದು ಯಾವ ಸೊಸೈಟಿಯಲ್ಲಿಯೂ ಕೂಡ ಇಲ್ಲ. ಬಡ್ಡಿಯನ್ನು ಕಟ್ಟಿ ಇನ್ನೊಬ್ಬರಿಗೆ ಸಾಲವನ್ನು ಮಂಜೂರಾತಿ ಮಾಡುವಾಗ ಆ ಸಾಲವನ್ನು ಇವರಿಗೂ ಕೊಟ್ಟು ಪುನಃ ಮರಳಿ ಸಾಲವನ್ನು ತೆಗೆದುಕೊಳ್ಳುವಂಥದ್ದು ನಡೆಯುತ್ತಿದೆ. It is nothing but book adjustment of this amount. ಇದರ ಬಗ್ಗೆ ಸರ್ಕಾರ ಗಮನ ಹರಿಸದೇ ಹೋದರೆ, ನಾನು ಹೇಳುವುದನೆಂದರೆ, the cooperative institutions which is the very last link in the rural

development... I tell you, it is the last link. ಇದನ್ನು ನಾವು strengthen ಮಾಡುವುದಕ್ಕೆ ಇರತಕ್ಕಂತಹ ಕಾರ್ಯಕ್ರಮವನ್ನು ಮಾಡಿದೇ ಹೋದರೆ, ನಾನು ಹೇಳುತ್ತೇನೆ, the rural economy will be in a great distress. Let us not do that. ಸಾಲ ಮಾಡಿದ ಹಣವನ್ನು ಸೊಸೈಟಿಗಳಿಗೆ ಮಾರ್ಚ್ ತಿಂಗಳ ಕೊನೆಯೊಳಗೆ ಕೊಡದೇ ಹೋದರೆ, ಏಪ್ರಿಲ್ 30ನೇ ತಾರೀಖಿನೊಳಗೆ ನೀವು ಅವರ ಸಾಲವನ್ನು ಮರುಪಾವತಿ ಮಾಡಿ, ರೈತರ 25,000 ರೂಪಾಯಿಗಳನ್ನು ಮನ್ನಾ ಮಾಡಬೇಕೆಂದು ರಾಜ್ಯ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ. ಮನ್ನಾ ಮಾಡುವಂತಹ ಕಾರ್ಯಕ್ರಮವನ್ನು ಮಾಡಿ. ರೈತರಿಗೆ ಕೊಟ್ಟರೆ ತಪ್ಪಾಗುವುದಿಲ್ಲ. ಆದರೆ ಇದರ ಲಾಭವನ್ನು ಬಹಳ ಜನ ಪಡೆಯುತ್ತಿದ್ದಾರೆ. ಮೊದಲು ಮೂರು ಲಕ್ಷ ರೂಪಾಯಿಗಳನ್ನು ಸಾಲ ಪಡೆಯುವಂತಹ ಜನ ಸಹಕಾರಿ ಸಂಘಗಳಿಗೆ ಬರುತ್ತಿರಲಿಲ್ಲ. ಈಗ ಒಂದು ಲಕ್ಷ ರೂಪಾಯಿಗಳಿಗೆ ಶೂನ್ಯ ಬಡ್ಡಿ ಮತ್ತು ಮೂರು ಲಕ್ಷ ರೂಪಾಯಿಗಳ ವರೆಗೆ 1% ಬಡ್ಡಿ ಎಂದು ಮಾಡಿರುವುದರಿಂದ ಈಗ ಒಂದು ಮನೆಯಲ್ಲಿ 3–4 ಜನರ ಹೆಸರಿನಲ್ಲಿ ಮೂರು ಲಕ್ಷ ರೂಪಾಯಿಗಳಂತೆ ಹನ್ನೆರಡು ಲಕ್ಷ ರೂಪಾಯಿಗಳ ಸಾಲವನ್ನು ಪಡೆದುಕೊಂಡು ಅದನ್ನು ನೇರವಾಗಿ ತೆಗೆದುಕೊಂಡು ಹೋಗಿ ವಾಣಿಜ್ಯ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು 10% ಬಡ್ಡಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಇವರು ಮೂರು ಲಕ್ಷ ರೂಪಾಯಿಗಳಿಗೆ ಒಂದು ವರ್ಷಕ್ಕೆ 3,000 ರೂಪಾಯಿಗಳನ್ನು ಮಾತ್ರ ಬಡ್ಡಿಯನ್ನು ಕಟ್ಟುವುದು. ಆದರೆ ವಾಣಿಜ್ಯ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು ಒಂದು ವರ್ಷಕ್ಕೆ 30,000 ರೂಪಾಯಿಗಳ ಬಡ್ಡಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಹಿಂದೆ ಹೆಚ್ಚು ಜನರು ಸಹಕಾರಿ ಸಂಘಗಳಲ್ಲಿ ಸಾಲವನ್ನು ಪಡೆಯುತ್ತಿರಲಿಲ್ಲ. ಆದರೆ ಈಗ ಎಲ್ಲರೂ ಸಹಕಾರಿ ಸಂಘಗಳಲ್ಲಿ ಸಾಲವನ್ನು ಪಡೆಯುವುದಕ್ಕೆ ಬರುತ್ತಿದ್ದಾರೆ. ನಾನು ಸಹಕಾರ ಸಚಿವರಿಗೆ ಹೇಳಿದೆ. ಆದರೆ ಇವತ್ತು ಸಹಕಾರಿ ಸಚಿವರು ಇಲ್ಲ. I told to kindly ensure that this money which has been given to the farmers, ಆ ಅಕೌಂಟ್‌ನಲ್ಲಿ ಪ್ರತಿ ವರ್ಷ ಅಲ್ಲಿಂದ operate ಮಾಡಿ ಎಂದು ಹೇಳಿದಾಗ ಯಾರು ಇದರ ಬಗ್ಗೆ ಗಮನವನ್ನು ಹರಿಸಲೇ ಇಲ್ಲ. Sir, let us not make a fraud of it. Persons who are not eligible to

get this loan and persons who do not want to get this loan, they are getting into the cooperative institutions by becoming new members. They take the amount. Immediately after getting the cheque from the society, they will put it in the commercial bank and borrow the money. But their percentage is very less. Let me tell you that also. Their percentage is very less. ಅದಕ್ಕೆ ಏನು ಕಾರಣ ಗೊತ್ತೇನು? 25,000 ರೂಪಾಯಿಗಳ ಒಳಗಡೆ ಸಾಲವನ್ನು ಪಡೆಯುವವರು they constitute more than about 60% of the farmers. 25,000 ರೂಪಾಯಿಗಳಿಂದ 1,00,000 ರೂಪಾಯಿಗಳ ವರೆಗೆ ಸಾಲವನ್ನು ಪಡೆಯುವಂತಹ ರೈತರು ನಮ್ಮ ಕರ್ನಾಟಕ ರಾಜ್ಯದಲ್ಲಿ 87% ಇದ್ದಾರೆ. ಅವರು ಈ ರೀತಿಯ ಕೆಲಸವನ್ನು ಮಾಡುವುದಿಲ್ಲ. ಆದರೆ ದೊಡ್ಡ ಪ್ರಮಾಣದಲ್ಲಿ ಹಣವನ್ನು ತೆಗೆದುಕೊಂಡು ಹೋಗಿ ಧಂದೆಯನ್ನು ಮಾಡುತ್ತಿರುವಂತಹ ಜನರಿದ್ದಾರಲ್ಲಾ ಅವರಿಗೆ ಸರ್ಕಾರ ಲಾಭ ಮಾಡಿಕೊಡಲಾಯಿತು. ಇದರ ಬಗ್ಗೆ ಗಮನಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಯಾರಾದರು ಶಾಸಕರು ಬಂದು ನನ್ನ ಕ್ಷೇತ್ರ ಅಭಿವೃದ್ಧಿಗೆ ಐದು ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿ ತೆಗೆದುಕೊಂಡು ಹೋಗಿ ಮೂರು ತಿಂಗಳು ಲೂಟಿ ಮಾಡಿಬಿಡುತ್ತಾರೆ. ನರೇಗಾ (NREGA) ಯೋಜನೆಯಲ್ಲಿ ಯಾವ ರೀತಿಯಾಗಿ ಹಣವನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ. ಜೆಸಿಬಿ ಯಂತ್ರಗಳಲ್ಲಿ ಕೆಲಸವನ್ನು ನರೇಗಾ ಯೋಜನೆಯಲ್ಲಿ ಮಾಡಿ, ಪುಸ್ತಕದಲ್ಲಿ ಬಹಳ ಜನರಿಗೆ ಕೆಲಸವನ್ನು ಕೊಟ್ಟಿದ್ದೇವೆಂದು ಹೇಳಿಬಿಟ್ಟರು. ಒಂದೊಂದು ಹಳ್ಳಿಯಲ್ಲಿ 3–4 ಜೆಸಿಬಿ ಗಳಿವೆ. ಹಿಂದೆ ತಾಲ್ಲೂಕು ಕೇಂದ್ರದಲ್ಲಿ ಒಂದು ಜೆಸಿಬಿ ಇರುತ್ತಿರಲಿಲ್ಲ. ಇವತ್ತಿನ ದಿವಸ ಒಂದೊಂದು ಹಳ್ಳಿಯಲ್ಲಿ 5–6 ಜೆಸಿಬಿ ಯನ್ನು ಹೊಂದಿರುವಂತಹ ಗುತ್ತಿಗೆದಾರರು ಹೊಂದಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಅವ್ಯವಹಾರವಾಗುತ್ತಿರುವುದನ್ನು ದಯವಿಟ್ಟು ಕಣ್ಣಿನಲ್ಲಿ ಕಣ್ಣಿಟ್ಟು ನೋಡದೇ ಹೋದರೆ, ಈ fiscal discipline, inflation, ನಾವು ಮುಂದೆ ಬರತಕ್ಕಂತಹ

ಸಂದರ್ಭದಲ್ಲಿ ಸರ್ಕಾರ ಅವಧಿಯನ್ನು ಪೂರೈಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಆಸೆ. ನನ್ನಿಂದ ನೀವು ಏನು ತೆಗೆಯುವುದಕ್ಕಾಗುವುದಿಲ್ಲ. ನೀವು ಏನಾದರು ನಿಮ್ಮಲ್ಲಿರತಕ್ಕಂತಹ ಆಂತರಿಕ ಭಿನ್ನಾಭಿಪ್ರಾಯದಿಂದ ಏನಾದರು ಬಿಟ್ಟು ಹೋಗಿಬಿಟ್ಟರೆ, ಸಜ್ಜನಿಕೆಯಿಂದ ಇರತಕ್ಕಂತಹ ಯಾವಾಗಲು ನಗಾಡಿಕೊಂಡೇ ಇರತಕ್ಕಂತಹ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಜಗದೀಶ್ ಶೆಟ್ಟರ್‌ರವರೇ, ಶಾಸಕರುಗಳು ಏನಾದರು ನಿಮ್ಮ ಹತ್ತಿರ ಬಂದು ಇನ್ನು ಮೂರು ತಿಂಗಳುಗಳು ಮಾತ್ರ ಇದೆ, ನನ್ನ ಕ್ಷೇತ್ರದಲ್ಲಿ ಏನಾದರು ಕೆಲಸವನ್ನು ಮಾಡಿಕೊಳ್ಳುತ್ತೇವೆ ಹಣವನ್ನು ಕೊಟ್ಟು ಬಿಡಿ ಸಾರ್ ಎಂದರೆ, ನೀವು ಕೊಟ್ಟು ಬಿಟ್ಟರೆ ಆ ಹಣವನ್ನು ಎಲ್ಲಾ ಕಡೆ ಲೂಟಿ ಮಾಡಿಬಿಡುತ್ತಾರೆ. ದಯವಿಟ್ಟು ಆ ಒಂದು ಕೆಲಸಕ್ಕೆ ಕೈ ಹಾಕಬೇಡಿ.

(12.00 ಗಂಟೆ)

ಇನ್ನು ಮುಂದಿನ 3 ತಿಂಗಳಲ್ಲಿ ನಿಮಗೆ ಸಾಲ ಮಾಡುವಂತಹ ಅನಿವಾರ್ಯತೆ ಬಂದಲ್ಲಿ ದಯವಿಟ್ಟು ಆರ್ಥಿಕ ಇಲಾಖೆಯವರು ಹೇಳುವುದನ್ನು ಕೇಳಬೇಕಾಗುತ್ತದೆ. At that time we need have to accept the Finance Department. ಆರ್ಥಿಕ ಇಲಾಖೆಯವರಿಗೆ ಕೊಡುವುದಕ್ಕೇನು ಎಂದು ಸಾಮಾನ್ಯವಾಗಿ ಎಲ್ಲ ಸಂದರ್ಭಗಳಲ್ಲಿಯೂ ಬಯ್ಯುತ್ತೀರಿ. Where is the revenue? You are not going to be size it to 2000 crores this year. There will be a deficit of more than 12000 to 13000 crores, this year. ನೀವು ಹಣವನ್ನು ತಯಾರು ಮಾಡುವುದಕ್ಕಾಗುವುದಿಲ್ಲ. ಈ ಹಿನ್ನೆಲೆಯಲ್ಲಿ kindly take rude and pressure governance ಎಂಬುದಕ್ಕೆ ಸ್ವಲ್ಪಮಟ್ಟಿಗೆ ಬೆಲೆ ಕೊಡಿ, ನೀವು 3 ತಿಂಗಳಲ್ಲಿ ಆ ಕೆಲಸವನ್ನು ಮಾಡಿದರೆ ಮುಖ್ಯಮಂತ್ರಿಗಳಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ದೊಡ್ಡ ಪ್ರಮಾಣದಲ್ಲಿ ಸಾಲ ಮಾಡಿ ಅದರ ಹೊರೆಯನ್ನು ನಮ್ಮ ಮೇಲೆ ಹಾಕಿ ಹೋಗಲಿಲ್ಲ ಎನ್ನುವಂತಹ ಖ್ಯಾತಿಯಾದರೂ ನಿಮಗೆ ಬಂದರೆ that is the greatest asset ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ವಿ. ರಾಜಶೇಖರನ್ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ನಮ್ಮ ಸದಸ್ಯರನೇಕರೇನಿದ್ದಾರೆ ಅವರಿಗೆ ಕಾಲಾವಕಾಶವನ್ನು ಕೊಡುವುದಕ್ಕೋಸ್ಕರ ನಾನು ಸಾಧ್ಯವಾದಷ್ಟೂ ಕಡಿಮೆ ಸಮಯವನ್ನು ತೆಗೆದುಕೊಂಡು ತಮ್ಮ ಗಮನಕ್ಕೆ ಕೆಲವು ವಿಚಾರಗಳನ್ನು ತರಬಯಸುತ್ತೇನೆ.

ಇವೊತ್ತಿನ ದಿವಸ ಸನ್ಮಾನ್ಯ ಮುಖ್ಯಮಂತ್ರಿಯವರು ಹಣಕಾಸು ಸಚಿವರಾಗಿ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ನಮ್ಮ ಮುಂದೆ ಏನು ತಂದಿದ್ದಾರೆ, ಅದಕ್ಕೆ ನಾವು ಅಂಗೀಕಾರವನ್ನು ಕೊಡಬೇಕಾಗುತ್ತದೆ. ಆದರೆ ಈಗಾಗಲೇ ಮಾತನಾಡಿದಂತಹ ನಮ್ಮ ಸ್ನೇಹಿತರು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಸಹ ಸರ್ಕಾರ ಪರಿಗಣಿಸಬೇಕೆಂದು ನಾನು ಬಯಸುತ್ತೇನೆ.

ನಾನು ಈ ವಿಧೇಯಕದ ಬಗ್ಗೆ ಮಾತನಾಡಲು ಬಯಸುತ್ತಿರುವುದೇಕೆಂದರೆ, ಸ್ನೇಹಿತರಾದಂತಹ ಸನ್ಮಾನ್ಯ ಮತ್ತಿಕಟ್ಟಿ ವೀರಣ್ಣನವರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದರು. ಇವೊತ್ತಿನ ದಿವಸ ಕೇಂದ್ರ ಸರ್ಕಾರದಿಂದ ಪ್ರತಿ ವರ್ಷ ಸಾಕಷ್ಟು ಹಣ ಬರುತ್ತಿರುವುದನ್ನು ತಾವೆಲ್ಲರೂ ಗಮನಿಸಿದ್ದೀರಿ. ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಸಹ ಈ ವಿಚಾರ ಚೆನ್ನಾಗಿ ಗೊತ್ತಿದೆ. 2004ರಲ್ಲಿ ಏನು ಯು.ಪಿ.ಎ. ಸರ್ಕಾರ ಕೇಂದ್ರದಲ್ಲಿ ಅಧಿಕಾರವನ್ನು ವಹಿಸಿಕೊಂಡಿತು, ಅಲ್ಲಿಂದೀಚೆಗೆ ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರಗಳಿಗೆ ಕೊಡುತ್ತಿದೆ ಎನ್ನುವ ವಿಚಾರ ಇವೊತ್ತಿನ ದಿವಸ ಲೆಕ್ಕಪತ್ರಗಳನ್ನು ಪರಿಶೀಲನೆ ಮಾಡಿದರೆ ತಮಗೆ ಗೊತ್ತಾಗುತ್ತದೆ. ಎನ್.ಡಿ.ಎ. ಸರ್ಕಾರ ಇದ್ದಾಗ ಕರ್ನಾಟಕ ರಾಜ್ಯಕ್ಕೆ ಏನು ಯೋಜನಾ ಆಯೋಗದ ಒಂದು ಪರಿಮಿತಿಯಲ್ಲಿ ಯೋಜನಾ ಗಾತ್ರ ಇತ್ತು ಅದು ಸುಮಾರು 7 ರಿಂದ 9 ಸಾವಿರ ಕೋಟಿ ರೂಪಾಯಿಗಳು ಮಾತ್ರ. 2004 ರಿಂದ ಈಚೆಗೆ ಯೋಜನಾ ಗಾತ್ರ ಏರಿಕೆಯಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದರ ವಾಸ್ತವಾಂಶ ಏನೆಂಬುದು ತಾವು

ಲೆಕ್ಕಪತ್ರಗಳನ್ನು ನೋಡಿದಾಗ ಗೊತ್ತಾಗುತ್ತದೆ. ಆದರೆ ಒಂದು ವಿಷಯವನ್ನು ನಾನು ತಮ್ಮ ಮುಖಾಂತರ ಸದನದ ಗಮನಕ್ಕೆ ತರಬಯಸುತ್ತೇನೆ. ಇವೊತ್ತಿನ ದಿವಸ ನಮ್ಮಲ್ಲಿ ಹಣದ ಕೊರತೆ ಇಲ್ಲ, ಏಕೆಂದರೆ ಕೇಂದ್ರ ಸರ್ಕಾರದಿಂದ ಹಣ ಬರುತ್ತಿದೆ. ರಾಜ್ಯ ಸರ್ಕಾರ ಸಹ ಸಾಕಷ್ಟು ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಅದಕ್ಕಾಗಿ ನಾನು ಬಹಳ ಸಂತೋಷದಿಂದ ಸರ್ಕಾರದವರಿಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಆದರೆ ಈ ಹಣ ಯಾವ ರೀತಿ ಖರ್ಚಾಗುತ್ತಿದೆ, ಆ ಹಣ ಖರ್ಚಾಗುವುದಕ್ಕೆ ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತಿದೆ ಎಂಬುದನ್ನು ತಾವು ಪರಿಶೀಲನೆ ಮಾಡಬೇಕಾಗುತ್ತದೆ. Sir, I am extremely sorry. I am greatly concerned about the administrative system which is coming in the way for the faster growth of this Country and the State. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನಿಷ್ಠೆ ಮತ್ತು ಬದ್ಧತೆಯನ್ನು ನೋಡಿ ನನಗೆ ಅತ್ಯಂತ ಸಂತೋಷವಾಗಿದೆ.

ಮಾನ್ಯ ಸಭಾಪತಿಯವರೇ, ನಾನು ಪಕ್ಷಾತೀತವಾಗಿ ಮಾತನಾಡಬಯಸುತ್ತೇನೆ. ಇವೊತ್ತಿನ ದಿವಸ ನಾವು ಯಾವುದೇ ಒಂದು ತೀರ್ಮಾನವನ್ನು ತೆಗೆದುಕೊಂಡಾಗ ಅದರ ಅನುಕೂಲ ಸಾಮಾನ್ಯ ಜನರಿಗೆ ತಲುಪಬೇಕಾಗುತ್ತದೆ, ಅದು ತಲುಪಬೇಕಾದರೆ ಎಷ್ಟು ಕಾಲ ಹಿಡಿಯುತ್ತಿದೆ ಎಂಬುದನ್ನು ಇವೊತ್ತಿನ ದಿವಸ ತಾವು ನಾನಾ ಸಮೀಕ್ಷೆಗಳಿಂದ ಗಮನಿಸುತ್ತಿದ್ದೀರಿ. ಇವೊತ್ತಿನ ದಿವಸ ಹೊಸ ಹೊಸ ತಂತ್ರಜ್ಞಾನ ಲಭ್ಯವಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಒಂದು ಸಾಫ್ಟ್‌ವೇರ್ ಮಾಡಿಸಿ, ನೀವು ಒಂದು ತೀರ್ಮಾನವನ್ನು ತೆಗೆದುಕೊಂಡ ಮೇಲೆ ಅದು ಅನುಷ್ಠಾನಗೊಳ್ಳುವುದಕ್ಕೆ ಎಷ್ಟು ಕಾಲ ತೆಗೆದುಕೊಳ್ಳುತ್ತಿದೆ ಎಂಬುದನ್ನು ಆ ಸಾಫ್ಟ್‌ವೇರ್ ಮುಖಾಂತರ ಮನೆಯಲ್ಲಿಯೇ ಕುಳಿತು ಪ್ರತಿದಿನ ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಅತ್ಯಂತ ನಿಷ್ಠೆಯಿಂದ ಮತ್ತು ಬದ್ಧತೆಯಿಂದ ಕೆಲಸ ಮಾಡತಕ್ಕಂತಹ ಸಾಕಷ್ಟು ಅಧಿಕಾರಿಗಳಿದ್ದಾರೆ. ಸರ್ಕಾರದಲ್ಲಿ ಯಾವುದೇ ಒಂದು ತೀರ್ಮಾನವನ್ನು ತೆಗೆದುಕೊಂಡಾಗ ಅದರ ಅನುಷ್ಠಾನ ನಿಧಾನವಾದರೆ with the rate of inflation ಆ ಉದ್ದೇಶಕ್ಕೆ ಎಷ್ಟು ಹಣವನ್ನು ಮೀಸಲಿರಿಸಲಾಗಿರುತ್ತದೆ ಆ ಹಣದ ಮೌಲ್ಯ ಕಡಿಮೆಯಾಗುತ್ತಾ ಹೋಗುತ್ತದೆ. ಇತ್ತೀಚಿನ ಒಂದು ಸಮೀಕ್ಷೆ ಪ್ರಕಾರ ಸರ್ಕಾರದಿಂದ ಫಲಾನುಭವಿಗಳಿಗೆ ಒಂದು ರೂಪಾಯಿಯ ಅನುಕೂಲತೆಯನ್ನು ತಲುಪಿಸುವುದಕ್ಕೆ ಸುಮಾರು ಐದರಿಂದ ಆರು ರೂಪಾಯಿಗಳನ್ನು ನಾವು administration ಗೆ ಖರ್ಚು ಮಾಡುತ್ತಿದ್ದೇವೆ. ಇದನ್ನು ಈಗಾಗಲೇ ನಮ್ಮ ಮುಖಂಡರು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಇಂತಹ ವಿಷಯಗಳ ಕಡೆಗೆ ಅವರು ಹೆಚ್ಚಿನ ಗಮನವನ್ನು ಹರಿಸಬೇಕಾಗುತ್ತದೆ. What is the amount which has been spent on giving delivery to the people which is meant? ಎಷ್ಟಾಗುತ್ತಿದೆ, ಇದನ್ನು ನಾವು ಪ್ರತಿ ದಿವಸ, ಪ್ರತಿ ಘಳಿಗೆ ಕೂಡ monitor ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಂಡಂತಹ ತೀರ್ಮಾನದ ಅನುಕೂಲತೆ ಆದಷ್ಟು ಶೀಘ್ರವಾಗಿ ಸಾಮಾನ್ಯ ಜನತೆಗೆ ತಲುಪುವುದಕ್ಕೆ ಸಾಧ್ಯವಾಗುತ್ತದೆ.

ಮಾನ್ಯ ಸಭಾಪತಿಯವರೇ, ತಮಗೆಲ್ಲಾ ಗೊತ್ತಿರುವಂತೆ ದಿ:ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಒಂದು ರೂಪಾಯಿಯಲ್ಲಿ 15 ಪೈಸೆ ಮಾತ್ರ ಜನತೆಗೆ ತಲುಪುತ್ತಿದೆ ಎಂದು ಹೇಳಿ, ಈಗ with the rate of inflation ಎಷ್ಟಾಗಿದೆ ಎಂಬುದನ್ನು ತಾವು ಯೋಚನೆ ಮಾಡಿ. ಆದ್ದರಿಂದ ಇದರ ಕಡೆಗೆ administrative system ಏನಿದೆ, ಅದನ್ನು ನಾವು ಬದಲಾವಣೆ ಮಾಡಬೇಕಾಗುತ್ತದೆ. ನಾವು ತೆಗೆದುಕೊಂಡಂತಹ ತೀರ್ಮಾನವನ್ನು ಅತ್ಯಂತ ಶೀಘ್ರವಾಗಿ ಕಾರ್ಯರೂಪಕ್ಕೆ ತಂದು ಅದರ ಅನುಷ್ಠಾನದ ಅನುಕೂಲತೆಯನ್ನು ಸಾಮಾನ್ಯ ಜನರಿಗೆ ತಲುಪಿಸುವಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹೆಚ್ಚಿನ ಗಮನವನ್ನು ಹರಿಸಬೇಕಾಗುತ್ತದೆ.

ಇವೊತ್ತಿನ ದಿವಸ ಸರ್ಕಾರದಲ್ಲಿ ಹಣಕ್ಕೆ ಕೊರತೆ ಇಲ್ಲ, ಸರ್ಕಾರ ಸಾಕಷ್ಟು ಹಣವನ್ನು ಕ್ರೋಢೀಕರಿಸುತ್ತಿದೆ. ಜೊತೆಗೆ ಕೇಂದ್ರ ಸರ್ಕಾರದಿಂದ ಕೂಡ ರಾಜ್ಯಕ್ಕೆ ಸಾಕಷ್ಟು ಹಣ ಬರುತ್ತಿದೆ. ಆದರೆ ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡತಕ್ಕಂತಹ ವ್ಯವಧಾನವನ್ನು ನಾವು ಕಂಡುಕೊಳ್ಳಬೇಕು. Rules and Procedure ಇದ್ದರೆ ದಯವಿಟ್ಟು ಅದನ್ನು ಬದಲಾವಣೆ ಮಾಡಿ, if you don't change, people will change it. ಅದಕ್ಕೋಸ್ಕರ ಇದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕೆಂಬುದು ನನ್ನ ಅತ್ಯಂತ ಕಳಕಳಿಯ ಸಲಹೆಯಾಗಿದೆ.

ಇವೊತ್ತಿನ ದಿವಸ ನಮ್ಮ administrative system ಏನಿದೆ ಇದು ಬದಲಾವಣೆಯಾಗಬೇಕಾಗುತ್ತದೆ. ನಮ್ಮ ರಾಜಕೀಯ ಪಕ್ಷಗಳ ಆಲೋಚನೆಗಳು ಕೂಡ ಬದಲಾವಣೆಯಾಗಬೇಕಾಗುತ್ತದೆ. Because we are changing. ಇವೊತ್ತಿನ ದಿವಸ ಭಾರತ ದೇಶದ ಒಟ್ಟು ಪ್ರಜಾಸಂಖ್ಯೆಯಲ್ಲಿ ಶೇಕಡ 70ರಷ್ಟಿರುವಂತಹ 29 ವರ್ಷದ ಯುವಕರೇನಿದ್ದಾರೆ ಅವರು ಅತ್ಯಂತ ವಿಶಿಷ್ಟ ರೀತಿಯಿಂದ ಈ ರಾಜ್ಯದ ಅಭಿವೃದ್ಧಿಯನ್ನು ಗಮನಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಸರಿಯಾದ ರೀತಿಯಲ್ಲಿ ಸ್ಪಂದಿಸದಿದ್ದರೆ, ಸರಿಯಾದ ಆಡಳಿತವನ್ನು ಕೊಡದೆ ಹೋದರೆ, ನಿಷ್ಠೆಯಿಂದ ಮತ್ತು ಬದ್ಧತೆಯಿಂದ ನಾವು ಕೆಲಸ ಮಾಡದೆ ಹೋದರೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅಧಿಕಾರಿಗಳಾಗಿರಲಿ, ರಾಜಕೀಯದಲ್ಲಿರುವಂತಹ ವ್ಯಕ್ತಿಗಳೇ ಆಗಿರಲಿ, ವಿಧಾನ ಪರಿಷತ್ತು ಅಥವಾ ವಿಧಾನ ಸಭೆಯ ಸದಸ್ಯರಾಗಿರಲಿ, ಸಂಸತ್ತಿನ ಸದಸ್ಯರಾಗಿರಲಿ ನಾವು ಅನುಷ್ಠಾನದ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಈ ಕೆಲಸವನ್ನು ಮಾಡಬೇಕೆಂದು ನಾನು ಅತ್ಯಂತ ವಿನಯದಿಂದ ತಮ್ಮ ಮೂಲಕ ಸರ್ಕಾರಕ್ಕೆ ಸಲಹೆಯನ್ನು ನೀಡ ಬಯಸುತ್ತಿದ್ದೇನೆ.

ಕೊನೆಯದಾಗಿ ಮತ್ತೊಮ್ಮೆ ತಮ್ಮ ಗಮನಕ್ಕೆ ತರಬಯಸುವ ಒಂದು ವಿಚಾರವೆಂದರೆ, please get a software, from your home office you can monitor. ಅದನ್ನು ಒಂದು flow chart ಹಾಕಿ ನೀವು ತೆಗೆದುಕೊಂಡಂತಹ

ತೀರ್ಮಾನ ಹೇಗೆ ಮುಂದುವರೆಯುತ್ತಿದೆ, ಅದನ್ನು ಅಧಿಕಾರಿಗಳು ಯಾವ ರೀತಿಯಲ್ಲಿ ಅನುಷ್ಠಾನಕ್ಕೆ ತರುತ್ತಿದ್ದಾರೆ ಎಂಬುದನ್ನು ತಾವು ತಮ್ಮ ಗೃಹ ಕಛೇರಿಯಲ್ಲಿ ಕುಳಿತು ಪ್ರತಿ ದಿವಸ ನೋಡಬಹುದು. ಯಾರು ಅದನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ತರುತ್ತಿಲ್ಲ, you take them into task and call them into accountability. ಆದ್ದರಿಂದ ದಯವಿಟ್ಟು ಇಷ್ಟನ್ನು ಮಾಡಬೇಕೆಂದು ಹೇಳಿ ರಾಜ್ಯದ ಹಿತದೃಷ್ಟಿಯಿಂದ ಪಕ್ಷಾತೀತವಾಗಿ ನಾನು ಈ ಸಲಹೆಗಳನ್ನು ಕೊಡಬಯಸಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಅಧಿಕಾರವನ್ನು ವಹಿಸಿಕೊಂಡ ನಂತರ ಬಹಳ ಕಳಕಳಿಯಿಂದ ಈ ಕೆಲಸವನ್ನು ಮಾಡುತ್ತಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿದೆ, ಆದರೆ ನೀವು ಯಾವ ವೇಗದಲ್ಲಿ ಸಾಗಬೇಕೆಂದಿದ್ದೀರಿ, ಆ ವೇಗದಲ್ಲಿ ಎಲ್ಲ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲ ಎಂಬುದನ್ನು ತಾವು ಗಮನದಲ್ಲಿಟ್ಟುಕೊಂಡು ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಇವೊತ್ತು 2012-13ನೇ ಸಾಲಿನ ₹ 9,19,765.24 ಲಕ್ಷಗಳ ಪೂರಕ ಅಂದಾಜುಗಳಿಗೆ ಈ ಸದನದಿಂದ ಒಪ್ಪಿಗೆಯನ್ನು ಪಡೆಯಲಿಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರು ಮಾಹಿತಿಗಳೊಡನೆ ಅದನ್ನು ನಮ್ಮ ಮುಂದೆ ತಂದಿದ್ದಾರೆ. ಈ ಬೇಡಿಕೆಯಲ್ಲಿ ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸಹಕಾರ, ಕಂದಾಯ, ಶಿಕ್ಷಣ, ಇಂಧನ ಇಂತಹ ಪ್ರಮುಖವಾದ ಇಲಾಖೆಗಳಿಗೆ ಈ ಪೂರಕ ಬಡ್ಜೆಟ್‌ನಲ್ಲಿ ಹಣದ ಬೇಡಿಕೆಯನ್ನಿಟ್ಟಿರುವುದರಿಂದ ಇದರ ಬಗ್ಗೆ ನಮ್ಮ ತಕರಾರೇನೂ ಇಲ್ಲ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸದನದ ಗಮನಕ್ಕೆ ತರಬಯಸುತ್ತೇನೆ.

ಇವೊತ್ತು ರೈತರ ಸಾಲ ₹ 3600 ಕೋಟಿಗಳಷ್ಟೇನಿದೆ ಅದನ್ನು ಮನ್ನಾ ಮಾಡಿದ್ದು, ಆ ಪೈಕಿ ಇಲ್ಲಿಯವರೆಗೆ ಸರ್ಕಾರ 350 ಕೋಟಿ ರೂಪಾಯಿಗಳನ್ನು ಕೊಟ್ಟಿದೆ, ಈಗ 1850 ಕೋಟಿಗಳಿಗೆ ಈ ಪೂರಕ ಅಂದಾಜಿನಲ್ಲಿ

ಬೇಡಿಕೆಯನ್ನಿಟ್ಟಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಈಗಾಗಲೇ ಸರ್ಕಾರ 3,600 ಕೋಟಿ ರೂಪಾಯಿಗಳನ್ನು ಮನ್ನಾ ಮಾಡುತ್ತೇವೆಂದು ಹೇಳಿದೆ. ಹಾಗಾಗಿ 3,250 ಕೋಟಿ ರೂಪಾಯಿಗಳನ್ನು ಪೂರಕ ಅಂದಾಜಿನಲ್ಲಿ ತೆಗೆದುಕೊಂಡು ಎಲ್ಲಾ ರೈತರಿಗೂ ಕೊಟ್ಟರೆ ಅನುಕೂಲವಾಗುತ್ತದೆ. ಸರ್ಕಾರ ರೈತರಿಗೆ ಸಾಲ ಮನ್ನಾ ಮಾಡುತ್ತೇವೆಂದು promise ಮಾಡಿದೆ. ಆದರೆ ಇವತ್ತಿನ ದಿವಸ ರೈತರಿಗೆ ಬ್ಯಾಂಕುಗಳಲ್ಲಿ ಸಾಲ ಸಿಗುತ್ತಿಲ್ಲ. ಏಕೆಂದರೆ, ಹಳೆಯ ಸಾಲ ತೀರಿಸಿಲ್ಲವೆಂದು ರೈತರಿಗೆ ಸಾಲವನ್ನು ಕೊಡುತ್ತಿಲ್ಲ. ಆದ್ದರಿಂದ ಆ ಸಾಲವನ್ನು ಕೊಡಲು ಎಷ್ಟು ಹಣ ಬೇಕು ಅಷ್ಟು ಹಣಕ್ಕೂ ಸದನದ ಒಪ್ಪಿಗೆಯನ್ನು ಪಡೆದುಕೊಂಡು ತಾವು ಎಲ್ಲಾ ರೈತರನ್ನು ಋಣಮುಕ್ತರನ್ನಾಗಿ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯವೇನೆಂದರೆ, ಹೆಚ್ಚಿಗೆ ಸಾಲ ಮಾಡುವಂತಹ ರೈತರೇನಿದ್ದಾರೆ ಕೃಷಿ ಮಾಡುವುದಕ್ಕೆ ಹೆಚ್ಚಿನ ಹಣದ ಅವಶ್ಯಕತೆ ಇದೆ. ಹಾಗಾಗಿ ಇವತ್ತು ಹೆಚ್ಚು ಸಾಲ ಮಾಡುವಂತಹ ರೈತರು ಸುಮ್ಮನೆ ಸಾಲವನ್ನು ಮಾಡುತ್ತಿಲ್ಲ ನಿಜಕ್ಕೂ ಕೃಷಿಕರು ಕೃಷಿಯನ್ನು ಉತ್ತಮ ರೀತಿಯಲ್ಲಿ ಮಾಡಬೇಕು ಎಂಬ ಉದ್ದೇಶದಿಂದ ಮಾಡುತ್ತಾರೆ. ಸಾಗುವಳಿದಾರರಿಗೆ ಸಾಗುವಳಿ ವೆಚ್ಚ ಕೂಡ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿದೆ. ಈ ವಿಷಯ ತಮಗೆಲ್ಲರೂ ತಿಳಿದಿದೆ. ಹಾಗಾಗಿ ಇವತ್ತಿನ ದಿವಸ ರೈತರು ಹೆಚ್ಚು ಹೆಚ್ಚು ಸಾಲವನ್ನು ಕೇಳುತ್ತಿದ್ದಾರೆ. ದೊಡ್ಡ ಪ್ರಮಾಣದ ಕೃಷಿ ಭೂಮಿಯನ್ನು ಹೊಂದಿರುವಂತಹ ರೈತರು ಹೆಚ್ಚು ಸಾಲವನ್ನು ಕೇಳುತ್ತಾರೆ. ಆದ್ದರಿಂದ ಮುಂದೆ ಬರುವಂತಹ ವರ್ಷದಲ್ಲಿ ಬೆಳೆ ಸಾಲ ಮತ್ತು ಕೃಷಿ ಸಾಲವನ್ನು ಪಡೆದುಕೊಳ್ಳುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಹಳೆಯ ಸಾಲವನ್ನೆಲ್ಲಾ ಚುಕ್ತಾ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯ ಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ನಾಣಯ್ಯನವರು ಮಾನ್ಯ ದಯಾನಂದ್‌ರವರು ಪೂರಕ ಬಜೆಟ್ ಮಂಡನೆ ಮಾಡಿದಂತಹ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ತಮ್ಮ ಗಮನಕ್ಕೆ

ತಂದಿದ್ದೇನೆ. ₹ 9,100.00 ಲಕ್ಷ ರೂಪಾಯಿಗಳಷ್ಟು ಪೂರಕ ಅಂದಾಜನ್ನು ಇಟ್ಟಿದ್ದೇನೆ. ಇದರಲ್ಲಿ ಯಾವ ಯಾವುದಕ್ಕೆ ಆದ್ಯತೆಯನ್ನು ಕೊಟ್ಟಿದ್ದೇನೆ ಎಂಬ ವಿಷಯವನ್ನು ತಮ್ಮೆಲ್ಲರ ಗಮನಕ್ಕೆ ತಂದಿದ್ದೇನೆ. ಅದರಲ್ಲಿ ಪ್ರಮುಖವಾಗಿ ನಮ್ಮ ಸಾಲ ಮನ್ನಾ ಯೋಜನೆಗೆ ಸಂಬಂಧಪಟ್ಟಂತೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು ಇವತ್ತು 1,800.00 ಕೋಟಿ ರೂಗಳಷ್ಟು ಪೂರಕ ಅಂದಾಜನ್ನು ಇಟ್ಟಿದ್ದೇನೆ ಅದರಿಂದ ಇವತ್ತು ಸಾಲಮನ್ನಾ ಯೋಜನೆಗೆ ಪೂರಕ ಆಗುವುದಿಲ್ಲ ಎಂಬ ಮಾತನ್ನು ತಾವು ಹೇಳಿದಿರಿ. ಈಗಾಗಲೇ 350 ಕೋಟಿ ಹಣವನ್ನು ಬಿಡುಗಡೆ ಮಾಡಲಾಗಿದೆ. ತಿಂಗಳು ತಿಂಗಳು ಅದು due ಯಾವ ರೀತಿ ಆಗುತ್ತದೆ ಅದರ ಪ್ರಕಾರ ನಾವು payment ಮಾಡುತ್ತಾ ಹೋಗುತ್ತೇವೆ. ಈಗಾಗಿ ಮಾರ್ಚ್ ತಿಂಗಳವರೆಗೆ ಏನು due ಆಗುತ್ತದೆ, ಆ due ಅನ್ನು ಕಂಪ್ಲೀಟ್ ಅಂದರೆ ಪೂರ್ಣವಾಗಿ ಆಯಾಯ ಬ್ಯಾಂಕುಗಳಿಗೆ reimburse ಮಾಡುವುದಕ್ಕೆ ಎಲ್ಲಾ ಅವಕಾಶಗಳನ್ನು ಕಲ್ಪಿಸಲಾಗಿದೆ. ನಮ್ಮ ರೈತರಿಗೆ ಯಾವುದೇ ರೀತಿಯಾದಂತಹ ತೊಂದರೆ ಆಗುವುದಿಲ್ಲ. ಇನ್ನು ನಮ್ಮ ಸಹಕಾರ ಸಂಘಗಳಿಗೂ ಸಹ ಆರ್ಥಿಕವಾಗಿ ಯಾವುದೇ ರೀತಿಯಾದಂತಹ ತೊಂದರೆ ಆಗುವುದಿಲ್ಲ. ನಾನು ಈ ಹಿಂದೆ ವಿರೋಧ ಪಕ್ಷದ ನಾಯಕನಾಗಿದ್ದಾಗ ನೋಡಿದ್ದೇನೆ, ಆದುದರಿಂದ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ನಾನು ಉತ್ತರ ಕೊಟ್ಟಮೇಲೆ ಅದರಲ್ಲಿ ಏನಾದರು ತಪ್ಪಿದ್ದರೆ ಅಥವಾ ಸ್ಪಷ್ಟೀಕರಣ ಇದ್ದರೆ ತಮಗೆ ಕೇಳುವುದಕ್ಕೆ ಖಂಡಿತವಾಗಿ ಅವಕಾಶ ಮಾಡಿಕೊಡುತ್ತೇನೆ. ಈಗೇನು ನಾನು ಅಂಕಿ-ಸಂಖ್ಯೆಗಳ ಮಾಹಿತಿಯನ್ನು ಕೊಡುತ್ತಿದ್ದೇನೆ, ಇದಕ್ಕೆ ತಾವೇನು ಕೆಲವು ಭಾವನೆಗಳನ್ನು express ಮಾಡಿದ್ದೀರಿ ಅಂದರೆ ನಮ್ಮ ರೈತರಿಗೆ ಸಾಲ ಮನ್ನಾ ಯೋಜನೆಯ ಲಾಭ ತಟ್ಟುವುದಿಲ್ಲ, ಇದು ಕೇವಲ ಘೋಷಣೆಯಾಗಿದೆ ಎಂಬ ಮಾತನ್ನು ತಾವೇನು ಹೇಳಿದಿರಿ, ಆದರೆ ಆ ರೀತಿ ಆಗುವುದಿಲ್ಲ. ಅದಕ್ಕಾಗಿ ಇವತ್ತು ಪೂರಕ ಬಜೆಟ್‌ನಲ್ಲಿ 1,800 ಕೋಟಿ ರೂಪಾಯಿಗಳಷ್ಟು ಹಣ ನಿಗದಿ ಮಾಡಿದ್ದೇವೆ. ಪೂರಕ ಬಜೆಟ್‌ನಲ್ಲಿ ಅನುಮೊದನೆ ಮಾಡುವುದಕ್ಕಿಂತ ಮೊದಲೆ ₹ 350 ಕೋಟಿಗಳಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಹೀಗಾಗಿ ಇವತ್ತು

ಸಾಲ ಮನ್ನಾದ ಯೋಜನೆಯನ್ನು ಪ್ರಾಮಾಣಿಕವಾದಂತಹ ಘೋಷಣೆ ಏನು ಮಾಡಿದ್ದೇವೆ ಅದರ ಪ್ರಕಾರ ಅನುಷ್ಠಾನವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ನಮ್ಮ ಸರ್ಕಾರದ ಹಣಕಾಸಿನ ಸ್ಥಿತಿಗತಿಯ ಬಗ್ಗೆಯೂ ನಮ್ಮ ವಿರೋಧ ಪಕ್ಷದ ನಾಯಕರು ಬಹಳಷ್ಟು ವಿಚಾರಗಳನ್ನು ಹೇಳಿದರು. ನೀವು ಹೇಳಿದಂತಹ ವಿಚಾರಗಳು ಸತ್ಯಕ್ಕೆ ದೂರವಾದುದು. ಇವತ್ತು ನಮ್ಮ ರಾಜ್ಯದ ಹಣಕಾಸಿನ ಸ್ಥಿತಿ ಎಲ್ಲಾ ರೀತಿಯಿಂದ ಬಹಳಷ್ಟು ಉತ್ತಮವಾಗಿದೆ. ಇವತ್ತಿನ ದಿವಸ ಕೇಂದ್ರ ಸಕಾರದ ಆರ್ಥಿಕ ನೀತಿಗಳು ಏನಿವೆ, Reserve Bank of India ನೀತಿಗಳೇನಿವೆ ಅದಕ್ಕೆ ಪೂರಕವಾಗಿ ನಾವು ಇವತ್ತಿನ ದಿವಸ ಕೆಲಸವನ್ನು ಮಾಡುತ್ತಿದ್ದೇವೆ ಎಂಬ ವಿಷಯವನ್ನು ಅಂಕಿ-ಸಂಖ್ಯೆಯಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂಬ ವಿಷಯವನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ನಾಣಯ್ಯನವರು ಬಹಳಷ್ಟು ವಿಚಾರವನ್ನು ಹೇಳಿದರು. ಅದರಲ್ಲಿ ಪ್ರಮುಖವಾಗಿ ಹಣಕಾಸಿನ ಶಿಸ್ತು ಬಗ್ಗೆ ಸಾಕಷ್ಟು ಮಾರ್ಮಿಕವಾದಂತಹ ವಿಚಾರಗಳನ್ನು ಹೇಳಿದರು, ಅದು ನಿಜ. ಮಾನ್ಯ ನಾಣಯ್ಯನವರು ಹೇಳಿದಂತಹ ವಿಚಾರದಲ್ಲಿ ಬಹಳಷ್ಟು ಮಹತ್ವದ ಸಂಗತಿಗಳಿವೆ. ಏಕೆಂದರೆ ನಾವು ಇವತ್ತು ಒಂದು ರಾಜಕೀಯ ಪಕ್ಷವಾಗಿ, ರಾಜಕೀಯ ಜನಪ್ರತಿನಿಧಿಗಳಾಗಿ ನಾವು ಕೆಲವೊಂದು ಜನಪ್ರಿಯವಾದಂತಹ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಅದು ರಾಜಕೀಯ ವ್ಯವಸ್ಥೆಯಲ್ಲಿ ಅನಿವಾರ್ಯತೆ ಮತ್ತು ಆ ಜನಪ್ರಿಯ ಕಾರ್ಯಕ್ರಮದಿಂದ ಬಹಳಷ್ಟು ಜನ ಬಡವರಿಗೆ ಅನುಕೂಲ ಆಗಿದ್ದು ಸಹ ಇದೆ. ಹೀಗಾಗಿ ನಾವು ಜನಪ್ರಿಯ ಕಾರ್ಯಕ್ರಮದ popularity schemes ಎಂದು ಹೇಳಿ ತೆಗೆದುಹಾಕುವುದಕ್ಕೂ ಸಹ ಬರುವುದಿಲ್ಲ. ಆದರೆ ಮಾನ್ಯ ನಾಣಯ್ಯನವರು ಹೇಳಿದಂತಹ ಕೆಲವೊಂದು ವಿಚಾರಗಳಲ್ಲಿ reality ಸಹ ಇದೆ. ಏಕೆಂದರೆ ಒಬ್ಬ ಹಣಕಾಸಿನ ಸಚಿವನಾಗಿ ಇದೆಲ್ಲವನ್ನೂ ಎದುರಿಸುತ್ತಿದ್ದೇನೆ. ಆ ಸ್ಥಾನದಲ್ಲಿ ಕುಳಿತು ಹೇಳುವುದಕ್ಕೂ ಈ ಸ್ಥಾನದಲ್ಲಿ ಕುಳಿತು ಹೇಳುವುದಕ್ಕೂ ವ್ಯತ್ಯಾಸವಿದೆ. ಆದರೆ ಹಣಕಾಸು ಸಚಿವನಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಇವೆಲ್ಲವನ್ನೂ

ಸಹ ನಾವು face ಮಾಡುತ್ತೇವೆ. ಯಾವುದೋ ಒಂದು ತುರ್ತು ಕೆಲಸಕ್ಕೆ ಬೇಕು, ಮತ್ತೊಂದು ಕೆಲಸಕ್ಕೆ ಬೇಕು ಎಂದು ಹೇಳುತ್ತಾರೆ. ಹಾಗಾಗಿ ನಾವು ಎಲ್ಲವನ್ನೂ balance ಮಾಡಿಕೊಂಡು ಹೋಗಿ ಹಣಕಾಸು ಸ್ಥಿತಿಯ ನಿರ್ವಹಣೆಯನ್ನು ಸಹ ನಾವು ಸರಿಯಾಗಿ ಮಾಡಬೇಕಾಗುತ್ತದೆ. ಆ ರೀತಿ ಆದಾಗ ಮಾತ್ರ ರಾಜ್ಯದ ಹಣಕಾಸಿನ ಸ್ಥಿತಿ ಸರಿಯಾಗಿ ಮುಂದುವರೆಯುವುದಕ್ಕೆ ಸಾಧ್ಯತೆ ಇದೆ. ಆ ವಿಷಯವನ್ನು ಮಾನ್ಯ ನಾಣಯ್ಯನವರು ಬಹಳ ಮಾರ್ಮಿಕವಾಗಿ ಹೇಳಿದ್ದಾರೆ. ಆ ಎಲ್ಲಾ ವಿಷಯಗಳನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಇನ್ನೊಂದು ವಿಷಯವೇನೆಂದರೆ, ಅದೃಷ್ಟವೆಂದರೆ ಕಳೆದ 4-5 ವರ್ಷದಲ್ಲಿ ನಮ್ಮ ಸಕಾರ ಬಂದ ಮೇಲೆ ಆ ಒಂದು ಹಣಕಾಸಿನ ಪರಿಸ್ಥಿತಿಯನ್ನು ಯಾವ ರೀತಿ ಶಿಸ್ತುಬದ್ಧವಾಗಿ ನಡೆಸಿಕೊಂಡು ಹೋಗಬೇಕು ಆ ರೀತಿ ನಡೆಸಿಕೊಂಡು ಬಂದಿದ್ದೇವೆ. ಹೀಗಾಗಿ ಯಾವುದೇ ಒಂದು ಸಂದರ್ಭದಲ್ಲಿ limit ದಾಟಿ ನಾವು ಹೊಗಿಲ್ಲ. ಅದು ಬಹಳ ಮಹತ್ವವಾದುದು. ನಮ್ಮ ರಾಜ್ಯದ GSDP (Gross State Domestic Product) ಗೆ ಶೇಕಡ 25ರವರೆಗೂ ಸಾಲ ತೆಗೆದುಕೊಳ್ಳುವುದಕ್ಕೆ ನಮಗೆ ಅವಕಾಶವಿದೆ. ಅದನ್ನು ಮೀರಬಾರದು. ಒಂದು ವೇಳೆ ಮೀರಿದರೆ ಹಣಕಾಸಿನ ಶಿಸ್ತನ್ನು ಉಲ್ಲಂಘನೆ ಮಾಡಿದಂತೆ ಆಗುತ್ತದೆ. ಇಲ್ಲಿಯವರೆವಿಗೆ ಅಂದರೆ 2012-13ನೇ ಸಾಲಿನಲ್ಲಿ ನಮ್ಮ GSDP ಗೆ ಶೇಕಡ 25ರಷ್ಟು ಸಾಲ ಪಡೆಯುವಂಥದ್ದು ಏನಿದೆ, ಆದರೆ ಈ ಸಾಲಿನಲ್ಲಿ ಶೇಕಡ 22.66 ಮಾತ್ರ ಇದೆ. ಕಳೆದ ನಾಲ್ಕು ವರ್ಷದ ಅಂಕಿ-ಸಂಖ್ಯೆಗಳನ್ನು ಕೊಟ್ಟರೆ 25% ಎಂದೂ ಮೀರಿ ಹೋಗಿಲ್ಲ. ಇದು ಬಹಳ ಮುಖ್ಯವಾದುದು. ಈಗ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಸಾಲ ಮಾಡಿದ್ದೇವೆ ಎನ್ನುವಂಥದ್ದು ಇದೆ. ಈ ಹಿಂದೆ ಅರವತ್ತೈದು ಸಾವಿರ ಕೋಟಿ ಇತ್ತು, ಇವತ್ತು ಒಂದು ಲಕ್ಷ ಕೋಟಿ ರೂಪಾಯಿ ಇದೆ. ಆದರೆ ನಾವೇನು ಸಾಲವನ್ನು ತೆಗೆದುಕೊಂಡಿದ್ದೇವೆ ಅದು ನಮ್ಮ GSDP ಗೆ 25% ಮೀರಬಾರದೆಂದು ಇದೆ. ಆ ಒಂದು ಶಿಸ್ತನ್ನು ಎಲ್ಲಿಯೂ ಉಲ್ಲಂಘನೆ ಮಾಡಿಲ್ಲ. ಹೀಗಾಗಿ ಆರ್ಥಿಕ ಶಿಸ್ತಿನಿಂದ ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ

ಹೇಳಬಯಸುತ್ತೇನೆ. ಇನ್ನೊಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಈ 25% ಅನ್ನು ಮೀರಿದ್ದು ಯಾವಾಗ ಎಂದರೆ 2004–2005ನೇ ಸಾಲಿನಲ್ಲಿ 35% ಇತ್ತು, ಮತ್ತು 2005–2006ರಲ್ಲಿ 29.85% ಇತ್ತು. ಆ ರೀತಿ ಸಾಲವನ್ನು ಆ ಸಂದರ್ಭದಲ್ಲಿ ತೆಗೆದುಕೊಳ್ಳಲಾಗಿತ್ತು. ಆದಾದ ನಂತರ 25% ಅನ್ನು ಮೀರಿಲ್ಲ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನೊಂದು ಬಹಳ ಮುಖ್ಯವಾದಂತಹ ವಿಷಯವೇನೆಂದರೆ, fiscal responsibility ಪ್ರಕಾರ ನಾವು ರಾಜ್ಯದಲ್ಲಿ Fiscal Responsibility Act ತಂದಿದ್ದೇವೆ. ಹೀಗಾಗಿ Fiscal Responsibility Act ಅನ್ನು ತೆಗೆದುಕೊಂಡು ಬಂದಿರುವುದರಿಂದ ಈ ಒಂದು ಆರ್ಥಿಕ ಶಿಸ್ತನ್ನು ನಾವು ಕಾಪಾಡಿಕೊಂಡು ಹೋಗಬೇಕಾಗುತ್ತದೆ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, GDP (Gross Domestic Product) ಪ್ರಕಾರ total liabilities ಎಷ್ಟಿರಬೇಕು, ಅದಕ್ಕೆ ನಮ್ಮದು ಎಷ್ಟಿದೆ ಎಂಬುದನ್ನು ನಾವು comparative ಆಗಿ ನಾನು ಹೇಳಿದ್ದೇನೆ. As per FRA, 2009–10ನೇ ಸಾಲಿನಲ್ಲಿ GDP total liability ಶೇಕಡಾವಾರು 25.90 ಇರಬೇಕಾಗಿತ್ತು. ಆದರೆ ನಮ್ಮದು 25.83 ಇದೆ. 2010–11ನೇ ಸಾಲಿನಲ್ಲಿ 26.20 ಇರಬೇಕಾಗಿತ್ತು ನಮ್ಮದು 24.99 ಇದೆ. ಅದೇ ರೀತಿ 2011–12ನೇ ಸಾಲಿನಲ್ಲಿ 26 ಇದ್ದರೆ, actual 24.47. 2012–13ನೇ ಸಾಲಿನಲ್ಲಿ 25.70 ಇದ್ದರೆ ನಮ್ಮದು actual 22.66. ಅಂದರೆ ಇದನ್ನು ಸಹ ನಾವು maintain ಮಾಡಿದ್ದೇವೆ. ಇದರಲ್ಲಿ ಯಾವುದು ಹೆಚ್ಚಳ ಆಗಿಲ್ಲ. ಇದನ್ನು ಸಹ ನಾವು ಸರಿಯಾಗಿ ನಿರ್ವಹಣೆಯನ್ನು ಮಾಡಿದ್ದು ಯಾವುದೇ ಹೆಚ್ಚಳ ಆಗಿಲ್ಲ. Fiscsl Deficit ಎನ್ನುವ ಮಾತನ್ನು ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಸಲ ಹೇಳಿದರು. Fiscal Deficit ನಿಂದ ಶಿಸ್ತಿನ ಉಲ್ಲಂಘನೆ ಆಗಿದೆ ಎನ್ನುವ ಮಾತನ್ನು ಸಹ ಹೇಳಿದರು. ನಮ್ಮ GSDP (Gross State Domestic Product) ಪ್ರಕಾರ Fiscal Deficit ಎಷ್ಟಿರಬೇಕು? 2009–10ನೇ ಸಾಲಿನಲ್ಲಿ 3.5 ಇರಬೇಕಾಗಿತ್ತು. ಆಗ ನಾವು 3.24 ಅನ್ನು ನಿರ್ವಹಣೆ ಮಾಡಿದೆವು. 2010–11ನೇ ಸಾಲಿನಲ್ಲಿ 3% ಇರಬೇಕಾಗಿತ್ತು. ಆಗ ನಾವು 2.81 ಅನ್ನು

maintain ಮಾಡಿದೆವು. 2011–12ನೇ ಸಾಲಿನಲ್ಲಿ 3% ಇರಬೇಕಾಗಿತ್ತು, 2.78 ಅನ್ನು maintain ಮಾಡಿದೆವು. 2012–13ನೇ ಸಾಲಿನಲ್ಲಿ 3% ಇರಬೇಕಾಗಿತ್ತು ಅದನ್ನು 2.94 ವರೆಗೆ maintain ಮಾಡಿದೆವು. ಅಂದರೆ 3% ಅನ್ನು ಮೀರಿದಂತೆ ನಾವು maintain ಮಾಡಿದ್ದೇವೆ. ಈ Fiscal Deficit ಅನ್ನು ಮೀರಿದಂತೆ ನಾವು ನಿರ್ವಹಣೆಯನ್ನು ಮಾಡಿದ್ದೇವೆ. ಈ ಎಲ್ಲಾ ಅಂಕಿಸಂಖ್ಯೆಗಳನ್ನು ಮಾನ್ಯ ಎಸ್.ಆರ್. ಪಾಟೀಲ್ ಮತ್ತು ಮಾನ್ಯ ನಾಣಯ್ಯನವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಣಕಾಸಿನ ಶಿಸ್ತನ್ನು ಮೀರಬಾರದು ಎನ್ನುವ ಮಾತನ್ನು ಹೇಳಿದರು. ನಾವು ಸಹ ಹಣಕಾಸಿನ ಶಿಸ್ತನ್ನು ಮೀರಿಲ್ಲ ಎಂದು ಹೇಳುವುದಕ್ಕಾಗಿ ಈ ಅಂಕಿಸಂಖ್ಯೆಗಳನ್ನು ಸದನದ ಮುಂದಿಡುತ್ತಿದ್ದೇನೆ. ಇನ್ನು ಆಯವ್ಯಯದ ಒಟ್ಟು ಗಾತ್ರದ ಬಗ್ಗೆ ನಾಣಯ್ಯನವರು ಹೇಳಿದರು. ಈಗ 1 ಲಕ್ಷದ 3 ಸಾವಿರ ಕೋಟಿ ರೂಪಾಯಿಗಳ ಮೊತ್ತದ ಬಜೆಟನ್ನು ನಮ್ಮ ಸರ್ಕಾರ ಮಂಡನೆ ಮಾಡಿದೆ. ಇದರಲ್ಲಿ ತೆರಿಗೆ, ಕಂದಾಯ, ವಾಣಿಜ್ಯ ತೆರಿಗೆಗಳ ಬಗ್ಗೆ ಪ್ರಸ್ತಾಪವನ್ನು ಮಾಡಿದರು. ಇದರಲ್ಲಿ ಬಹಳ ಪ್ರಮೂಖವಾದಂತವು, Excise, Commercial Tax, Stamps and Registrations, Transport and others. ಇದನ್ನು ಕಳೆದ ವರ್ಷಕ್ಕೆ ಹೋಲಿಕೆ ಮಾಡಿದಲ್ಲಿ ಪ್ರತಿ ವರ್ಷ ಹೆಚ್ಚಾಗುತ್ತಿದೆಯೇ ಹೊರತು ನಮ್ಮ ಆದಾಯ ಎಂದಿಗೂ ಕಡಿಮೆ ಆಗಿಲ್ಲ. ನಮ್ಮ ಹಿರಿಯರಾದ ರಾಜಶೇಖರನ್‌ರವರು ಸಹ ಇದು ಬಹಳ ಗೊಂದಲಮಯ ಎನ್ನುವ ಮಾತನ್ನು ಹೇಳಿದರು. ಇಷ್ಟೆಲ್ಲಾ ಗೊಂದಲದಲ್ಲೂ ನಮ್ಮ ಕಂದಾಯ ಮತ್ತು ತೆರಿಗೆ ಸಂಗ್ರಹ ಕಡಿಮೆ ಆಗಿಲ್ಲ. ಇದು ಬಹಳ ಮುಖ್ಯವಾದ ವಿಚಾರ. ಈ system ಅನ್ನು ಬಹಳ ವ್ಯವಸ್ಥಿತವಾಗಿ ನಡೆಸಿಕೊಂಡು ಬಂದಿದ್ದೇವೆ. ಹೀಗಾಗಿ ಗೊಂದಲ ಹೊರಗಡೆ ಅಥವಾ ಮಾಧ್ಯಮದಲ್ಲಿ ಇರಬಹುದು.

**ಶ್ರೀ ಎಂ.ವಿ. ರಾಜಶೇಖರನ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಈ ಆಯವ್ಯಯದಲ್ಲಿ ಅಬಕಾರಿ ಆದಾಯವನ್ನು mention ಮಾಡುವುದು ಬೇಡ. ಏಕೆಂದರೆ ಅದು ಪಾಪದ ಹಣ. ದಯಮಾಡಿ ಅದರಿಂದ ರಾಜ್ಯದ ಅಭಿವೃದ್ಧಿಯನ್ನು ಮಾಡುವುದು ಬೇಡ. ಅಬಕಾರಿಯಿಂದ

ಪ್ರತಿವರ್ಷ ಹೆಚ್ಚಿಗೆ ಆದಾಯ ಬರುತ್ತದೆ ಎಂದು ಕೊಂಡಿದ್ದರೆ ಅದರಿಂದ ಎಷ್ಟು ಅನಾಹುತಗಳು ರಾಜ್ಯದಲ್ಲಿ ನಡೆಯುತ್ತಿದೆ ಎನ್ನುವುದನ್ನು ಸಹ ನೋಡಬೇಕಾಗುತ್ತದೆ. ಎಷ್ಟು ಹಿಂಸಾಚಾರಗಳು ನಡೆಯುತ್ತಿವೆ, ಎಷ್ಟು ಅಪಘಾತಗಳು ಘಟಿಸುತ್ತಿವೆ, ಎನ್ನುವುದು ಸಮೀಕ್ಷೆಯಿಂದ ನಿಮಗೆ ಗೊತ್ತಾಗುತ್ತದೆ. ಆ ಹಿನ್ನೆಲೆಯಲ್ಲಿ ಅಬಕಾರಿಯಿಂದ ಹೆಚ್ಚಿಗೆ ಹಣವನ್ನು ಗಳಿಸುವ ಪ್ರಯತ್ನವನ್ನು ಸರ್ಕಾರ ಮಾಡಬಾರದು. ಅದು ಪಾಪದ ದುಡ್ಡು, ಇದರಿಂದ ರಾಜ್ಯದ ಅಭಿವೃದ್ಧಿಗೆ ಮಾರಕ ಎನ್ನುವುದನ್ನು ನಾನಿಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಗಳೇ, ಮಾನ್ಯ ರಾಜಶೇಖರ್‌ರವರು ಗಾಂಧಿವಾದಿಗಳು, ಅವರ ಭಾವನೆಗಳನ್ನು ನಾನು ಗೌರವಿಸುತ್ತೇನೆ. ಆ ವ್ಯವಸ್ಥೆ ಬರಬೇಕೆಂದು ನಮಗೂ ಸಹ ಆಶಯವಿದೆ. ಅದಕ್ಕೆ ನಮ್ಮ ಬೆಂಬಲವೂ ಸಹ ಇದೆ. ಇವತ್ತಿನ ವ್ಯವಸ್ಥೆಯಲ್ಲಿ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧ ಮಾಡಿಬಿಟ್ಟರೆ ಆಗ ನಮ್ಮ ಜನರು ಯಾವ ದಾರಿಯನ್ನು ಹಿಡಿಯುತ್ತಾರೆ ಎನ್ನುವ ವಿಚಾರ ಎಲ್ಲರಿಗೂ ಸಹ ತಿಳಿದಿದೆ. ಇವತ್ತು ಜನರಲ್ಲಿ ಜಾಗೃತಿ ಬರಬೇಕು, self control ಬರಬೇಕು. ಸರ್ಕಾರ ನಿಷೇಧ ಜಾರಿಗೆ ತಂದಲ್ಲಿ ಅದಕ್ಕೆ ಜನರು ತಮ್ಮ ಸಹಕಾರವನ್ನು ನೀಡದಿದ್ದರೆ ನಮ್ಮಿಂದ ಏನೂ ಮಾಡಲು ಸಾಧ್ಯವಿಲ್ಲ. ಜನರು ಬೇರೆ ಹಾದಿ ಹಿಡಿಯುವುದರಿಂದ ಸರ್ಕಾರಕ್ಕೆ ಬರುವ ಆದಾಯವೂ ಸಹ ತಪ್ಪುತ್ತದೆ. ಬಡವರಿಂದಲೂ ಈ ಮೂಲದಲ್ಲಿ ತೆರಿಗೆ ಪಡೆಯುವುದು ಸೂಕ್ತ ಅಲ್ಲ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದೆ ಈಗಿರತಕ್ಕ ವ್ಯವಸ್ಥೆಯಲ್ಲಿ ನಮ್ಮ ಜನರಲ್ಲಿ ಜಾಗೃತಿ ಮೂಡಿಸಲಿಕ್ಕೆ ನಾವು ಪ್ರಯತ್ನವನ್ನು ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜಶೇಖರ್‌ರವರ ಅಭಿಪ್ರಾಯಕ್ಕೆ ಗೌರವಪೂರ್ವಕವಾಗಿ ನಾನು ಸ್ಪಂದಿಸುತ್ತೇನೆ. ಆದರೆ ವ್ಯವಸ್ಥೆ ಹೇಗಿದೆ ಎನ್ನುವುದನ್ನು ಸಹ ಅವರ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, 2011–12ನೇ ಸಾಲಿನಲ್ಲಿ 28,148 ಕೋಟಿ ರೂಪಾಯಿಗಳ ವಾಣಿಜ್ಯ ತೆರಿಗೆ ಸಂಗ್ರಹ ಆಗಿದ್ದರೆ ಈ ಸಾಲಿಗೆ 31,100

ಕೋಟಿ ರೂಪಾಯಿಗಳ ವಾಣಿಜ್ಯ ತೆರಿಗೆ ಸಂಗ್ರಹ ಆಗಿದೆ. ಈಗಾಗಲೇ ಶೇಕಡ 50ಕ್ಕಿಂತ ಹೆಚ್ಚಿಗೆ ತೆರಿಗೆ ಇದರಲ್ಲಿ ಸಂಗ್ರಹವಾಗಿದೆ. ಹೀಗಾಗಿ ನಮ್ಮ target ಗಿಂತ ಹೆಚ್ಚಿಗೆ ತೆರಿಗೆಯನ್ನು ನಾವು ಸಂಗ್ರಹ ಮಾಡುತ್ತೇವೆ. ಇನ್ನು ಕಳೆದ ವರ್ಷ 9775 ಕೋಟಿ ರೂಪಾಯಿ ತೆರಿಗೆ ಅಬಕಾರಿಯಲ್ಲಿ ಬಂದಿದ್ದರೆ, ಈ ಸಾಲಿನಲ್ಲಿ 10,775 ಕೋಟಿ ರೂಪಾಯಿಗಳ ತೆರಿಗೆ ಈ ವರ್ಷ ಬಂದಿದೆ. ಅದೇ ರೀತಿ ಸ್ಟಾಂಪ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ಕಳೆದ ವರ್ಷ 2982 ಕೋಟಿ ರೂಪಾಯಿಗಳಿದ್ದರೆ ಈ ಸಾಲಿಗೆ 3350 ಕೋಟಿ ರೂಪಾಯಿಗಳ ತೆರಿಗೆ ಬಂದಿದೆ. ಮೋಟಾರು ವಾಹನ ತೆರಿಗೆ ಕಳೆದ ವರ್ಷ 4623 ಕೋಟಿ ರೂಪಾಯಿಗಳಿದ್ದಿದ್ದು ಈ ವರ್ಷ 5200 ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹ ಆಗಿದೆ. ಬೇರೆ ತೆರಿಗೆ ಕಳೆದ ವರ್ಷ 813 ಇದ್ದದ್ದು ಈ ವರ್ಷ 1396 ಕೋಟಿ ರಪಾಯಿಗಳಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಎಲ್ಲಾ ತೆರಿಗೆಗಳಿಂದ 46,341 ಕೋಟಿ ರೂಪಾಯಿಗಳು ಬಂದಿದ್ದರೆ ಈ ಸಾಲಿನಲ್ಲಿ 51,821 ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹ ಆಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಯಾವುದೇ ತೆರಿಗೆ ಸರಿಯಾಗಿ ಸಂಗ್ರಹ ಆಗಿಲ್ಲ, ಹಣಕಾಸಿನ ಪರಿಸ್ಥಿತಿ ಸರಿಯಾಗಿಯೂ ಇಲ್ಲ ಎನ್ನುವ ಮಾತನ್ನು ಹೇಳಿದರು. ಅವರಿಗೆ ಈ ಅಂಕಿಸಂಖ್ಯೆಗಳ ಮೂಲಕ ನಮ್ಮ ವ್ಯವಸ್ಥೆ ಸರಿಯಾಗಿದೆ, ಸರಿಯಾದ ರೀತಿಯಲ್ಲಿ ನಡೆದುಕೊಂಡು ಹೋಗುತ್ತಿದೆ ಎಂದು ತಿಳಿಸಬಯಸುತ್ತೇನೆ. ಕಳೆದ ವರ್ಷದ ತೆರಿಗೆ ಸಂಗ್ರಹವನ್ನು ಹೋಲಿಕೆ ಮಾಡಿದಲ್ಲಿ ಈ ವರ್ಷ ಶೇಕಡ 66ಕ್ಕಿಂತ ಹೆಚ್ಚಿಗೆ ಸಂಗ್ರಹ ಆಗಿದೆ. ಮಾನ್ಯ ನಾಣಯ್ಯನವರು ಕಳೆದ 2–3 ವರ್ಷಗಳಲ್ಲಿ ಹಾಕಿಕೊಂಡ target reach ಆದ ಬಗ್ಗೆ ಪ್ರಶ್ನೆಯನ್ನು ವ್ಯಕ್ತಪಡಿಸಿದರು., 2010–11 ಮತ್ತು 2011–12ನೇ ಸಾಲಿನಲ್ಲಿ 106% ರಷ್ಟು ತೆರಿಗೆ ಸಂಗ್ರಹ ಆಗಿದೆ. ನಮ್ಮ ಅಂದಾಜಿಗಿಂತ 6% ಹೆಚ್ಚಿಗೆ ತೆರಿಗೆ ಸಂಗ್ರಹ ಅಗಿದೆ. ಈ ಸಾಲಿನಲ್ಲಿ ಇದುವರೆವಿಗೂ ಸಂಗ್ರಹ ಆಗಿರುವ ತೆರಿಗೆಯ ಹಿನ್ನೆಲೆಯಲ್ಲಿ ಈ ವರ್ಷವೂ ನಮ್ಮ target ಗಿಂತ ಹೆಚ್ಚು ತೆರಿಗೆಯನ್ನು ಸಂಗ್ರಹ ಮಾಡುತ್ತೇವೆ ಎನ್ನುವ ವಿಚಾರವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಹೀಗಾಗಿ ನಮ್ಮ total Budget funding, State Tax and

Non Tax ನಿಂದ ಒಟ್ಟು 55 ಸಾವಿರ 14 ಕೋಟಿ ರೂಪಾಯಿಗಳ ತೆರಿಗೆ ಬರುತ್ತದೆ. ಭಾರತಸರ್ಕಾರದ ಆದಾಯದಿಂದ 26,448 ಕೋಟಿ ರೂಪಾಯಿಗಳ ತೆರಿಗೆ ಬರುತ್ತದೆ. Borrowings ನಿಂದ 21,908 ಕೋಟಿ ರೂಪಾಯಿಗಳು, ಹೀಗೆ ನಮ್ಮ ಬಜೆಟ್ಟಿನಲ್ಲಿ ತೆರಿಗೆ ಒಟ್ಟು ಮೊತ್ತದ ಗಾತ್ರ 1ಲಕ್ಷ 3 ಸಾವಿರ ಕೋಟಿಗಳಾಗುತ್ತದೆ. ಹೀಗಾಗಿ ಇಷ್ಟು ದೊಡ್ಡ ಮೊತ್ತದ ಆಯವ್ಯಯವನ್ನು ಮಂಡಿಸಲಾಗಿದ್ದು ಅದಕ್ಕೆ ತಕ್ಕ ಹಾಗೆ ರೆವಿನ್ಯೂ ಸಹ ನಮಗೆ ಬರುತ್ತದೆ. ಇದರಿಂದ ನಮ್ಮ ಪೂರಕ ಆಯವ್ಯಯಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೂ revenue surplus ಪ್ರತಿವರ್ಷ ನೋಡಿದಾಗ 2009–10ನೇ ಸಾಲಿನಲ್ಲಿ 0.45% surplus ಆಗಿದೆ. 2010–11ನೇ ಸಾಲಿನಲ್ಲಿ 1.10% + ಆಗಿದೆ. 2011–12ನೇ ಸಾಲಿನಲ್ಲಿ 1.15% ಜಾಸ್ತಿಯಾಗಿದೆ. 2012–13ನೇ ಸಾಲಿನಲ್ಲಿ 0.18% ಎಂದು ನಾವು ಅಂದಾಜನ್ನು ಮಾಡಿದ್ದೇವೆ. ಆದರೆ ಇಲ್ಲಿಯವರೆಗೆ 1.18% ಹೆಚ್ಚಿಗೆ ಆಗಿದೆ. ಹೀಗಾಗಿ ನಾವು ಹಾಕಿಕೊಂಡಿರುವ target ಅನ್ನು ನಾವು ತೆರಿಗೆ ಸಂಗ್ರಹಣೆಯಲ್ಲಿ ಮುಟ್ಟಿದ್ದೇವೆ. ಅದಕ್ಕೂ ಹೆಚ್ಚಿನ ರೆವಿನ್ಯೂ ನಮಗೆ ದೊರೆಯುತ್ತದೆ. ಇದರ ಜೊತೆಗೆ ಹೆಚ್ಚುವರಿಯಾಗಿ 2200 ಕೋಟಿಯಷ್ಟು ಪೂರಕ ಅಂದಾಜಿನಲ್ಲಿ ನಮಗೆ ತೆರಿಗೆ ಸಂಗ್ರಹ ಆಗುತ್ತದೆ. ಈ ರೀತಿ ತೆರಿಗೆ ಸಂಗ್ರಹದಲ್ಲಿ ನಾವು ಸಾಕಷ್ಟು ಉತ್ತಮ ಪ್ರಯತ್ನವನ್ನು ಮಾಡಿದ್ದೇವೆ. ಆದಾಯಕ್ಕೆ ತಕ್ಕ ಹಾಗೆ ನಮ್ಮ ಖರ್ಚುಗಳಿವೆ. ಇದರ ಜೊತೆ ಮುಂದಿನ ಆರು ತಿಂಗಳುಗಳಿಗೂ ನಮ್ಮ performance ಅನ್ನು ಮುಂದುವರೆಸುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಇನ್ನೂ ಹಲವಾರು ವಿಚಾರಗಳನ್ನು ನಮ್ಮ ಹಿರಿಯರು ಹೇಳಿದರು. ಅವರು ನೀಡಿರತಕ್ಕ ಸಲಹೆಸೂಚನೆಗಳನ್ನು ಪರಿಶೀಲನೆ ಮಾಡುತ್ತೇನೆ. ಜನಪರ ಕಾರ್ಯಕ್ರಮಗಳ ಬಗ್ಗೆ, Revenue restricts ಬಗ್ಗೆ ಹೇಳಿದರು, ಇದನ್ನೆಲ್ಲಾ ಪರಿಶೀಲಿಸುತ್ತೇನೆ. ಅತ್ಯಾವಶ್ಯಕವಾದ ಆದ್ಯತೆಗಳ ಬಗ್ಗೆ ಕೂಡ ಈ ಪೂರಕ ಅಂದಾಜಿನಲ್ಲಿ ಹೇಳಲಾಗಿದೆ.

ಅನಗತ್ಯವಾದ ಯೋಜನೆಗಳಿಗೆ ನಾನು ಪೂರಕ ಅಂದಾಜಿನಲ್ಲಿ ಹಣವನ್ನು ಕೇಳಿರುವುದಿಲ್ಲ. ಬಹಳ ಪ್ರಮುಖವಾದ ವಸತಿ, ಸಾಲಮನ್ನಾ, ಮುಂತಾದ ಪ್ರಮುಖ ಯೋಜನೆಗಳಿಗೆ ಆದ್ಯತೆಗನುಸಾರವಾಗಿ ಪೂರಕ ಅಂದಾಜಿನಲ್ಲಿ ಹಣವನ್ನು ಕೇಳಲಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ನಾಣಯ್ಯನವರು ಇಲ್ಲಿ ಹಲವಾರು ವಿಚಾರಗಳನ್ನು ಎತ್ತಿದ್ದಾರೆ. ಅವುಗಳಿಗೆ ನಾನು ಸ್ಪಷ್ಟೀಕರಣವನ್ನು ಕೊಟ್ಟಿದ್ದೇನೆ. ದಯಮಾಡಿ ಈ ಪೂರಕ ಅಂದಾಜಿಗೆ ಒಪ್ಪಿಗೆಯನ್ನು ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

(12.30 ಗಂಟೆ)

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಾನು ಕೊಟ್ಟಿರುವ ಅಂಕಿ-ಅಂಶಗಳು ಏನು ಇವೆ, I will stick to those figures very strictly and affirmatively. ಏಕೆಂದರೆ ನಾನು comparison ಮಾಡಿ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಅದನ್ನು ಅಪಾರ್ಥ ಮಾಡಿಕೊಂಡಿದ್ದಾರೆ ಅನ್ನಿಸುತ್ತದೆ. 2010-11, 2011-2012, 2012-13 ಈ ರೀತಿಯಾಗಿ comparatively decrease ಆಗಿವೆ. ಈಗ GSDP 25 per cent ವರೆಗೆ ಸಾಲ ತೆಗೆದುಕೊಳ್ಳುವ ಅಧಿಕಾರ ಸರ್ಕಾರಕ್ಕೆ ಇದೆ. ಬಹಳಷ್ಟು ಸಾಲ ಎಂದರೆ we are well within the limit, ಅಂದರೆ barrowing capacity ಒಳಗೆ ಇದೆ ಸರ್ಕಾರ. ನನ್ನ ಆಸ್ತಿ ಪ್ರಕಾರ ನಾನು ಒಂದು ಕೋಟಿ ರೂ.ಗಳ ಸಾಲವನ್ನು ತೆಗೆದುಕೊಳ್ಳಲು ಅರ್ಹನಾಗಿದ್ದೇನೆ. ದಯಾನಂದ ರೆಡ್ಡಿಯವರು ಒಂದು ಕೋಟಿ ರೂ.ಗಳ ಸಾಲವನ್ನು ತೆಗೆದುಕೊಳ್ಳಲು ಅವಕಾಶವಿದೆ. ಅಂದರೆ ಅಷ್ಟು sufficient security ನನಗೂ ಇದೆ, ಅವರಿಗೂ ಇದೆ. ನಾನು ಒಂದು ಕೋಟಿ ರೂ.ಗಳ ಬದಲಿಗೆ ತೊಂಬತ್ತು ಲಕ್ಷ ರೂ.ಗಳ ಸಾಲವನ್ನು ತೆಗೆದುಕೊಳ್ಳುತ್ತೇನೆ. ದಯಾನಂದ ರೆಡ್ಡಿಯವರು ಸಾಲವನ್ನೇ ತೆಗೆದುಕೊಳ್ಳುವುದಿಲ್ಲ. Who is better? I may have capacity to barrow loan. ಇವರು ಯಾವ ಸಾಲವನ್ನೇ ತೆಗೆದುಕೊಂಡಿಲ್ಲ, ಸಾಲದ ಪ್ರಮಾಣ ಕಡಿಮೆ ಇದೆ. Comparatively he is better than me. ಇದು ನಿಮಗೆ GSDP 25 per cent ವರೆಗೆ optimum ಸಾಲ ತೆಗೆದುಕೊಳ್ಳುವುದು

one way, ಸಾಲ ತೆಗೆದುಕೊಳ್ಳದೆ ನಿಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡಿ, ಯಾವುದೇ ಸಾಲ ಇಲ್ಲದೆ ಎಲ್ಲ ಯೋಜನೆಗಳನ್ನು ಜಾರಿಗೆ ತಂದು ಸರ್ಕಾರ ಆಡಳಿತ ನಡೆಸಿದರೆ ಅದು better Government. ಅದಕ್ಕೆ Fiscal deficit year by year ಹೇಗೆ decrease ಆಗಿವೆ...

**ಶ್ರೀಮತಿ ಭಾರತಿ ಶೆಟ್ಟಿ:–** ನಿಮಗೆ facility ಇದ್ದಾಗ ಅವುಗಳನ್ನು ಉಪಯೋಗಿಸಿ ಜನರಿಗೆ ಉಪಕಾರ ಮಾಡಿದ್ದರೆ ನಿಮ್ಮದೇ ಬೆಸ್ಟ್ ಸರ್ಕಾರ ಆಗುತ್ತಿತ್ತು. ಅವರಿಗೆ facility ಇತ್ತು ಅದನ್ನು ಉಪಯೋಗಿಸಲಿಲ್ಲ, ಜನರಿಗೆ ಏನು ಉಪಕಾರ ಮಾಡಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** Capacity ಮೀರಿ ಏನಲ್ಲ, Optimum utilization ಮಾಡಿಕೊಂಡಿದ್ದೀರಿ, ಸಾಲ ತೆಗೆದುಕೊಳ್ಳಲು ಎಷ್ಟು ಶಕ್ತಿ ಇತ್ತು ಅಷ್ಟು ತೆಗೆದುಕೊಂಡಿದ್ದೀರಿ. ದಾಖಲೆ ಇಟ್ಟಿರಲಿಕ್ಕಿಲ್ಲ. ಅದು ಕಡಿಮೆ ಇದ್ದರೆ ಇನ್ನು ಒಳ್ಳೆಯದೆ. It will be a better and financially well managed State ಅನ್ನಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸಾಲ ಘೋಷಣೆ ಮಾಡಿರುವುದು ಅದರ ಬಗ್ಗೆ ನಾನೇನು ಹೇಳುವುದಿಲ್ಲ.

**ಸಭಾಪತಿಯವರು:–** 1300 ಕೋಟಿ ರೂ.ಗಳನ್ನು ಕೊಡುತ್ತೇವೆ ಎಂದು ಅವರು ಅದರ ಬಗ್ಗೆ ಹೇಳಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ನೀವು 3600 ಕೋಟಿ ರೂ.ಗಳನ್ನು ಪೂರಕ ಅಂದಾಜಿನಲ್ಲಿ ತೆಗೆದುಕೊಂಡು ರೈತರಿಗೆ reimburse ಮಾಡಿಬಿಡಿ ಎಂದು ದಯಾನಂದ ರೆಡ್ಡಿಯವರು ಹೇಳಿದರು. ಮಾನ್ಯ ನಾಣಯ್ಯನವರು ಹೇಳಿದ ಹಾಗೆ ಸಹಕಾರಿ ಸಂಘಗಳದ್ದು ಬಹಳ ಸಮಸ್ಯೆಗಳಾಗಿವೆ. ಸಾಲವನ್ನು reimbursement ಮಾಡುವುದು ತಡವಾಗಿದ್ದಕ್ಕೆ ಅನೇಕ ಸಹಕಾರಿ ಸಂಸ್ಥೆಗಳು ಬಹಳ ತೊಂದರೆಯಲ್ಲಿವೆ, ಇವತ್ತು ಅವುಗಳಿಗೆ ಬೀಗ ಹಾಕುವಂತಹ ಪರಿಸ್ಥಿತಿ ಬಂದಿದೆ. ಆ ರೀತಿಯಾಗದಂತೆ ನೋಡಿಕೊಳ್ಳಬೇಕು. 3600 ಕೋಟಿ ರೂಪಾಯಿಗಳ ಸಾಲವನ್ನು ಏನು ರೈತರಿಗಾಗಿ ಘೋಷಣೆ ಮಾಡಿದ್ದೀರಿ, ಅದಕ್ಕೆ ನಾವು ಒಪ್ಪಿಗೆ ಕೊಡುತ್ತೇವೆ. 3600 ಕೋಟಿ ರೂ.ಗಳನ್ನು ತೆಗೆದುಕೊಂಡು

ತಕ್ಷಣ ಅವರಿಗೆ reimbursement ಮಾಡಿಬಿಡಿ. We are happy ಮತ್ತು ರೈತರಿಗೂ ಸಂತೋಷವಾಗುತ್ತದೆ. ದೊಡ್ಡ ರೈತರ ಸಮಸ್ಯೆಯೂ ಇದೆ, ನನ್ನ holding ಹೆಚ್ಚು ಇದ್ದಾಗ ಹೆಚ್ಚು ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ cost of cultivation, ಇವತ್ತು labor cost ಹೆಚ್ಚು ಆಗಿದೆ, chemicals and fertilizers cost ಹೆಚ್ಚು ಆಗಿದೆ, pesticides cost ಹೆಚ್ಚು ಆಗಿದೆ. Cost of cultivation increase ಆಗಿರುವುದರಿಂದ ನನ್ನ holding ಹೆಚ್ಚು ಇರುವುದರಿಂದ ಹೆಚ್ಚು ಸಾಲವನ್ನು ತೆಗೆದುಕೊಳ್ಳುತ್ತೇವೆ. Even it is insufficient, even for big farmers whatever loans co-operative banks are givig it are not sufficient. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳುತ್ತೇನೆ. ನೀವು comparative figures ಅನ್ನು ಕೊಟ್ಟಿದ್ದೀರಿ. Year by year ಏನು ಕಡಿಮೆ ಆಗಿದೆ, ಏನು ದೋಷಗಳು ಇವೆ ಎನ್ನುವುದನ್ನು ಹೇಳಿದ್ದೇನೆ. you are surpassed the limit ಎಂದು ಅಲ್ಲ. ಒಂದು ಲಕ್ಷ ಕೋಟಿ ರೂ.ಗಳ ಸಾಲ ತೆಗೆದುಕೊಳ್ಳಲು capacity ಇದ್ದಾಗ, ಎರಡು ಲಕ್ಷ ಕೋಟಿ ರೂ.ಗಳ ಸಾಲವನ್ನು ತೆಗೆದುಕೊಂಡರೆ ಅದಕ್ಕೆ ಶಹಬಾಸ್‌ಗಿರಿ ಕೊಡಲು ಆಗುವುದಿಲ್ಲ. ಕಡಿಮೆ ಸಾಲ ಮಾಡಿ well managed State ಆಗಲಿ ಎಂದು ನಾನು ಅಪೇಕ್ಷೆ ಮಾಡುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ 2 ಮತ್ತು 3

**ಸಭಾಪತಿಯವರು:–** "ಖಂಡ 2 ರಿಂದ 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 4) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## 7. ವಿಶೇಷ ಜಂಟಿ ಸದನದ ಸಮಿತಿಗಳ ಅವಧಿಯನ್ನು ವಿಸ್ತರಿಸಲು ಪ್ರಸ್ತಾವ

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ದಿನಾಂಕ 31–12–2012ರವರೆಗೆ ವಿಸ್ತರಿಸಲಾಗಿದ್ದ, "ಹೊರ ರಾಜ್ಯದ ಹಾಗೂ ರಾಜ್ಯದ ಗಡಿಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳ ಕುರಿತು ಪರಿಶೀಲಿಸಿ ವರದಿ" ನೀಡಲು ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ದಿನಾಂಕ: 30–6–2013ರವರೆಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ದಿನಾಂಕ 31–12–2012ರವರೆಗೆ ವಿಸ್ತರಿಸಲಾಗಿದ್ದ, "ಹೊರ ರಾಜ್ಯದ ಹಾಗೂ ರಾಜ್ಯದ ಗಡಿಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳ ಕುರಿತು ಪರಿಶೀಲಿಸಿ ವರದಿ" ನೀಡಲು ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ದಿನಾಮಕ: 30–6–2013ರವರೆಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಮಂಡಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಸಹಮತಿ ನೀಡಲಾಯಿತು)

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ದಿನಾಂಕ:31–3–2012ರವರೆಗೆ ವಿಸ್ತರಿಸಲಾಗಿದ್ದ "ಕರ್ನಾಟಕ ರಾಜ್ಯದ ಅನುಷ್ಠಾನದಲ್ಲಿರುವ ವಿವಿಧ ರೇಲ್ವೆ ಯೋಜನೆಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸುವ ಬಗ್ಗೆ" ಪರಿಶೀಲಿಸಿ ವರದಿ ನೀಡಲು ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:30–6–2013ವರೆಗೆ ವಿಸ್ತರಿಸುವ ಪ್ರಸ್ತಾವವನ್ನು ಮಂಡಿಸುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ದಿನಾಂಕ:31–3–2012ರವರೆಗೆ ವಿಸ್ತರಿಸಲಾಗಿದ್ದ "ಕರ್ನಾಟಕ ರಾಜ್ಯದ ಅನುಷ್ಠಾನದಲ್ಲಿರುವ ವಿವಿಧ ರೇಲ್ವೆ ಯೋಜನೆಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸುವ ಬಗ್ಗೆ" ಪರಿಶೀಲಿಸಿ ವರದಿ ನೀಡಲು ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:30–6–2013ವರೆಗೆ ವಿಸ್ತರಿಸುವ ಪ್ರಸ್ತಾವವನ್ನು ಮಂಡಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಸಹಮತಿ ನೀಡಲಾಯಿತು)

**ಸಭಾಪತಿಯವರು:–** ನಿನ್ನೆಯ ದಿನ ಕರ್ನಾಟಕ ರಾಜ್ಯ ಸಿವಿಲ್‌ಸೇವೆಗಳ ವಿಧೇಯಕವನ್ನು ಪರ್ಯಾಲೋಚನೆಗಾಗಿ ಮಂಡಿಸಲಾಗಿತ್ತು. ಈ ದಿನ ಅದನ್ನು ಮುಂದುವರೆಸಿ ಚರ್ಚೆಗೆ ತೆಗೆದುಕೊಳ್ಳೋಣ.

## 8. ಶಾಸನ ರಚನೆ

ವಿದೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ.

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2012

## ಪರ್ಯಾಲೋಚನಾ ಪ್ರಸ್ತಾವ (ಮುಂದುವರಿದಿದು)

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ಇದರಲ್ಲಿ ಎ,ಬಿ,ಸಿ ವಲಯಗಳನ್ನಾಗಿ ವಿಂಗಡಿಸಿದ್ದೇವೆ. ಅದರಲ್ಲಿ 'ಎ' ವಲಯ ಎಂದರೆ District Head Quarters and Corporation Cities. 'ಬಿ' ವಲಯ ಎಂದರೆ Taluk Head Quarters and Municipalities. 'ಸಿ' ವಲಯ ಎಂದರೆ ಇನ್ನುಳಿದ ಗ್ರಾಮಾಂತರ ಪ್ರದೇಶಗಳು. ನೇರವಾಗಿ ನೇಮಕವಾಗುವಂತಹ ಯಾವುದೇ ನೌಕರರು 'ಸಿ' ವಲಯದಿಂದ ತಮ್ಮ ವೃತ್ತಿಯನ್ನು ಪ್ರಾರಂಭ ಮಾಡಬೇಕು. ಅವರು 'ಸಿ' ವಲಯದಲ್ಲಿ ಸೇವೆ ಮಾಡಿದ ನಂತರ 'ಬಿ' ವಲಯಕ್ಕೆ ತದನಂತರ 'ಎ' ವಲಯಕ್ಕೆ ಬರಬೇಕು. ಎಂಟು ವರ್ಷಗಳಿಗೂ ಹೆಚ್ಚು ಕಾಲ ಎ ವಲಯದಲ್ಲಿ ಕೆಲಸ ಮಾಡಿದವರು 'ಸಿ' ವಲಯಕ್ಕೆ ಹೋಗಿ ಸೇವೆಯನ್ನು ಸಲ್ಲಿಸಬೇಕು. ಇದರಿಂದ ಗ್ರಾಮಾಂತರ ಪ್ರದೇಶದ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಉಪನ್ಯಾಸಕ ಹುದ್ದೆಯ ಕೊರತೆ ಕಾಣುತ್ತಿದೆ. ಸಾಮಾನ್ಯವಾಗಿ ಎಲ್ಲರೂ ಕೇಂದ್ರ ಸ್ಥಾನ ಅಥವಾ ಜಿಲ್ಲಾ ಕೇಂದ್ರಗಳಿಗೆ ವರ್ಗಾವಣೆಯನ್ನು ಬಯಸುತ್ತಿದ್ದು, ಇದಕ್ಕೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ. ಪಾರದರ್ಶಕ ವರ್ಗಾವಣೆ ನೀತಿಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲಾ ಕಾಲೇಜುಗಳಿಗೆ ಉಪನ್ಯಾಸಕರನ್ನು ನ್ಯಾಯಬದ್ಧವಾಗಿ ಒದಗಿಸಲು ಸಾಧ್ಯವಾಗುತ್ತದೆ. ಅದಕ್ಕಾಗಿ ಈ ವರ್ಗಾವಣೆ ವಿಧೇಯಕವನ್ನು ತಂದಿದ್ದೇವೆ.

**ಸಭಾಪತಿಯವರು:–** ನಿನ್ನೆ ದಿವಸ ನಾವೆಲ್ಲರೂ ಚರ್ಚಿಸಿದಂತೆ ವಿಧೇಯಕಗಳ ಬಗ್ಗೆ ಒಂದೊಂದು ಪಕ್ಷದಿಂದ ಒಬ್ಬರು ಅಥವಾ ಇಬ್ಬರು ಮಾತನಾಡಿದರೆ .....

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದನ್ನು ನಾವು ಅನುಸರಿಸುತ್ತೇವೆ. ತಾವು ಶಿಕ್ಷಣ ಕ್ಷೇತ್ರದವರನ್ನು ನಿಯಂತ್ರಣ ಮಾಡಬೇಕಾಗುತ್ತದೆ.

**ಸಭಾಪತಿಯವರು:–** ಅವರ ಕಡೆಯಿಂದ ಮಾತನಾಡುವವರಿಗೆ ಅವಕಾಶ ಕೊಡುತ್ತೇನೆ. ಅವರ ಪರವಾಗಿ ಮಾನ್ಯ ಹೊರಟ್ಟಿಯವರು ಮಾತನಾಡುತ್ತಾರೆ. ನಂತರ ಇನ್ನೊಬ್ಬರು ಮಾತನಾಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಶಿಕ್ಷಣ ಕ್ಷೇತ್ರದ ವರ್ಗಾವಣೆಗೆ ಸಂಬಂಧಪಟ್ಟಂತೆ ಮಾನ್ಯ ಶಿಕ್ಷಣ ಸಚಿವರು ಎ,ಬಿ ಮತ್ತು ಸಿ ವಲಯಗಳನ್ನು ಮಾಡಿದ್ದು, ಈ ವಿಧೇಯಕವು ಸ್ವಾಗತಾರ್ಹ ವಾಗಿದ್ದು, ನಾನೂ ಕೂಡ ಗ್ರಾಮೀಣ ಪ್ರದೇಶದಿಂದ ಬಂದವನಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿರುವ ದುಃಖ–ದುಮ್ಮಾನಗಳನ್ನು ಬಹಳ ಸಮೀಪದಿಂದ ಕಂಡವನಾಗಿದ್ದೇನೆ. ಇವತ್ತು ಬಹುತೇಕ ಶಿಕ್ಷಕ ವರ್ಗದವರು ಪಟ್ಟಣಗಳಿಗೆ ವರ್ಗಾವಣೆಯನ್ನು ಬಯಸುತ್ತಿದ್ದಾರೆ. ಅವರು ನೇಮಕಾತಿ ಆದ ಕೂಡಲೇ 'ಸಿ' ವಲಯವಾದ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡಬೇಕು. ನೇಮಕಾತಿ ಆದ ನಂತರ ಎಲ್ಲರೂ ಪಟ್ಟಣಗಳಿಗೆ ಸೇರಿಕೊಳ್ಳಬೇಕೆಂದು ಬೆನ್ನು ಹತ್ತುತ್ತಾರೆ. ಪಟ್ಟಣಗಳಿಗೆ ಬರಲು ಮಕ್ಕಳ ಶಿಕ್ಷಣ ಸೇರಿದಂತೆ ನೂರೆಂಟು ಕಾರಣಗಳನ್ನು ಹೇಳುತ್ತಾರೆ. ಗ್ರಾಮಗಳಲ್ಲಿ ಕೆಲಸ ಮಾಡಲು ತಯಾರಿಲ್ಲದೇ ಬಹಳಷ್ಟು ನೆಪಗಳನ್ನು ಹೇಳುತ್ತಾರೆ. ಈ ವಿಧೇಯಕವು ವರ್ಗಾವಣೆಯು ಪಾರದರ್ಶಕ ನೀತಿಯಾಗಲು ಅನುಕೂಲವಾಗುತ್ತದೆ. Compulsorily they should work in the villages.

Literacy percentage of the rural areas, if you compare with the urban pockets, there is much difference. ನಮ್ಮ ಗ್ರಾಮೀಣ ಭಾಗದ ಮಕ್ಕಳ ಪರಿಸ್ಥಿತಿ ಬಹಳ ಚಿಂತಾಜನಕವಾಗಿದ್ದು, ಎಲ್ಲಾ ಶಿಕ್ಷಕರು ಅವರ ಅನುಕೂಲತೆಗಳಿಗಾಗಿ ಪಟ್ಟಣಗಳಿಗೆ ಸೇರಿದಾಗ ಗ್ರಾಮದಲ್ಲಿರುವ ಬಡ ಮಕ್ಕಳು ಆತಂಕದಲ್ಲಿರುವ ಸಮಯದಲ್ಲಿ ಮೂರು ವಲಯಗಳನ್ನಾಗಿ ಮಾಡಿ ವಿಧೇಯಕವನ್ನು ತಂದಿದ್ದಾರೆ. ಇದರಲ್ಲಿ 'ಸಿ' ವಲಯವಾದ ಗ್ರಾಮೀಣ

ಪ್ರದೇಶಗಳು, 'ಬಿ' ವಲಯವೆಂದರೆ ತಾಲ್ಲೂಕು ಕೇಂದ್ರ ಸ್ಥಾನಗಳು ಮತ್ತು 'ಎ' ವಲಯ ಬಿಬಿಎಂಪಿ ಎಂದು ಮಾಡಿ, ಅಕ್ಷರತೆ ಕಡಿಮೆ ಇರುವ ಮತ್ತು ಉಪನ್ಯಾಸಕರು ಕೊರತೆ ಇರುವ ಪ್ರದೇಶಗಳಿಗೆ ಆದ್ಯತೆ ಕೊಡುವ ದೃಷ್ಟಿಯಿಂದ ಮಾಡಿದ್ದಾರೆ. ಪ್ರಾರಂಭದಲ್ಲಿ ಅವರಿಗೆ ಗ್ರಾಮೀಣ ಭಾಗದಲ್ಲಿ ಕೆಲಸ ಮಾಡುವುದು ಕಡ್ಡಾಯ ಎಂದು ಅವಕಾಶ ಕಲ್ಪಿಸಿರುವುದು ಒಳ್ಳೆಯದು ಮತ್ತು ಸ್ವಾಗತಾರ್ಹವಾದುದು. ಆದರೆ ಪ್ರಾರಂಭದಲ್ಲಿ ಅವರಿಗೆ ಅನುಭವ ಇರುವುದಿಲ್ಲ, ಅವರಿಗೆ ಅನುಭವದ ಕೊರತೆ ಇರುತ್ತದೆ. But, by experience they will become experts.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ 8 ವರ್ಷಗಳ ಕಾಲ ಒಂದೇ ವಲಯದಲ್ಲಿ ಕೆಲಸ ಮಾಡಿರುವವರನ್ನು 'ಸಿ' ವಲಯಕ್ಕೆ ವರ್ಗಾಯಿಸುತ್ತೇವೆ. ಆದರೆ ನಿವೃತ್ತಿಗೆ 2 ವರ್ಷ ಇರುವವರನ್ನು ಬದಲಾವಣೆ ಮಾಡುವುದಿಲ್ಲ. ಗಂಡ-ಹೆಂಡತಿ ಕೇಸ್‌ಗಳಲ್ಲಿ ಆದ್ಯತೆಯನ್ನು ಕೊಡುತ್ತಿದ್ದೇವೆ ಮತ್ತು ತೀವ್ರವಾದ ಕಾಯಿಲೆ ಕೇಸ್‌ಗಳಲ್ಲಿ ಜಿಲ್ಲಾ ಆರೋಗ್ಯ ಮಂಡಳಿ ಶಿಫಾರಸ್ಸಿನ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:-** 8 ವರ್ಷಗಳ ಕಾಲ 'ಎ' ವಲಯದಲ್ಲಿ ಕೆಲಸ ಮಾಡಿರುವವರನ್ನು 'ಬಿ' ವಲಯಕ್ಕೆ ವರ್ಗಾವಣೆ ಮಾಡುತ್ತೀರಾ?

**ಶ್ರೀ ಸಿ.ಟಿ. ರವಿ:-** ಅಂತಹವರು 'ಸಿ' ವಲಯದಲ್ಲಿ ಕೆಲಸವನ್ನೇ ಮಾಡಿಲ್ಲವೆಂದಾದರೆ ಅವರನ್ನು 'ಸಿ' ವಲಯಕ್ಕೆ ವರ್ಗಾವಣೆ ಮಾಡುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಏಕೆಂದರೆ ನಮ್ಮ ಕಡೆ ನೇಮಕಾತಿ ಆದ ನಂತರ ಪೂರ್ಣ ಪಟ್ಟಣಗಳಲ್ಲಿ ಕೆಲಸ ಮಾಡಿ ಅವರ ಮಕ್ಕಳು ನೇಮಕಾತಿಯಾಗಿ ಅಲ್ಲಿಯೇ ಕೆಲಸ ಮಾಡುತ್ತಿರುತ್ತಾರೆ. ಎರಡು-ಮೂರು ಜನರೇಷನ್‌ಗಳು ಅಲ್ಲಿಯೇ ಕೆಲಸ ಮಾಡುತ್ತಿರುವುದನ್ನು ಸ್ವತಃ ನನ್ನ ಕಣ್ಣಾರೆ ನೋಡಿದ್ದೇನೆ. ಗ್ರಾಮೀಣ ಭಾಗದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಬಹಳ ಮಹತ್ತರವಾದ ವಿಧೇಯಕವನ್ನು ತಂದಿದ್ದಾರೆ. ಗ್ರಾಮೀಣ ಭಾಗಗಳಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಿಸುವುದರ ಜೊತೆಗೆ ಒಳ್ಳೆಯ ಉಪನ್ಯಾಸಕರು

ಬರುವುದರಿಂದ ಇದೊಂದು ಒಳ್ಳೆಯ ವಿಧೇಯಕ ಮತ್ತು ನನಗೆ ಬಹಳ ಖುಷಿ ಕೊಡುವ ವಿಧೇಯಕ ಎಂದು ಹೇಳುವುದಕ್ಕೆ ಬಯಸುತ್ತೇನೆ. ಆದರೆ ಈ ಸಂದರ್ಭದಲ್ಲಿ ಗಂಡ-ಹೆಂಡತಿ ಎಂಬ ಪ್ರಶ್ನೆ ಬರುತ್ತದೆ, ಅವರನ್ನು ಅಗಲಿಸುವ ಪಾಪಕ್ಕೆ ಹೋಗಬಾರದು. ಅವರಿಗೆ ಯಾವುದಾದರೊಂದು ರಿಯಾಯಿತಿ ಕ್ಲಾಸ್ ಹಾಕಬೇಕು. ಎ,ಬಿ,ಸಿ ವಲಯ ಎಂದು ಮಾಡಿ ಎಂದೂ ಅವರು ಕೂಡದಂತೆ ಮಾಡಬಾರದು.

**ಶ್ರೀ ಸಿ.ಟಿ. ರವಿ:-** ಪತಿ-ಪತ್ನಿ ಹಾಗೂ ತೀವ್ರತರವಾದ ಕಾಯಿದೆ ಎಂದು ಮಾಡಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಇದರಲ್ಲಿ ಅಂಗವಿಕಲರೂ ಬರಬೇಕು. ಆರೋಗ್ಯ ಎಂದು ಎಲ್ಲರೂ ತಂದೆ-ತಾಯಿಗಳಿಗೆ ವಯಸ್ಸಾಗಿದೆ ಎಂದು ವರ್ಗಾವಣೆ ಬಯಸುತ್ತಾರೆ.

**ಶ್ರೀ ಸಿ.ಟಿ. ರವಿ:-** ಜಿಲ್ಲಾ ಆರೋಗ್ಯ ಮಂಡಳಿಯು ಅವರಿಗೆ ಸರ್ಟಿಫೈ ಮಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವ್ಯವಸ್ಥೆಯಲ್ಲಿ ನಮಗೆ ನಂಬಿಕೆಯೇ ಹೊರಟು ಹೋಗಿದೆ. ಇಂತಹದ್ದೆಲ್ಲವನ್ನು ಅವರು ಮಾಡುತ್ತಾರೆ. ಸರ್ಟಿಫಿಕೇಟ್ ಯಾವಾಗ ಬೇಕೆಂದರೆ ಆಗ ಸಿಗುತ್ತವೆ. ಈ ವ್ಯವಸ್ಥೆಯನ್ನು ಸುಧಾರಣೆ ಮಾಡುವ ಬಗ್ಗೆ ನಾವು ಅವರು ಚಿಂತನೆ ಮಾಡಬೇಕು. ಅದು ಬೇರೆ ವಿಷಯವಾದ್ದರಿಂದ ಇಲ್ಲಿ ಚರ್ಚೆ ಮಾಡುವುದು ಬೇಡ. ಎ,ಬಿ,ಸಿ ವಲಯ ಎಂದು ಮಾಡಿ ಈ ವಿಧೇಯಕವನ್ನು ತಂದಿರುವುದರಿಂದ ಗ್ರಾಮೀಣ ಭಾಗದ ಜನತೆ ಹಾಗೂ ರೈತರ ಮಕ್ಕಳಿಗೆ ಸಹಕಾರಿಯಾಗುತ್ತದೆ ಎನ್ನುವ ದೃಷ್ಟಿಯಿಂದ ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ನಾನು ಬಹಳ ಸ್ವಾಗತಿಸುತ್ತೇನೆ. ಹಿಂದೆ ಶ್ರೀ ಅಶೋಕ್‌ವರು ಆರೋಗ್ಯ ಮಂತ್ರಿಯಾಗಿದ್ದಾಗ ವಿಧೇಯಕವನ್ನು

ತರಬೇಕೆಂದು ಗುದ್ದಾಡಿದರೂ ಕೆಲಸ ಆಗಲಿಲ್ಲ. ಆದರೆ ನಾನು ಶಿಕ್ಷಣದಲ್ಲಿ ಮಾಡಿದೆ. ಈಗ ಶಿಕ್ಷಣದಲ್ಲಿ ಎ,ಬಿ,ಸಿ ವಲಯ ಎಂದು ಮಾಡಿರುವುದು ಸರಿಯಿದೆ. ಆದರೆ ಇದರಲ್ಲಿ ಕೌನ್ಸಿಲಿಂಗ್ ಮಾಡಿದ ನಂತರ ಕನಿಷ್ಠ 3 ವರ್ಷಗಳವರೆಗೂ ಅವರಿಗೆ ಕೌನ್ಸಿಲಿಂಗ್ ಮಾಡಬಾರದು. ಪತಿ–ಪತ್ನಿ ವಿಷಯದಲ್ಲಿ ಪತಿ ಹಳ್ಳಿಯಲ್ಲಿದ್ದು, ಪತ್ನಿ ನಗರ ಪ್ರದೇಶದಲ್ಲಿರುವಾಗ ಪತಿ–ಪತ್ನಿ ಎಂದು ಬಂದಾಗ ಆ ಜಿಲ್ಲೆಗೆ ವರ್ಗಾವಣೆ ಬಯಸುತ್ತಾರೆ. ಅಲ್ಲದೇ ಪುನಃ ಕೌನ್ಸಿಲಿಂಗ್‌ಗೆ ಅವರೇ ಬರುತ್ತಾರೆ. ಆದ್ದರಿಂದ ಕನಿಷ್ಠ 3 ವರ್ಷಗಳವರೆಗೆ ಪತಿ–ಪತ್ನಿಯರು ಬರಬಾರದು. ಅಲ್ಲದೇ ಪತಿ–ಪತ್ನಿಯರಲ್ಲಿ ಕೇವಲ ಸರ್ಕಾರಿ ನೌಕರರಿಗೆ ಮಾತ್ರ ಸೀಮಿತವಾಗಿರಬಾರದು. ಒಬ್ಬ ರಿಕ್ಷಾ ಓಡಿಸುವವನು ಅಥವಾ ರೈತನ ಹೆಂಡತಿ ನೌಕರರಾಗಿರುತ್ತಾರೆ. ಈ ವಿಷಯ ನಾವು ಮಾಡುವಾಗ ನಂತರ ನೆನಪಿಗೆ ಬಂತು. ಪತಿ–ಪತ್ನಿಯರಲ್ಲಿ ಜೇಷ್ಠತೆ ಪ್ರಕಾರ ಕೌನ್ಸಿಲಿಂಗ್‌ಗೆ ಕರೆಯಬೇಕು. ಒಂದು ಸಾರಿ ಕರೆದ ನಂತರ ಅವರನ್ನು 3 ವರ್ಷಗಳ ಕಾಲ ಕರೆಯಬಾರದು.

**ಸಭಾಪತಿಯವರು:–** ಈ ವಿಷಯದಲ್ಲಿ ಕೇವಲ ವಿದ್ಯಾ ಇಲಾಖೆಗೆ ಮಾತ್ರ ಈ ತಿದ್ದುಪಡಿ ಮಾಡಿದರೆ ಸಾಕಾಗುವುದಿಲ್ಲ. ಸರ್ಕಾರಿ ನೌಕರರೆಲ್ಲರಲ್ಲೂ ಇರಬೇಕು. ಗಂಡ ಅಥವಾ ಹೆಂಡತಿ ಖಾಸಗಿ ಕೆಲಸ ಅಥವಾ ಸ್ವಂತ ಕೆಲಸ ಮಾಡುತ್ತಿದ್ದರೆ ಪರಿಗಣನೆ ಮಾಡುವಂತಿಲ್ಲ ಎಂದು ಇದೆ. ಆದ್ದರಿಂದ ಸರ್ಕಾರದ ಟೋಟಲ್ ಪಾಲಿಸಿ ಬದಲಾವಣೆ ಆಗಬೇಕೇ ಹೊರತು ಕೇವಲ ವಿದ್ಯಾ ಇಲಾಖೆಯಲ್ಲಿ ಮಾತ್ರ ಮಾಡಿದರೆ ಸರಿಹೋಗುವುದಿಲ್ಲ. ಅದರ ಬಗ್ಗೆ ಒಂದು ನೋಟೀಸ್ ಕಳುಹಿಸಿಕೊಟ್ಟರೂ ಈ ಸದನದಲ್ಲಿ ಸೂಕ್ತ ರೀತಿಯಲ್ಲಿ ಚರ್ಚೆ ಮಾಡಬಹುದು, ಅದರ ಬಗ್ಗೆ ಒಂದು ನೋಟೀಸ್ ಕಳುಹಿಸಿಕೊಡಿ.

**ಶ್ರೀ ಬಸವರಾಜ ಹೊರಟ್ಟಿ:–** ನಮಗೆ ಸಂಬಂಧ ಇರುವುದನ್ನು ಮಾತ್ರ ಹೇಳುತ್ತೇನೆ. ನನಗೆ ಅನುಭವಕ್ಕೆ ಬಂದಿರುವಂತೆ ಮೊದಲು ಕೌನ್ಸಿಲಿಂಗ್ ಮಾಡುತ್ತಾರೆ. ಇದರಲ್ಲಿ ಮೊದಲು ಮಾರಕವಾದ ಕಾಯಿಲೆ ಮತ್ತು ಎರಡನೆಯದಾಗಿ ಅಂಗವಿಕಲರು ಹಾಗೂ ಮೂರನೆಯದಾಗಿ ಪತಿ–ಪತ್ನಿಯರು ಬರುತ್ತಾರೆ. ನಂತರ ಅವರ ಅಸೋಷಿಯೇಷನ್ ಇತ್ಯಾದಿಗಳು ಬರುತ್ತವೆ.

ನಾನು ಇದ್ದಾಗ ಶ್ರೀ ವಿಜಯಭಾಸ್ಕರ್‌ರವರು ಕಾರ್ಯದರ್ಶಿಯವರಾಗಿದ್ದು, ಅವರು ಬಿಪಿ, ಶುಗರ್ ಅಥವಾ ಕಿಡ್ನಿ ಕಾಯಿಲೆಗಳಿದ್ದಾಗ ಅವರು ಎಷ್ಟೇ ವರ್ಷಗಳಿದ್ದರೂ ಸ್ವಯಂ ನಿವೃತ್ತಿ ಕೊಡಬೇಕೆಂದು ಬರೆದು ಕಳುಹಿಸಿದ್ದರು. ಆದರೆ ಈ ರೀತಿ ಕಳುಹಿಸುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:–** ಅವರು ಪಾಠ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಅದಕ್ಕಾಗಿ ಅವರಿಗೆ ಸರ್ವೀಸ್ ಕೊಟ್ಟು, ಕನಿಷ್ಠ ಏನು ಕೊಡಬೇಕೋ, ಅದನ್ನು ಕೊಡಬೇಕೆಂದು ಹೇಳಿದ್ದರು. ಆದರೆ ನಾನು ಒಪ್ಪದೇ ಆಗಲಿಲ್ಲ. ಕೌನ್ಸಿಲಿಂಗ್ ಬರುವಾಗ ಬೆಂಗಳೂರು ನಗರದಲ್ಲಿ ಎಲ್ಲಾ ವಿಭಾಗಗಳಲ್ಲಿ 10 ಹುದ್ದೆಗಳು ಇವೆ ಎಂದರೆ ಮಾರಕವಾದ ಕಾಯಿಲೆ, ಅಂಗವಿಕಲರು ಮತ್ತು ಪತಿ–ಪತ್ನಿಯರ ಎಲ್ಲಾ ವಿಭಾಗಗಳಲ್ಲಿ 7 ಮಂದಿ ಇದ್ದರೆ ಎಲ್ಲರನ್ನು ವರ್ಗಾವಣೆ ಮಾಡಿಬಿಡುತ್ತಾರೆ. ಆ ರೀತಿ ಆಗದೇ ಅವರಲ್ಲಿ ಜೇಷ್ಠತೆ ಇರಬೇಕು. It should not exceed 50 per cent. 10 ಹುದ್ದೆಗಳಲ್ಲಿ ಮಾರಕವಾದ ಕಾಯಿಲೆ ಇರುವ ಮತ್ತು ಜೇಷ್ಠತೆ ಪಡೆದಿರುವ 5 ಜನರನ್ನು ಮಾಡಬೇಕು. ಅಂಗವಿಕಲ ಅಥವಾ ಪತಿ–ಪತ್ನಿಯರ ವಿಭಾಗಗಳಲ್ಲಿ ಐದೈದು ಮಂದಿಯನ್ನು ವರ್ಗಾವಣೆ ಮಾಡಬೇಕು. ಈ ರೀತಿ ಮಾಡಬೇಕು, ಇಲ್ಲದಿದ್ದರೆ ಸಾಮಾನ್ಯ ವರ್ಗದವರು ಬರುವುದೇ ಇಲ್ಲ. ಇದರಲ್ಲಿ 3 ವರ್ಷ ಸೇವೆ ಮಾಡಿರುವವರು ನಗರಕ್ಕೆ ಬರುತ್ತಾರೆ, ಆದರೆ ಸಾಮಾನ್ಯ ವಿಭಾಗದಲ್ಲಿ 10–13 ವರ್ಷ ಸೇವೆ ಮಾಡಿದ್ದರೂ ವರ್ಗಾವಣೆ ಆಗುವುದಿಲ್ಲ. ನಾವು ಮಾಡಿದಾಗ ಇದೆಲ್ಲವೂ ಅನುಭವವಾಗಿದೆ. ಅಧಿಕಾರಿಗಳು ಪೋಸ್ಟಿಂಗ್ ತೋರಿಸುವಾಗ ತಪ್ಪು ತೋರಿಸುತ್ತಾರೆ. ನಂತರ ಅವೆಲ್ಲವೂ ರೆಕ್ಟಿಫೈ ಆಗುತ್ತವೆ. ಈ ವಿಧೇಯಕ ನಾನು ತಂದಿದ್ದ ವಿಧೇಯಕಕ್ಕಿಂತ ಸ್ವಲ್ಪ ಮುಂದುವರೆದಿದೆ. ನಗರ ಪ್ರದೇಶದಲ್ಲಿರುವವರನ್ನು ಬದಲಾವಣೆ ಮಾಡುವುದಕ್ಕೆ ಹೋದರೆ ದೊಡ್ಡ ಗಲಾಟೆಯೇ ಆಗುತ್ತದೆ. ಇದರಲ್ಲಿ 10 ವರ್ಷ ಮಾಡಿರುವವರನ್ನು 'ಸಿ' ವಲಯಕ್ಕೆ ಕಳುಹಿಸಲು ಪ್ರಯತ್ನ ಮಾಡಿದರೂ ಆಗಲಿಲ್ಲ. ದೊಡ್ಡ ಗಲಾಟೆಯಾಗಿ ಮುಖ್ಯಮಂತ್ರಿಗಳವರೆಗೂ ಹೋಯಿತು. ಈಗ ತಂದಿರುವುದು ಒಳ್ಳೆಯದು. 8 ವರ್ಷ ಮಾಡಿರುವವರು 'ಸಿ' ವಲಯಕ್ಕೆ ಬರಲೇಬೇಕು. ನಮ್ಮ

ಪದ್ಧತಿಯಂತೆ ಆಯ್ಕೆ ಮಾಡುವಾಗ ಶೇಕಡ 90ರಷ್ಟು ಮೆರಿಟ್ ಮೇಲೆ ಆಯ್ಕೆ ಮಾಡುತ್ತೇವೆ. ಮೆರಿಟ್‌ನಲ್ಲಿ ಬಂದವರಿಗೆ ಮೊದಲಿನ ವರ್ಗಾವಣೆ ನೀತಿಯ ಕೌನ್ಸಿಲಿಂಗ್‌ನಲ್ಲಿ 90ರಷ್ಟು ಅಂಕ ತೆಗೆದುಕೊಂಡು ಮೊದಲು ಬಂದವನನ್ನು ಕರೆಯುತ್ತೇವೆ. ಆಗ ಅವನು ಬೆಂಗಳೂರಿಗೆ ಬೇಕು ಎಂದು ಹೇಳುತ್ತಾನೆ. ಕೊನೆಯಲ್ಲಿ ಇರುವ ಹುದ್ದೆಗಳು ಹಳ್ಳಿಗಳಿಗೆ ಹೋಗುತ್ತವೆ. ಅಂದರೆ ನಗರಗಳಲ್ಲಿ ಉತ್ತಮವಾಗಿ ಅಭ್ಯಾಸ ಮಾಡುವವರಿಗೆ ಮೆರಿಟ್ ಉಪಾಧ್ಯಾಯರನ್ನು ಒದಗಿಸುತ್ತೇವೆ. ಕೊನೆಯಲ್ಲಿ ಹಳ್ಳಿಗಳಿಗೆ ಮೆರಿಟ್ ಇಲ್ಲದಿರುವವರು ಹೋಗುತ್ತಾರೆ. ಆ ಹಿನ್ನೆಲೆಯಲ್ಲಿ ಕಡ್ಡಾಯವಾಗಿ 'ಸಿ' ವಲಯಕ್ಕೆ ಹೋಗಬೇಕೆಂದು ಮಾಡಬೇಕು. ಮೊದಲೆರಡು ವರ್ಷಗಳು ತೊಂದರೆಯಾದರೂ ಆಮೇಲೆ ಸರಿಯಾಗಿ ಬರುತ್ತದೆ. ಹಳ್ಳಿಗಳಲ್ಲಿ 23–25 ವರ್ಷ ಸೇವೆ ಮಾಡಿರುವವರೂ ಇದ್ದು, ಅವರಿಗೆ ಯಾವ ಶಿಫಾರಸ್ಸು ಇಲ್ಲದೇ ಬರುವಂತಿರುವುದಿಲ್ಲ. ಈಗ ಕೌನ್ಸಿಲಿಂಗ್‌ನಲ್ಲಿ ಅವರು 'ಬಿ' ವಲಯಕ್ಕೆ ಬಂದು ನಂತರ 'ಎ' ವಲಯಕ್ಕೆ ಬರುತ್ತಾರೆ. 'ಸಿ' ವಲಯದಲ್ಲಿ 25 ವರ್ಷ ಸೇವೆ ಮಾಡಿ 'ಬಿ' ವಲಯದಲ್ಲಿ 15 ವರ್ಷಗಳ ಸೇವೆ ಮಾಡಿದ್ದಾಗ, 15 ವರ್ಷ ಸೇವೆ ಮಾಡಿದ್ದವನು 'ಎ' ವಲಯಕ್ಕೆ ಮತ್ತು 25 ವರ್ಷ ಸೇವೆ ಮಾಡಿದ್ದವನು 'ಬಿ' ವಲಯಕ್ಕೆ ಬರುತ್ತಾನೆ. ಆಗ ಕಾಮನ್ ಸೀನಿಯಾರಿಟಿ ಮಾಡುವುದು ಆಗುತ್ತದೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಬೇಕು. ನಾನು ಮಾಡಿದ್ದಾಗ ಎಲ್ಲವೂ ಆದ ನಂತರ ಗೊತ್ತಾಯಿತು. ಆದ್ದರಿಂದ 'ಸಿ' ವಲಯದಲ್ಲಿರುವವರು 25 ವರ್ಷ ಸೇವೆ ಮಾಡಿದ್ದಾಗ 'ಎ' ವಲಯಕ್ಕೆ ಹೋಗಲು ಆಸ್ಪದ ಇರುವಂತೆ ಬದಲಾವಣೆ ಮಾಡಿ ಮಾಡಲು ಆಗುತ್ತದೆಯೊ ಎಂದು ನೋಡಿ ಮಾಡಬೇಕು. ಈ ರೀತಿ ಮಾಡುವುದರಿಂದ ಇದು ಬಹಳ ಒಳ್ಳೆಯ ವಿಧೇಯಕ. ಇದರಲ್ಲಿ ಎಲ್ಲರನ್ನು ಎಲ್ಲಾ ಕಡೆ ಕಳುಹಿಸುವಂತೆ ಆಗಿ ಸರಿಯಾಗುತ್ತದೆ. ಆ ರೀತಿ ಸಣ್ಣ–ಪುಟ್ಟ ಲೋಪದೋಷಗಳನ್ನು ಸರಿಪಡಿಸಬೇಕು. ಒಂದು ಸಾರಿ ಕೌನ್ಸಿಲಿಂಗ್ ಕೊಟ್ಟಮೇಲೆ 3 ವರ್ಷ ಆಗಬೇಕು. ಉದಾಹರಣೆಗೆ ಬೆಳಗಾಂನ ಚಿಕ್ಕೋಡಿ ತಾಲ್ಲೂಕಿನ ಪತಿ–ಪತ್ನಿಯರ ವಿಭಾಗದಲ್ಲಿ ಬೆಳಗಾಂ ಜಿಲ್ಲೆಗೆ ಬಯಸಿದಾಗ ಖಾಲಿ ಇರುವಲ್ಲಿ ಕೊಡುತ್ತಾರೆ. ನಂತರ ಅವರು ಮತ್ತೆ ಕೌನ್ಸಿಲಿಂಗ್‌ಗೆ

ಬರುತ್ತಾರೆ, ಅಧಿಕಾರಿಗಳು ಅವರೊಡನೆ ಶಾಮೀಲಾಗುತ್ತಾರೆ. ಆದ್ದರಿಂದ ಅಂಗವಿಕಲ, ಪತಿ–ಪತ್ನಿಯರು ಯಾವುದೇ ವಿಭಾಗವಿದ್ದರೂ ಒಂದು ಸಾರಿ ಕೌನ್ಸಿಲಿಂಗ್ ಬಂದರೆ ಮತ್ತೆ ಕನಿಷ್ಠ 3 ವರ್ಷ ಅಥವಾ 5 ವರ್ಷಗಳು ಕೌನ್ಸಿಲಿಂಗ್ ಬರಬಾರದು ಎಂದು ಮಾಡಿದಾಗ ಎಲ್ಲವೂ ಸರಿಹೋಗುತ್ತದೆ. ಪ್ರೈಮರಿ ಮತ್ತು ಸೆಕಂಡರಿ ವರ್ಗಾವಣೆಯೇ ಎಲ್ಲರಿಗೂ ದೊಡ್ಡ ತಲೆ ನೋವಾಗುತ್ತಿತ್ತು. ಇದಲ್ಲದೇ ಶ್ರೀ ರಾಜೇಂದ್ರ ಎಂಬುವವರು ಹಿಂದೂ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬರೆದಿದ್ದು, ಪ್ರೈಮರಿ ಮತ್ತು ಸೆಕೆಂಡರಿ ವರ್ಗಾವಣೆಯಲ್ಲಿ ಒಂದು ವರ್ಷಕ್ಕೆ 6 ಕೋಟಿ ರೂಪಾಯಿಗಳ ಭ್ರಷ್ಟಾಚಾರ ಆಗುತ್ತದೆ ಎಂದು ಬರೆದಿದ್ದರು. ರ್‍ಯಾಂಡಮ್ ಇಡೀ ರಾಜ್ಯದ ತುಂಬಾ ಎಷ್ಟೆಷ್ಟು ವರ್ಗಾವಣೆಯಾಗಿದೆ, ಎಷ್ಟೆಷ್ಟು ಕೊಟ್ಟಿದ್ದಾರೆ ಎಂಬುದು ಮಾತ್ರವಲ್ಲದೇ, ಪ್ರೊಬೆಷನರಿ ಆಗದೇ ಇರುವವರು ಬೆಂಗಳೂರಿಗೆ ವರ್ಗಾವಣೆಯಾಗುವಾಗ ಎಷ್ಟೆಷ್ಟು ಕೊಟ್ಟಿದ್ದಾರೆ ಎಂಬುದನ್ನು ಬರೆದುಕೊಂಡು, ಟೇಪ್ ಮಾಡಿಕೊಂಡು ಬಂದಿದ್ದನು. ಆಗ ಇದೆಲ್ಲವನ್ನು ನೋಡಿ ಮಾಡಿದೆ. ಈಗ ಮಾಡಿರುವುದು ಬಹಳ ಒಳ್ಳೆಯ ವಿಧೇಯಕ. ಇದಕ್ಕೆಲ್ಲವೂ ಸ್ವಲ್ಪ ನಿಯಮಾವಳಿಗಳನ್ನು ಮಾಡಿದ ನಂತರ ನಮ್ಮೊಡಗೂಡಿ ಚರ್ಚೆ ಮಾಡಿದರೆ ಸಲಹೆಗಳನ್ನು ಕೊಡುತ್ತೇವೆ. ಈ ವಿಧೇಯಕ ತಂದಿರುವುದಕ್ಕೆ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ರೀತಿ ರಾಜ್ಯದಲ್ಲಿರುವ ಎಲ್ಲಾ ಇಲಾಖೆಗಳಲ್ಲಿಯೂ ತರಬೇಕು. ಮಾನ್ಯ ಅಶೋಕ್‌ರವರು ತರಲು ಬಹಳ ಪ್ರಯತ್ನ ಮಾಡಿದರೂ ಆಗಲಿಲ್ಲ. ಪ್ರೈಮರಿ, ಸೆಕೆಂಡರಿಯಲ್ಲಿ ನನ್ನ ಬಿಲ್ಲನ್ನು ಎರಡು ಸಾರಿ ಫೇಲ್ ಮಾಡಿದರು. ಏಕೆಂದರೆ ಇದಕ್ಕೆ ಲಾಬಿ ಬಹಳ ದೊಡ್ಡ ಮಟ್ಟದಲ್ಲಿದೆ. ಆಗ ಇದರ ಬಗ್ಗೆ 2007ರ ಏಪ್ರಿಲ್ 13ರ ತಾರೀಖಿನಂದು ರಾತ್ರಿ 2 ಗಂಟೆಯವರೆಗೂ ಬಿಲ್ ಚರ್ಚೆಯಾಯಿತು. ಆದ್ದರಿಂದ ಇದನ್ನು ಜಾರಿಗೆ ತನ್ನಿ, ಇನ್ನೂ ಸಲಹೆಗಳಿದ್ದರೆ ಕೊಡುತ್ತೇವೆ. ಒಟ್ಟಾರೆ ಈ ಬಿಲ್ಲನ್ನು ನಾನು ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:–** ಆಡಳಿತ ಪಕ್ಷದ ಎಷ್ಟು ಸದಸ್ಯರಿಗೆ ಅವಕಾಶ ಕೊಡಬೇಕೆಂದು ಮುಖ್ಯ ಸಚೇತಕರು ತಿಳಿಸಬೇಕು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊಟ್ಟಮೊದಲ ಬಾರಿಗೆ ಶಿಕ್ಷಣ ಇಲಾಖೆಯಲ್ಲಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆಯನ್ನು ನಮ್ಮ ರಾಜ್ಯ ಜಾರಿಗೆ ತಂದ್ದಿದ್ದು ಎಂದು ಬಹಳ ಸಂತೋಷದಿಂದ ಹೇಳುತ್ತೇನೆ. ಅದರಲ್ಲೂ ತಾಂತ್ರಿಕ ಶಿಕ್ಷಣದಲ್ಲಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆಯನ್ನು ತರಲು ವಿಧೇಯಕವನ್ನು ತಂದಿರುವುದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಆದರೆ ನಿಯಮಾವಳಿಗಳನ್ನು ಮಾಡುವಾಗ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ.

ಮೊದನೆಯದಾಗಿ ಇದುವರೆಗೂ ನಮ್ಮ ನಾಡಿನಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳು ಇದ್ದು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಇರಲಿಲ್ಲ. ಇತ್ತೀಚೆಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಿದ್ದಾರೆ. ಈ ವಿಧೇಯಕದಲ್ಲಿ 'ನಿರ್ದೇಶಕರು, ಅಪರ ನಿರ್ದೇಶಕರು, ಜಂಟಿ ನಿರ್ದೇಶಕರು ಉಪ ನಿರ್ದೇಶಕರನ್ನು ಹೊರತು ಪಡಿಸಿ' ಎಂದು ಹೇಳಿದ್ದಾರೆ. ಇದುವರೆಗೂ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ನಿರ್ದೇಶಕರಿಂದ ಹಿಡಿದು ಅಪರ ನಿರ್ದೇಶಕರು, ಜಂಟಿ ನಿರ್ದೇಶಕರೆಲ್ಲರೂ ಪಾಲಿಟೆಕ್ನಿಕ್‌ನಲ್ಲಿ ಕೆಲಸ ಮಾಡುವವರೇ ಇದ್ದಾರೆ. ತಾಂತ್ರಿಕ ಶಿಕ್ಷಣ ಇಲಾಖೆ ಉನ್ನತೀಕರಣ ಮತ್ತು ಸುಧಾರಣೆ ಆಗಬೇಕೆಂದರೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ನೇಮಕವಾಗಿರುವವರು ನಿರ್ದೇಶಕರು, ಅಪರ ನಿರ್ದೇಶಕರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರಿಗೆ ಸಮಾನವಾದ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಈ ವರ್ಗಾವಣೆ ಪಾಲಿಸಿಯಲ್ಲಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾಗಿ ಕೆಲಸ ಮಾಡುವವರನ್ನು ಈ ಹುದ್ದೆಗಳಿಗೆ ನೇಮಕವಾಗುವಾಗ ಅಡ್ಡಿಯಾಗದಂತೆ ನಿಯಮ ಆಗಬೇಕು. ಏಕೆಂದರೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿರುವ ಪ್ರಾಂಶುಪಾಲರನ್ನು ಈ ನಿರ್ದೇಶನಾಲಯದಲ್ಲಿ ಉನ್ನತ ಹುದ್ದೆಗಳಿಗೆ ತರದೇ ವರ್ಗಾವಣೆಯಲ್ಲಿ ನಿರ್ಬಂಧ ಆದರೆ ಖಂಡಿತವಾಗಿಯೂ ತಾಂತ್ರಿಕ ಶಿಕ್ಷಣ ಅಥವಾ ಪಾಲಿಟೆಕ್ನಿಕ್‌ಗಳು ಉನ್ನತೀಕರಣ ಆಗಲು ಸಾಧ್ಯವಾಗುವುದಿಲ್ಲ.

ಆದ್ದರಿಂದ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರು ಇಂತಹ ಹುದ್ದೆಗಳಿಗೆ ಸಂದರ್ಭಾನುಸಾರ ಬರಲು ಅವಕಾಶ ಈ ವಿಧೇಯಕದಲ್ಲಿ ಇರಬೇಕು.

ಇನ್ನು ಇದುವರೆಗೂ ಸಾರ್ವಜನಿಕರ ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕರಿಗೆ ಸೀಮಿತವಾಗಿ ವರ್ಗಾವಣೆ ಮಸೂದೆಯನ್ನು ಜಾರಿಗೆ ತಂದಿದ್ದು, ಅಧ್ಯಾಪಕೇತರರಿಗೆ ಸೀಮಿತವಾಗಿ ತಂದಿಲ್ಲ. ಆದರೆ ಈ ವಿಧೇಯಕದಲ್ಲಿ ಅಧ್ಯಾಪಕೇತರರಿಗೂ ಸೀಮಿತವಾಗಿ ವರ್ಗಾವಣೆ ನಿಯಮವನ್ನು ತನ್ನಿ. ಈಗ ನಮ್ಮಲ್ಲಿ ಎಲ್ಲಾ ಕಡೆ ಅಧ್ಯಾಪಕೇತರರ ಹುದ್ದೆಗಳಲ್ಲಿ ಸರ್ಕಾರವು 10 ಹುದ್ದೆಗಳನ್ನು ಮಂಜೂರು ಮಾಡಿದ್ದರೆ 2 ಹುದ್ದೆಗಳಲ್ಲಿ ಮಾತ್ರ ಕೆಲಸ ಮಾಡುತ್ತಿರುತ್ತಾರೆ. ಇನ್ನು 8 ಹುದ್ದೆಗಳು ಖಾಲಿಯಿದ್ದು, ಯಾರನ್ನೂ ನೇಮಕ ಮಾಡಿಕೊಂಡಿರುವುದಿಲ್ಲ. ಅಧ್ಯಾಪಕೇತರ ಹುದ್ದೆಗಳಲ್ಲಿ ಬಹಳ ಕೊರತೆಯಿದ್ದು, ಈ ರೀತಿ ವಿಧೇಯಕವನ್ನು ತಂದು ನಿಯಂತ್ರಣ ಮಾಡಿದರೆ ಕೆಲವು ಕಡೆಗಳಲ್ಲಿ ಬಹಳ ವರ್ಷಗಳ ಕಾಲ ಖಂಡಿತವಾಗಿಯೂ ಯಾರನ್ನೂ ಹಾಕುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅಧ್ಯಾಪಕೇತರ ಹುದ್ದೆಗಳನ್ನು ಮಸೂದೆಯಲ್ಲಿ ಅಳವಡಿಸಿ, ಕೌನ್ಸಿಲಿಂಗ್ ಮೂಲಕ ಮಾಡಿದರೆ ನಾಳೆ ಬಹಳ ತೊಂದರೆಯಾಗಬಹುದು. ಇದರ ಬಗ್ಗೆ ಪರಿಶೀಲನೆ ಮಾಡಿ ಹೊರತುಪಡಿಸಿದರೆ ಒಳ್ಳೆಯದು. ಉದಾಹರಣೆಗೆ ಮೈಸೂರಿನಲ್ಲಿ ಸಿಪಿಸಿ ಪಾಲಿಟೆಕ್ನಿಕ್‌ನಲ್ಲಿ 10 ಸಹಾಯಕರ ಹುದ್ದೆಗಳು ಇದ್ದು, ಕೇವಲ ಇಬ್ಬರು ಕೆಲಸ ಮಾಡುತ್ತಿದ್ದಾರೆ. ನಾವು ಎಷ್ಟೇ ಒತ್ತಾಯ ಮಾಡಿದರೂ ಇದುವರೆಗೂ 8 ಹುದ್ದೆಗಳನ್ನು ತುಂಬಲು ಆಗುತ್ತಿಲ್ಲ. ಈ ರೀತಿ ನಾಡಿನಾದ್ಯಂತ ಇದ್ದು, ಅಧ್ಯಾಪಕೇತರ ಹುದ್ದೆಗಳನ್ನು ಇದರಡಿಯಲ್ಲಿ ತರುವುದು ಸೂಕ್ತವೇ? ಇದರಿಂದ ಸಮಸ್ಯೆಗಳು ಎದುರಾಗಬಹುದೇ? ಎಂಬುದನ್ನು ಪರಿಶೀಲಿಸಬೇಕೆಂದು ವಿನಂತಿಸುತ್ತೇನೆ.

ಇನ್ನು ಮಾನ್ಯ ಹೊರಟ್ಟಿಯವರು ಅನಾರೋಗ್ಯ ಪೀಡಿತರು, ಅಂಗವಿಕಲರು ಮತ್ತು ಪತಿ ಪತ್ನಿಯರ ಬಗ್ಗೆ ಹೇಳಿದರು. ಪತಿ–ಪತ್ನಿಯರ ವಿಷಯದಲ್ಲಿ ಪತಿ ಅಥವಾ ಪತ್ನಿ ಇಲ್ಲದೇ ಇರುವವರು ವರ್ಗಾವಣೆಯನ್ನು

ತೆಗೆದುಕೊಂಡಿರುವ ಉದಾಹರಣೆಗಳು ನಾಡಿನಲ್ಲಿ ಬಹಳಷ್ಟು ಇವೆ. ಇದರ ಬಗ್ಗೆ ಬಹಳಷ್ಟು ಚರ್ಚೆಯೂ ನಡೆದಿದೆ. ಆದ್ದರಿಂದ ಪತಿ-ಪತ್ನಿ ವ್ಯಾಖ್ಯಾನ ಸರಿಪಡಿಸುವ ಬಗ್ಗೆ ಸೂಕ್ತ ಪರಿಶೀಲನೆ ಆಗಬೇಕು.

**ಶ್ರೀಮತಿ ಮೋಟಮ್ಮ:-** ಇದು ಹೇಗೆ ಸಾಧ್ಯ? ಪತಿ ಅಥವಾ ಪತ್ನಿ ಇಲ್ಲದೇ ಇರುವವರು ವರ್ಗಾವಣೆ ಕೇಳುವುದಕ್ಕೆ ಸಾಧ್ಯವೇ?

(1.00 ಗಂಟೆ)

**ಶ್ರೀ ಮರಿತಿಬ್ಬೇಗೌಡ:-** ಹೌದು, ವರ್ಗಾವಣೆ ತೆಗೆದುಕೊಂಡಿದ್ದಾರೆ. ಮಾನ್ಯ ಹೊರಟ್ಟಿಯವರು ಮಂತ್ರಿಗಳಾಗಿದ್ದಾಗ ಕೊಟ್ಟಿದ್ದರು.

**ಶ್ರೀ ಬಸವರಾಜ ಹೊರಟ್ಟಿ:-** ಮದುವೆಯಾಗಿದೆ ಎಂದು ಸರ್ಟಿಫಿಕೇಟ್ ಕೊಟ್ಟು, ಕೊನೆಗೆ ಅದು ಕೇಸ್ ಆಗಿ ಎಲ್ಲವೂ ಆಯಿತು.

**ಸಭಾಪತಿಯವರು:-** ಈ ರೀತಿ ಇರುವ exceptional case ಅನ್ನು generalize ಮಾಡುವುದು ಬೇಡ. ಈ ರೀತಿ ಕೆಲವರು ಇರುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಅಂಗವಿಕಲರು ಮತ್ತು ಅನಾರೋಗ್ಯ ಪೀಡಿತರಿಗೆ ವಿಧೇಯಕದಲ್ಲಿ ವಿಶೇಷವಾದ ವರ್ಗಾವಣೆ ಅವಕಾಶ ಕಲ್ಪಿಸಿದ್ದು, ಆದರೆ ಆಕಸ್ಮಾತ್ ಅಪಘಾತ ಅಥವಾ ಹೃದಯಾಘಾತ ಆದವರಿಗೆ ತಕ್ಷಣವೇ ವರ್ಗಾವಣೆ ಸಿಗದೇ ಮುಂದಿನ ವರ್ಷದ ಸಾರ್ವತ್ರಿಕ ಕೌನ್ಸಿಲಿಂಗ್‌ಗೆ ಬರಬೇಕಾಗುತ್ತದೆ. ಅಲ್ಲಿಯವರೆಗೂ ಅವರು ಕಾಯಬೇಕಾಗುತ್ತದೆ. ಇಂತಹವರಿಗೆ ಅನುಕೂಲವಾಗುವಂತೆ ಮೆಡಿಕಲ್ ಪ್ರಾಧಿಕಾರದ ಶಿಫಾರಸ್ಸಿನಂತೆ ಅವರ ಆರೋಗ್ಯ ಸುಧಾರಣೆ ಸಂಬಂಧ ನಿಯೋಜನೆಯನ್ನಾದರೂ ಮಾಡಲು ಅವಕಾಶ ಕಲ್ಪಿಸಬೇಕು. ಏಕೆಂದರೆ ಮುಂದಿನ ಶೈಕ್ಷಣಿಕ ವರ್ಗಾವಣೆವರೆಗೂ ಅವರು wait ಮಾಡಿದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಅಂತಹವರಿಗೆ ತಾತ್ಕಾಲಿಕ ನಿಯೋಜನೆ ಮಾಡಲು ಅವಕಾಶ ಕಲ್ಪಿಸಬೇಕು.

ಇನ್ನು ನಿಯೋಜನೆ ಬಗ್ಗೆ ತಿಳಿಸಿದ್ದು, ಈಗ ಪಾಲಿಟೆಕ್ನಿಕ್‌ಗಳು 10-15 ಕಿಲೋಮೀಟರ್‌ಗಳ ವ್ಯಾಪ್ತಿಯಲ್ಲಿ ಬರದೇ 50-100 ಕಿಲೋಮೀಟರ್‌ಗಳ

ಅಂತರದಲ್ಲಿ ಇದೆ. ಈ ರೀತಿ 50–100 ಕಿಲೋಮೀಟರ್‌ಗಳ ದೂರಕ್ಕೆ ಹೋಗಿ ಕೆಲಸ ಮಾಡುವುದಾದರೆ ನಿಯೋಜನೆ ಎಂಬುದಕ್ಕೆ ಅರ್ಥವಿಲ್ಲ. ಇದರಿಂದ ಬಹಳಷ್ಟು ತೊಂದರೆಯಾಗುತ್ತದೆ. ನಿಯೋಜನೆ ಇರಬೇಕು ಮತ್ತು ನಿಯೋಜನೆ ಇಲ್ಲದೇ ಆಗುವುದಿಲ್ಲ. ಆದರೆ ದಯಮಾಡಿ ನಿಯೋಜನೆ ದೂರವನ್ನು 25 ಅಥವಾ 50 ಕಿಲೋಮೀಟರ್‌ಗಳಿಗೆ ಮಿತಿಗೊಳಿಸಬೇಕು. ಉನ್ನತ ಶಿಕ್ಷಣದಲ್ಲಿ ನಿಯೋಜನೆ ಮೇಲೆ ಕೆಲಸ ಮಾಡುವವರಿಗೆ ನಿಯೋಜನೆ ಭತ್ಯೆ ಇಲ್ಲ. ಆದ್ದರಿಂದ ನಿಯೋಜನೆ ಭತ್ಯೆಯನ್ನು ಕಡ್ಡಾಯವಾಗಿ ಕೊಡುವ ಕೆಲಸ ಮಾಡಬೇಕು. ಇದಲ್ಲದೇ 100 ಕಿಲೋಮೀಟರ್ ದೂರದಲ್ಲಿ ನಿಯೋಜನೆ ಮಾಡಿ, ನಿಯೋಜನೆ ಭತ್ಯೆ ಇಲ್ಲದೇ ಕೆಲಸ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ನಿಯೋಜನೆ ವ್ಯಾಪ್ತಿ ಮತ್ತು ತಿಂಗಳಿಗೆ ಕನಿಷ್ಠ 2 ಸಾವಿರ ರೂಪಾಯಿಗಳನ್ನು ನಿಯೋಜನೆ ಭತ್ಯೆಯನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಇನ್ನು ಮತ್ತೊಂದು ಪ್ರಮುಖ ಅಂಶವೆಂದರೆ, ಮಾನ್ಯ ಹೊರಟ್ಟಿಯವರು ತಿಳಿಸಿದಂತೆ ಈ ವರ್ಷ ವರ್ಗಾವಣೆ ಆದವರು ಮುಂದಿನ ವರ್ಷ ವರ್ಗಾವಣೆಗಾಗಿ ಅರ್ಜಿ ಹಾಕುತ್ತಾರೆ. ಈ ಹಿಂದೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಆಗಿರುವ ವಿಧೇಯಕದಲ್ಲಿ ಈ ತೊಂದರೆ ಇದೆ. ಮೊದಲು ನೇಮಕಾತಿ ಆಗಿರುವವರು ಇರಬಹುದು ಅಥವಾ ಈಗಾಗಲೇ ಸೇವೆಯಲ್ಲಿ ಇರುವವರು ಇರಬಹುದು, ವರ್ಗಾವಣೆಯನ್ನು 3 ಅಥವಾ 4 ವರ್ಷಗಳಿಗೆ ಮಾಡಬೇಕೇ ಎಂಬ ಬಗ್ಗೆ ನಿರ್ದಿಷ್ಠವಾಗಿ ಗೊತ್ತುಪಡಿಸಬೇಕು. ಜೇಷ್ಠತೆ ವೃಂದಕ್ಕೆ ಸೀಮಿತವಾಗಿ ಶೇಕಡ 8ರಷ್ಟು ವರ್ಗಾವಣೆ ಮಾಡಬೇಕೆಂದು ಹೇಳಿದ್ದಾರೆ. ಒಂದು ಇಲಾಖೆಯಲ್ಲಿ 500 ಮಂದಿ ಇದ್ದಾಗ ಸಾಮಾನ್ಯವಾಗಿ ಅವರಿಗೆ ಶೇಕಡ 5ರಷ್ಟು ಎಂದು ವರ್ಗಾವಣೆ ಬರುತ್ತದೆ. ಆದರೆ ಶಿಕ್ಷಣ ಇಲಾಖೆಯಲ್ಲಿ ಒಂದೊಂದು ವೃಂದಕ್ಕೆ ಸೀಮಿತವಾಗಿ ಸಾವಿರಾರು ಮಂದಿ ಇದ್ದು, ಅವರಿಗೆ ಶೇಕಡ 5 ಅಥವಾ ಶೇಕಡ 8 ಅಂದಾಗ ವರ್ಗಾವಣೆ ಆದಂತೆ ಆಗುವುದಿಲ್ಲ. ಒಂದು ವೃಂದಕ್ಕೆ ಸಂಬಂಧಪಟ್ಟಂತೆ ಶೇಕಡ 8ರಷ್ಟು ವರ್ಗಾವಣೆ ಆಗಬೇಕೆಂದು ಹೇಳಿದ್ದು, ಅದನ್ನು ದಯಮಾಡಿ ಶೇಕಡ 10ಕ್ಕೆ

ಹೆಚ್ಚು ಮಾಡಬೇಕು. ಪರಸ್ಪರ ವರ್ಗಾವಣೆ, ಪತಿ–ಪತ್ನಿ, ಅಂಗವಿಕಲರು ಹಾಗೂ ಅನಾರೋಗ್ಯ ಪೀಡಿತ ವರ್ಗಾವಣೆಗಳನ್ನು ಶೇಕಡ 10ನ್ನು ಹೊರತುಪಡಿಸಿ ವರ್ಗಾವಣೆ ಮಾಡಬೇಕೆಂದು ವಿನಂತಿಸುತ್ತೇನೆ. ಏಕೆಂದರೆ ಇವರೆಲ್ಲರನ್ನು ಶೇಕಡ 8ರ ವರ್ಗಾವಣೆಯಲ್ಲಿ ಸೇರಿಸಿದ್ದಾರೆ, ಈ ರೀತಿ ಆದರೆ ಸಾಮಾನ್ಯ ವರ್ಗಾವಣೆಯಲ್ಲಿ ಕೆಲವರಿಗೆ ವರ್ಗಾವಣೆ ಅವಕಾಶಗಳೇ ಸಿಗುವುದಿಲ್ಲ. ಏಕೆಂದರೆ ಕೆಲವು ಸಾರಿ ಇವರು ಶೇಕಡ 8ಕ್ಕಿಂತ ಹೆಚ್ಚು ಇರುತ್ತಾರೆ. ಆದ್ದರಿಂದ ಅವರನ್ನು ಶೇಕಡ 8ರ ಹೊರತುಪಡಿಸಿ ವರ್ಗಾವಣೆ ಮಾಡಬೇಕೆಂದು ವಿನಂತಿಸಿ, ಈ ವಿಧೇಯಕವನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಕರ್ನಾಟಕ ರಾಜ್ಯ ಸಿವಿಲ್ ಸೇವೆ ವಿಧೇಯಕ, 2012ನ್ನು ಸಭೆಯಲ್ಲಿ ಮಂಡಿಸಿದ್ದು, ಬಹಳ ವರ್ಷಗಳ ಹಿಂದೆಯೇ ಈ ವಿಧೇಯಕ ಜಾರಿಗೆ ಬರಬೇಕಾಗಿದ್ದು, ಈಗ ಈ ವಿಧೇಯಕವನ್ನು ತಂದಿರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ.

ಇನ್ನು ನನ್ನ ಮೊದಲನೆಯ observation ಏನೆಂದರೆ, ಕನ್ನಡ ಮತ್ತು ಆಂಗ್ಲ ಭಾಷೆಯ ಈ ವಿಧೇಯಕದಲ್ಲಿ ಪ್ರಾರಂಭದಲ್ಲಿ ಆಂಗ್ಲ ಭಾಷೆಯಲ್ಲಿ ರಚಿಸಿ, ನಂತರ ಅದನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡುತ್ತಾರೆ. ಮೊನ್ನೆ ತಂದ ವಿಧೇಯಕದಲ್ಲಿಯೂ ಇದೇ ಸಮಸ್ಯೆ ಇತ್ತು. ಉದಾಹರಣೆಗೆ ಈ ವಿಧೇಯಕದ 5ನೇ Clause ಅನ್ನು ಓದುತ್ತೇನೆ. ಆಂಗ್ಲ ಭಾಷೆಯ 5ನೇ Clause ನಲ್ಲಿರುವ ಸ್ಪಷ್ಟತೆ ಕನ್ನಡ ಭಾಷೆಯಲ್ಲಿ ಇಲ್ಲ. ಹಾಗಾಗಿ ವಿಧೇಯಕದಲ್ಲಿ ಕನ್ನಡ ಭಾಷೆಯಲ್ಲಿಯೂ ಸರಿಯಾಗಿ ಸ್ಪಷ್ಟ ಅರ್ಥ ಬರುವಂತೆ ಮಾಡಬೇಕೆಂದು ವಿನಂತಿಸುತ್ತೇನೆ. Clause 5 reads thus: **"5. Transfer of Principal, teaching or non-teaching staff (excluding group-D) in the interest of public service,-** Principal, teaching or non-teaching staff who is in service on the date of commencement of this Act and has served for more than prescribed years continuously in any Office,

College or Institution of the Department of Technical Education in the same place in Zone-A shall be transferred to Zone-C." ಇದನ್ನು ಕನ್ನಡದಲ್ಲಿ ಓದಿದಾಗ ಅರ್ಥವೇ ಬೇರೆಯಾಗುತ್ತದೆ. ಅದೇನೆಂದರೆ "ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿರುವ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಯಾವುದೇ ಕಛೇರಿ, ಕಾಲೇಜು ಅಥವಾ ಸಂಸ್ಥೆಯಲ್ಲಿ, ಅದೇ ವಲಯ–ಸಿ ಯಲ್ಲಿ ಅದೇ ಸ್ಥಳದಲ್ಲಿ ನಿಯಮಿಸಲಾದ ವರ್ಷಗಳ ಸಂಖ್ಯೆಗಿಂತ ಹೆಚ್ಚು ಕಾಲ ನಿರಂತರವಾಗಿ ಸೇವೆ ಸಲ್ಲಿಸಿರುವ ಪ್ರಾಂಶುಪಾಲ, ಬೋಧಕ ಅಥವಾ ಬೋಧಕೇತರ ಸಿಬ್ಬಂದಿಯನ್ನು ಸಾರ್ವಜನಿಕ ಹಿತದೃಷ್ಟಿಯಲ್ಲಿ ಇನ್ನೊಂದು ವಲಯಕ್ಕೆ ವರ್ಗಾವಣೆ ಮಾಡತಕ್ಕದ್ದು" ಎಂದು ಇದ್ದು, ಇದರಲ್ಲಿ ಇನ್ನೊಂದು ವಲಯ ಯಾವುದು ಎಂದು ತಿಳಿಸಿಲ್ಲ. ಆದರೆ ಆಂಗ್ಲ ಭಾಷೆಯ ವಿಧೇಯಕದಲ್ಲಿ ಇದೆ. ಈ ರೀತಿ ಸಣ್ಣ–ಪುಟ್ಟ ಅಂಶಗಳನ್ನು ನಾವು ಗಮನಿಸದೇ ಆದರೆ ಮುಂದೆ ವರ್ಗಾವಣೆ ಸಮಯದಲ್ಲಿ ತುಂಬಾ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಈ ರೀತಿಯ ಸಂಗತಿಗಳನ್ನು ಗಮನಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

**ಸಭಾಪತಿಯವರು:–** ಈಗ ಮಾನ್ಯ ಸದಸ್ಯರು ಹೇಳುವಂತೆ ಆಂಗ್ಲ ಭಾಷೆಯ ವಿಧೇಯಕ ಸರಿಯಿದೆಯೋ ಅಥವಾ ಕನ್ನಡ ಭಾಷೆಯ ವಿಧೇಯಕ ಸರಿಯಿದೆಯೋ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಆಂಗ್ಲ ಭಾಷೆಯ ವಿಧೇಯಕ ಸರಿಯಿದೆ. ಮೊನ್ನೆಯೂ ಇದೇ ರೀತಿ ಆಗಿತ್ತು.

**ಸಭಾಪತಿಯವರು:–** ಮಾನ್ಯ ಸಚಿವರು ಗಮನಿಸಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಇದೆಲ್ಲವನ್ನು ಓದಿದಾಗ ಬಹಳ ತಪ್ಪುಗಳು ಇವೆ, ಈ ರೀತಿಯ ಸಂಗತಿಗಳನ್ನು ಗಮನಿಸಬೇಕು.

ಇನ್ನು ಎರಡನೆಯದಾಗಿ ಮೀಸಲಾತಿ ಬಗ್ಗೆ ಮಾನ್ಯ ಮರಿತಿಬ್ಬೇಗೌಡರು ಉಲ್ಲೇಖಿಸಿದ್ದು, ಶಿಕ್ಷಣ ಇಲಾಖೆಯಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ಶಿಕ್ಷಕರು ಮತ್ತು ನೌಕರರು ಇದ್ದಾರೆ. ಪತಿ-ಪತ್ನಿ ವರ್ಗಾವಣೆಯ ಬಗ್ಗೆ ಹಿಂದೆ ಒಂದು ಸಾರಿ ಚರ್ಚೆಯಾಗಿದ್ದು, ಸರ್ಕಾರಿ ಗಂಡ ಮತ್ತು ಸರ್ಕಾರಿ ಹೆಂಡತಿಯಾದರೆ ಮಾತ್ರ ವರ್ಗಾವಣೆಗೆ ಅವಕಾಶ ಇದೆ. ಗಂಡ-ಹೆಂಡತಿ ಎನ್ನುವುದನ್ನು ಸರ್ಕಾರಿ ಎಂಬುದನ್ನು ಸೇರಿಸಿ ಏಕೆ ಸೀಮಿತಗೊಳಿಸಬೇಕು? ಇದರಡಿಯಲ್ಲಿ ಎಲ್ಲರೂ ಬರುತ್ತಾರೆ. ಆದ್ದರಿಂದ ಮಾನ್ಯ ಹೊರಟ್ಟಿಯವರು ತಿಳಿಸಿದಂತೆ 'ಗಂಡ ಹೆಂಡತಿಯರಿಬ್ಬರೂ ಸರ್ಕಾರಿ ನೌಕರರಾಗಿದ್ದು' ಎಂದು ಇದ್ದು, ಇದು ಎಲ್ಲರಿಗೂ ಅನ್ವಯವಾಗುವಂತೆ ಅವಕಾಶ ಇರುವಲ್ಲಿ ಆದ್ಯತೆ ಕೊಟ್ಟು ವರ್ಗಾವಣೆ ಮಾಡುವುದು ಸೂಕ್ತ. ಏಕೆಂದರೆ ಯಾರೋ ಒಬ್ಬ ರೈತರ ಹೆಂಡತಿ ಶಿಕ್ಷಕಿಯಾಗಿರಬಹುದು ಅಥವಾ ಶಿಕ್ಷಕನಾಗಿರುವವನ ಹೆಂಡತಿ ಮನೆಯಲ್ಲಿ ಕೆಲಸ ಮಾಡುತ್ತಿದ್ದರೆ ಅವರಿಗೆ ವರ್ಗಾವಣೆ ಅನ್ವಯವಾಗುವುದಿಲ್ಲ ಎಂದರೆ ಗಂಡ ಹೆಂಡತಿ ಯಾವ ಉದ್ದೇಶಕ್ಕೆ ಒಟ್ಟಿಗೆ ಇರಬೇಕೆಂದು ಪಡುವ ಅಪೇಕ್ಷೆಯು ಸಣ್ಣ ವರ್ಗಕ್ಕೆ ಮಾತ್ರ ಸೀಮಿತವಾಗುತ್ತದೆ ಎಂದು ಹೇಳಲು ಇಚ್ಛಿಸುತ್ತೇನೆ. ಆದ್ದರಿಂದ ಎಲ್ಲಾ ಗಂಡ-ಹೆಂಡತಿಗೂ ಒಂದೇ ಪ್ರದೇಶದಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡಲು ಅನುವಾಗುವಂತೆ ಇರಬೇಕು.

ಇನ್ನು ಮೂರನೆಯದಾಗಿ ಶೇಕಡಾವಾರು ವಿಷಯದಲ್ಲಿ ಬಹಳ ಹಿಂದೆ ಮಾನ್ಯ ಹೊರಟ್ಟಿಯವರು ವಿಧೇಯಕವನ್ನು ತಂದಾಗ ಶೇಕಡ 5ರ ವ್ಯಾಪ್ತಿಯಲ್ಲಿ ರಿಸರ್ವೇಷನ್ ಕ್ಯಾಟಗರಿ ಹೋಗಿ ಉಳಿದವರಿಗೆ ಅವಕಾಶವೇ ಸಿಗಲಿಲ್ಲ. ಆದ್ದರಿಂದ ಶೇಕಡ 8 ಅಥವಾ 10 ಎಂದು ನಿರ್ಣಯ ಮಾಡುವಾಗ ವಿಶೇಷವಾದ ವರ್ಗಗಳನ್ನು ಹೊರತುಪಡಿಸಿ ಮಾಡಬೇಕು. ಹೊಸದಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಪ್ರಾರಂಭವಾದಾಗ ಉಲ್ಲೇಖ ಮಾಡಿದ್ದು, ಬಹಳ ದೊಡ್ಡ ಸಂಖ್ಯೆಯಲ್ಲಿ ಪಾಲಿಟೆಕ್ನಿಕ್‌ಗಳಿಂದ ಸಿಬ್ಬಂದಿಗಳನ್ನು ಇಂಜಿನಿಯರಿಂಗ್ ಕಾಲೇಜುಗಳಿಗೆ ನಿಯೋಜನೆ ಅಥವಾ ವರ್ಗಾವಣೆ ಮಾಡಿದ್ದು, ಈ ಆದೇಶ ಬಂದ ಮೇಲೆ ಈಗಾಗಲೇ ಸಾಕಷ್ಟು ಕಾಲೇಜುಗಳಲ್ಲಿ

ಸಿಬ್ಬಂದಿಗಳ ಕೊರತೆಯಿದ್ದು, ಇದನ್ನು ಸರಿಯಾಗಿ ಅನ್ವಯ ಮಾಡದಿದ್ದರೆ ಗೊಂದಲ ಉಂಟಾಗುತ್ತದೆ. ಇದು ನೇಮಕಾತಿ ಆದ ಮೇಲೆ ಸರಿಯಾಗುತ್ತದೆ. ಇಲ್ಲದಿದ್ದರೆ ಕಾಲೇಜಿನಲ್ಲಿ ಈಗಾಗಲೇ ಪಾಠ ಮಾಡುತ್ತಿರುವವರು ಬೇರೆ ಕಡೆ ವರ್ಗಾವಣೆ ತೆಗೆದುಕೊಂಡು ಹೊರಟು ಹೋಗುತ್ತಾರೆ. ಆದ್ದರಿಂದ ಈ ಕಾಯ್ದೆಯನ್ನು ಅನುಷ್ಠಾನಗೊಳಿಸುವಾಗ ಈ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ವಿದ್ಯಾರ್ಥಿಗಳ ಪಠ್ಯಕ್ರಮಕ್ಕೆ ತೊಂದರೆಯಾಗದಂತೆ ಈ ವಿಧೇಯಕವನ್ನು ಅನುಷ್ಠಾನಗೊಳಿಸಬೇಕೆಂದು ವಿನಂತಿಸುತ್ತೇನೆ.

**ಡಾ॥ ದೊಡ್ಡರಂಗೇಗೌಡ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅಧ್ಯಾಪಕರ ವರ್ಗಾವಣೆ ವಿಧೇಯಕ ಚರ್ಚೆಯಾಗುತ್ತಿರುವ ಈ ಮಹತ್ತರವಾದ ಸಂದರ್ಭದಲ್ಲಿ ನಮ್ಮ ಹಿರಿಯ ಸದಸ್ಯರೊಬ್ಬರು ಮಾತನಾಡುತ್ತಾ probation ಪದ ಬಳಸಿದರು. ನಮ್ಮ ಸರ್ಕಾರದಲ್ಲಿ ಅಧ್ಯಾಪಕ, ಅಧ್ಯಾಪಕಿಯರು ಕೆ.ಪಿ.ಎಸ್.ಸಿ. ಮೂಲಕ ನೇಮಕವಾಗಿ ನಾಲ್ಕು ವರ್ಷಗಳಾದರೂ ಕೂಡ probationary period declare ಆಗಿಲ್ಲ. ಹಾಗಾದರೆ probationary period ಎನ್ನುವುದು ಹೇಗೆ define ಮಾಡುತ್ತೀರಿ, ಅರ್ಥ ಮಾಡುತ್ತೀರಿ? Probationary period declare ಆಗದೆ ವರ್ಗಾವಣೆ ಮಾಡುವ ಆಗಿಲ್ಲ. ಆದ್ದರಿಂದ ಸರ್ಕಾರ ಇಂತಹ ನ್ಯೂನ್ಯತೆಗಳನ್ನು ಮೊದಲು ಪರಿಹರಿಸಿ ಆನಂತರ ಇಂತಹ ವಿಧೇಯಕಗಳನ್ನು ತರುವುದು ಬಹಳ ಒಳ್ಳೆಯದು ಅಥವಾ ಇಂತಹ ವಿಧೇಯಕ ತರುವ ಮೊದಲು ಆ ತರಹ ಯಾವುದೇ ನ್ಯೂನ್ಯತೆ ಉಂಟಾಗದಿರುವಂತಹ ರೀತಿಯಲ್ಲಿ ನೋಡಿಕೊಳ್ಳುವುದು ಬಹಳ ಒಳ್ಳೆಯದು. ಸರ್ಕಾರಿ ಕಿರಿಯ ಕಾಲೇಜಿನ ಅಧ್ಯಾಪಕ, ಅಧ್ಯಾಪಕಿಯರುಗಳಂತೂ ನಾಲ್ಕು ವರ್ಷಗಳಾದರೂ ಇನ್ನೂ probationary period declare ಆಗಿಲ್ಲ. ಅವರು ತುಂಬಾ ತೊಂದರೆಯಲ್ಲಿದ್ದಾರೆ. ಆದ್ದರಿಂದ ಇಂತಹ ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಅದಕ್ಕೆ ಆದ್ಯತೆಯನ್ನು ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರ ಹೇಳುವುದಾದರೆ ಹೇಳಿ.

**ಶ್ರೀ ಶಶಿಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ,....

**ಸಭಾಪತಿಯವರು:-** ನನಗೆ ಹಿರಿಯ ಸದಸ್ಯರೊಬ್ಬರು ಒಂದು ಸಂದೇಶವನ್ನು ಕಳುಹಿಸಿದ್ದಾರೆ. ಎಲ್ಲರೂ ನಾವು ಒಪ್ಪುತ್ತೇವೆ, ಒಪ್ಪುತ್ತೇವೆ ಎಂದು ಹೇಳಿದ ಮೇಲೆ ಮಾತನಾಡುವುದಕ್ಕೆ ಏಕೆ ಅವಕಾಶ ಕೊಡುತ್ತೀರಿ, ಮುಂದಿನ ವಿಷಯಕ್ಕೆ ಹೋಗೋಣ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ಶಶಿಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ತಾವು ಉನ್ನತ ಶಿಕ್ಷಣ ಸಚಿವರಾಗಿದ್ದಿರಿ. ಇತ್ತೀಚೆಗೆ ಇಂಜಿನಿಯರಿಂಗ್ ಕಾಲೇಜುಗಳು ಸಾಕಷ್ಟು ಆಗಿವೆ. ಆದರೆ, technical education administration ಏನಿದೆ ಅಲ್ಲಿ ಸಂಪೂರ್ಣವಾಗಿ ಪಾಲಿಟೆಕ್ನಿಕ್ ಕಾಲೇಜಿನ ಸ್ಟ್ಯಾಫ್ ಇದ್ದಾರೆ. ಡೈರೆಕ್ಟರ್ ಆಗಲಿ, ಯಾರೇ ಆಗಲಿ, ಹಿಂದೆ ಭಂಡಾರಿ, ಇನ್ನಿತರರು ಸೂರತ್ಕಲ್ ಇಂಜಿನಿಯರಿಂಗ್ ಕಾಲೇಜಿನಿಂದ ಬರುತ್ತಿದ್ದರು. ಆದರೆ, ಈಗ ಎಲ್ಲಾ ಪಾಲಿಟೆಕ್ನಿಕ್ ಕಾಲೇಜಿನ ಸ್ಟ್ಯಾಫ್ ಇದ್ದು they are controlling all the Engineering Colleges. ಈ ರೀತಿ ಹೇಗೆ ಆಗುತ್ತದೆ? 14 ಇಂಜಿನಿಯರಿಂಗ್ ಕಾಲೇಜುಗಳಿವೆ. ಅದರ ಪೂರ್ತಿ ಅಡ್ಮಿನಿಸ್ಟ್ರೇಷನ್ Director of Technical Education ಅಡಿಯಲ್ಲಿ ಇದೆ, academic affairs ವಿಶ್ವವಿದ್ಯಾನಿಲಯ ನೋಡುತ್ತದೆ. ಆದರೆ, ಉಳಿದ ಅಡ್ಮಿನಿಸ್ಟ್ರೇಷನ್ ಇವರು ನೋಡುತ್ತಾರೆ. ಅದು ಸರಿಯಾಗುವುದಿಲ್ಲ.

**ಸಭಾಪತಿಯವರು:-** ವರ್ಗಾವಣೆಗೂ ಅದಕ್ಕೂ ಏನು ಸಂಬಂಧ? ವರ್ಗಾವಣೆ ಬಗ್ಗೆ ಮಾತ್ರ ಮಾತನಾಡಿ. ಎಜುಕೇಶನ್ ಬಗ್ಗೆ ಮತ್ತೊಂದು ಸಲ ತನ್ನಿ.

**ಶ್ರೀ ಶಶಿಲ್ ಜಿ. ನಮೋಶಿ:-** ಆ ಸ್ಟ್ಯಾಫ್‌ನ್ನು ತೆಗೆದುಕೊಳ್ಳಬಹುದಲ್ಲ ಎಂದು. ಅದನ್ನು directly ಮಂತ್ರಿಗಳ ಅಡಿಯಲ್ಲಿ ಅಥವಾ Ministry ಮಾಡುತ್ತದೆ ಎಂದಾಗ ಆ transfer ನ್ನು ಮಾಡಲಿ ಎಂದು.

**ಸಭಾಪತಿಯವರು:–** ಮಾನ್ಯ ಸಚಿವರೇ, ಅವರು ಎತ್ತಿರತಕ್ಕಂಥ ಪ್ರಶ್ನೆಗಳಿಗೆ ತಮ್ಮ ಸಮಜಾಯಿಷಿ.

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಹಿರಿಯ ಸದಸ್ಯರಾದಂತಹ ಮಾನ್ಯ ಬಸವರಾಜ ಹೊರಟ್ಟಿಯವರು, ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಗಣೇಶ್ ಕಾರ್ಣಿಕ್‌ರವರು, ಮಾನ್ಯ ದೊಡ್ಡರಂಗೇಗೌಡರು, ಮಾನ್ಯ ಶಶಿಲ್ ನಮೋಶಿಯವರು ಕೆಲವು ವಿಶೇಷವಾದ ಗಮನವನ್ನು ಸೆಳೆದಿದ್ದಾರೆ. ಈ ನೀತಿಯನ್ನು ಸ್ವಾಗತಿಸಿದ್ದಾರೆ. ಅವರಿಗೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈಗ ವರ್ಗಾವಣೆ 8 ಪರ್ಸೆಂಟ್ ಇದೆ ಎಂದು ಹೇಳಿದ್ದಾರೆ, ಅದನ್ನು 2 ಪರ್ಸೆಂಟ್ ಜಾಸ್ತಿ ಮಾಡಿ ಶೇಕಡಾ 10ರಷ್ಟು ಮೀರತಕ್ಕದ್ದಲ್ಲ ಎಂದು ತಿದ್ದುಪಡಿ ಮಾಡುವುದಕ್ಕೆ ಸಭೆಯ ಮುಂದೆ ನಾನು ಮಂಡನೆಯನ್ನು ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಅದರ ಜೊತೆಗೆ ಅದರೊಳಗೆ ಎಷ್ಟು ಅಂಗವಿಕಲರಿದ್ದಾರೆ ಎಂದು ನೋಡಿ ಅವರ ಪರ್ಸೆಂಟೇಜ್ ಆಧಾರದ ಮೇಲೆ ಅದರೊಳಗೆ ಬೈಫರ್ಕೇಶನ್ ಮಾಡುತ್ತೇವೆ. ಎಷ್ಟು ಪರ್ಸೆಂಟೇಜ್ ಅಂಗವಿಕಲರಿಗೆ ಆದ್ಯತೆ ಕೊಡಬೇಕು, ಎಷ್ಟು ಪರ್ಸೆಂಟೇಜ್ ಪತಿ–ಪತ್ನಿ ಪ್ರಕರಣಗಳಿಗೆ ಆದ್ಯತೆಯನ್ನು ಕೊಡಬೇಕೆಂದು ಆಮೇಲೆ ಅದನ್ನು ಬೈಫರ್ಕೇಶನ್ ಮಾಡುತ್ತೇವೆ. ಶೇಕಡ ಪ್ರಮಾಣ 8 ಇದ್ದುದ್ದನ್ನು ಶೇಕಡ 10 ಎಂದು ಮಾಡುವುದಕ್ಕೆ ಸಭೆ ಒಪ್ಪಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಪತಿ, ಪತ್ನಿ ಇವರಲ್ಲಿ ಯಾರಾದರೊಬ್ಬರು ಖಾಸಗಿ ಕೆಲಸದಲ್ಲಿ ಇದ್ದರೆ ಅದನ್ನು ಕೂಡ ಪರಿಗಣಿಸಬೇಕೆಂದು ಹೇಳಿದರು. ಅದು ಕಷ್ಟ. ಏಕೆಂದರೆ, ಸರ್ಕಾರಿ ನೌಕರರಾಗಿರುವವರು ಮದುವೆಯಾಗದೆ ಮುದುವೆಯ ಆಹ್ವಾನ ಪತ್ರಿಕೆಯನ್ನು ಮಾಡಿಕೊಂಡು ಕೌನ್ಸಿಲಿಂಗ್‌ಗೆ ಅರ್ಜಿ ಹಾಕಿರುವುದನ್ನು ನಾವು ನೋಡಿದ್ದೇವೆ. ಖಾಸಗಿ ದೃಢೀಕರಣ ಪತ್ರವನ್ನು ಎಲ್ಲರೂ ತಂದುಬಿಡುತ್ತಾರೆ. ಹತ್ತು ಪರ್ಸೆಂಟ್ ವ್ಯಾಪ್ತಿಯಲ್ಲಿ ಯಾವುದನ್ನು ಜೋಡಿಸಬಹುದು ಅದನ್ನು ಜೋಡಿಸಿಕೊಳ್ಳುವ ಪ್ರಯತ್ನ ಮಾಡುತ್ತೇವೆ. ಆ

ರೀತಿ ಅವರು ಅಪೀಲ್ ಮಾಡಿಕೊಂಡಾಗ ಹತ್ತು ಪರ್ಸೆಂಟ್ ಒಳಗೆ ಯಾವುದಕ್ಕೆ ಆದ್ಯತೆ ಕೊಡಬೇಕು ಅದಕ್ಕೆ ಆದ್ಯತೆಯನ್ನು ಕೊಡುತ್ತೇವೆ. ನಮಗೆ ಬರುವಂತಹ ವರ್ಗಾವಣೆ ಅರ್ಜಿಗಳಲ್ಲಿ ಬಹುತೇಕವಾಗಿ ಅವರು ಅಪ್ಪ–ಅಮ್ಮನಿಗೆ ಅನ್ನ ಹಾಕುತ್ತಾರೋ ಇಲ್ಲವೋ ಗೊತ್ತಿಲ್ಲ. ಅಪ್ಪ–ಅಮ್ಮನಿಗೆ ಕಾಯಿಲೆ ಎಂದು ನಮಗೆ ಅರ್ಜಿ ಕೊಟ್ಟಿರುತ್ತಾರೆ ಮತ್ತು ಅವರಿಗೇ ಕಾಯಿಲೆ ಎಂದು ಅರ್ಜಿ ಇರುತ್ತದೆ. ಹಾಗಿದ್ದಾಗ ನಾವು ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಜಿಲ್ಲಾ ವೈದ್ಯಕೀಯ ಮಂಡಳಿ ಎಂದು ಇರುತ್ತದೆ. ಜಿಲ್ಲಾ ವೈದ್ಯಕೀಯ ಮಂಡಳಿಗೆ ನಾವು ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಅಲ್ಲಿಂದ ತೀವ್ರ ಸ್ವರೂಪದ ಕಾಯಿಲೆ ಎಂದು ಪ್ರಮಾಣ ಪತ್ರವನ್ನು ಕೊಡಬೇಕು. ಅದನ್ನು ಮಾನಿಟರ್ ಮಾಡುವಂತಹ ಸಿಸ್ಟಮ್‌ನ್ನು ತರಬೇಕು. ಜಿಲ್ಲಾ ವೈದ್ಯಕೀಯ ಮಂಡಳಿಯವರು ಸರಿಯಾಗಿ ಪ್ರಮಾಣ ಪತ್ರವನ್ನು ಕೊಟ್ಟಿದ್ದಾರೆಯೆ ಎಂದು ಮಾನಿಟರ್ ಮಾಡಿದರೆ ನೀತಿ ಸರಿಯಾಗುತ್ತದೆ. ಇಲ್ಲದಿದ್ದರೆ ಎಲ್ಲರೂ ತೀವ್ರತರ ಕಾಯಿಲೆ ಎಂದು ಸರ್ಟಿಫಿಕೇಟ್ ತಂದು ಬಿಡುತ್ತಾರೆ. ಆ ಅಪಾಯ ಕೂಡ ಇರುತ್ತದೆ. ಆ ಬಗ್ಗೆ ಕೂಡ ಸ್ವಲ್ಪ ಗಮನವನ್ನು ಕೊಡುತ್ತೇವೆ. ಇಂಗ್ಲಿಷ್, ಕನ್ನಡ ಪ್ರತಿಯಲ್ಲಿ ವ್ಯತ್ಯಾಸ ಆಗಿದೆ ಎಂದು ಮಾನ್ಯ ಗಣೇಶ್ ಕಾರ್ಣಿಕ್‌ರವರು ಗಮನಕ್ಕೆ ತಂದಿದ್ದಾರೆ. ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಈಗ ಕನ್ನಡ ಮತ್ತು ಇಂಗ್ಲಿಷ್ ಎರಡು ಪ್ರತಿಗಳನ್ನು ನಮಗೆ ಕೊಟ್ಟಿದ್ದಾರೆ.

**ಶ್ರೀ ಸಿ.ಟಿ. ರವಿ:–** ಇಂಗ್ಲಿಷ್‌ನಲ್ಲಿರುವುದು ಸರಿ ಇದೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, which is the original Bill?

**ಶ್ರೀ ಸಿ.ಟಿ. ರವಿ:–** ಇಲ್ಲಿ ಬೇರೆ ಯಾವುದನ್ನು ಕಾಣಿಸಿಲ್ಲ. ಇನ್ನೊಂದು ವಲಯಕ್ಕೆ ಎಂದು ಮಾತ್ರ ಹೇಳಿದ್ದಾರೆ. ಇನ್ನೊಂದು ವಲಯವನ್ನು ಸಿ ವಲಯದಿಂದ.....

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಮಂತ್ರಿಗಳೇ, nothing wrong.

**ಸಭಾಪತಿಯವರು:–** ನೀವು ಇಂಗ್ಲಿಷ್‌ನಲ್ಲಿರುವುದನ್ನು ಒಪ್ಪಿಕೊಳ್ಳುತ್ತೀರೋ ಕನ್ನಡದಲ್ಲಿರುವುದನ್ನು ಒಪ್ಪಿಕೊಳ್ಳುತ್ತೀರೋ ಎಂದು ಕೇಳುತ್ತಿದ್ದಾರೆ.

**ಶ್ರೀ ಸಿ.ಟಿ. ರವಿ:–** ಇಂಗ್ಲಿಷ್‌ನಲ್ಲಿರುವುದನ್ನು ಒಪ್ಪಿಕೊಳ್ಳುತ್ತೇವೆ.

**Sri M.C. NANAIAH:-** Which is the original Bill and which is the translated Bill?

**ಶ್ರೀ ಸಿ.ಟಿ. ರವಿ:–** ಇಂಗ್ಲಿಷ್‌ನಲ್ಲಿರುವುದು original. ಅದು ಆಮೇಲೆ ಕನ್ನಡಕ್ಕೆ translate ಆಗಿದೆ.

**Sri M.C. NANAIAH:–** ಕನ್ನಡ ಬಿಲ್ Translated Bill ಆಗಿರುವುದರಿಂದ ಅದನ್ನು ಮಾಡಿಕೊಡಬಹುದು. Original Bill ನಲ್ಲಿ ಸರಿ ಇದ್ದರೆ ಅದೇ Original Bill ಆಗಬೇಕು. ಪುನಃ ಬದಲಾವಣೆ ಮಾಡುವುದಕ್ಕೆ ಹೋಗಬೇಡಿ. Translated Bill ನಲ್ಲಿದ್ದರೆ, it is a mistake. But you should correct that.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಇದೊಂದು ಸಿಸ್ಟಮ್ ಕ್ರಿಯೇಟ್ ಮಾಡುವುದಕೋಸ್ಕರ, ನಮ್ಮಲ್ಲಿ ಬಹಳ ಗೊಂದಲಗಳಿವೆ. 81 ಪಾಲಿಟೆಕ್ನಿಕಲ್ ಕಾಲೇಜುಗಳು, 14 ಇಂಜಿನಿಯರಿಂಗ್ ಕಾಲೇಜುಗಳಿವೆ. 25 ಕಿಲೋಮೀಟರ್ ಒಳಗಡೆ ನಾವು ಮಾಡಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ನಮ್ಮ ಹತ್ತಿರ ಇರುವಂಥದ್ದರೊಳಗಡೆ ನಾವು ವರ್ಗಾವಣೆ ಮಾಡಬೇಕು. 25 ಕಿಲೋಮೀಟರ್ ಒಳಗಡೆ ನಿಯೋಜನೆ ಮಾಡಬೇಕು ಎಂದರೆ ನಮಗೆ ಎಲ್ಲಿ ಹತ್ತಿರದ ಸ್ಥಳದಲ್ಲಿ ನಿಯೋಜನೆ ಮಾಡುವುದಕ್ಕೆ ಸಾಧ್ಯವಿದೆ ಅಲ್ಲಿ ಮಾಡಬಹುದು. 25 ಕಿಲೋಮೀಟರ್ ಎಂದು ನಿಬಂಧನೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಇಡೀ ರಾಜ್ಯದಲ್ಲಿ 81 ಪಾಲಿಟೆಕ್ನಿಕ್ ಕಾಲೇಜುಗಳು, 14 ಇಂಜಿನಿಯರ್ ಕಾಲೇಜುಗಳಿವೆ. ಅದರಲ್ಲಿ ವೈದ್ಯಕೀಯ

ಸಹಾಯ ಬೇಕಾದವರಿಗೆ ಹತ್ತಿರದಲ್ಲಿ ಏನಿದೆ ಅದನ್ನು ಮಾಡಿಕೊಡುವಂತಹ ಕೆಲಸ ಮಾಡಬಹುದು. ಮತ್ತು ಅಲ್ಲಿರುವಂತಹ ಅವಕಾಶವನ್ನು ಲಭ್ಯತೆ ಆಧರಿಸಿ.....

**ಶ್ರೀ ಬಸವರಾಜ ಹೊರಟ್ಟಿ:–** ಹೊಸ ನೇಮಕಾತಿಯನ್ನು ಮಾಡುತ್ತೀರಿ. 'ಸಿ' ವಲಯಕ್ಕೆ ಕಳುಹಿಸುತ್ತೀರಿ. ಅವನು ವರ್ಗಾವಣೆಗೆ ಅರ್ಜಿಯನ್ನು ಹಾಕಬೇಕಾದರೆ ಕನಿಷ್ಟ ಎಷ್ಟು ವರ್ಷ ಸರ್ವೀಸ್ ಆಗಿರಬೇಕೆಂದು ಮಾಡಿದ್ದೀರಿ?

**ಶ್ರೀ ಸಿ.ಟಿ. ರವಿ:–** ನಾಲ್ಕು ವರ್ಷ ಆಗಿರಬೇಕು. ರೂಲ್ಸ್‌ನಲ್ಲಿ ಉಳಿದ ವಿವರಗಳನ್ನು ಕೊಡುತ್ತೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2012ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಪರ್ಯಾಲೋಚಿಸುವುದು"

ತಿದ್ದುಪಡಿಯೊಂದಿಗೆ ಎಂದು ಏಕೆ ಹೇಳುತ್ತಿದ್ದೇನೆಂದರೆ, Original Bill ನಲ್ಲಿ 8 ಎಂದು ಇದೆ. ಅದನ್ನು 10 ಎಂದು ತಿದ್ದುಪಡಿ ಮಾಡಲಾಗಿದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 18ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 18ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 18ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2012ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“2012ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## 9. ಪ್ರಕಟಣೆ

**ಸಭಾಪತಿಯವರು:–**

**ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯ ದಿನಾಂಕ:12.12.2012 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಈ ಕೆಳಕಂಡ ವಿಧೇಯಕಗಳನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕ, 2012
2. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2012
3. ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2012
4. ದಯಾನಂದ ಸಾಗರ ವಿಶ್ವವಿದ್ಯಾಲಯ ವಿಧೇಯಕ, 2012
5. ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2012
6. ಶ್ರೀ ದೇವರಾಜ್ ಅರಸ್ ವಿಶ್ವವಿದ್ಯಾಲಯ ವಿಧೇಯಕ, 2012
7. ವೆಲ್ಲೂರು ತಾಂತ್ರಿಕ ಸಂಸ್ಥೆ, ಬೆಂಗಳೂರು ವಿಧೇಯಕ, 2012
8. ಅರ್ಕ ವಿಶ್ವವಿದ್ಯಾಲಯ ವಿಧೇಯಕ, 2012

## 10. ಗಮನ ಸೆಳೆಯುವ ಸೂಚನೆಗಳು

### (ಅ) ಬೆಳ್ತಂಗಡಿ ತಾಲ್ಲೂಕು ಪೋಲೀಸ್ ಠಾಣಾ ಸರಹದ್ದಿನಲ್ಲಿ ಉಜಿರೆ ಎಸ್.ಡಿ.ಎಂ. ಕಾಲೇಜಿನ ವಿದ್ಯಾರ್ಥಿ ಸೌಜನ್ಯ ಇವರ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿರುವ ಬಗ್ಗೆ –

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಂಗಳೂರು ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ಪೋಲೀಸ್ ಠಾಣಾ ಸರಹದ್ದಿನಲ್ಲಿ ಉಜಿರೆ ಎಸ್.ಡಿ.ಎಂ. ಕಾಲೇಜಿನ ವಿದ್ಯಾರ್ಥಿ ಸೌಜನ್ಯ ಇವರ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿರುವ ಕುರಿತು ಮಾನ್ಯ ಉಪ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೆ, ಶ್ರೀಮತಿ ಮೋಟಮ್ಮನವರು ಗಮನವನ್ನು ಸೆಳೆದಿರುವ ವಿಚಾರದ ಬಗ್ಗೆ ನನ್ನ ಉತ್ತರ ಈ ರೀತಿ ಇದೆ.

(ಈ ಹಂತದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು ಸಭಾ ಪೀಠವನ್ನು ಅಲಂಕರಿಸಿದರು)

ಶ್ರೀ ಚಂದಪ್ಪ ಗೌಡ ಬಿನ್ ಪೂವಣಿ ಗೌಡ, ವಾಸ. ಪಾಂಗಾಲ, ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲ್ಲೂಕು ಇವರ ಮಗಳಾದ ಕು : ಸೌಜನ್ಯ, ವಯಸ್ಸು 17 ವರ್ಷ, ಇವಳು ಉಜಿರೆ ಎಸ್‌ಡಿಎಂ ಕಾಲೇಜಿನಲ್ಲಿ ಎರಡನೇ ವರ್ಷದ ಪಿ.ಯು.ಸಿ ವಿಧ್ಯಾರ್ಥಿನಿಯಾಗಿದ್ದು ಆಕೆ ಎಂದಿನಂತೆ ದಿನಾಂಕ 09–10–2012 ರಂದು ಬೆಳಿಗ್ಗೆ ಮನೆಯಿಂದ ಉಜಿರೆ ಕಾಲೇಜಿಗೆ ಹೋಗಿದ್ದು, ಸಂಜೆ ಕಾಲೇಜು ಬಿಟ್ಟು ಬಸ್ಸಿನಲ್ಲಿ ವಾಪಸು ತನ್ನ ಮನೆಗೆ ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದಲ್ಲಿ ಸಂಜೆ 4–15 ಗಂಟೆಗೆ ಬಸ್ಸಿನಿಂದ ಇಳಿದು ಮನೆ ಕಡೆಗೆ ನಡೆದುಕೊಂಡು ಹೋಗುತ್ತಿದ್ದವಳನ್ನು ಆಕೆಯ ಮಾವ ವಿಠಲ ಎಂಬುವರು ನೋಡಿರುತ್ತಾರೆ. ಸೌಜನ್ಯ ಆ ಬಳಿಕ ಮನೆಗೆ ಬಾರದೆ ಕಾಣೆಯಾಗಿರುತ್ತಾಳೆ ಎಂದು ಆಕೆಯ ತಂದೆ ಶ್ರೀ. ಚಂದಪ್ಪ ಗೌಡರವರು ದಿ : 09–10–12 ರಂದು 22–30 ಘಂಟೆಗೆ ಬೆಳ್ತಂಗಡಿ ಪೊಲೀಸ್ ಠಾಣೆಗೆ

ಹಾಜರಾಗಿ ದೂರು ನೀಡಿದ್ದು, ಈ ಬಗ್ಗೆ ಠಾಣೆಯಲ್ಲಿ ಮೊ.ಸಂ. 250/2012 ಕಲಂ: ಹುಡುಗಿ ಕಾಣೆಯಾದ ಬಗ್ಗೆ ಪ್ರಕರಣ ದಾಖಲಿಸಲಾಗಿರುತ್ತದೆ.

ಮರು ದಿನ ದಿ : 10–10–12 ರಂದು ಆಕೆಯ ಸಂಬಂಧಿಕರು, ಊರಿನವರು ಮತ್ತು ಪೊಲೀಸರು ಹುಡುಕಾಟ ನಡೆಸುತ್ತಿದ್ದಾಗ ಬೆಳ್ತಂಗಡಿ ತಾಲ್ಲೂಕು ಧರ್ಮಸ್ಥಳ ಗ್ರಾಮದ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರದ ಬಳಿ ಇರುವ ಮಣ್ಣಸುಂಕ ಎಂಬಲ್ಲಿ ಆಕೆಯ ಮೃತ ದೇಹವು 12–30 ಘಂಟೆಗೆ ಪತ್ತೆಯಾಗಿರುತ್ತದೆ.

ಆಕೆಯನ್ನು ಯಾರೋ ದುಷ್ಕರ್ಮಿಗಳು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಆಕೆಯ ಇಚ್ಚೆಗೆ ವಿರುದ್ಧವಾಗಿ ಬಲತ್ಕಾರವಾಗಿ ಅತ್ಯಾಚಾರ ನಡೆಸಿ ಕೊಲೆ ಮಾಡಿರುತ್ತಾರೆ ಹಾಗೂ ಮೃತ ಶರೀರವು ಧರ್ಮಸ್ಥಳ ಬೆಳ್ತಂಗಡಿ ರಸ್ತೆಯ ಪಶ್ಚಿಮ ಭಾಗದಲ್ಲಿ ನೀರು ಹರಿದು ಹೋಗುವ ತೋಡಿನ ಸಮೀಪ ಮಣ್ಣಸಂಕ ಎಂಬಲ್ಲಿ ಕಾಡು ಗಿಡಗಳಿರುವ ಪ್ರದೇಶದಲ್ಲಿ ಮರವೊಂದರ ಬುಡದ ಬಳಿ ಇರುವುದಾಗಿ ಮೃತಳ ಸಂಬಂಧಿ ಜಗದೀಶರವರು ಸ್ಥಳದಲ್ಲಿ ನೀಡಿದ ಫಿರ್ಯಾದನ್ನು 13.30 ಗಂಟೆಗೆ ಪಿಎಸ್‌ಐ ಬೆಳ್ತಂಗಡಿ ರವರು ಸ್ವೀಕರಿಸಿ ಬೆಳ್ತಂಗಡಿ ಪೊಲೀಸ್ ಠಾಣೆ ಮೊ.ಸಂ. 250/2012 ಕಲಂ : ಹುಡುಗಿ ಕಾಣೆ ಪ್ರಕರಣವನ್ನು ಕಲಂ : 376, 302 ಐ.ಪಿ.ಸಿಯಂತೆ ಪರಿವರ್ತಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿರುತ್ತದೆ.

ಈ ಪ್ರಕರಣವು ಗಂಭೀರ ಪ್ರಕರಣವಾದ್ದರಿಂದ ದುಷ್ಕರ್ಮಿಗಳ ಪತ್ತೆಗೆ ಎಸ್‌ಪಿ. ದಕ್ಷಿಣ ಕನ್ನಡ ಜಿಲ್ಲೆ ರವರು ಡಿ.ವೈ.ಎಸ್.ಪಿ ಡಿಸಿಆರ್‌ಬಿ, ಅವರ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿ ಆರೋಪಿಯ ಪತ್ತೆಗೆ ಪ್ರಯತ್ನಿಸಲಾಗಿದೆ.

ಈ ಪ್ರಕರಣದ ಆರೋಪಿಗಳ ಪತ್ತೆಗೆ ಪ್ರಯತ್ನಿಸುತ್ತಿರುವಾಗ, ದಿನಾಂಕ : 11/10/2012 ರಂದು ರಾತ್ರಿ ಹೊತ್ತಿನಲ್ಲಿ ಧರ್ಮಸ್ಥಳದ ಗೊಮ್ಮಟ ಬೆಟ್ಟದ ಪ್ರವೇಶ ದ್ವಾರದ ಬಳಿ ಶ್ರೀ ಕ್ಷೇತ್ರ ಧರ್ಮಸ್ಥಳದ ಸಿಬ್ಬಂದಿಗಳಾದ ಶಿವಪ್ಪ ಮಲೆಕುಡಿಯ, ಮಲ್ಲಿಕ್ ಜೈನ್, ರವಿ ಪೂಜಾರಿ, ಗೋಪಾಲಕೃಷ್ಣ ಗೌಡ, ಅಶ್ರಿತ್ ಜೈನ್‌ರವರುಗಳು ಅನುಮಾನಾಸ್ಪದವಾಗಿ ನಿಂತಿದ್ದ ಸಂತೋಷ ರಾವ್,

ಪ್ರಾಯ : 34 ವರ್ಷ, ತಂದೆ : ಸುಧಾಕರ ರಾವ್ ವಾಸ : ಶ್ರೀ ನವದುರ್ಗಾ ಪ್ರಸಾದ್, ಹೌಸಿಂಗ್ ಬೋರ್ಡ ಕಾಲೋನಿ ಬಳಿ, ಕುಕ್ಕುಂದೂರು ಗ್ರಾಮ. ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ ಎಂಬುವನನ್ನು ಹಿಡಿದು ಥಳಿಸಿ ಸಾರ್ವಜನಿಕರೊಂದಿಗೆ ಬೆಳ್ತಂಗಡಿ ಠಾಣೆಗೆ ಒಪ್ಪಿಸಿರುತ್ತಾರೆ.

ಸಾರ್ವಜನಿಕರು ಧರ್ಮಸ್ಥಳದಲ್ಲಿ ಹಿಡಿದು ಪೊಲೀಸ್ ಹೊರ ಠಾಣೆಗೆ ಕರೆತರುವ ಸಮಯ ಜನರ ಗುಂಪು ಸೇರಿ ಆರೋಪಿಗೆ ಥಳಿಸಿದ್ದು ಈ ಸಮಯ ಕರ್ತವ್ಯದಲ್ಲಿದ್ದ ವೇಣೂರು ಠಾಣಾ ಪಿಎಸ್ಐ., ಮತ್ತು ಸಿಬ್ಬಂದಿಗಳು ತಡೆಯಲು ಪ್ರಯತ್ನಿಸಿದ ವೇಳೆ ಉದ್ರಿಕ್ತ ಸೇರಿದ ಜನರು ಕರ್ತವ್ಯಕ್ಕೆ ಅಡ್ಡಿ ಪಡಿಸಿ ಇಲಾಖಾ ಜೀಪನ್ನು ಜಖಂಗೊಳಿಸಿರುತ್ತಾರೆ. ಈ ಬಗ್ಗೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಮೊ.ಸಂ. : 256/2012 ಕಲಂ : 143, 147, 353, 427, ಜತೆಗೆ 149 ಐ.ಪಿ.ಸಿ ಮತ್ತು ಕಲಂ 2(ಬಿ) karnataka prevention of destruction and loss of property Act ರಂತೆ ಪ್ರಕರಣ ದಾಖಲಾಗಿರುತ್ತದೆ.

ತದನಂತರ ಸಾರ್ವಜನಿಕರು ಅನುಮಾನಾಸ್ಪದ ವ್ಯಕ್ತಿ ಸಂತೋಷ ರಾವ್, ಬೆಳ್ತಂಗಡಿ ಠಾಣೆಗೆ ಒಪ್ಪಿಸುವಾಗ ಸುಮಾರು 40 ರಿಂದ 50 ಮಂದಿ ಹಿಂದೂ ಜಾಗರಣ ವೇದಿಕೆಯ ಮತ್ತು ಭಜರಂಗ ದಳದವರು ಬೆಳ್ತಂಗಡಿ ಠಾಣೆಯ ಮುಂದೆ ಜಮಾಯಿಸಿ ಸಾರ್ವಜನಿಕರು ಹಿಡಿದುಕೊಟ್ಟ ಆರೋಪಿಯನ್ನು ತಮ್ಮ ವಶಕ್ಕೆ ನೀಡಬೇಕು. ನಾವೇ ಅವನನ್ನು ಕೊಂದು ಬಿಡುತ್ತೇವೆ, ಎಂದು ಪಟ್ಟು ಹಿಡಿದು ಠಾಣೆಗೆ ಮುತ್ತಿಗೆ, ಹಾಕಿರುತ್ತಾರೆ ಹಾಗೂ ಠಾಣೆಯಲ್ಲಿ ಹಾಗೂ ಇಲಾಖಾ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಈ ಕುರಿತು ಬೆಳ್ತಂಗಡಿ ಠಾಣಾ ಮೊ.ಸಂ. 255/2012 ಕಲಂ : 143, 147, 506, 353 ಜೊತೆಗೆ 149 ಐ.ಪಿ.ಸಿ.ಯಂತೆ ಪ್ರಕರಣ ದಾಖಲಾಗಿರುತ್ತದೆ.

ಸಾರ್ವಜನಿಕರು ಹಿಡಿದುಕೊಟ್ಟು ಆರೋಪಿ ಸಂತೋಷನನ್ನು ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಚಾರಿಸಲಾಗಿದ್ದು ಈತನು ಸಮರ್ಪಕವಾದ ಮಾಹಿತಿ ಹಾಗೂ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀಡದೇ ಇದ್ದುದರಿಂದಲೂ, ಆತನ ಮೈಮೇಲೆ ಗಾಯಗಳ ಗುರುತು ಕಂಡು

ಬಂದಿದ್ದರಿಂದ ಆತನನ್ನು ಸ್ಥಳೀಯ ಬೆಳ್ತಂಗಡಿ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿಯವರ ಮುಂದೆ ಹಾಜರುಪಡಿಸಿ ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯ್ತು. ಮತ್ತು ಆ ಬಗ್ಗೆ ವೈದ್ಯಾಧಿಕಾರಿಯವರು ನೀಡಿದ ದೃಢ ಪತ್ರವನ್ನು ಪಡೆದುಕೊಂಡಿದ್ದು, ಆರೋಪಿಯು ಸಂಭೋಗ ಕ್ರಿಯೆ ನಡೆಸಲು ಸಮರ್ಥನಿರುತ್ತಾನೆ ಮತ್ತು ಆತನ ಮರ್ಮಾಂಗದಲ್ಲಿ ಹಾಗೂ ಇತರೆ ಭಾಗಗಳಲ್ಲಿ ತರಚಿದ ಹಾಗೂ ಗೀರಿದ ನಮೂನೆಯ ಗಾಯಗಳು ಇರುವುದಾಗಿ ಗುರುತಿಸಿ ದೃಢೀಕರಿಸಿರುತ್ತಾರೆ.

ಆರೋಪಿಯನ್ನು ಕೂಲಂಕುಶವಾಗಿ ವಿಚಾರಿಸಿದಾಗ ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿರುವುದು ಕಂಡು ಬಂತು. ಮೃತೆ ಕು.ಸೌಜನ್ಯಳ ಮಾವನಾದ ವಿಠಲ ಗೌಡ ಎಂಬುವರು ಹಾಜರಿದ್ದು, ಸದ್ರಿಯವರ ಸಮ್ಮುಖದಲ್ಲಿ ವಿಚಾರಣೆಯನ್ನು ಮಾಡಲಾಗಿರುತ್ತದೆ. ಆರೋಪಿಯ ವಿಚಾರಣೆಯಿಂದ ಆರೋಪಿಯು ದ್ವಿತಿಯ ಪಿ.ಯು.ಸಿ. ಯವರೆಗೆ ಶಾಲೆಗೆ ಹೋಗಿ ವಿದ್ಯಾಭ್ಯಾಸವನ್ನು ಅಪೂರ್ಣಗೊಳಿಸಿ ಡಿಪ್ಲೋಮಾ ವಿದ್ಯಾರ್ಥಿಯಾಗಿದ್ದು, ಕರಾಟೆ ಮಾರ್ಷಲ್‌ಆರ್ಟ್ಸ್–black belt ಶ್ರೇಣಿಯನ್ನು ಹೊಂದಿದ್ದು, ಶಿವಮೊಗ್ಗ ಮಾನಸ ಆಸ್ಪತ್ರೆಯಲ್ಲಿ ಮಾನಸಿಕ ಅಸ್ವಸ್ಥೆಯ ಬಗ್ಗೆ ಚಿಕಿತ್ಸೆ ಪಡೆದುಕೊಂಡಿರುತ್ತಾನೆಂದು ತಿಳಿದು ಬಂತು. ಅದರಂತೆ ಆರೋಪಿಯು ಮಾನಸಿಕ ಅಸ್ವಸ್ಥತೆ ಇರುವ ಬಗ್ಗೆ ಶಿವಮೊಗ್ಗದ ಮಾನಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವ ದಾಖಲೆಗಳ ಪ್ರತಿಯನ್ನು ತರಿಸಿಕೊಂಡು ಪರಿಶೀಲಿಸಿದಾಗ, ಆರೋಪಿ ಸಂತೋಷ ರಾವ್ 2006ನೇ ಇಸವಿಯಿಂದ ಮಾನಸಿಕ ಅಸ್ವಸ್ಥತೆಗೆ ಚಿಕಿತ್ಸೆ ಪಡೆದಿದ್ದು, ಸದ್ರಿಯವನಿಗೆ ಚಿಕಿತ್ಸೆ ನೀಡಿದ ವೈದ್ಯರು ಆರೋಪಿಯ ಬಗ್ಗೆ 'ABUSIVE, ASSAULTIVE, AGGRESSIVE, SUSPICIOUS, FEAR INSOMNIA, WANDERING, LOSS OF MEMORY ಇತ್ಯಾದಿ ಅಸ್ವಸ್ಥತೆಯನ್ನು ವಿಶ್ಲೇಷಿಸಿ ನಮೂದಿಸಿರುತ್ತಾರೆ. ಆರೋಪಿಯು ಮಾನಸಿಕ ಅಸ್ವಸ್ಥನಂತೆ ಇರುವುದು ಕಂಡುಬಂದಂತೆ ಸದ್ರಿಯವನನ್ನು ಆತನ ತಂದೆ ಮತ್ತು ಚಿಕ್ಕಪ್ಪನವರ ಜೊತೆಯಲ್ಲಿಯೇ ಮಂಗಳೂರಿನ ಕೆ.ಎಸ್. ಹೆಗ್ಡೆ ಮೆಡಿಕಲ್ ಕಾಲೇಜಿನ

ಮಾನಸಿಕ ತಜ್ಞರಾದ ಡಾ॥ ಮಹಾಬಲ ಶೆಟ್ಟಿ ರವರ ಮುಂದೆ ಹಾಜರುಪಡಿಸಿ, ಸಂತೋಷನು ಲೈಂಗಿಕನಾಗಿ ಸಶಕ್ತನೇ? ಅಥವಾ ಲೈಂಗಿಕ ಕ್ರಿಯೆ ನಡೆಸಲು ಸಮರ್ಥನಿರುತ್ತಾನೆಯೇ? ಆತನ ಪೂರ್ಣ ಪ್ರಮಾಣದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಅಭಿಪ್ರಾಯ ವರದಿ ಒದಗಿಸಲು ಕೋರಲಾಗಿತ್ತು. ಆರೋಪಿ ಸಂತೋಷ ರಾವ್ ನನ್ನು ವೈದ್ಯಕೀಯ ತಪಾಸಣೆ ನಡೆಸಿದ ನಂತರ ತಜ್ಞರ ಸಲಹೆಯಂತೆ ಆರೋಪಿ ಸಂತೋಷ ರಾವ್ ನನ್ನು ಮಾನಸಿಕ ತಜ್ಞರ ಸುಭದ್ರಿಕೆಯಲ್ಲಿ 24 ಗಂಟೆಗಳ ಕಾಲ ನಿಗಾ ಇರಿಸಲಾಯಿತು ಮತ್ತು ವೈದ್ಯಕೀಯ ದೃಢಪತ್ರವನ್ನು ಪಡೆದುಕೊಂಡಿದ್ದು ಅದರಲ್ಲಿ Penis : A red colored contusion around the external urethral orifice was present. Phimosis was present. (Retraction of preputial skin was difficult), ಮತ್ತು Injury number 1 to 11 time since 48 to 72 hours, i am of the opinion that there is nothing to suggest that Mr. Santhosh Rao is incapable of performing sexual intercourse. ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ದಿನಾಂಕ : 13/10/2012 ರಂದು ಮುಂದುವರಿದು ವಿಚಾರಣೆಗೆ ಒಳಪಡಿಸಿದಾಗ ಆರೋಪಿಯು ತಾನು 4–5 ದಿನಗಳ ಹಿಂದೆ ಧರ್ಮಸ್ಥಳದಲ್ಲಿ ಒಂದು ಹುಡುಗಿಯನ್ನು ಕಾಡಿಗೆ ಎಳೆದುಕೊಂಡು ಹೋಗಿ ಆಕೆಯೊಂದಿಗೆ ಬಲತ್ಕಾರ ಸಂಭೋಗ ಮಾಡಿ, ನಂತರ ಕತ್ತು ಹಿಸುಕಿ ಕೊಂದು ಬಿಟ್ಟು ಬಂದಿರುತ್ತೆನೆಂದೂ, ಆ ಸ್ಥಳವನ್ನೂ ತೋರಿಸುತ್ತೇನೆಂದು ಆರೋಪಿಯು ಸ್ವ-ಇಚ್ಛಾ ಹೇಳಿಕೆಯಲ್ಲಿ ತಿಳಿಸಿದ್ದು, ಆರೋಪಿಯು ಸ್ವ-ಇಚ್ಛಾ ಹೇಳಿಕೆಯಂತೆ ತನಿಖಾಧಿಕಾರಿಯನ್ನು ಮತ್ತು ಪಂಚರೊಂದಿಗೆ ಆರೋಪಿಯು ಸೂಚಿಸಿದಂತೆ ಹೆಣವು ದೊರೆತ ಸ್ಥಳವನ್ನು ಖಚಿತವಾಗಿ ತೋರಿಸಿ ಕೊಟ್ಟಿರುತ್ತಾನೆ. ನಂತರ ಅರೋಪಿಯು ಕೃತ್ಯ ನಡೆಸಿದ ಸ್ಥಳದ ಪಶ್ಚಿಮದಲ್ಲಿ ಕಾಡು ಗಿಡ ಪೊದರುಗಳ ಮಧ್ಯೆ ಕರೆದುಕೊಂಡು ಹೋಗಿ ಒಂದು ಪಾಲಿಥಿನ್ ಚೀಲದೊಳಗೆ ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿಟ್ಟಿದ್ದ ಬಟ್ಟೆ ಬರೆಗಳನ್ನು, ನಗದು ಇರಿಸಿದ್ದನ್ನು ತೋರಿಸಿ ತೆಗೆದು ಹಾಜರುಪಡಿಸಿರುತ್ತಾನೆ. ಪಂಚರ ಸಮಕ್ಷಮ ಚೀಲವನ್ನು

ಪರೀಶೀಲಿಸಲಾಗಿ ಆರೋಪಿಯು 3 ಹಳೆಯ ಅಂಗಿಗಳು ಮತ್ತು ಒಂದು ಪಂಚೆಯನ್ನು ಪಂಚರ ಸಮಕ್ಷಮ ಮಹಜರು ಬರೆಸಿ ಸ್ವಾಧೀನ ಪಡಿಸಲಾಗಿದೆ.

ಈವರೆಗೆ ನಡೆಸಿದ ತನಿಖೆಯಲ್ಲಿ ಘಟನಾ ದಿನಾಂಕ ದಂದು ಮತ್ತು ತಕ್ಷೀರು ಸ್ಥಳದ ಪಕ್ಕದಲ್ಲಿ ಆರೋಪಿ ಸಂತೋಷ ರಾವ್‌ನು ನಿಂತಿರುವುದನ್ನು ನೋಡಿದ ಇಬ್ಬರು ಪ್ರತ್ಯಕ್ಷ ಸಾಕ್ಷೀದಾರರಾದ ಗೋಪಾಲ ಮತ್ತು ಹರೀಶ ಎಂಬುವರುಗಳು ಆರೋಪಿಯನ್ನು ನೋಡಿ ಗುರುತಿಸಿ ನೀಡಿರುವ ಹೇಳಿಕೆಯಿಂದ ಸ್ಥಳೀಯ ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯ ವೈದ್ಯರಾದ ಡಾ|| ಆದಂ ಮತ್ತು ಮಂಗಳೂರಿನ ಕೆ.ಎಸ್. ಹೆಗ್ಡೆ ಮೆಡಿಕಲ್ ಕಾಲೇಜಿನ ತಜ್ಞ ವೈದ್ಯರಾದ ಡಾ|| ಮಹಾಬಲ ಶೆಟ್ಟಿ ರವರು ನೀಡಿದ ವೈದ್ಯಕೀಯ ದೃಢಪತ್ರದಿಂದ, ಸಂತೋಷನಿಗೆ ಶಿವಮೊಗ್ಗ ಮಾನಸ ಆಸ್ಪತ್ರೆ ವೈದ್ಯರು ಚಿಕಿತ್ಸೆ ನೀಡಿ ಆತನ ಮಾನಸಿಕ ಖಾಯಿಲೆ ಬಗ್ಗ ವಿಶ್ಲೇಸಿರುವ ರೀತಿಯಿಂದಲೂ ಮತ್ತು ಆರೋಪಿ ಸಂತೋಷನೇ ಕೃತ್ಯ ನಡೆದ ಸ್ಥಳವನ್ನು ತೋರಿಸಿ ಕೊಟ್ಟಿದ್ದರಿಂದಲೂ ಆರೋಪಿ ಸಂತೋಷರಾವ್ ಒರ್ವನೇ ಈ ಕೃತ್ಯವನ್ನು ನಡೆಸಿರುವುದು ಪುಷ್ಟಿಕರಿಸಿದ್ದರಿಂದ ಆರೋಪಿ ಸಂತೋಷನನ್ನು ದಿನಾಂಕ : 13/10/2012 ರಂದು ದಸ್ತಗಿರಿ ಮಾಡಿ ಮಾನ್ಯ ಬೆಳ್ತಂಗಡಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ದಿನಾಂಕ: 14/10/2012 ರಂದು ಹಾಜರುಪಡಿಸಿದ್ದು ನ್ಯಾಯಾಂಗ ಬಂಧನದಲ್ಲಿರುತ್ತಾನೆ.

ತನಿಖೆಯಲ್ಲಿ ನೈಪುಣ್ಯತೆಯನ್ನು ತರಲು ಹಾಗೂ ವೈಜ್ಞಾನಿಕವಾಗಿ ಭೌತಿಕ ಸಾಕ್ಷ್ಯವನ್ನು ಕಲೆ ಹಾಕಲು ಆರೋಪಿ ಸಂತೋಷರಾವ್‌ನ ರಕ್ತದ ಮಾದರಿಯನ್ನು ಮಾನ್ಯ ನ್ಯಾಯಾಲಯದ ಸಮಕ್ಷಮ ಸಂಗ್ರಹಿಸಿ, ತನಿಖೆ ವೇಳೆ ಸ್ವಾಧೀನಪಡಿಸಿದ ಸೋತ್ತುಗಳು ಹಾಗೂ ವೈದ್ಯರು ಸಂಗ್ರಹಿಸಿದ pubic hair, nail clipping, vaginal swab, blood sample ಮತ್ತು ಆರೋಪಿ ಸಂತೋಷರಾವ್‌ನ pubic hair ಸೊತ್ತುಗಳೊಂದಿಗೆ ಡಿ.ಎನ್.ಎ. ವಿಶ್ಲೇಷಣೆಗಾಗಿ ಮತ್ತು ಸ್ವಾಧೀನಪಡಿಸಿಕೊಂಡ ಮೇಲ್ಕಾಣಿಸಿದ ಸೊತ್ತುಗಳು ಆರೋಪಿತನ ಅಥವಾ ಮೃತ ಸೌಜನ್ಯಳೊಂದಿಗೆ ಹೋಲಿಕೆಯಾಗುತ್ತದೆಯೇ? ಇಲ್ಲವೇ? ಎಂಬ ಉದ್ದೇಶದಿಂದ ಸದ್ರಿ ಸೊತ್ತುಗಳನ್ನು ವಿಧಿ ಪ್ರಯೋಗಾಲಯ,

ಬೆಂಗಳೂರು ರವರಿಗೆ ದಿನಾಂಕ:20/10/2012 ರಂದು ಕಳುಹಿಸಲಾಗಿದೆ. ವರದಿ ಬಾಕಿಯಿರುತ್ತದೆ.

ಈ ಪ್ರಕರಣದಲ್ಲಿ ಸ್ಥಳೀಯ ಪೊಲೀಸರು ತನಿಖೆಯನ್ನು ನಿಷ್ಪಕ್ಷಪಾತವಾಗಿ ಮಾಡಿರುತ್ತಾರೆ.

ಆದಾಗ್ಯೂ ಪಿರ್ಯಾದುದಾರರಾದ ಕು: ಸೌಜನ್ಯಳ ತಂದೆ ಚಂದಪ್ಪಗೌಡ, ಸಂಘ ಸಂಸ್ಥೆಗಳು ಮತ್ತು ವಿವಿಧ ರಾಜಕೀಯ ಪಕ್ಷಗಳು ಮಾನಸಿಕ ಅಸ್ವಸ್ಥ ಸಂತೋಷರಾವ್ ಈ ಕೃತ್ಯ ಎಸಗಲು ಸಾಧ್ಯವಿರುವುದಿಲ್ಲ ಮತ್ತು ಇಂತಹ ಪ್ರಕರಣದಲ್ಲಿ ಒಬ್ಬರಿಗಿಂತ ಹೆಚ್ಚಿನ ಜನರಿಂದ ಮಾತ್ರ ಮಾಡಲು ಸಾಧ್ಯವೆಂದು ಮತ್ತು ಈ ಪ್ರಕರಣದಲ್ಲಿ ಪೊಲೀಸರ ತನಿಖೆಯನ್ನು ಸೂಕ್ತ ರೀತಿಯಲ್ಲಿ ಮಾಡಿಸಬೇಕು ಅದಕ್ಕಾಗಿ ಪ್ರಕರಣವನ್ನು ಸಿ.ಐ.ಡಿಗೆ ವಹಿಸಬೇಕೆಂದು ಕೋರಿದ್ದರ ಮೇರೆಗೆ ದಿನಾಂಕ:28-11-2012 ರಂದು ಬೆಳ್ತಂಗಡಿ ಪೊಲೀಸ್ ಠಾಣೆ ಮೊ.ಸಂ. 250/2012 ಕಲಂ : 376, 302 ಐ.ಪಿ.ಸಿ ಪ್ರಕರಣವನ್ನು ಮುಂದಿನ ತನಿಖೆಗಾಗಿ ಡಿಜಿಪಿ, ಸಿಐಡಿ, ಬೆಂಗಳೂರು ರವರಿಗೆ ವಹಿಸಲಾಗಿರುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಇದು ನಿಯಮ 330ಕ್ಕೆ convert ಆಗಿದೆಯೇ?

**ವೈಸ್ ಛೇರ್ಮನ್:-** ಇಲ್ಲ. ಆದರೆ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕಲ್ಲವೇ? ನಾನು ನೋಡಿದ್ದೇನೆ. ಇದು ಗಮನ ಸೆಳೆಯುವ ಸೂಚನೆ ಆಗಿದೆ, ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಮಾನ್ಯ ಸಚಿವರೆ, ತಮ್ಮ ಹೇಳಿಕೆಯನ್ನು ಓದಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಮಾನ್ಯ ಸದಸ್ಯರು ತಮ್ಮ ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಲಿ. ನಂತರ ತಾವು ಉತ್ತರ ಕೊಡಿ.

**ಶ್ರೀ ಆರ್.ಅಶೋಕ್:-** ಆಯಿತು. ಮಾನ್ಯ ಸದಸ್ಯರು ಏನಾದರೂ ಕೇಳುವುದಿದ್ದರೆ ಕೇಳಲಿ. ನಾನು ನಂತರ ಅದಕ್ಕೆ ಉತ್ತರವನ್ನು ನೀಡುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ನಾನು ಬೆಳ್ತಂಗಡಿ ತಾಲ್ಲೂಕಿನ ಪಕ್ಕದ ತಾಲ್ಲೂಕಿನವಳು. ಈ ದುರ್ಘಟನೆ ದಿನಾಂಕ 10-10-12 ರಂದು ನಡೆದಿದೆ. ಸೌಜನ್ಯಳ ಕೊಲೆಯಾದ ಮರು ದಿವಸ ಮಧ್ಯಾಹ್ನ 12-30ಕ್ಕೆ ಈ ದೇಹ ಸಿಕ್ಕಿದೆ. ಇದಕ್ಕೆ ಮೊದಲು ಅವಳು ಕಾಣೆಯಾಗಿದ್ದಾಳೆಂದು ಅವರ ಮನೆಯವರು ದೂರನ್ನು ಕೊಟ್ಟಿದ್ದಾರೆ. ಊರಿನವರು ಮತ್ತು ಮನೆಯವರು ಕೂಡ ಹುಡುಕಿದ್ದಾರೆ. ಇವೆಲ್ಲವೂ ಆದ ನಂತರ ಆಕೆಯ ಮೃತದೇಹ ಸಿಕ್ಕಿದೆ. ಆದರೆ ಈ ಗೊಮ್ಮಟ ಬೆಟ್ಟದ ದ್ವಾರದ ಬಳಿ ನಿಂತಿದ್ದ ಒಬ್ಬನು ಅಸ್ವಸ್ಥನಾಗಿದ್ದ ಎಂದು ಹೇಳುತ್ತಾರೆ. ಧರ್ಮಸ್ಥಳದ ಸಿಬ್ಬಂದಿಗಳಾದ ಶಿವಪ್ಪ ಮಲೆಕುಡಿಯ, ಮಲ್ಲಿಕ್‌ಜೈನ್, ರವಿ ಪೂಜಾರಿ, ಗೋಪಾಲಕೃಷ್ಣಗೌಡ, ಆಶ್ರಿತ್ ಜೈನ್‌ರವರುಗಳು, ಶ್ರೀ ಸಂತೋಷ್ ರಾವ್ ಎಂಬ ಆತನನ್ನು ಅಲ್ಲಿಯೇ ಅನುಮಾನವಾಗಿ ಕಂಡು ಹಿಡಿದು ಇದಕ್ಕೆ ಇವನೇ ಕಾರಣ ಇರಬಹುದು ಎಂದು ಅವನನ್ನು ಪೋಲೀಸ್ ಠಾಣೆಗೆ ಕರೆದೊಯ್ದಾಗ ಆತನನ್ನು ಅವರು ವಿಚಾರಣೆ ಮಾಡುತ್ತಾರೆ. ಅದರ ಪ್ರಕಾರ ಅವನೇ ಆ ಒಂದು ಅತ್ಯಾಚಾರವನ್ನು ಎಸಗಿ ಕೊಲೆ ಮಾಡಿರುವ ಜಾಗವನ್ನು ತೋರಿಸುತ್ತಾನೆ ಎಂದು ಹೇಳಿ ಅವನ ಬಗ್ಗೆ ಪೂರ್ವಾಪರ ವಿಚಾರಗಳನ್ನು ಮಾಡಿದ್ದಾರೆ. ಆತನು ಉಡುಪಿ ಜಿಲ್ಲೆಯವನಾಗಿದ್ದು ಮಾನಸಿಕವಾಗಿ ಅಸ್ವಸ್ಥನಾಗಿದ್ದ ಆತನ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎಂದು ಹೇಳುವುದರ ಜೊತೆಯಲ್ಲಿ, ಅವನನ್ನು ತಪಾಸಣೆ ಮಾಡಿದ ವೈದ್ಯರು ಒಂದು ಸರ್ಟಿಫಿಕೇಟ್ ಅನ್ನು ನೀಡುತ್ತಾರೆ. ಇಷ್ಟೆಲ್ಲಾ ಅವನಿಗೆ ನೆನಪಿನ ಶಕ್ತಿ ಇರುವುದಿಲ್ಲ. ಎಲ್ಲಿ ಏನು ನಡೆಯಿತು, ಏನಾಯಿತು ಎಂದು ಹೇಳುವ ಶಕ್ತಿ ಇಲ್ಲವೆಂದು ಹೇಳಿದರೂ ಕೂಡ, ಈ ಕಾಮತೃಷೆ ತೀರಿಸಿಕೊಳ್ಳುವಷ್ಟು ಮಟ್ಟಿಗೆ ಆರೋಗ್ಯವಾಗಿದ್ದ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದೆಲ್ಲವೂ ಒಂದು ರೀತಿಯಲ್ಲಿ ಅನುಮಾನಕ್ಕೆ ಆಸ್ಪದ ಕೊಡುತ್ತದೆ. ಯಾರಿಗೆ ಬುದ್ಧಿ ಸ್ವಾಧೀನ ಇರುವುದಿಲ್ಲ ನೆನಪಿನ ಶಕ್ತಿ ಇರುವುದಿಲ್ಲ ಅಂಥಹವನು ಈ ಕೃತ್ಯಕ್ಕೆ ಯೋಗ್ಯನಾಗಿರುತ್ತಾನೆ ಎಂದು ವೈದ್ಯರು ನೀಡುವ ಪ್ರಮಾಣ ಪತ್ರ ಏನು ಇದೆ, ಇದು ಯಾವುದೇ ಒಬ್ಬ ಮಾನವೀಯ ಮೌಲ್ಯವುಳ್ಳ ವ್ಯಕ್ತಿ ಅಥವಾ ವೈದ್ಯರು ಹೇಳುವಂತಹ ಪದ ಅಲ್ಲವೆಂದು ನನಗೆ

ಅನ್ನಿಸುತ್ತದೆ. ಜೊತೆಗೆ ಈ ಒಂದು ಹೇಳಿಕೆ ಮತ್ತು ಈ ಒಂದು ಪ್ರಕರಣ ದಾಖಲಾದ ಮೇಲೆ ಇಡೀ ಬೆಳ್ತಂಗಡಿ ತಾಲ್ಲೂಕಿನ ಉಜಿರೆ ಗ್ರಾಮದ ಸಾಕಷ್ಟು ಸಾರ್ವಜನಿಕರು ದೊಡ್ಡ ಪ್ರಮಾಣದಲ್ಲಿ protest ಮಾಡಿದ್ದಾರೆ. ಇದರ ಹಿಂದೆ ಬೇರೆ ಯಾರಾದರೂ ಪ್ರಭಾವೀ ವ್ಯಕ್ತಿಗಳ ಕೈವಾಡ ಇದೆಯೇ ಎಂಬ ಬಗ್ಗೆ ತನಿಖೆಯಾಗಬೇಕು ಎಂದು ಬಹಳ ದೊಡ್ಡ protest ಅನ್ನು ಆ ಭಾಗದ ಜನರು ಮಾಡಿದ್ದಾರೆ. ಇದನ್ನು ನಾವು ನೀವೆಲ್ಲರೂ ದೂರದರ್ಶನದಲ್ಲಿ ನೋಡಿದ್ದೇವೆ. ಇದು ಬಹಳ ಪ್ರಮುಖವಾದ ಜಾಗವಾಗಿದೆ. ಅಲ್ಲಿ ಬೇರೆ ಯಾರೂ ಹೋಗುವುದಕ್ಕೆ ಸಾಧ್ಯವಿಲ್ಲ. ಪ್ರಕೃತಿ ಚಿಕಿತ್ಸೆಗೆಂದು ಮಾತ್ರ ನಾವು ನೀವೆಲ್ಲರೂ ಬಹಳಷ್ಟು ಜನರು ಅಲ್ಲಿಗೆ ಹೋಗಿ ಬಂದಿದ್ದೇವೆ. ನಾವುಗಳು ನಮ್ಮ ಆರೋಗ್ಯ ಸುಧಾರಣೆಗೆಂದು ಈ Naturopathy Centre ಗೆ ಆಗಾಗ್ಗೆ ಹೋಗುತ್ತಿರುತ್ತೇವೆ. ಈ Centre ನ ಹತ್ತಿರ ಯಾರ್‍ಯಾರೂ ಓಡಾಡುವ ಜಾಗವಂತೂ ಅಲ್ಲವೇ ಅಲ್ಲ. ಅಂತಹ ಜಾಗದ ಹತ್ತಿರ ಈ ಕೃತ್ಯ ನಡೆದಿದ್ದು ಜನರು ಕೂಡ ಇಷ್ಟೆಲ್ಲಾ ನೋವನ್ನು ಅನುಭವಿಸಿದ ಆ ಹೆಣ್ಣುಮಗಳಿಗೆ ಆ ಕುಟುಂಬಕ್ಕೆ ನ್ಯಾಯವನ್ನು ದೊರಕಿಸಿಕೊಡಬೇಕು, ಈ ಕುಟುಂಬಕ್ಕೆ ಆಗಿರುವ ಅನ್ಯಾಯ ನಾಳೆ ನಮ್ಮ ಕುಟುಂಬದ ಸದಸ್ಯರಿಗೆ ಇಂತಹ ಒಂದು ಸ್ಥಿತಿ ಏನಾದರೂ ಬಂದರೆ ಎಂಬ ಒಂದು ದೃಷ್ಟಿಯಿಂದ ಎಲ್ಲರೂ ಕೂಡ ಅದರಲ್ಲಿ ಸಹಭಾಗಿಗಳಾಗಿದ್ದಾರೆ.

(01.30 ಗಂಟೆ)

ಅದಕ್ಕಾಗಿ ತಮ್ಮ ಮುಖಾಂತರ ಗೃಹ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಇಂತಹ ಕೃತ್ಯಗಳು ಎಲ್ಲಿಯೂ ಕೂಡ ನಡೆಯಬಾರದು. ಎಲ್ಲರ ಮನೆಯಲ್ಲಿಯೂ ಕೂಡ ಅಕ್ಕ ತಂಗಿಯರು ಮತ್ತು ಮಕ್ಕಳು ಇರುತ್ತಾರೆ. ಇಂತಹ ಘಟನೆಗಳನ್ನು ಯಾವ ರೀತಿಯಾಗಿ ತಡೆಗಟ್ಟಬಹುದು ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಪೊಲೀಸ್ ಇಲಾಖೆಯವರು ನಿಜವಾದ ಅಪರಾಧಿಗಳು ಯಾರು ಇರುತ್ತಾರೆ ಅವರನ್ನು ಹಿಡಿದು ಅವರಿಗೆ ಜೀವಾವಧಿ ಶಿಕ್ಷೆ ಅಥವಾ ನೇಣುಗಂಬಕ್ಕೆ ಹಾಕಿದಾಗ ಮಾತ್ರ ಮುಂದೆ ಇಂತಹ ಘಟನೆಗಳು ನಡೆಯುವುದಿಲ್ಲ. ನಮ್ಮ ರಾಜ್ಯದಲ್ಲಿ ಇಡೀ ವರ್ಷದಲ್ಲಿ ಇಂತಹ ಘಟನೆಗಳು

ಸಾಕಷ್ಟು ನಡೆದಿದೆ. ಇದು ನನ್ನ ಗಮನಕ್ಕೂ ಕೂಡ ಬಂದಿದೆ. ದೊಡ್ಡಬಳ್ಳಾಪುರದ ಹತ್ತಿರ ಕಾಲೇಜು ಹುಡುಗಿಯನ್ನು ಐದು ಜನರು ರೇಪ್ ಮಾಡಿ ಅವಳನ್ನು ಕೊಲೆ ಮಾಡಿ ಸುಟ್ಟು ಹಾಕಿದ್ದಾರೆ. ಇದರ ಬಗ್ಗೆ ದೊಡ್ಡ ಗಲಾಟೆಯಾಗಿರುವುದು ಕೂಡ ತಮಗೆ ಗೊತ್ತಿದೆ. ಮೊನ್ನೆಯ ದಿವಸ ಮಣಿಪುರದ ಲೇಖಕಿ ಒಂದು ಸಣ್ಣ ಘಟನೆ ಅಂದರೆ drive ಮಾಡುವಾಗ car, scooter ತಗುಲಿದ್ದಕ್ಕೆ ಹಾಡು ಹಗಲಿನಲ್ಲಿಯೇ ಅವಳಿಗೆ ಆ ಯುವಕರು ಯಾವ ರೀತಿಯಾಗಿ ಮಾನಭಂಗ ಮಾಡುವುದಕ್ಕೆ ಪ್ರಯತ್ನಿಸಿದರು, ಲೈಗಿಂಕ ಕಿರುಕುಳವನ್ನು ಕೊಟ್ಟರು ಎನ್ನುವುದನ್ನು ನೆನಪಿಸಿಕೊಂಡಾಗ ಏಕೆ ಅದರಲ್ಲಿಯೂ ಪುರುಷ ಸಮಾಜದಲ್ಲಿ ಈ ರೀತಿಯ ವಿಕೃತ ಮನಸ್ಸು ಹೆಚ್ಚಾಗುತ್ತಿದೆ? ಇದನ್ನು ತಡೆಗಟ್ಟಲು ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಒಂದು awareness create ಮಾಡಬೇಕಾಗುತ್ತದೆ. ಅದನ್ನು ಮಾಡದೇ ಬರೀ ಪೊಲೀಸ್ ಇಲಾಖೆ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡುವುದರಿಂದ ಅಥವಾ ಯಾರೋ ರಕ್ಷಣೆ (Protect) ಮಾಡುವುದಾಗಲಿ ಅಥವಾ ಸಂಘ ಸಂಸ್ಥೆಗಳು ಹೋರಾಟ ಮಾಡುವುದರಿಂದ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆಂದು ನನಗನ್ನಿಸುತ್ತದೆ. ಇದಕ್ಕೆ ಕೊನೆ ಯಾವಾಗ ಆಗುತ್ತದೆ. ನಮ್ಮ ಖ್ಯಾತ ಬರಹಗಾರರಾದ Kuldip Nayar ರವರು ಮೂರು ವಾರಗಳ ಹಿಂದೆ ಪ್ರಜಾವಾಣಿ ಪತ್ರಿಕೆಯಲ್ಲಿ ಇದರ ಬಗ್ಗೆ ಒಂದು ಲೇಖನವನ್ನು ಬರೆದಿದ್ದಾರೆ. ದೇಶದಲ್ಲಿ ನಡೆಯುವ ಲೈಂಗಿಕ ಪ್ರಕರಣ ಮತ್ತು 'rape and death' ಬಗ್ಗೆ ಬಹಳ ನೊಂದು ಅದರಲ್ಲಿ ಇದಕ್ಕೆ ಯಾವತ್ತು ಕೊನೆ ಎಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದ ಖ್ಯಾತ ಬರಹಗಾರ್ತಿಯಾದ ಶ್ರೀಮತಿ ಇಂದಿರಾರವರು ಕೂಡ ಒಂದು ವಾರಗಳ ಹಿಂದೆ ಏಕೆ ಪುರುಷ ಹೃದಯಿಗಳಿಗೆ ಇಂತಹ ಒಂದು ಹೆಣ್ಣು ಮಕ್ಕಳ ಬಗ್ಗೆ ಏಕೆ ಒಳ್ಳೆಯ ಭಾವನೆ ಬರುತ್ತಿಲ್ಲ. ಅದರಲ್ಲಿಯೂ ಇತ್ತೀಚಿನ ಯುವಕರು ಇಂತಹ ಪ್ರಕರಣಗಳಲ್ಲಿ ಭಾಗವಹಿಸುತ್ತಿದ್ದಾರೆ, ಅಸ್ಸಾಂ ಅನ್ನು ತೆಗೆದುಕೊಂಡರೆ ಒಂದು ಪಾರ್ಟಿಯಲ್ಲಿ ಇದ್ದಂತಹ ಹೆಣ್ಣು ಮಗಳನ್ನು ಎಳೆದುಕೊಂಡು ಬಂದು ಬೀದಿಯಲ್ಲಿ group rape ಮಾಡುತ್ತಾರೆ. ಇದೆಲ್ಲವನ್ನು ಯೋಚನೆ ಮಾಡಿದಾಗ ಎಂಥವರಿಗಾದರು

ನೋವು ಆಗುತ್ತದೆ. ಆದುದರಿಂದ ತಮ್ಮ ಮುಖಾಂತರ ಗೃಹ ಸಚಿವರನ್ನು ಒತ್ತಾಯ ಮಾಡುವುದೇನೆಂದರೆ, ನೀವು ಇದನ್ನು ಸರಿಯಾಗಿ ಭೇದಿಸಿ ಇದಕ್ಕೆ ಯಾರು ಕಾರಣಕರ್ತರಾಗಿದ್ದಾರೆ? ನಮ್ಮೆಲ್ಲರಿಗೂ ಕೂಡ ಧರ್ಮಸ್ಥಳದ ಬಗ್ಗೆ ಬಹಳ ಪವಿತ್ರವಾದಂತಹ ಭಾವನೆ ಇದೆ. ಆ ಜಾಗದಲ್ಲಿ ಏನೇ ತಪ್ಪು ಮಾಡಿದರೂ ಕೂಡ ಆ ಭಗವಂತ ಶಿಕ್ಷೆ ಮಾಡುತ್ತಾನೆ ಎನ್ನುವಂತಹ ಭಯದಿಂದ ಜನರು ಜೀವನವನ್ನು ನಡೆಸುತ್ತಾರೆ. ಅಂತಹ ಒಂದು ಪವಿತ್ರವಾದಂತಹ ಸ್ಥಳದಲ್ಲಿ ಈ ರೀತಿಯ ಹೃದಯ ವಿದ್ರಾವಕ ಘಟನೆ ನಡೆಯುತ್ತದೆಂದರೆ, ಏಕೆ, ಏನು ಎನ್ನುವುದರ ಬಗ್ಗೆ ನಾವು ಬಹಳವಾಗಿ ಯೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಸಮಗ್ರವಾದಂತಹ ತನಿಖೆಯಾಗಬೇಕು. ಇದು ವರ್ಷಾನುಗಟ್ಟಲೆ ತನಿಖೆಯಲ್ಲಿಯೇ ಮುಗಿದು ಹೋಗಬಾರದು. ಬೇಗ ತನಿಖೆಯನ್ನು ಮಾಡಬೇಕು. ಇನ್ನು Doctor's report ಕೊಟ್ಟಿರುವುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅವನಿಗೆ ಬುದ್ಧಿ ಸ್ವಾಸ್ಥ್ಯ ಇಲ್ಲ, ಅವನಿಗೆ ನೆನಪಿನ ಶಕ್ತಿ ಇಲ್ಲವೆಂದು ಹೇಳುತ್ತಾರೆ. ಅವನಿಗೆ ಕಾಮತೃಷೆ ತೀರಿಸಿಕೊಳ್ಳುವುದಕ್ಕೆ ಯೋಗ್ಯವೆಂದು ಯಾವ ರೀತಿಯಾಗಿ Doctor Certificate ಕೊಡುವುದು? ಅಸ್ವಸ್ಥ ವ್ಯಕ್ತಿಗಳಲ್ಲಿ ಅವರಿಗೆ ದೈಹಿಕ ಶಕ್ತಿಯೇ ಇರುವುದಿಲ್ಲ. ಒಂದೊಂದು ಸಾರಿ ಬೀಳುತ್ತಾರೆ, ಏಳುತ್ತಾರೆ. ಒಂದೊಂದು ಸಾರಿ ಹೆಂಡ ಕುಡಿದವರ ರೀತಿಯಲ್ಲಿ ತೇಲಾಡುತ್ತಾರೆ. ಆಗಲೇ ಇವನಿಗೆ ಬುದ್ಧಿ ಸರಿ ಇಲ್ಲವೆಂದು ಗೊತ್ತಾಗುತ್ತದೆ. ಅಂಥವನು ಕಾಮತೃಷೆಯನ್ನು ತೀರಿಸಿಕೊಳ್ಳಲು ಯೋಗ್ಯನಾಗಿದ್ದಾನೆಂದು ಒಬ್ಬ Doctor Certificate ಅನ್ನು ಕೊಡುತ್ತಾರೆಂದರೆ, ಆ ವೈದ್ಯರಿಗೆ ನಿಜವಾಗಿಯೂ ಮನುಷ್ಯತ್ವ ಇದೆಯೇ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ, ಇನ್ನು ಮುಂದೆ ಇಂಥದ್ದಕ್ಕೆ ಅವಕಾಶವಾಗಬಾರದು. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ಯಾರು ಇದರ ಕಾರಣಕರ್ತರಾಗಿರುತ್ತಾರೆ ಅವರನ್ನು ಹಿಡಿದು ಶಿಕ್ಷೆಯಾಗಬೇಕಾಗುತ್ತದೆ. ಎಲ್ಲಿಯೇ ಈ ರೀತಿಯ ಘಟನೆಯಾದರೂ ಕೂಡ ಜೀವಾವಧಿ ಶಿಕ್ಷೆಯಾಗುವುದಕ್ಕಿಂತಲೂ ಹೆಚ್ಚಾಗಿ ನೇಣು ಶಿಕ್ಷೆಯಾಗುವಂತೆ ಗೃಹ ಇಲಾಖೆ ಆ ಕೇಸ್‌ನ್ನು ಬಿಲ್ಡ್ ಅಪ್ ಮಾಡಬೇಕಾಗುತ್ತದೆಂದು ತಮ್ಮ

ಮುಖಾಂತರ ಒತ್ತಾಯವನ್ನು ಮಾಡುತ್ತಿದ್ದೇನೆ. ಈ ವಿಷಯದಲ್ಲಿ ನಮ್ಮ ಎಲ್ಲಾ ಪುರುಷ ಸಹೋದರರ support ಇರುತ್ತದೆಂದು ನಾನು ನಂಬಿರುತ್ತೇನೆ.

**ಶ್ರೀ ಆರ್. ಅಶೋಕ್ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೆ, ಧರ್ಮಸ್ಥಳದ ಭಾಗದಲ್ಲಿರತಕ್ಕಂತಹ ಬೆಳ್ತಂಗಡಿ ತಾಲ್ಲೂಕ್ ಕುಮಾರಿ ಸೌಜನ್ಯರವರ ಕೊಲೆ ಏನಾಯಿತು ಅದಾದಮೇಲೆ ನಾನು ಆ ಭಾಗಕ್ಕೆ ಭೇಟಿ ಕೊಟ್ಟು, ಮೃತರ ಕುಟುಂಬದವರನ್ನು ಕೂಡ ಮಾತನಾಡಿಸಿ ಈ ಕೇಸ್‌ಗೆ ಸಂಬಂಧಪಟ್ಟಂತೆ ಚರ್ಚೆ ನಡೆಸಿದ್ದೆ. ಈಗಾಗಲೇ ಈ ಕೇಸ್‌ಗೆ ಸಂಬಂಧಪಟ್ಟಂತೆ ಸಂತೋಷ ರಾವ್ ಎನ್ನುವಂತಹ ವ್ಯಕ್ತಿಯನ್ನು ಬಂಧಿಸಿದ್ದೇವೆ. ಸಂತೋಷ್‌ರಾವ್‌ರವರು ಆ ಸ್ಥಳದವರಲ್ಲ. ಬೇರೆ ಸ್ಥಳದವರು. ಪಿಯುಸಿಯವರಿಗೂ ಓದಿ, ಡಿಪ್ಲೋಮೋ ವಿದ್ಯಾರ್ಥಿಯಾಗಿದ್ದು, martial art – black belt ಕರಾಟೆ ಪಟು ಕೂಡ ಆಗಿದ್ದಾನೆ. ಅವನಿಗೆ ಶಿವಮೊಗ್ಗ ಭಾಗದಲ್ಲಿ ಒಂದು ಮಾನಸಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಮಾಡಿದ್ದಾರೆ ಎನ್ನುವಂಥದ್ದು ವರದಿಯಲ್ಲಿ ಈಗಾಗಲೇ ಬಂದಿದೆ. ಅಲ್ಲಿ ಈಗಾಗಲೇ ಪೊಲೀಸ್‌ನವರು ತನಿಖೆಯನ್ನು ಮಾಡುವಂತಹ ಸಂದರ್ಭದಲ್ಲಿ ಪೊಲೀಸ್‌ನವರಿಗೆ ಎಲ್ಲಿ ಅತ್ಯಾಚಾರವನ್ನು ಮಾಡಿದೆ ಎಂದು ಕೇಳಿದಾಗ ಅವನು ಕರೆದುಕೊಂಡು ಹೋಗಿ ತೋರಿಸಿದ್ದಾನೆ. ಮತ್ತೆ ಆ ವ್ಯಕ್ತಿ ಕಳೆದ ಒಂದು ವಾರಗಳ ಕಾಲ ಆ ಒಂದು ಕಾಡಿನ ಪ್ರದೇಶದಲ್ಲಿ ಅಂದರೆ ನಿರ್ಜನ ಪ್ರದೇಶದಲ್ಲಿ ವಾಸ ಮಾಡಿದ್ದಾನೆ. ಒಂದು ಕಡೆಯಲ್ಲಿ ಅವನ ಬಟ್ಟೆಗಳನ್ನು ಇಟ್ಟಿದ್ದಾನೆ. ಪ್ರತಿದಿನ ಉಜರೆಗೆ ಬರತಕ್ಕಂಥದ್ದು, ಮತ್ತೆ ರಾತ್ರಿ ಕಾಡಿಗೆ ಹೋಗಿ ವಾಸ ಮಾಡತಕ್ಕಂಥದ್ದು ಇವೆಲ್ಲವನ್ನು identify ಮಾಡಿದ್ದಾನೆ. ಮತ್ತೆ ಅವನನ್ನು ಪರೀಕ್ಷೆಗೋಸ್ಕರ Doctor ಹತ್ತಿರ ಕಳುಹಿಸಿಕೊಡಲಾಗಿತ್ತು. Doctor ಇವನು Karate black belt ಅಗಿದ್ದಾನೆಂದರೆ ಏನಿಲ್ಲ. ಮಾನಸಿಕ ಅಸ್ವಸ್ಥ್ಯತೆಯ ಬಗ್ಗೆ ಚಿಕಿತ್ಸೆಯನ್ನು ಪಡೆದುಕೊಂಡಿದ್ದಾನೆ. ಅದು ಬಿಟ್ಟರೆ ಬೇರೆ ಏನು ಇಲ್ಲ. ಅವನು ಈ ರೀತಿಯ ಕೃತ್ಯ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ ಮತ್ತು ಅವನು ಆ ಸ್ಥಳಗಳನ್ನೆಲ್ಲಾ ತೋರಿಸಿದ್ದಾನೆ. ನಾವು ಈಗಾಗಲೇ ಅವನ ರಕ್ತ ಪರೀಕ್ಷೆ ಮತ್ತು ಅವನ ತಲೆ ಕೂದಲು ಇರಬಹುದು, ಅವನ finger prints ಇರಬಹುದು,

ಅವನ ಉಗರು ಇರಬಹುದು ಇದೆಲ್ಲಾ ತೆಗೆದುಕೊಂಡು Laboratory ಗೆ ಕಳುಹಿಸಿಕೊಡಲಾಗಿದೆ. Laboratory ವರದಿಗಾಗಿ ಕಾಯುತ್ತಿದ್ದೇವೆ. Doctor ಪ್ರಕಾರ ಅವನ ಮೈ ಮೇಲೆ ಆ ಹುಡುಗಿ ಪರಚಿರುವಂತಹ ಗಾಯಗಳಾಗಿದೆ. ಆ ಹುಡುಗಿಗೂ ಕೂಡ ಇವನು ಪರಚಿದ್ದಾನೆ. ಇವೆರಡು ಹೊಲಿಕೆಯಾಗುತ್ತಿದೆ ಎಂದು Doctor ಹೇಳಿದ್ದಾರೆ. ಅಪರಾಧಿಯನ್ನು ಬಂಧಿಸಿ, ಕೋರ್ಟ್‌ಗೆ ಹಾಜರುಪಡಿಸಿದ್ದೇವೆ. ಹುಡುಗಿಯ ತಂದೆ ತಾಯಿ ನನ್ನನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ಇವನು ಒಬ್ಬನೇ ಈ ರೀತಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಇವನ ಜೊತೆಯಲ್ಲಿ ಬೇರೆ ಬೇರೆಯವರು ಇದ್ದಾರೆ ಎನ್ನುವಂತಹ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಿಮಗೆ ಯಾವ ತನಿಖೆ ಬೇಕೆಂದು ಕೇಳಿದ್ದಕ್ಕೆ ಅವರು CID ತನಿಖೆಗೆ ಕೊಡಿ ಎಂದು ಹೇಳಿದ್ದಾರೆ. ಅದಕ್ಕಾಗಿ ಸಿಐಡಿ ತನಿಖೆಗೆ ಕೊಡುತ್ತಿದ್ದೇನೆ. ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಕಾನೂನು ಪ್ರಕಾರವಾಗಿ ಕಠಿಣ ಶಿಕ್ಷೆಯಾಗಬೇಕು ಎನ್ನುವ ದೃಷ್ಟಿಯಿಂದ ದಾಖಲೆಗಳನ್ನು ಕಲೆಹಾಕುವುದಕ್ಕೆ, ಆ ಕೇಸ್‌ಗೆ ಇನ್ನು ಹೆಚ್ಚು ಶಕ್ತಿ ತುಂಬ ದೃಷ್ಟಿಯಿಂದ CID ತಂಡ ರಚನೆ ಮಾಡಿ, ಅವರು ಕೇಸ್ ತೆಗೆದುಕೊಂಡು investigation ಮಾಡುತ್ತಾರೆ. ನೂರಕ್ಕೆ ನೂರು ಭಾಗ ಅಪರಾಧಿಯನ್ನು ಬಂಧಿಸಿ ಅವರಿಗೆ ಕಾನೂನಿನ ಅಡಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುವಂತೆ ಮಾಡುತ್ತಿದ್ದೇವೆ. ಶ್ರೀಮತಿ ಮೋಟಮ್ಮನವರು ಹೇಳಿದಂತೆ ಅತ್ಯಾಚಾರದ ಪ್ರಕರಣಗಳು ಇಡೀ ದೇಶದಲ್ಲಿ ಮತ್ತು ರಾಜ್ಯದಲ್ಲಿಯೂ ಹೆಚ್ಚಾಗುತ್ತಿದೆ. ಅದಕ್ಕಾಗಿ ಕೇಂದ್ರ ಸರ್ಕಾರ ಕೂಡ ಇದರ ಬಗ್ಗೆ ವಿಶೇಷವಾದಂತಹ ಕಾನೂನುಗಳನ್ನು ಜಾರಿಗೆ ತರುತ್ತಿದೆ. ಏಕೆಂದರೆ ನಮ್ಮ ಎಲ್ಲಾ ಕಾನೂನುಗಳು ಕೇಂದ್ರ ಸರ್ಕಾರದ್ದು. ವಿಶೇಷವಾದಂತಹ ಕಾನೂನುಗಳನ್ನು ತರುತ್ತಿದೆ. ಆದುದರಿಂದ ಇದರ ಬಗ್ಗೆ ಕಠಿಣ ಕ್ರಮಗಳನ್ನು ತೆಗೆದುಕೊಂಡು ಈ ರೀತಿಯ ಘಟನೆಗಳು ಕಡಿಮೆ ಮಾಡುವುದಕ್ಕೆ ಮತ್ತು ಆಗದೇ ಇರವುದಕ್ಕೆ ಸರ್ಕಾರ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

**ಶ್ರೀಮತಿ ಭಾರತಿಶೆಟ್ಟಿ (ವಿಧಾನಸಭಾಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮೃತಪಟ್ಟ ಹೆಣ್ಣು ಮಗಳ ತಂದೆ ದೂರಿನಲ್ಲಿ ಹೇಳಿದ್ದಾರೆ. ನನಗೆ

ಬೇಸರವಾಗುವಂಥದ್ದು ಎಂದರೆ, ಈ ಘಟನೆ ದಿನಾಂಕ 10.10.2012 ರಂದು ಅಗಿರುವಂಥದ್ದು. ಇವತ್ತು ಸಚಿವರು ಅವನ ಉಗುರು, ತಲೆಕೂದಲು, ರಕ್ತ ಎಲ್ಲವನ್ನು ಲ್ಯಾಬ್‌ಗಳಿಗೆ ಕಳುಹಿಸಿದ್ದೇವೆಂದು ಹೇಳಿದರು. ಆದರೆ ಇವತ್ತಿನವರೆಗೂ ಕೂಡ ಇವನು ಅಪರಾಧಿ ಎಂದು ಆಗಿಲ್ಲ. ಕರಾಟೆ ಪಟು, ಅಸ್ವಸ್ಥ ಇದ್ದಾನೆ, ಬುದ್ಧಿ ಶಕ್ತಿ ಇಲ್ಲ ಇದೆಲ್ಲವೂ ಅನುಮಾನಾಸ್ಪದವಾಗಿದೆ. ಇವನೇ ಈ ಕೃತ್ಯವನ್ನು ಮಾಡಿದ್ದಾನೆ ಎನ್ನುವುದಕ್ಕೆ ಇವರ ಹತ್ತಿರ ಸಾಕ್ಷಿ ಕೂಡ ಇಲ್ಲ. ಈ ಘಟನೆ ನಡೆದು ಒಂದು ತಿಂಗಳುಗಳಾದರೂ ಕೂಡ ಒಂದು investigation ಇಷ್ಟೊಂದು ನಿಧಾನವಾಗುತ್ತದೆಂದರೆ, ಹೇಗೆ? ಗೃಹ ಸಚಿವರು ಇನ್ನು Lab ನಿಂದ ವರದಿ ಬಂದಿಲ್ಲವೆಂದು ಹೇಳಿದರು. ಈ ರೀತಿಯಾದರೆ ತೊಂದರೆಯಾಗುತ್ತದೆ. ಅತ್ಯಾಚಾರ ಮಾಡುವಾಗಲೇ ಅವಳು ಸತ್ತು ಹೋಗಿದ್ದಾಳೆ. ಯಾವಾಗ ಒಂದು ಹೆಣ್ಣು ಮಗಳ ಮೇಲೆ ಅತ್ಯಾಚಾರವಾಗುತ್ತದೆ ಅವಳು ಬದುಕಿದ್ದು ಸತ್ತಂತೆ. ಅತ್ಯಾಚಾರವನ್ನು ಮಾಡಿ ನಂತರ murder ಆಗಿದೆ. ಇದು ಒಬ್ಬರಿಂದ ಆಗುವಂತಹ ಕೆಲಸವಲ್ಲವೆಂದು ಮೃತಳ ತಂದೆ ತಾಯಿ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಅಪರಾಧಿಯ ಮನಸ್ಸು ಸರಿಯಿಲ್ಲವೆಂದು ಹೇಳಿದರೆ ಆಗುವುದಿಲ್ಲ. Investigation ಒಂದು ತಿಂಗಳಾದರು ಆಗಿಲ್ಲವೆಂದರೆ ಹೇಗೆ? ಘಟನೆ ನಡೆದು ಒಂದು ತಿಂಗಳು ಆಗಿದ್ದರು investigation ಏಕೆ ತಡವಾಗುತ್ತಿದೆ?

ಮಾನ್ಯ ಸಭಾಪತಿಯವರೆ, ಇನ್ನೊಂದು ಬಹಳ ದುಃಖದ ಸಂಗತಿ ಎಂದರೆ, ಹೆಣ್ಣು ಮಕ್ಕಳು ಹೋಗುವಾಗ ತಮಾಷೆ ಮಾಡುತ್ತಾರೆ. ಒಂದು ಘಟನೆಯನ್ನು ಕೇಳಿದ್ದೇವೆ. ಒಬ್ಬ ಯುವಕ ನಾನು ನಿನ್ನನ್ನು ಪ್ರೀತಿಸುತ್ತೇನೆಂದು ಒಬ್ಬಳಿಗೆ ಹೇಳುತ್ತಾನೆ. ಆಗ ಆ ಹೆಣ್ಣು ಮಗಳು ನಿನ್ನನ್ನು ಪ್ರೀತಿಸುವುದಿಲ್ಲವೆಂದರೆ ಅವಳ ಮುಖಕ್ಕೆ acid ಹಾಕಿ ಹೋಗುತ್ತಾನೆ. ಅವಳ ಮುಖ ಸುಟ್ಟು ಹೋಗಿದೆ. ಅವನಿಗೂ ಒಂದು ಕಾನೂನು ಬರುತ್ತದೆಯಂತೆ, Doctor ಅವನ ತಲೆ ಸರಿ ಇಲ್ಲವೆಂದು ಹೇಳುತ್ತಾರಂತೆ. ಆಗ ಅವನು ಬಚಾವ್ ಆಗಿ ಹೋಗುತ್ತಾನೆ. ಆಗ ತಮ್ಮ ಮಕ್ಕಳಿಗೆ ತಾಯಂದಿರು ಯಾರು ಏನೇ ತಮಾಷೆ ಮಾಡಿದರೂ ಕೂಡ ಬಾಯಿ ಮುಚ್ಚಿಕೊಂಡು ಸುಮ್ಮನಿರಮ್ಮ

ಎಂದು ಹೇಳುತ್ತಾರೆ. ಈ ರೀತಿಯಾಗಿ ಆಗುವಂತಹ ದಿನನಿತ್ಯ ಭಯವನ್ನು ವಿಕಾರತೆಯನ್ನು ಹೆಣ್ಣು ಮಕ್ಕಳು ಅನುಭವಿಸಬೇಕಾಗುತ್ತಿದೆ. ಆದುದರಿಂದ ನಮ್ಮ ಗೃಹ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ಈ investigation ಬಹಳ ನಿಧಾನವಾಗುತ್ತಿದೆ. ಈ ರೀತಿಯಾದರೆ ಜನರಲ್ಲಿ ಈ ಘಟನೆಯೇ ಮರೆತು ಹೋಗುತ್ತದೆ. ಇದರ ಬಗ್ಗೆ ಪೊಲೀಸ್ ಠಾಣೆಗೆ ಬಂದು ಕೇಳಿ, ಕೇಳಿ, ಕೋರ್ಟ್‌ಗೆ ಹೋಗಿ ಹೋಗಿ ಅವರುಗಳು ಸುಸ್ತಾಗಿ ಹೋಗುತ್ತಾರೆ. ಆ ಹೆಣ್ಣು ಮಗಳು ಅಂತೂ ಸತ್ತು ಹೋಗಿ ಆಗಿದೆ, ಬೇರೆ ಮಕ್ಕಳನ್ನು ಆ ತಂದೆ ತಾಯಿಗಳು ನೋಡಬೇಕಲ್ಲವೇ? ಸಂಘ ಸಂಸ್ಥೆಗಳು ನಿಮ್ಮ ಹತ್ತಿರ ಎಷ್ಟು ದಿವಸಗಳೆಂದು ಬರುತ್ತಾರೆ. ಇದರ ಬಗ್ಗೆ ಬೇಗ ತನಿಖೆಯನ್ನು ಮಾಡಿ ಮುಗಿಸಬೇಕು. ತನಿಖೆಯ ಹೆಸರಿನಲ್ಲಿ ಹೆಚ್ಚು ದಿವಸಗಳಾಗಬಾರದು. ಸರ್ಕಾರ ಈಗ ತನಿಖೆಯನ್ನು CID ಗೆ ಕೊಟ್ಟಿರುವುದನ್ನು ಸ್ವಾಗತ ಮಾಡುತ್ತೇನೆ. ತನಿಖೆ ಬೇಗ ಮುಗಿಸಬೇಕೆಂದು ತಮ್ಮ ಮುಖಾಂತರ ಗೃಹ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೆ, ತನಿಖೆಯನ್ನು ಇನ್ನಷ್ಟು ಬೇಗ ಮಾಡುವುದಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**(ಆ) ಗುಲ್ಬರ್ಗಾ ನಗರದ ನೃಪತುಂಗ ಕಾಲೋನಿ, ಶಹಾಬಾದ್ ಹಾಗೂ ಕಡಗಂಚಿ ಗ್ರಾಮದಲ್ಲಿ ಕಳೆದ ಎರಡು ವರ್ಷಗಳಿಂದ ಮನೆಗಳ್ಳತನ, ಸರಣಿಗಳ್ಳತನ ಹಾಗೂ ದರೋಡೆಗಳು ಹೆಚ್ಚಾಗಿದ್ದು, ಜನರು ಭಯಭೀತರಾಗಿ ನೆಮ್ಮದಿಯಿಂದ ಜೀವನ ನಡೆಸುವುದು ದುಸ್ತರವಾಗಿರುವ ಕುರಿತು.**

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಗುಲಬರ್ಗಾ ನಗರದ ನೃಪತುಂಗ ಕಾಲೋನಿಯಲ್ಲಿ ಮನೆ ಕಳ್ಳತನ ಮತ್ತು ಶಹಾಬಾದ ನಗರದಲ್ಲಿ ಬಂಗಾರ ಅಂಗಡಿ ಕಳವು ಹಾಗೂ ಕಡಗಂಚಿ ಗ್ರಾಮದಲ್ಲಿ ಬ್ಯಾಂಕ್ ದರೋಡೆ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರಿ ಆರ್. ಅಶೋಕ್ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ,

ಗುಲಬರ್ಗಾ ನಗರದ ನೃಪತುಂಗ ಕಾಲೋನಿಯಲ್ಲಿ ಮನೆ ಕಳ್ಳತನ ಮತ್ತು ಶಹಾಬಾದ ನಗರದಲ್ಲಿ ಬಂಗಾರ ಅಂಗಡಿ ಕಳವು ಹಾಗೂ ಗುಲಬರ್ಗಾ ನಗರದಲ್ಲಿ ಸರಣಿಕಳ್ಳತನ, ಮತ್ತು ಸರಣಿ ಕಾರು ಗ್ಲಾಸ್ ಒಡೆಯುವುದು ಹಾಗೂ ಕಡಗಂಚಿ ಗ್ರಾಮದಲ್ಲಿ ಬ್ಯಾಂಕ್ ದರೋಡೆ ಇತ್ಯಾದಿಗಳ ಬಗ್ಗೆ ಮಾಹಿತಿ ಈ ಕೆಳಗಿನಂತಿದೆ.

1) ನಗರದ ನೃಪತುಂಗ ಕಾಲೋನಿಯಲ್ಲಿ ಕಳ್ಳತನವಾದ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ಮತ್ತು ಸಂಬಂಧ ಪಟ್ಟ ಸಿಪಿಐ ರವರಿಗೆ ಕಳವು ಆದ ಪ್ರಕರಣಗಳ ಪತ್ತೆ ಕುರಿತು ಕೂಡಲೇ ಒಂದು ತಂಡ ರಚನೆ ಮಾಡಿ ಪತ್ತೆ ಕಾರ್ಯ ಚುರುಕುಗೊಳಿಸಲು ಆದೇಶಿಸಲಾಗಿದೆ. ಪತ್ತೆ ಕಾರ್ಯ ಪ್ರಗತಿಯಲ್ಲಿದೆ.

2) ನಗರದಲ್ಲಿ ಕಳ್ಳತನವಾದ ಪ್ರಕರಣಗಳಲ್ಲಿ ಕೆಲವೊಂದು ಪ್ರಕರಣಗಳು ಪತ್ತೆ ಮಾಡಿ ಆರೋಪಿತರನ್ನು ದಸ್ತಗಿರಿ ಮಾಡಿಲಾಗಿದ್ದು ಉಳಿದ ಪ್ರಕರಣದಲ್ಲಿ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ಪ್ರಕರಣ ಪತ್ತೆ ಮಾಡಿ ತನಿಖೆ ಪೂರ್ಣಗೊಳಿಸಲು ಆದೇಶಿಸಲಾಗಿದೆ. ಪತ್ತೆ ಕಾರ್ಯ ಪ್ರಗತಿಯಲ್ಲಿದೆ.

3) ಗುಲಬರ್ಗಾ ನಗರದಲ್ಲಿ ಸರಣಿ ಕಾರು ಗ್ಲಾಸುಗಳು ಒಡೆದ ಬಗ್ಗೆ ವಿವಿಧ ಪೊಲೀಸ್ ಠಾಣೆಗಳಲ್ಲಿ 7 ಪ್ರಕರಣಗಳು ದಾಖಲಾಗಿದ್ದು ವಿಧ್ವಂಸಕ ಕೃತ್ಯದಲ್ಲಿ ಭಾಗಿಯಾದ ಆರೋಪಿತರ ಪತ್ತೆ ಕಾರ್ಯ ಪ್ರಗತಿಯಲ್ಲಿರುತ್ತದೆ.

4) ಕಡಗಂಚಿ ಗ್ರಾಮದಲ್ಲಿ ಬ್ಯಾಂಕ್ ದರೋಡೆ ಪ್ರಕರಣ ಪತ್ತೆಗಾಗಿ ಒಂದು ವಿಶೇಷ ತಂಡ ರಚನೆ ಮಾಡಲಾಗಿದ್ದು. ಪ್ರಕರಣದ ಸುಳಿವು ಹಾಗೂ ಪತ್ತೆ ಕಾರ್ಯ ಪ್ರಗತಿಯಲ್ಲಿದೆ.

ಕಳೆದ ಎರಡು ವರ್ಷಗಳಲ್ಲಿ ಕಳುವಾದ ಸ್ವತ್ತಿನ ಪ್ರಕರಣಗಳ ಅಂಕಿ ಅಂಶಗಳು ಈ ಕೆಳಗಿನಂತೆ ಇರುತ್ತದೆ.

**2011ನೇ ಸಾಲಿನಲ್ಲಿ ದಾಖಲಾದ ಸ್ವತ್ತಿನ ಪ್ರಕರಣಗಳಲ್ಲಿ ಕಳುವಾದ ಮತ್ತು ವಶಪಡಿಸಿಕೊಂಡಿರುವ ಸ್ವತ್ತಿನ ಪ್ರಕರಣಗಳು:–**

| ಕ್ರ ಸಂ | ಶೀರ್ಷಿಕೆ | ವರದಿ | ಪತ್ತೆ | ಕಳುವಾದ ಸ್ವತ್ತು (₹ ಗಳಲ್ಲಿ) | ವಶಪಡಿಸಿಕೊಂಡಿರುವ ಸ್ವತ್ತು (₹ ಗಳಲ್ಲಿ) |
|---|---|---|---|---|---|
| 1. | ದರೋಡೆ | 10 | 07 | 2,48,500=00 | 1,55,110=00 |
| 2. | ಸುಲಿಗೆ | 83 | 30 | 68,88,050=00 | 40,93,720=00 |
| 3. | ಕನ್ನಾ ಕಳವು | 283 | 65 | 2,60,36,074=00 | 30,69,344=00 |
| 4. | ಇತರೆ | 361 | 159 | 1,76,38,209=00 | 65,09,287=00 |
| ಒಟ್ಟು | | **737** | **261** | **5,08,10,833=00** | **1,38,27,461=00** |

**2012 ನೇ ಸಾಲಿನಲ್ಲಿ ದಾಖಲಾದ ಸ್ವತ್ತಿನ ಪ್ರಕರಣಗಳಲ್ಲಿ ಕಳುವಾದ ಮತ್ತು ವಶಪಡಿಸಿಕೊಂಡಿರುವ ಸ್ವತ್ತಿನ ಪ್ರಕರಣಗಳು:–**

| ಕ್ರ ಸಂ | ಶೀರ್ಷಿಕೆ | ವರದಿ | ಪತ್ತೆ | ಕಳುವಾದ ಸ್ವತ್ತು (₹ ಗಳಲ್ಲಿ) | ವಶಪಡಿಸಿಕೊಂಡಿರುವ ಸ್ವತ್ತು (₹ ಗಳಲ್ಲಿ) |
|---|---|---|---|---|---|
| 1. | ದರೋಡೆ | 10 | 04 | 6,36,180=00 | 1,16,400=00 |
| 2. | ಸುಲಿಗೆ | 59 | 27 | 37,57,593=00 | 16,56,240=00 |
| 3. | ಕನ್ನಾ ಕಳವು | 204 | 48 | 3,53,37,631=00 | 26,16,960=00 |
| 4. | ಇತರೆ | 268 | 78 | 1,90,86,181=00 | 39,22,226=00 |
| ಒಟ್ಟು | | **541** | **157** | **5,88,17,585=00** | **83,11,826=00** |

ಸ್ವತ್ತಿನ ಕಳುವು ಪ್ರಕರಣ ತಡೆಗಟ್ಟಿ ಜಿಲ್ಲೆಯಾದ್ಯಂತ ಜನರು ನಿರ್ಭೀತಿಯಿಂದ ವಾಸಿಸಲು ಅನುಕೂಲವಾಗುವಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿ, ಅಪರಾಧಿಗಳ ಪತ್ತೆಹೆಚ್ಚುವ ಕಾರ್ಯವನ್ನು ತೀವ್ರಗೊಳಿಸಲಾಗಿದೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ನಾನು ಕೊಟ್ಟಂತಹ ಕೆಲವು ಸಮಸ್ಯೆಗಳನ್ನು ಮಾತ್ರ ಮಾನ್ಯ ಗೃಹ ಸಚಿವರು ನೀಡಿರುವಂತಹ ಲಿಖಿತ ಉತ್ತರದಲ್ಲಿ ತೋರಿಸಿದ್ದಾರೆ. ನನ್ನ ಮಾಹಿತಿ ಮತ್ತು ಕೆಲವು ಪೊಲೀಸ್ ಸ್ಟೇಷನ್‌ನಲ್ಲಿ ಕೊಟ್ಟಂತಹ ಕೆಲವು ಸೆಕ್ಷನ್‌ಗಳನ್ನು ನೋಡಬೇಕಾಗುತ್ತದೆ. ಗುಲ್ಬರ್ಗಾ ನಗರದ ನೃಪತುಂಗ ಕಾಲೋನಿಯಲ್ಲಿ ತುಕಾರಂ ಎನ್ನುವವರ ನಿವೃತಿಯಾಗಿದ್ದಾರೆ. ನಿವೃತ್ತಿಯಾದಾಗ ಬಂದಂತಹ ಹಣದಲ್ಲಿ ಬಂಗಾರವನ್ನು

ಖರೀದಿ ಮಾಡಿ ಮನೆಯಲ್ಲಿಟ್ಟಿದ್ದ. ಒಂದು ವರ್ಷದ ಹಿಂದೆ ಇವರ ಮನೆಯ ಬಾಗಿಲನ್ನು ದರೋಡೆಕೋರರು ಮುರಿದು 56 ತೊಲೆ ಬಂಗಾರವನ್ನು ತೆಗೆದುಕೊಂಡು ಹೋಗಿದ್ದಾರೆ. ನಾನು ಇದರ ಬಗ್ಗೆ ಅಲ್ಲಿಯ Superintendent ರವರಿಗೆ ಹೇಳಿದೆ. ಅವರು ಹುಡುಕುತ್ತೇವೆಂದು ಹೇಳುತ್ತಾರೆಯೇ ಹೊರತು ಇದುವರೆಗೂ ಕಳ್ಳರನ್ನು ಹಿಡಿದಿಲ್ಲ. ಚಿತ್ತಾಪುರ್ ಶಹಬಾದ್‌ನಲ್ಲಿ ದಿನಾಂಕ 07.11.2012 ರಂದು ಜಯಜಯಂತ್ ಎನ್ನುವವಳು ಬ್ಯಾಂಕ್ ಲಾಕರ್‌ನಲ್ಲಿಟ್ಟಿದ್ದಂತಹ ಬಂಗಾರವನ್ನು ತೆಗೆದುಕೊಂಡು ಮಾರ್ವಾಡಿ ಹತ್ತಿರ ಬಂಗಾರವನ್ನು ತೆಗೆದುಕೊಂಡು ಹೋಗಿ ಇದರ value ಎಷ್ಟಾಗುತ್ತದೆಂದು ಮಾಡಿಕೊಂಡು ಬರುವಾಗ ಅವರ ಜೊತೆಯಲ್ಲಿ ಕುಳಿತುಕೊಂಡಿದ್ದ ಇಬ್ಬರು ಹೆಣ್ಣು ಮಗಳು ಮತ್ತು ಒಬ್ಬ ಗಂಡು ಮಗ ಇರುತ್ತಾನೆ. ಆಟೋದಿಂದ ಇಳಿಯುವಂತಹ ಸಮಯದಲ್ಲಿ ನೋಡಿದರೆ ಅವಳ ಹತ್ತಿರ ಇದ್ದಂತಹ ಬಂಗಾರ ಇರಲಿಲ್ಲ. ಇದರ ಬಗ್ಗೆ ಇವಳು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಾಗ ಪೊಲೀಸ್‌ನವರು ಅವಳನ್ನು ಹಿಡಿದುಕೊಂಡು ಬರುತ್ತಾರೆ. ಈ ಹೆಣ್ಣು ಮಕ್ಕಳು ಮಾರ್ವಾಡಿ ಅಂಗಡಿಯಲ್ಲಿ ಬಂಗಾರದ ಬೆಲೆಯನ್ನು valuation ಮಾಡುವಂತಹ ಸಮಯದಲ್ಲಿ ಇವರು ಇದ್ದರೇ ಎಂದಾಗ ಹೌದು ಎಂದು ಇವಳು ಹೇಳುತ್ತಾಳೆ. ನಂತರ ಹೆಣ್ಣು ಮಗಳನ್ನು ಕರೆದು ಇವರು ಅಲ್ಲ ನೀವು ಹೋಗಿ ಬನ್ನಿ ಎಂದು ಪೊಲೀಸ್‌ನವರೇ ವಾಪಸ್ಸು ಕಳುಹಿಸಿಬಿಡುತ್ತಾರೆ. ಇನ್ನೊಂದು ವಿಜಯಕುಮಾರ್ ಕಂಪಿಗೆ ಎನ್ನುವವರು ದಿನಾಂಕ 17.02.2012 ರಂದು Post Office ಗೆ ಹೋಗುವುದಕ್ಕೆ ಮುಂಚೆ ಕಾರಿನಲ್ಲಿ ಸುಮಾರು ಹತ್ತು ಲಕ್ಷ ಹಣವನ್ನು ಇಟ್ಟಿರುತ್ತಾರೆ. ಅವನು ಒಳಗಡೆ ಹೋಗಿ ಬರುವಷ್ಟರಲ್ಲಿ ಆ ಹಣ ಕೂಡ ಕಳ್ಳತನವಾಗುತ್ತದೆ. ಇದರ ಬಗ್ಗೆ ಕೂಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗುತ್ತದೆ. ಆದರೆ ಇದುವರೆಗೂ ಏನು ಆಗಿಲ್ಲ. ಇನ್ನು ಮಹಮದ್ ಇಸಾಕ್ ಎನ್ನುವವರು ದಿನಾಂಕ 16.11.2011 ರಂದು 6,10,000 ರೂಪಾಯಿಗಳನ್ನು ಬೈಕ್‌ನಲ್ಲಿಟ್ಟು ನಮಾಜ್ ಮಾಡಿಕೊಂಡು ಬರುವಷ್ಟರಲ್ಲಿ ಆ ಹಣವನ್ನ ಕಳ್ಳತನ ಮಾಡಿರುತ್ತಾರೆ. ಸೆಪ್ಟಂಬರ್ 2011 ರಂದು ಜೀಯಾಜ್ ಬೇಗಂ ಎನ್ನುವವರದು 2,10,000 ರೂಪಾಯಿಗಳು ಕಳ್ಳತನವಾಗುತ್ತದೆ. ಇನ್ನು

ಬಹಳ ಗಂಭೀರವಾದಂತಹ ವಿಷಯ ಎಂದರೆ, ಕಡಗಂಚಿ ಎನ್ನುವಂತಹ ಊರಿನ State Bank of India ದಲ್ಲಿ ರಾತ್ರಿ ಡಕಾಯಿತರು ಬ್ಯಾಂಕ್‌ಗೆ ನುಗ್ಗಿ ಒಂದು ಕೋಟಿ ಹದಿಮೂರು ಲಕ್ಷ ರೂಪಾಯಿಗಳನ್ನು ಡಕಾಯಿತಿ ಮಾಡಿಕೊಂಡು ಹೋದರು. ಇದು ಸರ್ಕಾರಿ ಬ್ಯಾಂಕ್‌ನಲ್ಲಿದ್ದಂತಹ ಹಣ. ಇದುವರೆಗೂ ಇನ್ನು ಡಕಾಯಿತಿ ಮಾಡಿದವರನ್ನು ಹಿಡಿದಿಲ್ಲ. ಕಡಗಂಚಿಯಲ್ಲಿ ಗುಲ್ಬರ್ಗಾ ಮತ್ತು ಬೀದರ್ KMF ನ ಮಾಜಿ ಅಧ್ಯಕ್ಷರ ಕೊಲೆಯಾಗುತ್ತದೆ. ಇದರ ಬಗ್ಗೆ ಕೂಡ ಕೊಲೆ ಮಾಡಿದವರನ್ನು ಹಿಡಿಯುವುದಕ್ಕೆ ಪೊಲೀಸ್‌ನವರ ಕೈಯಲ್ಲಿ ಆಗಿಲ್ಲ. ಇನ್ನು ಪ್ರತಿನಿತ್ಯ ಹೆಣ್ಣು ಮಕ್ಕಳ ಕೊರಳಿನಲ್ಲಿ ಇರುವಂತಹ ಬಂಗಾರದ ಮಂಗಳ ಸೂತ್ರಗಳನ್ನು ಕದಿಯುವಂಥದ್ದು ನಡೆಯುತ್ತಿದೆ. ಸೇಡಂ ನಲ್ಲಿ, ಚಿಂಚೋಳಿಯಲ್ಲಿ ಕಳ್ಳತನ ಇದರ ಬಗ್ಗೆ A.C.P., ಗೆ, D.C.P., ಗೆ, D.C., ಯವರಿಗೂ ಕೂಡ ಹೇಳಿದ್ದೇವೆ. ಆದರೆ ಯಾರೂ ಏನು ಮಾಡುತ್ತಿಲ್ಲ. Culprits ನ್ನು ಹಿಡಿಯುತ್ತಾರೆ ಆದರೆ ಅವರುಗಳನ್ನು ಮತ್ತೆ ಬಿಟ್ಟು ಬಿಡುತ್ತಾರೆ. ಅದಕ್ಕೆ ನಾನು M.P., ಯಾಗಿದ್ದಂತಹ ಸಂದರ್ಭದಲ್ಲಿ ಪತ್ರಿಕಾ ಗೋಷ್ಠಿಯನ್ನು ಮಾಡಿ ಇಲ್ಲಿಗೆ ರಾಜ್ಯ ಸರ್ಕಾರದವರು ಒಂದು Special Squad ಮಾಡಿ ಕಳುಹಿಸಿ, ಗುಲ್ಬರ್ಗಾದಲ್ಲಿರುವಂತಹ ಆಫೀಸರ್ ಏನಿದ್ದಾರೆ don’t believe them, they should have a separate staff there. ಇವನ್ನೆಲ್ಲಾ ಲಿಸ್ಟ್ ಮಾಡಿ ಕೊಟ್ಟರೂ ಅಪರಾಧಿಗಳನ್ನು ಹಿಡಿಯಲಿಲ್ಲವೆಂದರೆ ಹೇಗೆ? ಇಲ್ಲದೇ ಹೋದರೆ ಸಾರ್ವಜನಿಕರಿಗೆ ನಮ್ಮ ಮೇಲೆ ವಿಶ್ವಾಸ ಹೋಗಿ ಬಿಡುತ್ತದೆ. ಪೊಲೀಸ್‌ನವರ ಮೇಲೆ, ರಾಜ್ಯ ಸರ್ಕಾರದ ಮೇಲೆ ಭರವಸೆ ಹೋಗಿ ಬಿಡುತ್ತದೆ. ನನಗೆ ಬಂದ ಮಾಹಿತಿ ಪ್ರಕಾರ ಒಂದು ಕೋಟಿ ಐವತ್ತೆಂಟು ಲಕ್ಷ ರೂಪಾಯಿಗಳು ಹೋಗಿದೆ. ಇನ್ನು ಎಷ್ಟು ಹೋಗಿದೆಯೋ ಗೊತ್ತಿಲ್ಲ. ಏನು ಒಂದು ಕೋಟಿ ಐವತ್ತೆಂಟು ಲಕ್ಷ ರೂಪಾಯಿಗಳು ಹೋಗಿದೆ ಎಂದು ಹೇಳುತ್ತಾರೆ ಅದನ್ನು ಮೊದಲು ಸರ್ಕಾರದವರು ಕಳೆದುಕೊಂಡತಹ ಜನರಿಗೆ ಮೊದಲು ವಾಪಸ್ಸು ಕೊಡಬೇಕು. ಸರ್ಕಾರದವರು ಸಾರ್ವಜನಿಕರಿಂದ ತೆರಿಗೆಯ ರೂಪದಲ್ಲಿ ಹಣವನ್ನು ವಸೂಲು ಮಾಡುತ್ತೀರಿ, ಪೊಲೀಸ್‌ನವರನ್ನು ನೇಮಕ ಮಾಡಿಕೊಳ್ಳುತ್ತೀರಿ. Why should they pay? ನೀವು ಈ ರೀತಿಯಾದಾಗ

ಸರ್ಕಾರದವರು ರೆಕವರಿ ಮಾಡಲಿಲ್ಲ ಎಂದರೆ ಸಾರ್ವಜನಿಕರು ಏಕೆ ಸರ್ಕಾರಕ್ಕೆ ತೆರಿಗೆಯನ್ನು ಕೊಡಬೇಕು? ಹೆಣ್ಣು ಮಕ್ಕಳ ಮದುವೆಯನ್ನು ಮಾಡುವುದಕ್ಕೆ ಎಂದು ಹಣ ಮತ್ತು ಬಂಗಾರವನ್ನು ಇಟ್ಟುಕೊಂಡಿದ್ದು, ಅದುದರಿಂದ ಸರ್ಕಾರದವರು ಈಗ ಹಣ ಮತ್ತು ಬಂಗಾರವನ್ನು ಕಳೆದುಕೊಂಡವರಿಗೆ ಮೊದಲು ಕೊಡಿ, ರೆಕವರಿ ಮಾಡಿದ ಮೇಲೆ ಸರ್ಕಾರ ಬೇಕಾದರೆ ಅದನ್ನು ಇಟ್ಟುಕೊಳ್ಳಲಿ. ಮೊದಲು ಕಳೆದುಕೊಂಡವರಿಗೆ ಮೊದಲು ಕೊಡಿ ಎಂದು ವಾದ.

**ಶ್ರೀ ಅಲ್ಲಮ ಪ್ರಭುಪಾಟೀಲ್:-** ಮಾನ್ಯ ಸಭಾಪತಿಯವರೆ, ಲಕ್ಷ್ಮಿ ದೇವಸ್ಥಾನದಲ್ಲಿ ಕಳ್ಳತನವಾಯಿತು. ಸರಗಳ್ಳತನ ಎಲ್ಲಾ ಕಡೆಯಲ್ಲಿಯೂ ಆಗುತ್ತಿದೆ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಸತ್ಯಂಸಾತಿ, ಲಿಂಗಣ್ಣ ಸತ್ಯಂಪೇಟೆ ದೊಡ್ಡ ಲೇಖಕರು, ಬಸವ ಸಾಹಿತ್ಯದ ರಚನಕಾರರು, ಲಂಕೇಶ್ ಪತ್ರಿಕೆಯಲ್ಲಿ ಒಳ್ಳೆಯ ಲೇಖನ ಬರೆಯುತ್ತಿದ್ದರು, ಚೆನ್ನಬಸವೇಶ್ವರ ದೇವಸ್ಥಾನಕ್ಕೆ ಸಾಯಂಕಾಲ 6 ಗಂಟೆಗೆ ಹೋಗಿದ್ದಾರೆ. ಪ್ರವಚನ ಮಾಡಬೇಕು, ಅವರು ಬರಲಿಲ್ಲ ಎಂದು ಕಾಯುತ್ತಿದ್ದಾರೆ. ಅವರನ್ನು ರಾತ್ರಿಯೇ ಕೊಲೆ ಮಾಡಿಬಿಟ್ಟಿದ್ದಾರೆ. ಬೆಳಿಗ್ಗೆ ನೋಡಿದರೆ ಕೊಲೆ ಮಾಡಿ ಅಲ್ಲಿಯೇ ಬಿಸಾಕಿ ಹೋಗಿದ್ದಾರೆ. ನಾಲೆಯಲ್ಲಿ ಬಿಸಾಕಿ ಹೋಗಿಬಿಟ್ಟಿದ್ದಾರೆ. ಕೊಲೆ ಮಾಡಿದವರನ್ನು ಹಿಡಿಯುತ್ತಾರೆ. ಪೊಲೀಸ್‌ನವರು heart fail ಆಗಿ ಸತ್ತಿದ್ದಾರೆಂದು ಹೇಳುತ್ತಾರೆ. What does that mean, I don't understand. ತುಲುಸಾಧು, ಜೇಲಸಾಧು ಇಬ್ಬರನ್ನು ಹಿಡಿಯುತ್ತಾರೆ. DIG ಯವರು ಹೇಳುತ್ತಾರೆ. ಇಲ್ಲಾರಿ ಅವನು ಬಿದ್ದನಂತೆ ಅವನ ಜೇಬಿನಲ್ಲಿದ್ದ ಮೊಬೈಲ್ ಮತ್ತು 100 ರೂಪಾಯಿಗಳನ್ನು ಕಳ್ಳತನ ಮಾಡಿದ್ದಾರೆಂದು ಹೇಳುತ್ತಾರೆ. Can you believe it? ಇಂತಹ ಕೆಲಸ ಎಲ್ಲಾ ನಡೆದಿದೆ. ಗೃಹ ಸಚಿವರು ಇನ್ನು ಯುವಕರಾಗಿದ್ದಾರೆ, ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಆದರೆ ನಮ್ಮ ಗುಲ್ಬರ್ಗಾದ ಬಗ್ಗೆ ಮಾತ್ರ ನಮಗೆ ಗೃಹ ಸಚಿವರ ಬಗ್ಗೆ we are not happy about his performance.

**(ಈ ಹಂತದಲ್ಲಿ ಸಭಾಪತಿಯವರು ಸಭಾ ಪೀಠವನ್ನು ಆಲಂಕರಿಸಿದರು)**

**ಶ್ರೀ ಅಲ್ಲಮಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಹಿಂದಿನ ಅಧಿವೇಶನದಲ್ಲಿ ಪತ್ರಕರ್ತ ಲಿಂಗಣ್ಣ ಸತ್ಯಂಪೇಟೆಯ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಆದರೆ ಸರ್ಕಾರದಿಂದ ಇದುವರೆಗೂ ಉತ್ತರ ಬಂದಿಲ್ಲ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೆ, ಗುಲ್ಬರ್ಗಾ ನಗರದ ನೃಪತುಂಗ ಕಾಲೋನಿಯಲ್ಲಿ ಆಗಿರುವಂತಹ ಮನೆ ಕಳ್ಳತನ, ಅದೇ ರೀತಿ ಸರಣಿಯಾಗಿ ಕಾರ್ ಗ್ಲಾಸ್‌ಗಳನ್ನು ಹೊಡೆದು ಹಾನಿ ಮಾಡಿರತಕ್ಕಂಥದ್ದು, ಅದೇ ರೀತಿ ಕಡಗಂಚಿ ಬ್ಯಾಂಕ್ ದರೋಡೆ ಇತ್ಯಾದಿಗಳನ್ನು ಮಾನ್ಯ ಕೆ.ಬಿ. ಶಾಣಪ್ಪನವರು ತಿಳಿಸಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಲಿಖಿತ ಉತ್ತರವನ್ನು ಕೊಟ್ಟಿರುವುದರಲ್ಲಿ ತಿಳಿಸಿದ್ದೇನೆ. ಇವುಗಳು ತನಿಖೆಯ ಹಂತದಲ್ಲಿದೆ. ಕೆಲವೊಂದನ್ನು ಗುರುತಿಸಿ, ಹಿಡಿದು ಕೆಲವೊಂದನ್ನು ಕಳೆದುಕೊಂಡಂಥವರಿಗೆ ಕಳುವಾಗಿದ್ದನ್ನು ತಲುಪಿಸುವಂತಹ ಕೆಸಲವನ್ನು ಮಾಡಿದ್ದೇವೆ. ಇಷ್ಟಾದರೂ ಕೂಡ ನನಗೂ ಕೂಡ ತೃಪ್ತಿಯನ್ನು ತಂದಿಲ್ಲ. ಇಲ್ಲಿ ಆಗಿರುವಂತಹ ಕಳ್ಳತನ, ಸರಣಿ ಕಾರುಗಳ ಗ್ಲಾಸ್‌ಗಳನ್ನು ಹೊಡೆಯುವಂಥದ್ದು, ಕಡಗಂಚಿಯಲ್ಲಿ ಆಗಿರತಕ್ಕಂತಹ ಬ್ಯಾಂಕ್ ದರೋಡೆ ಬಗ್ಗೆ ದರೋಡೆಕೋರರನ್ನು ಹಿಡಿಯಲು ವಿಶೇಷವಾದಂತಹ ಒಂದು ತಂಡವನ್ನು ರಚನೆ ಮಾಡಲಾಗಿದೆ. ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಅದೇ ರೀತಿ ಸತ್ಯಂಪೇಟೆ ಲಿಂಗಣ್ಣನವರ ಕೊಲೆ ಪ್ರಕರಣವನ್ನು CID ಗೆ ವಹಿಸಲಾಗಿದೆ. ಅದು ಕೂಡ ಪ್ರಗತಿಯಲ್ಲಿದೆ. ಇದೆಲ್ಲಾ ಮಾಡಿದ್ದರೂ ಕೂಡ ಮಾನ್ಯ ಸದಸ್ಯರು ಗುಲ್ಬರ್ಗಾ ಪೊಲೀಸ್‌ನವರ ಮೇಲೆ ನಮಗೆಲ್ಲಾ ವಿಶ್ವಾಸ ಹೋಗಿದೆ ಎಂದು ಹೇಳಿದ್ದಾರೆ. ಆದ್ದರಿಂದ ಬೆಂಗಳೂರಿನಿಂದ ಒಬ್ಬ ಹಿರಿಯ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ ಗುಲ್ಬರ್ಗಾದಲ್ಲಿ ಏನು ಈ ರೀತಿಯ ಕೊಲೆ ಇರಬಹುದು, ಸುಲಿಗೆ ಇರಬಹುದು, ಕಳ್ಳತನ ಇರಬಹುದು ಇದನ್ನು review ಮಾಡಿ, ಅಲ್ಲಿ ಚುರುಕಾಗಿ ಕೆಲಸವಾಗುವುದಕ್ಕೆ, ಕಳ್ಳತನ ಏನಾಗಿದೆ ಅದನ್ನೆಲ್ಲಾ ಕೂಡಲೇ trace ಮಾಡುವುದಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ

ಸಭಾಪತಿಯವರೆ, ಗುಲ್ಬರ್ಗಾ ನಗರದಲ್ಲಿ 15 Sub-Inspector ಹುದ್ದೆಗಳು ಖಾಲಿ ಇತ್ತು, 15 ದಿವಸ ಹಿಂದೆ 15 Sub-Inspector ಹುದ್ದೆಗಳನ್ನು ತುಂಬಲಾಗಿದೆ. ಅದೇ ರೀತಿಯಲ್ಲಿ 115 ಸಿವಿಲ್ ಪೊಲೀಸ್ ಹುದ್ದೆಗಳು ಕೂಡ ಖಾಲಿ ಇತ್ತು. 115 ಸಿವಿಲ್ ಪೊಲೀಸ್ ಹುದ್ದೆಗಳನ್ನು ಕೂಡ ತುಂಬಲಾಗಿದೆ. ಈಗ ಆಯಕಟ್ಟಿನ ಜಾಗದಲ್ಲಿ ಸಿಸಿ ಟಿ.ವಿ. ಅಳವಡಿಸುವಂಥದ್ದಕ್ಕೆ ಮತ್ತು police beatನ್ನು ಹೆಚ್ಚು ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈಗ ಹುದ್ದೆಗಳನ್ನು ಭರ್ತಿ ಮಾಡಿರುವುದರಿಂದ ಮತ್ತು C.C. TV ಯನ್ನು ಅಳವಡಿಸುವುದರಿಂದ ಮುಂದೆ ಆಗುವಂತಹ ಅನಾಹುತಗಳನ್ನು ಕಡಿಮೆ ಮಾಡುವುದಕ್ಕೆ ಮತ್ತು ಅಪರಾಧಿಗಳನ್ನು ಬಂಧಿಸುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಕೆ.ಬಿ. ಶಾಣಪ್ಪನವರ ವಿನಂತಿಯ ಮೇರೆಗೆ ಅಲ್ಲಿಗೆ ಒಬ್ಬ ಹಿರಿಯ ಅಧಿಕಾರಿಯ ತಂಡವನ್ನು ಕಳುಹಿಸಿ ಪೂರ್ಣ review ಮಾಡುವಂಥದ್ದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಬೆಂಗಳೂರು, ಹುಬ್ಬಳಿ ಮುಂತಾದ ಕಡೆಗಳಲ್ಲೆಲ್ಲಾ recovery ಆಗುತ್ತದೆ. ಆದರೆ ನಮ್ಮಲ್ಲಿ ಆ ರೀತಿ ಆಗುತ್ತಿಲ್ಲ.

**ಸಭಾಪತಿಯವರು:–** ಅಲ್ಲಿ ಕೂಡ ಮಾಡುತ್ತೇವೆ ಎಂದು ಮಾನ್ಯ ಸಚಿವರು ಈಗಾಗಲೇ ತಿಳಿಸಿದ್ದಾರಲ್ಲವೆ?

**ಶ್ರೀ ಕೆ.ಬಿ. ಶಾಣಪ್ಪ:–** ನಾನು ಒಪ್ಪುತ್ತೇನೆ. I have got a great respect for him.

**Mr. CHAIRMAN:-** Recovery ಆದಂತಹ ಸಾಮಾನುಗಳನ್ನು ವಾಪಸ್ ಕೊಡುತ್ತಿಲ್ಲ. ಅದಕ್ಕೆ ವ್ಯವಸ್ಥೆ ಮಾಡಬೇಕೆಂದು ತಾವು ಕೇಳುತ್ತಿದ್ದೀರಿ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ recovery ಆಗುತ್ತದೆ, ಹುಬ್ಬಳಿಯಲ್ಲಿ recovery ಆಗುತ್ತದೆ, ಅದನ್ನೆಲ್ಲಾ ವಸ್ತುಗಳನ್ನು ಕಳೆದುಕೊಂಡಂತಹ ಜನರಿಗೆ ಕೊಟ್ಟಿದ್ದನ್ನು ದೂರದರ್ಶನದಲ್ಲಿ ತೋರಿಸಲಾಗುತ್ತದೆ. ಆದರೆ ನಮ್ಮಲ್ಲಿ ಮಾತ್ರ ಆ ರೀತಿ recovery ಆಗುತ್ತಿಲ್ಲ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಗುಲ್ಬರ್ಗಾದ ಮಾರುಕಟ್ಟೆ ಬಳಿಯಲ್ಲಿರುವ ಬ್ರಹ್ಮಪುರ ಪೊಲೀಸ್ ಸ್ಟೇಷನ್ ಪಕ್ಕದಲ್ಲಿಯೇ ಒಂದು ಕೊಲೆ ನಡೆದಿದೆ.

**ಶ್ರೀ ಕೆ.ಬಿ. ಶಾಣಪ್ಪ:–** ಇಂತಹ ಬಹಳಷ್ಟು ಪ್ರಕರಣಗಳು ನಡೆದಿವೆ. ಈ ಸಂದರ್ಭದಲ್ಲಿ ನಾನು ಹೇಳುವುದಿಷ್ಟೆ. ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ನಮ್ಮ ಪೊಲೀಸರು ಇಷ್ಟೆಲ್ಲಾ ಕಳ್ಳತನವಾಗಿದ್ದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ದೊಡ್ಡದಾಗಿ ತೋರಿಸಲಾಗುತ್ತದೆ. ಬಹಳ ಸಂತೋಷ. ಆದರೆ ಅದೇರೀತಿಯ ವ್ಯವಸ್ಥೆ ನಮ್ಮ ಗುಲ್ಬರ್ಗಾದಲ್ಲಿ ಏಕೆ ಆಗುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಮತ್ತು ಹುಬ್ಬಳ್ಳಿಯಂತೆಯೇ ಗುಲ್ಬರ್ಗಾದಲ್ಲಿ ಕೂಡ ಅದೇರೀತಿಯ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ, ವಶಪಡಿಸಿಕೊಂಡಂತಹ ವಸ್ತುಗಳನ್ನು ಕೂಡಲೇ ನಾಗರೀಕರಿಗೆ ವಾಪಸ್ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಜೊತೆಗೆ ಅಲ್ಲಿ ಏನೇನು ತಪ್ಪುಗಳಾಗಿವೆ, ಅವುಗಳನ್ನು ಯಾವ ರೀತಿ ಸರಿಪಡಿಸಬೇಕು, ಅಲ್ಲಿರುವಂತಹ ವ್ಯವಸ್ಥೆಯನ್ನೇನಾದರೂ ಬದಲಾವಣೆ ಮಾಡಬೇಕಾಗಿದೆಯೇ ಎನ್ನುವಂತಹ ಅಂಶಗಳನ್ನೆಲ್ಲಾ ಪರಿಶೀಲನೆ ಮಾಡುವುದಕ್ಕಾಗಿ ಅಲ್ಲಿಗೆ ಒಂದು ತಂಡವನ್ನು ಕಳುಹಿಸಿಕೊಟ್ಟು ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ.

**ಸಭಾಪತಿಯವರು:–** ಈಗ ನಾನು ಸದನವನ್ನು ಮಧ್ಯಾಹ್ನ ಎರಡೂವರೆ ಗಂಟೆಯವರೆಗೆ. . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಸರ್ಕಾರದ ಕೆಲವು ಕೆಲಸ ಕಾರ್ಯಗಳಿರುವುದರಿಂದ ಊಟದ ನಂತರ ಮತ್ತೆ ಸದನವನ್ನು ಮುಂದುವರೆಸೋಣ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಜೊತೆಯಲ್ಲಿ ನೆನ್ನೆ ಮಾತನಾಡಿದ್ದೇನೆ, ಇವೊತ್ತು ಕೂಡ ಮಾತನಾಡಿದ್ದೇನೆ. ಇವೊತ್ತು ಬೆಳಿಗ್ಗೆ ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕೂಡ ಹಾಜರಿದ್ದರು. ಈ ಸದನವನ್ನು ಮಧ್ಯಾಹ್ನ 1.30 ಗಂಟೆಯ ವೇಳೆಗೆ ಮುಗಿಸಬೇಕಾಗುತ್ತದೆ ಎಂದು ತಾವು ಕೂಡ ತಿಳಿಸಿದ್ದೀರಿ. ಆಗಲಿ ಕೊನೆಯ ಪಕ್ಷ ಮಧ್ಯಾಹ್ನ 2.00 ಗಂಟೆಯ ವೇಳೆಗಾದರೂ ಮುಗಿಸಿ, ಬಾಕಿ ಇರುವಂತಹ ವಿಚಾರಗಳೇನಾದರೂ ಇದ್ದಲ್ಲಿ ಅವುಗಳನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ನಾವು ಹೇಳಿದಾಗ ತಾವು ದೊಡ್ಡ ಮನಸ್ಸು ಮಾಡಿ, ಹೌದು ಎಂದು ಒಪ್ಪಿಕೊಂಡಿದ್ದೀರಿ.

ಈಗ ನನಗೆ ಬಂದಿರುವಂತಹ ಮಾಹಿತಿ ಪ್ರಕಾರ, ಕೆಲವು ವಿಧೇಯಕಗಳ ಬಗ್ಗೆ ಕೆಳಮನೆಯಿಂದ ಸಂದೇಶ ಬಂದಿದೆ, ಅದನ್ನು ತಾವು ಈ ಸದನದ ಗಮನಕ್ಕೆ ತಂದಿದ್ದೀರಿ. ಆ ವಿಚಾರದಲ್ಲೇನೂ ತಪ್ಪಿಲ್ಲ. ಆದರೆ ಇವೊತ್ತು ತಾವು ಊಟದ ನಂತರ ಪುನಃ ಸದನ ಸೇರಬೇಕು, ಕೆಳಮನೆಯಿಂದ ಬಂದಿರುವಂತಹ ವಿಧೇಯಕಗಳ ಬಗ್ಗೆ ಇವೊತ್ತೇ ಚರ್ಚೆ ಮಾಡಿ ಅವೆಲ್ಲವುಗಳಿಗೂ ಮಂಜೂರಾತಿಯನ್ನು ಕೊಡಬೇಕೆಂಬುದು ನಿಮ್ಮ ಭಾವನೆಯಾಗಿದ್ದರೆ ಸರ್ಕಾರದವರು ವಿರೋಧ ಪಕ್ಷದವರನ್ನು 'we will take it for granted, ನಮಗೆ majority ಇದೆ, ನಾವು ಏನು ಬೇಕಾದರೂ ಮಾಡಿಕೊಂಡು ಹೋಗುತ್ತೇವೆ' ಎನ್ನುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಂತಹ ಒಂದು ಹಂತಕ್ಕೆ ತಾವು ಬರುವುದಿದ್ದರೆ, ನಮ್ಮ ವಿರೋಧ ಪಕ್ಷಗಳ ಸಹಕಾರ ಇನ್ನು ಮುಂದಕ್ಕೆ ಯಾವುದಕ್ಕೂ ಬೇಡ ಎನ್ನುವಂತಹ ಪರಿಸ್ಥಿತಿ ನಿರ್ಮಾಣ ಮಾಡುವುದಿದ್ದರೆ ಮತ್ತು ನಾವು ತಮ್ಮ ಜೊತೆಯಲ್ಲಿ ಚರ್ಚೆ ಮಾಡಿದ ಮೇಲೆ ಯಾವುದೇ ಕಾರಣಕ್ಕೂ ಮಧ್ಯಾಹ್ನ 2.00 ಗಂಟೆಯ ಮೇಲೆ ನಾವು ಸದನವನ್ನು ಮುಂದುವರೆಸುವುದಿಲ್ಲ ಎಂದು ತಾವು ತಿಳಿಸಿರುವ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ವಿಧೇಯಕಗಳನ್ನೇನು

ತಂದಿದ್ದೀರಿ ಅವು ಬಹಳ ಪ್ರಮುಖವಾಗಿರುವಂತಹ ವಿಧೇಯಕಗಳೆಂಬುದು ನಮಗೆ ಗೊತ್ತಿದೆ.

ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಸರ್ಕಾರದವರು ತಂದಿದ್ದಾರೆ. ಮಾನ್ಯ ಆರ್. ಅಶೋಕ್‌ರವರು ತರಲು ಉದ್ದೇಶಿಸಿದ್ದ ವಿಧೇಯಕವನ್ನು ಈ ಅಧಿವೇಶನದಲ್ಲಿ ತರುವುದಿಲ್ಲ ಎನ್ನುವಂತಹ ವಿಚಾರ ನಮಗೆ ಗೊತ್ತಾಗಿದೆ, ಇನ್ನುಳಿದ 6 ವಿಧೇಯಕಗಳನ್ನು ಯಾವ ಹಿನ್ನೆಲೆಯಲ್ಲಿ ತರಲಾಗುತ್ತಿದೆ ಎನ್ನುವಂತಹ ವಿಚಾರ ಕೂಡ ನಮಗೆ ಗೊತ್ತಾಗಿದೆ. ಈಗಾಗಲೇ ಕೆಳಮನೆಯಲ್ಲಿ ನಮ್ಮ ಸ್ನೇಹಿತರು ಹೇಳಿದ್ದಾರೆ, ದಯವಿಟ್ಟು ತಾವು ಬೇಕಾದರೆ ಸದನವನ್ನು ಮುಂದೂಡಿ, ಇಲ್ಲವಾದರೆ ಅದಕ್ಕೆ ಸಮಯ ಕೊಡಿ, ಆ ವಿಧೇಯಕಗಳ ಬಗ್ಗೆ ಚರ್ಚೆ ಮಾಡಿ ಅದರ ಸಾಧಕಬಾಧಕಗಳೇನು ಎಂಬುದನ್ನು ನೋಡೋಣ ಎಂದು ಹೇಳಿದಾಗ ಕೆಳಮನೆಯಲ್ಲಿ ಕೂಡ ಅದನ್ನು ಒಪ್ಪದೆ ಅವರೆಲ್ಲರೂ ಸಹ ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಸದನವನ್ನು ಬಿಟ್ಟು ಹೊರಗಡೆ ಹೋಗಿದ್ದಾರೆ. ಈ ಸದನದಲ್ಲಿ ಆ ರೀತಿಯ ಪರಿಸ್ಥಿತಿ, ಆ ಸಂಪ್ರದಾಯವನ್ನು ನಾವು ಖಂಡಿತವಾಗಿಯೂ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ತಮ್ಮಲ್ಲಿ ನಾವು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇವೆ. ಈ ಐದಾರು ಪ್ರತ್ಯೇಕ ಖಾಸಗಿ ವಿಶ್ವವಿದ್ಯಾಲಯಗಳ ಹಿನ್ನೆಲೆ ಬಹಳ ದೊಡ್ಡದಾಗಿರುವ ವಿಚಾರ ತಮಗೂ ಗೊತ್ತಿದೆ, ನಮಗೂ ಗೊತ್ತಿದೆ, ಸನ್ಮಾನ್ಯ ಮುಖ್ಯಮಂತ್ರಿಯವರಿಗೂ ಗೊತ್ತಿದೆ. ಈ ಹಿನ್ನೆಲೆಯಲ್ಲಿ ನಾನು ಹೇಳುತ್ತೇನೆ, ದಯವಿಟ್ಟು ತಾವು ನಮಗೆ ಆಶ್ವಾಸನೆಯನ್ನು ಕೊಟ್ಟಿರುವ ಹಿನ್ನೆಲೆಯಲ್ಲಿ ಮಧ್ಯಾಹ್ನ 2.00 ಗಂಟೆಯ ವೇಳೆಗೆ ಈ ಸದನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲೇಬೇಕಾಗುತ್ತದೆ. ಅದನ್ನು ಬಿಟ್ಟು ತಾವು ಪುನಃ ಮಧ್ಯಾಹ್ನದ ನಂತರ ನಾವು ಸದನ ಸೇರಬೇಕಾಗುತ್ತದೆ, ಬಂದಿರತಕ್ಕಂತಹ ವಿಧೇಯಕಗಳಿಗೆಲ್ಲಾ ನಾವು ಅಂಗೀಕಾರ ನೀಡಿಯೇ ಹೋಗುವುದು. ಮಧ್ಯರಾತ್ರಿ ಒಂದು ಗಂಟೆಯಾದರೂ ನಾವು ಈ ಸದನವನ್ನು ನಡೆಸುತ್ತೇವೆ ಎನ್ನುವಂತಹ ತೀರ್ಮಾನಕ್ಕೆ ಆಡಳಿತ ಪಕ್ಷ, ಮುಖ್ಯಮಂತ್ರಿಯವರು ಮತ್ತು ಸಭಾಪತಿಯವರಾದ ತಾವು ಕೂಡ ಬರುವುದಾದರೆ ನಾನು

ಖಂಡಿತವಾಗಿಯೂ ಹೇಳುತ್ತೇನೆ, ಬಹುಶಃ ನಾವು ಈ ಸದನದಲ್ಲಿ ಭಾಗವಹಿಸಬೇಕಾದಂತಹ ಅವಶ್ಯಕತೆ ಇಲ್ಲ. ಇದರ ಜೊತೆಗೆ ಅತ್ಯಂತ ದೊಡ್ಡ ಪ್ರಮಾಣದ ಅವ್ಯವಹಾರವನ್ನು ಮಾಡಿರತಕ್ಕಂತಹ ಪ್ರತ್ಯೇಕ ವಿಶ್ವವಿದ್ಯಾಲಯದ ಒಂದು ವಿಧೇಯಕ ಕೂಡ ಇದೆ. ಅದರಲ್ಲಿ ಸುಮಾರು 100 ಕೋಟಿ ರೂಪಾಯಿಗಳಷ್ಟು ಅವ್ಯವಹಾರ ನಡೆದಿರತಕ್ಕಂಥದ್ದು ನಮಗೆಲ್ಲರಿಗೂ ಗೊತ್ತಿರತಕ್ಕಂತಹ ವಿಚಾರವಾಗಿದೆ. ಇಂತಹ ವಿಧೇಯಕಗಳನ್ನು ತಂದಿರುವಾಗ ಅವುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದೆ, ಇಡೀ ರಾಜ್ಯದಲ್ಲಿನ ವಿಶ್ವವಿದ್ಯಾಲಯಗಳಲ್ಲಿರುವಂತಹ ನಮ್ಮ ಮಕ್ಕಳ ಭವಿಷ್ಯವನ್ನು ಹಾಳು ಮಾಡುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗುತ್ತಿದೆ. ನಾನು ಈ ವಿಚಾರವನ್ನು ಮನನೊಂದು ಹೇಳುತ್ತಿದ್ದೇನೆ.

ಪಾರ್ಲಿಮೆಂಟ್‌ನಲ್ಲಿ FDI (Foreign Direct Investment) ವಿಚಾರವಾಗಿ ಚರ್ಚೆ ಬಂದಂತಹ ಸಂದರ್ಭದಲ್ಲಿ "ಚಿಲ್ಲರೆ ವ್ಯಾಪಾರ" ಮಾಡಿದರು. ಕಡೆಗೆ ಇದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಬಹಳ ದೊಡ್ಡ ಚರ್ಚೆ ಆಯಿತು. ಸುಮಾರು 125 ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡುವಂತಹ Walmart ನವರು ನಮ್ಮ ದೇಶಕ್ಕೆ ಬಂದು ಅದರ ಮುಖಾಂತರ ಲಾಬಿ ಮಾಡಿ ನಮ್ಮ ದೇಶವನ್ನು ಮಾರಾಟಕ್ಕಿಟ್ಟಿದ್ದಾರೆ ಎನ್ನುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ ಎಂದು ಲೋಕಸಭೆಯಲ್ಲಿ ಚರ್ಚೆ ಮಾಡಿ ಅದರ ಬಗ್ಗೆ ತನಿಖೆ ನಡೆಸಬೇಕೆಂದು ಬಿ.ಜೆ.ಪಿ. ಪಕ್ಷದ ಹಿರಿಯ ನಾಯಕರು ಒತ್ತಾಯಿಸುತ್ತಿದ್ದಾರೆ. ಇಂಥದ್ದೇ ಒಂದು ಲಾಬಿ ಈ ಪ್ರತ್ಯೇಕ ಖಾಸಗಿ ವಿಶ್ವವಿದ್ಯಾಲಯವನ್ನು ಮಾಡುತ್ತಿರುವುದು, ಅದರ ಮುಖಾಂತರ ದೊಡ್ಡ ಪ್ರಮಾಣದಲ್ಲಿ ಹಣವನ್ನು ಮಾಡತಕ್ಕಂತಹ ಲಾಬಿ ಏನಿದೆ, ಈ ಲಾಬಿ ಈ ರೀತಿ ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ನಾವು ನಮ್ಮ ಈ ವಿಧೇಯಕಗಳನ್ನು ಮಾರಾಟ ಮಾಡತಕ್ಕಂತಹ ಪರಿಸ್ಥಿತಿ ನಿರ್ಮಾಣ ಆಗಬಾರದು ಎನ್ನುವಂತಹ ಚಿಂತನೆಯಿಂದ ನಾನು ಈ ಮಾತುಗಳನ್ನಾಡುತ್ತಿದ್ದೇನೆ. ಆದ್ದರಿಂದ ತಾವು ನಮಗೆ ಕೊಟ್ಟಿರತಕ್ಕಂತಹ ಆಶ್ವಾಸನೆಯ ಹಿನ್ನೆಲೆಯಲ್ಲಿ ಇವೊತ್ತು ಮಧ್ಯಾಹ್ನ 2.00 ಗಂಟೆಯ ವೇಳೆಗೆ

ಸದನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡದೆ ಹೋದರೆ, ಬಹುಶಃ ಪುನಃ ಮಧ್ಯಾಹ್ನದ ಮೇಲೆ ನಾವು ಸೇರುತ್ತೇವೆ, ಈ ವಿಧೇಯಕಗಳನ್ನೆಲ್ಲಾ ಅಂಗೀಕಾರ ಮಾಡುತ್ತೇವೆ ಎನ್ನುವುದು ತಮ್ಮ ಚಿಂತನೆಯಾದರೆ ನಾವೆಲ್ಲರೂ ಸಭಾತ್ಯಾಗ ಮಾಡಿ ಹೋಗುತ್ತೇವೆ, ನೀವು ಏನು ಬೇಕಾದರೂ ಮಾಡಿಕೊಳ್ಳಿ, ಯಾವ ವಿಧೇಯಕವನ್ನು ಬೇಕಾದರೂ ಮಂಜೂರು ಮಾಡಿಕೊಳ್ಳಿ, ನಾವು ನಿಮಗೆ ಸಹಕಾರ ಕೊಡುವಂತಹ ಪ್ರಶ್ನೆಯೇ ಇಲ್ಲ. ಇನ್ನು 3 ತಿಂಗಳು ಕಳೆಯಲಿ, ಈಗ ಯಾವ ವಿಧೇಯಕಗಳನ್ನೆಲ್ಲಾ ತಾವು ಅಂಗೀಕಾರ ಮಾಡುತ್ತೀರಿ ಅವೆಲ್ಲವನ್ನೂ ಮುಂದೆ ಬರುವಂತಹ ಸರ್ಕಾರ ರದ್ದು ಮಾಡತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎನ್ನುವಂತಹ ವಿಚಾರವನ್ನು ಕೂಡ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಕೂಡ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

(ಗೊಂದಲ)

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ನಾಣಯ್ಯನವರು ಸರ್ಕಾರದ ಮೇಲೆ ಒಂದು ಗುರುತರವಾದ ಆಪಾದನೆಯನ್ನು ಮಾಡಿದ್ದಾರೆ. ಲಾಬಿ ಎಂಬುದಕ್ಕಿಂತ ಹೆಚ್ಚಾಗಿ . . .

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಇಡೀ ಜಗತ್ತು ಮಾತನಾಡುತ್ತಿದೆ. ಈ ಸರ್ಕಾರದವರು ಎಲ್ಲವನ್ನೂ ಮಾರಿಕೊಂಡು ಅಡ್ಡಾಡುತ್ತಿದ್ದಾರೆ, ಈ ರೀತಿ ಲೂಟಿ ನಡೆಯುತ್ತಿದ್ದರೂ ಸಹ ಮತ್ತೆ ಈ ಖಾಸಗಿ ವಿಶ್ವವಿದ್ಯಾನಿಲಯ ವಿಧೇಯಕವನ್ನೇಕೆ ಸರ್ಕಾರ ತರುತ್ತಿದೆ? ಈ ವಿಧೇಯಕದ ಮಂಜೂರಾತಿಗೆ ನಾವು ಯಾರೂ ಸಹ ಒಪ್ಪುವುದಿಲ್ಲ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ನಾಣಯ್ಯನವರು ಮಾಡಿರುವಂತಹ ಈ ಆಪಾದನೆ ಏನಿದೆ ಅದನ್ನು ಅವರು ರುಜುವಾತು ಪಡಿಸಬೇಕಾಗುತ್ತದೆ. ಇಲ್ಲವಾದರೆ ಅವರು ಮಾಡಿರುವಂತಹ ಈ ಆಪಾದನೆ ಏನಿದೆ ಅದನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ. ಬೆಳಿಗ್ಗೆ ತಮ್ಮ ಜೊತೆಯಲ್ಲಿ ನಡೆದ ಮಾತುಕತೆಯ ಸಂದರ್ಭದಲ್ಲಿ ಮಧ್ಯಾಹ್ನ 2.00 ಗಂಟೆ ವೇಳೆಗೆ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗುತ್ತದೆ ಎಂದು ಹೇಳಿದಂತಹ ಸಂದರ್ಭದಲ್ಲಿ ನಾನು ಸಹ ಅಲ್ಲಿದ್ದೆ, ಆದರೆ ಇವೊತ್ತಿನ ಪರಿಸ್ಥಿತಿ ಏನಿದೆ ಎಂದರೆ ಸಹಕಾರ ಇಲಾಖೆಗೆ ಸಂಬಂಧಿಸಿದ ವಿಧೇಯಕವನ್ನು ಫೆಬ್ರವರಿಯೊಳಗೆ ಮಂಡನೆ ಮಾಡಲೇಬೇಕಾಗಿತ್ತು. ಆ ರೀತಿ ಅದನ್ನು ಮಂಡನೆ ಮಾಡದಿದ್ದರೆ ಒಂದು ದೊಡ್ಡ vacuum ಸೃಷ್ಟಿಯಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಅದನ್ನು ಬೇಕಾದರೆ ಮಾಡಿ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಸಹಕಾರ ವಿಧೇಯಕದ ಬಗ್ಗೆ ಏನು ಹೇಳಲಾಗಿದೆ ಅದು ನಿಜ.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಸಭಾನಾಯಕರು ಮಾತನಾಡಲಿ, ಅವರು ಏನು ಹೇಳುತ್ತಾರೆಯೋ ಕೇಳೋಣ.

(ಗೊಂದಲ)

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಕೆಳಮನೆಯಿಂದ ಬಂದಿರತಕ್ಕಂತಹ ಕೆಲವು ವಿಧೇಯಕಗಳೇನಿವೆ ಅವು ಸರ್ಕಾರದ ಕಾರ್ಯವೈಖರಿಯಲ್ಲಿ ಅತ್ಯವಶ್ಯಕವಾಗಿವೆ. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ ಇರಬಹುದು, ಖಾಸಗಿ ವಿಶ್ವವಿದ್ಯಾನಿಲಯ ವಿಧೇಯಕ ಇರಬಹುದು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ವಿಧೇಯಕ ಇರಬಹುದು ಇಂತಹ ಗುರುತರವಾದ ವಿಧೇಯಕಗಳನ್ನು ನಾವು

ಇವೊತ್ತು ನಮ್ಮ ಕಾರ್ಯವೈಖರಿಯನ್ನು ಬದಲಾವಣೆ ಮಾಡತಕ್ಕಂಥದ್ದರಲ್ಲಿ, ವಿಶೇಷವಾಗಿ . . .

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸರ್ಕಾರದವರು ಸದನವನ್ನು ತಪ್ಪು ದಾರಿಗೆಳೆಯುವುದು ಸರಿಯಲ್ಲ.

(ಗೊಂದಲ)

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಒಂದು ಕೆಲಸ ಮಾಡೋಣ. ಈಗ ಊಟಕ್ಕಾಗಿ ಸದನವನ್ನು ಮುಂದೂಡುವುದೇ ಬೇಡ, ಸುಮಾರು ಅರ್ಧ ಅಥವಾ ಮುಕ್ಕಾಲು ಗಂಟೆ ಕಾಲ ಸದನವನ್ನು ನಡೆಸಿ, ವಿಧೇಯಕಗಳನ್ನು ತೆಗೆದುಕೊಂಡು ಪೂರ್ಣಗೊಳಿಸೋಣ. ಅನಂತರ ಸದನವನ್ನು ಅನಿರ್ಧಿಷ್ಟ ಅವಧಿಗೆ ಮುಂದೂಡಬಹುದಾಗಿದೆ.

(ಗೊಂದಲ)

**ಸಭಾಪತಿಯವರು:–** ಎಲ್ಲರೂ ಮಾತನಾಡಿದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಖಾಸಗಿ ವಿಶ್ವವಿದ್ಯಾಲಯ ವಿಧೇಯಕದ ಬಗ್ಗೆ ಮಾನ್ಯ ನಾಣಯ್ಯನವರು ಮಾಡಿರುವಂತಹ ಆಪಾದನೆಯನ್ನು ದಯಮಾಡಿ ಅವರು ವಾಪಸ್ ತೆಗೆದುಕೊಳ್ಳಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಈ ವಿಚಾರವಾಗಿ ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ. ವಿಧೇಯಕಗಳ ಮೇಲೆ ಸಾಕಷ್ಟು ಚರ್ಚೆಯಾಗಬೇಕು, ಏಕೆಂದರೆ ಶಾಸನಗಳನ್ನು ರಚನೆ ಮಾಡುವ ಸಲುವಾಗಿಯೇ ನಾವು

ಶಾಸಕರೆಂದು ಆಯ್ಕೆಯಾಗಿದ್ದೇವೆ. ಆ ದೃಷ್ಟಿಯಿಂದ ಶಾಸನಗಳನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ ವಿಧಿವತ್ತಾಗಿ ಅದನ್ನು ಅಧ್ಯಯನ ಮಾಡುವ ಸಲುವಾಗಿ ಶಾಸಕರಿಗೆಲ್ಲಾ ಕನಿಷ್ಟ ಪಕ್ಷ 2 ದಿವಸಗಳ ಮೊದಲೇ ವಿಧೇಯಕಗಳನ್ನು ಕಳುಹಿಸಿಕೊಟ್ಟು, ಅವುಗಳ ಮೇಲೆ ನಾವು ಅಭ್ಯಾಸ ಮಾಡಿ ಪರಿಣಾಮಕಾರಿಯಾಗಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗುವಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡಿಕೊಡುವುದಾಗಿ ತಾವು ತಿಳಿಸಿದ್ದೀರಿ. ಹೀಗಿರುವಾಗ ಕೊನೆಯ ಗಳಿಗೆಯಲ್ಲಿ ಖಾಸಗಿ ವಿಶ್ವವಿದ್ಯಾನಿಲಯ ವಿಧೇಯಕದಂತಹ ಅತ್ಯಂತ ಮಹತ್ತರವಾದಂತಹ ಒಂದು ವಿಧೇಯಕವನ್ನು ತಂದು ಚರ್ಚೆಗೆ ಅವಕಾಶವಿಲ್ಲದಂತೆ ಅಂಗೀಕರಿಸುವುದು ಸರಿಯಲ್ಲ. ಏಕೆಂದರೆ ಇವೊತ್ತು ಶಿಕ್ಷಣವನ್ನು commercial ಆಗುವಂತಹ ಮಟ್ಟಕ್ಕೆ ಒಯ್ಯುವಂಥದ್ದು ಸರಿಯಲ್ಲ ಮತ್ತು ಕೆಲವು ಖಾಸಗಿ ವಿಶ್ವವಿದ್ಯಾಲಯಗಳ ಮೇಲೆ ಅನೇಕ ಗುರುತರವಾದಂತಹ ಆಪಾದನೆಗಳಿರುವಂತಹ ಸಂದರ್ಭದಲ್ಲಿ ಈ ರೀತಿ ಶಿಕ್ಷಣ ಕ್ಷೇತ್ರಕ್ಕೆ ಮಾರಕವಾಗುವಂತಹ, ಕೊಡಲಿ ಪೆಟ್ಟಾಗಿ ಪರಿಣಮಿಸುವಂತಹ ಈ ವಿಧೇಯಕಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶವಿಲ್ಲ.

(2.00 ಗಂಟೆ)

ಕೆಳಮನೆಯಲ್ಲಿ ಈ ವಿಧೇಯಕ ಅಂಗೀಕಾರವಾಗಿದೆ ಎಂದು ಹೇಳಿ ಈ ಮನೆಯಲ್ಲಿ ತರಾತುರಿಯಲ್ಲಿ ವಿಧೇಯಕವನ್ನು ಪಾಸ್ ಮಾಡುವಂತಹ ಸರ್ಕಾರದ ಉದ್ದೇಶವಾದರು ಏನು? ಮಾನ್ಯ ಸಭಾಪತಿಯವರೇ, ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತಾವೇ ಹೇಳಿದಿರಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಇದ್ದರು, ಸಭಾನಾಯಕರು, ಮಾನ್ಯ ನಾಣಯ್ಯನವರು ಹಾಗೂ ನಾನು ಇದ್ದೆ, ಆ ಸಮಯದಲ್ಲಿ ಎಲ್ಲರೂ ಸೇರಿ ಚರ್ಚೆ ಮಾಡಿದೆವು. ಕನಿಷ್ಠಪಕ್ಷ ಎರಡು ದಿನ ಮುಂಚಿತವಾಗಿ ನೀವು ವಿಧೇಯಕಗಳನ್ನು ಕಳಿಸಿಕೊಡಿ, ಅದರ ಮೇಲೆ ನಾವು ಚೆನ್ನಾಗಿ ಹೋಂವರ್ಕ್ ಮಾಡಿ, ಅದರ ಸಾಧಕ-ಬಾಧಕಗಳನ್ನು ನೋಡಿ ಯಾವ ಯಾವ ಕ್ಷೇತ್ರಕ್ಕೆ ಏನು ಉಪಯೋಗವಾಗುತ್ತದೆ, ರಾಜ್ಯದ ಜನತೆಗೆ ಇದರಿಂದ ಏನು ಉಪಯೋಗವಾಗುತ್ತದೆ ಎಂಬುದರ ಬಗ್ಗೆ ಸುದೀರ್ಘವಾಗಿ

ಚರ್ಚೆ ಮಾಡುವುದಕ್ಕೆ effective ಆಗಿ debate ಮಾಡುವುದಕ್ಕೆ ಅನುಕೂಲ ಮಾಡಿಕೊಡುವಂತಹ ವ್ಯವಸ್ಥೆಯನ್ನು ನಾನು ಮಾಡಿ ಕೊಡುತ್ತೇನೆಂದು ಆ ಸಭೆಯಲ್ಲಿ ತಾವೇ ಹೇಳಿದಿರಿ. ಆದರೆ ಇವತ್ತು ನೋಡಿದರೆ ನಿಮ್ಮ ವಿಚಾರ ಬೇರೆಯೇ ಇದೆ. ಅಂದರೆ ಆ ವಿಧೇಯಕಗಳನ್ನು ತರಾತುರಿಯಲ್ಲಿ ಪಾಸ್ ಮಾಡಿಕೊಂಡು ಹೋಗುವಂತಹ ವಿಚಾರವಿದೆ. ಆದುದರಿಂದ ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಶೈಕ್ಷಣಿಕ ಕ್ಷೇತ್ರದ ಮೇಲೆ ಭಾರಿ ಪ್ರಮಾಣದ ಆಘಾತ ಉಂಟುಮಾಡುವಂತಹ ಇಂತಹ ವಿಧೇಯಕಗಳನ್ನು ನಮಗೆ ಅಧ್ಯಯನ ಮಾಡುವುದಕ್ಕೂ ಸಹ ಅವಕಾಶ ಕೊಡದಂತೆ ತರಾತುರಿಯಲ್ಲಿ ಆ ಬಿಲ್‌ಗಳನ್ನು ಪಾಸ್ ಮಾಡಿಕೊಡುವಂತಹ ಗಡಿಬಿಡಿಯಲ್ಲಿ ಈ ಸರ್ಕಾರ ಇದ್ದರೆ ಇದನ್ನು ನಾನು ಉಗ್ರವಾದಂತಹ ಶಬ್ದಗಳಲ್ಲಿ ಖಂಡಿಸಬೇಕಾಗುತ್ತದೆ. ಇದರಿಂದ ಶೈಕ್ಷಣಿಕ ಕ್ಷೇತ್ರಕ್ಕಾಗಲಿ, ಸರ್ಕಾರಕ್ಕಾಗಲಿ ಒಳ್ಳೆಯದಾಗುವುದಿಲ್ಲ. Your government days are already numbered. ದಯಮಾಡಿ ತಾವು ಹೋಗುವ ಮುನ್ನ ಒಳ್ಳೆಯ ಕೆಲಸವನ್ನು ಮಾಡಿ ಹೋಗಿ. ಇಂತಹ ಬಿಲ್‌ಗಳನ್ನು ತಂದು ಶೈಕ್ಷಣಿಕ ಕ್ಷೇತ್ರಕ್ಕೆ, ಇನ್ನಿತರ ಕ್ಷೇತ್ರಕ್ಕೆ ಈ ರಾಜ್ಯದ ಜನತೆಗೆ ಅನ್ಯಾಯ ಮಾಡುವಂತಹ ಕೆಲಸವನ್ನು ಮಾಡಬೇಡಿ, ನೀವು ಹೋಗುವ ಮುನ್ನ ಈ ರಾಜ್ಯಕ್ಕೆ ಒಳ್ಳೆಯದನ್ನು ಮಾಡಿ ಹೋಗಿ. "ಮನುಷ್ಯ ಸಾಯುವಾಗ ಸತ್ಯ ಹೇಳಿ ಸಾಯುತ್ತಾನಂತೆ" ಅದರಂತೆ ನೀವು ನಿರ್ಗಮಿಸುವ ಮುಂಚೆ ಒಳ್ಳೆಯದನ್ನು ಮಾಡಿ ಹೋಗಿ.

**ಸಭಾಪತಿಯವರು:-** ಇನ್ನು ಸರ್ಕಾರದ ಪರವಾಗಿ ಏನು ಹೇಳುತ್ತಾರೆ ಕೇಳೋಣ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದು ಇನ್ನೂ ಇದೆ. ಇಂತಹ ಸಂದರ್ಭದಲ್ಲಿ ಈ ಬಿಲ್‌ಗಳನ್ನು ಇಷ್ಟು ತರಾತುರಿಯಲ್ಲಿ ತಂದು ಈ ರೀತಿ ಪಾಸ್ ಮಾಡುವುದರಿಂದ ಈ ರಾಜ್ಯದ ಜನತೆಗೆ ಒಳ್ಳೆಯ ಸಂದೇಶ ಹೋಗುವುದಿಲ್ಲ. ರಾಜ್ಯದ ಜನತೆಗೆ ಮಾರಕವಾಗುವಂತಹ ಈ ರಾಜ್ಯದ ದೃಷ್ಟಿಯಿಂದ ಅನಾನುಕೂಲವಾಗುವಂತಹ ಬಿಲ್ಲುಗಳಿಗೆ ತಾವು ಅವಕಾಶ ಮಾಡಿಕೊಡಬಾರದು, ಸದನವನ್ನು ಇನ್ನೂ

ಎರಡು ದಿವಸ ಮುಂದುವರೆಸಿ, ಅಥವಾ ಒಂದು ವಾರ ಮುಂದುವರೆಸಬೇಕೆಂದು ತಮ್ಮನ್ನು ವಿನಂತಿಸುತ್ತೇನೆ.

**ಸಭಾಪತಿಯವರು:–** ಈಗ ಸರ್ಕಾರ ಏನು ಹೇಳುತ್ತದೆ ಎಂಬುದನ್ನು ಕೇಳೋಣ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ನಿಂತಿದ್ದಾರೆ, ಅವರು ಹೇಳುತ್ತಾರೆ ದಯವಿಟ್ಟು ಕುಳಿತುಕೊಳ್ಳಿ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದು ನಾನಲ್ಲ, ಇದರ ಬಗ್ಗೆ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕು.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದು ಇನ್ನು ಮುಗಿಸಿಲ್ಲ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತಹ ಈ ಭಾಗದ ಅಭಿವೃದ್ಧಿಗೆ ಸಂಬಂಧಿಸಿದಂತಹ imbalance ಹೋಗಲಾಡಿಸುವುದಕ್ಕೆ ಅನೇಕ ಮಹತ್ತರವಾದಂತಹ ವಿಚಾರಗಳು ಸಹ ಇದೆ. ಇನ್ನು ನಿಯಮ 330ರ ಅಡಿಯಲ್ಲಿ ಚರ್ಚೆ ಮಾಡುವುದು ಇದೆ, ಗಮನ ಸೆಳೆಯುವ ಸೂಚನೆ ಇದೆ. ಈ ಎಲ್ಲಾ ವಿಷಯಗಳು ಇನ್ನು ಚರ್ಚೆಯೇ ಆಗಿಲ್ಲ. ಆ ದೃಷ್ಟಿಯಿಂದ ಇವುಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಹಾಗೂ ವಿಧೇಯಕದ ಬಗ್ಗೆ ಅಧ್ಯಯನ ಮಾಡುವುದಕ್ಕೆ ಇನ್ನು ಎರಡು ದಿವಸ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ವೇಳೆ ಸರ್ಕಾರ ನಮಗೆ majority ಇದೆ ಹಾಗಾಗಿ ನಾವು ಈ ವಿಧೇಯಕವನ್ನು ಪಾಸ್ ಮಾಡಿಕೊಂಡು ಹೋಗುತ್ತೇವೆ ಎಂದು ಹೇಳಿದರೆ ನಾವು ಇದನ್ನು ವಿರೋಧಿಸಿ, ಖಂಡಿಸುತ್ತೇವೆ. ಈ ರೀತಿ ಆದರೆ ಇದರಲ್ಲಿ ಭಾಗವಹಿಸುವುದರಲ್ಲಿ ಅರ್ಥವಿಲ್ಲ. When we came to have an effective debate on important enactment, without debate what is the use of becoming a Legislator? ಆ ದೃಷ್ಟಿಯಿಂದ ಇದನ್ನು ನಾವು ಖಂಡಿಸಬೇಕಾಗುತ್ತದೆ. ಇದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬಾರದೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಹಿರಿಯರಿದ್ದೀರಿ, ಅನುಭವಸ್ಥರಿದ್ದೀರಿ, ಇಷ್ಟೊಂದು ತರಾತುರಿಯಲ್ಲಿ ಈ ವಿಧೇಯಕಗಳನ್ನು ಪಾಸ್ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬಾರದು. ಒಂದು ವೇಳೆ ಇದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ನಾವು ಅದಕ್ಕೆ ಸಹಕಾರ ಮಾಡುವುದಿಲ್ಲವೆಂದು ಸರ್ಕಾರಕ್ಕೆ ಹೇಳಬೇಕಾಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ನಾಣಯ್ಯನವರು ಬಹಳಷ್ಟು ವಿಚಾರಗಳನ್ನು ಹೇಳಿದರು. ಆದರೆ ವಿಧಾನ ಮಂಡಲದಲ್ಲಿ ಇಂತಹ ಘಟನೆಗಳು ಸಾಕಷ್ಟು ಸಲ ಆಗಿವೆ. ಮಾನ್ಯ ವೀರಣ್ಣಮತ್ತಿಕಟ್ಟಿಯವರು ಸಭಾಪತಿಯವರಾಗಿದ್ದಂತಹ ಸಮಯದಲ್ಲಿ ರಾತ್ರಿ 12-00 ಗಂಟೆಯವರೆವಿಗೂ ವಿಧೇಯಕಗಳನ್ನು ಪಾಸ್ ಮಾಡಿದ್ದೇವೆ. ಆದ್ದರಿಂದ ಇವತ್ತು ಕೆಳಮನೆಯಲ್ಲಿ ಪಾಸ್ ಆದಂತಹ ವಿಧೇಯಕಗಳನ್ನು ಮೇಲ್ಮನೆಗೆ ತರುವಂತಹ ಸಂಪ್ರದಾಯವಿದೆ. ಈ ವಿಧೇಯಕಗಳು ಏನಾದರು ನಿನ್ನೆ ದಿವಸ ಪಾಸ್ ಆಗಿದ್ದರೆ ಇವತ್ತು ಬೆಳಿಗ್ಗೆಯೇ ಮೇಲ್ಮನೆಗೆ ಬರುತ್ತಿತ್ತು. ಆದರೆ ಇವತ್ತು ಮಧ್ಯಾಹ್ನ ಕೆಳಮನೆಯಲ್ಲಿ ಪಾಸ್ ಆಗಿದ್ದ ಕಾರಣ ಈಗ ಇಲ್ಲಿ ತರುತ್ತಿದ್ದೇವೆ. ಕೋ-ಆಪರೇಟೀವ್ ಬಿಲ್, ಕರ್ಮಚಾರಿ ಬಿಲ್, ಖಾಸಗಿ ವಿಶ್ವವಿದ್ಯಾಲಯ, ಖಾಸಗಿ ವಿಶ್ವವಿದ್ಯಾಲಯದ ಬಗ್ಗೆ ಚರ್ಚೆ ಮಾಡೋಣ, ಯಾರು ಬೇಡವೆಂದು ಹೇಳಿದ್ದು? Vague ಆಗಿ allegation ಮಾಡುವುದಲ್ಲ. ಇವತ್ತಿನ ದಿವಸ ಬೇರೆ ಬೇರೆ ರಾಜ್ಯಗಳಲ್ಲಿ ನೂರಾರು Private Universities ಆಗಿವೆ, ಆದರೆ ಇವತ್ತು ನಮ್ಮಲ್ಲಿ ಕೇವಲ ಎರಡು, ಮೂರು ವಿಶ್ವವಿದ್ಯಾಲಯಗಳು ಮಾತ್ರ Private Universities ಇವೆ. ರಾಜಸ್ಥಾನ ಹಾಗೂ ಇನ್ನಿತರ ರಾಜ್ಯಗಳಲ್ಲಿ ನೋಡಿದರೆ ನೂರಕ್ಕು ಹೆಚ್ಚು Private Universities ಬಂದಿವೆ. Private Universities ಎಂದ ಕೂಡಲೆ ಅದು ಎಲ್ಲಾ ಅವ್ಯವಹಾರ ನಡೆಸುವಂಥದ್ದು, ಇರುತ್ತದೆಯೇ? ಆ ರೀತಿ ಮಾಡುವುದಿಲ್ಲ. ಬೇಕಾದರೆ

ಚರ್ಚೆ ಮಾಡಿ. ಅದು ಬಿಟ್ಟು vague ಆಗಿ allegation ಮಾಡುವಂಥದ್ದು ಸರಿ ಅಲ್ಲ. ಖಾಸಗಿ ವಿಶ್ವವಿದ್ಯಾಲಯ ಇದ್ದರೆ ಪೂರ್ಣವಾಗಿ ಅವ್ಯವಹಾರ ಮಾಡುತ್ತಾರೆ ಎಂದು allegation ಮಾಡುವುದು ಸರಿ ಅಲ್ಲ. ಅದಕ್ಕೆ ಯಾವುದೇ ಒಂದು ಉದ್ದೇಶವಿಲ್ಲ. ಆದ್ದರಿಂದ ದಯವಿಟ್ಟು ಅದನ್ನು ಚರ್ಚೆಗೆ ತೆಗೆದುಕೊಂಡು ಆ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಿದ್ದೇನೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಎರಡು ವಿಚಾರಗಳನ್ನು ಹೇಳಿದರು.

**ಸಭಾಪತಿಯವರು:-** ಈಗ ಒಂದು ಅರ್ಧ ಗಂಟೆ ಊಟಕ್ಕೆ ಬಿಡುವು ಮಾಡಿಕೊಳ್ಳೋಣ, ನಂತರ ಅರ್ಧಗಂಟೆ ಆದನಂತರ ಪುನಃ ವಿಧೇಯಕದ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ಇಂತಹ ಹಲವಾರು ಘಟನೆಗಳ ಬಗ್ಗೆ ಹೇಳಿದರು. ಆ ದಿವಸವು ಹೇಳಿದ್ದೆವು. ಮಾನ್ಯ ಸಭಾಪತಿಯವರು ಆಗಿದ್ದಂತವರು ತಮಗೆ ಆದೇಶ ಕೊಟ್ಟಿದ್ದಾರೆ. ಯಾವುದೇ ವಿಧೇಯಕಗಳನ್ನು ಪಾಸ್ ಮಾಡಬೇಕಾದರೆ ಅದರ ಬಗ್ಗೆ ಆಮೂಲಾಗ್ರವಾಗಿ ಚರ್ಚೆ ಆಗಬೇಕು. ಈ ರೀತಿ ಇನ್ನೊಮ್ಮೆ ಮಾಡುವುದಿಲ್ಲ ಎಂದು ಮಾತು ಕೊಟ್ಟ ಮೇಲೆ ನಾವು ತಮ್ಮ ಮೇಲೆ ಭರವಸೆ ಇಟ್ಟು ಕೆಲವು ವಿಧೇಯಕಗಳನ್ನು ಪಾಸ್ ಮಾಡಿ ಕೊಟ್ಟಿದ್ದೇವೆ. ಇವತ್ತು ಮಧ್ಯಾಹ್ನ ಸದನವನ್ನು ಅನಿರ್ದಿಷ್ಟಕಾಲ ಮುಂದೂಡಲಾಗುವುದು. ಆದಕಾರಣ ನಮ್ಮ ಉದ್ದೇಶವೇನೆಂದರೆ, ಈ ಭಾಗದಲ್ಲಿ ಸದನ ನಡೆಯುತ್ತಿದೆ ಆದಕಾರಣ ಸದನವನ್ನು ಇನ್ನೂ ಒಂದು ವಾರ ಕಾಲ extend ಮಾಡಿ. ಚರ್ಚೆ ಆಗಲಿ. ನಾವು ನಿರ್ಧಾರ ಮಾಡೋಣ. ಪ್ರತಿಯೊಂದು ವಿಧೇಯಕವು ಕೂಲಂಕುಷವಾಗಿ ಚರ್ಚೆ ಆದಮೇಲೆ ನೀವು ವಿಧೇಯಕಗಳನ್ನು ಪಾಸ್ ಮಾಡಿಕೊಳ್ಳಬಹುದು. ಈಗ ಎರಡು ಗಂಟೆಯಲ್ಲಿ ಎಲ್ಲಾ ವಿಧೇಯಕಗಳನ್ನು ಪಾಸ್ ಮಾಡಬೇಕೆಂದರೆ ಬಹಳ ತಪ್ಪಾಗುತ್ತದೆ.

ತಾವು ಆ ಪೀಠದಿಂದ ಆದೇಶ ಕೊಟ್ಟಿದ್ದೀರಿ, ಈ ಹಿಂದೆ ಹಲವಾರು ಸಲ ಯಾರ್ಯಾರು ಸಭಾಪತಿಯವರಾಗಿ ಪೀಠವನ್ನಲಂಕರಿಸಿದ್ದರು ಅವರೆಲ್ಲರೂ ಈ ರೀತಿ ಆಗಬಾರದು ಎಂದು ಹೇಳಿದ್ದಾರೆ. ಒಮ್ಮೊಮ್ಮೆ ಅನಿವಾರ್ಯತೆ ಇದ್ದರೆ ಎಲ್ಲರ ದೃಷ್ಟಿಯಿಂದ ಒಂದೆರಡು ವಿಧೇಯಕಗಳನ್ನು ಪಾಸ್ ಮಾಡಬಹುದು. ಉದಾಹರಣೆಗೆ Finance Bill ಗೆ ನಾವೆಲ್ಲರೂ ಸಹಕಾರ ಮಾಡಿದೆವು. ಏಕೆಂದರೆ ರಾಜ್ಯದ ಹಿತದೃಷ್ಟಿಯಿಂದ ಅದು ಆಗಲೇ ಬೇಕಾಗುತ್ತದೆ. ಅತ್ಯಂತ ಅವಶ್ಯ ಇದ್ದ ವಿಧೇಯಕಗಳಿಗೆ ನಾವು ಸಹಕಾರ ಕೊಟ್ಟಿದ್ದೇವೆ. ಯಾರೇ ವಿರೋಧ ಪಕ್ಷದಲ್ಲಿರಲಿ ಎಲ್ಲರೂ ಸರ್ಕಾರಕ್ಕೆ ಸಹಕಾರವನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ನನ್ನ ಹಾಗೂ ಬಹುಪಾಲು ಸದಸ್ಯರ ವಿನಂತಿ ಏನೆಂದರೆ, ಬರುವಂತಹ ವಿಧೇಯಕಗಳ ಮೇಲೆ ಕೂಲಂಕುಷವಾಗಿ ಚರ್ಚೆ ಆಗಬೇಕು. ಅದಕ್ಕೆ ಸಮಯ ಬೇಕು. ಮಾನ್ಯ ಸಭಾಪತಿಯವರೇ, ಬೇಕಾದರೆ ಸದನವನ್ನು ಒಂದು ವಾರಗಳ ಕಾಲ extend ಮಾಡುತ್ತೇವೆಂದು ಹೇಳಿ ಆಗ ನಾವು ಸಹಕಾರ ಕೊಡುತ್ತೇವೆ. ಇಲ್ಲದೆ ಹೋದರೆ ಈ ರೀತಿ ಅಸಂವಿಧಾನಾತ್ಮಕವಾಗಿ ನಡೆದುಕೊಳ್ಳುವಂಥದ್ದಕ್ಕೆ ನಾವು ಒಪ್ಪುವುದಿಲ್ಲ. ಇದು ನಮ್ಮ conscious ಒಪ್ಪುವುದಿಲ್ಲ, ಈ ಭಾಗಕ್ಕೂ ಒಳ್ಳೆಯದಲ್ಲ. ಆ ದೃಷ್ಟಿಯಿಂದ ನಾವು ಇದನ್ನು ವಿರೋಧಿಸುತ್ತೇವೆ.

**ಸಭಾಪತಿಯವರು:–** ಈಗ ಒಂದು ಪ್ರಕಟಣೆ ಇದೆ.

## 11 ಪ್ರಕಟಣೆಗಳು

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 13–12–2012ರಂದು ಈ ಕೆಳಕಂಡ ವಿಧೇಯಕಗಳನ್ನು ತಿದ್ದುಪಡಿ ಇಲ್ಲದೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

01. ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರುಗಳ ಪರಿರಕ್ಷಣೆ (ತಿದ್ದುಪಡಿ) ವಿಧೇಯಕ 2012.
02. ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ 2012,
03. ಮಣಿಪಾಲ್ ವಿಶ್ವವಿದ್ಯಾಲಯ ವಿಧೇಯಕ, 2012,
04. ಶರಣಬಸವ ವಿಶ್ವವಿದ್ಯಾಲಯ ವಿಧೇಯಕ 2012,
05. ಆದಿಚುಂಚನಗಿರಿ ವಿಶ್ವವಿದ್ಯಾಲಯ ವಿಧೇಯಕ 2012,

ಹಾಗೆಯೇ ಮತ್ತೊಂದು ಪ್ರಕಟಣೆ ಇದೆ.

ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ವಿಧಾನ ಪರಿಷತ್ತಿನ ಅಂಗೀಕೃತ ರೂಪದಲ್ಲಿರುವ 2012ನೇ ಸಾಲಿನ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ವಿಧೇಯಕವನ್ನು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 121ರ ಮೇರೆಗೆ ವಿಧಾನ ಸಭೆಯು ದಿನಾಂಕ:13/12/2012ರಂದು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿದೆಯೆಂದು ಸದನದ ಗಮನಕ್ಕೆ ತರಲಾಗಿದೆ.

ಈಗ ಒಂದಾದರು ವಿಧೇಯಕದ ಮೇಲೆ ಚರ್ಚೆ ಮಾಡಬೇಕೆಂದು ಇದ್ದೀರಿ, ಹಾಗಾಗಿ ಊಟ ಆದಮೇಲೆ ಪುನಃ ಸೇರೋಣ. ಈಗಾಗಲೇ ಎರಡು ಗಂಟೆ ಆಗಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ತಾವು ಏನು ಹೇಳಿದ್ದಿರಿ, ಎರಡು ಗಂಟೆಯ ವೇಳೆಗೆ ಸದನವನ್ನು ಮಂದೂಡಲಾಗುತ್ತದೆಂದು ಹೇಳಿದ್ದಿರಿ.

**ಸಭಾಪತಿಯವರು:-** ವಿಧಾನ ಸಭೆಯಿಂದ ವಿಧೇಯಕಗಳು ಬರುವುದು ತಡವಾಯಿತು. ನಾನೇನು ಮಾಡಲಿ?

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನೀವು ಹೇಳುವಂತಹ ಮಾತುಗಳನ್ನು ಒಪ್ಪುತ್ತೇನೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಅಲ್ಲಿ ಕೆಲವೊಂದು ಮೀಟಿಂಗ್ ಆಗಿರುತ್ತದೆ, ಕೆಲವೊಂದು ನಿರ್ಣಯಗಳನ್ನು ತೆಗೆದುಕೊಂಡಿರುತ್ತೇವೆ, ಆನಂತರ ಕೆಲವೊಂದು ನಿರ್ಣಯಗಳನ್ನು ಬದಲಾಯಿಸಬೇಕಾಗುತ್ತದೆ. ಆದಕಾರಣ ಅವಶ್ಯಕತೆ ಇದ್ದ ಕಾರಣ ನಾವು ಕೇಳುತ್ತಿದ್ದೇವೆ. ದಯವಿಟ್ಟು ಮಧ್ಯಾಹ್ನದ ನಂತರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**ಸಭಾಪತಿಯವರು:–** ಸದನವನ್ನು ಮಧ್ಯಾಹ್ನ 3 ಗಂಟೆ 15 ನಿಮಿಷಗಳವರೆಗೆ ಮುಂದೂಡಿದ್ದೇನೆ.

**(02 ಗಂಟೆ 09 ನಿಮಿಷಗಳಲ್ಲಿ ಮುಂದೂಡಲ್ಪಟ್ಟು ಸದನವು ಪುನಃ 03 ಗಂಟೆ 27 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದ್ದರು)**

## 12. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:–** ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

1. ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕ, 2012.
2. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2012,
3. ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2012,
4. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ವಿಧೇಯಕ, 2012.

## 13. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು

### (ಅ) ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕ, 2012

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೇ, 2012ರ, ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೇ ಕರ್ನಾಟಕದಲ್ಲಿ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಶಾಲೆಗಳಲ್ಲಿರುವ ಡಿಪ್ಲಮೋ ಪರೀಕ್ಷೆಗಳನ್ನು ಮತ್ತು ತರಗತಿಗಳನ್ನು ಮಾಡುವ ದೃಷ್ಟಿಯಿಂದ ಎರಡು ಬೋರ್ಡ್‌ಗಳಿವೆ, 1991ರಲ್ಲಿ ಸ್ಥಾಪನೆ ಆದಂತಹ ನರ್ಸಿಂಗ್ ಬೋರ್ಡ್ ಜೊತೆಗೆ 1997ರಲ್ಲಿ ಪ್ಯಾರಾ ಮೆಡಿಕಲ್ ಬೋರ್ಡ್ ಸ್ಥಾಪನೆ ಆಯಿತು. ಆದರೆ ಈ ರಾಜ್ಯದ ದುರ್ದೈವ ಈ ಎರಡು ಬೋರ್ಡ್‌ಗಳ ನೋಂದಣಿಯಾಗಿಲ್ಲ. ಈ ಬೋರ್ಡ್‌ಗಳು ನೋಂದಣಿ ಮತ್ತು ಪರೀಕ್ಷೆಗಳನ್ನು ಒಟ್ಟಿಗೆ ನಡೆಸುತ್ತಿದ್ದವು ಎನ್ನುವ ವಿಚಾರ ಗಮನಕ್ಕೆ ಬಂದ ಮೇಲೆ ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ನವರು 2001ರಲ್ಲಿ ಒಂದು ಪತ್ರವನ್ನು ಬರೆದು ನೋಂದಣಿ ಮತ್ತು ಪರೀಕ್ಷೆಗಳನ್ನು ಒಟ್ಟಿಗೆ ನಡೆಸುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ, ಇದಕ್ಕೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲು ಸಮಿತಿಯನ್ನು ರಚಿಸಬೇಕೆಂದು ಸೂಚಿಸಿದರು. ಈ ಹಿನ್ನಲೆಯಲ್ಲಿ ಗುರುಮೂರ್ತಿ ಸಮಿತಿಯನ್ನು ರಚಿಸಲಾಯಿತು, ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಸರ್ಕಾರಿ ಆಜ್ಞೆಯನ್ನು ಸಹ ಹೊರಡಿಸಲಾಯಿತು. ಪರೀಕ್ಷಾ ಪದ್ಧತಿ ಮತ್ತು ನೋಂದಣಿಗಳಿಗೆ ಪ್ರತ್ಯೇಕ ವ್ಯವಸ್ಥೆ ಇರಬೇಕೆಂದು ಈ ಸರ್ಕಾರಿ ಆಜ್ಞೆಯಲ್ಲಿ ಶಿಫಾರಸ್ಸನ್ನು ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಬೋರ್ಡ್‌ಗಳನ್ನು ಒಟ್ಟುಗೂಡಿಸಿ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ನಿರ್ದೇಶನದ ಮೇರೆಗೆ ಒಂದು ಅಥಾರಿಟಿಯನ್ನು ರಚಿಸಬೇಕಾಗಿದೆ. ಸದನದ ಮುಂದೆ ಒಂದು ನೋವಿನ ಸಂಗತಿಯನ್ನು ಹೇಳಲೇಬೇಕಾಗಿದೆ. ವಿಶೇಷವಾಗಿ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್‌ನಲ್ಲಿ ಯಾರ್‍ಯಾರಿಗೆ affiliation cancel ಆಗಿದೆ, ಆ cancel ಆಗಿರುವಂತಹ ಸಂಸ್ಥೆಗಳಲ್ಲಿಯೂ ಕೂಡ ತಮ್ಮ ಮಕ್ಕಳನ್ನು ಅಕ್ರಮವಾಗಿ admission ಮಾಡಿಸಿ ಪರೀಕ್ಷೆಗೆ ಕಳುಹಿಸುವಂತಹ ಪ್ರಯತ್ನವನ್ನು ಮಾಡಿದ್ದಾರೆ. ನಾವು affiliation cancel ಮಾಡಿದಂತಹ 148 institution ಗಳ ಪಟ್ಟಿಯನ್ನು ಕೊಟ್ಟು ಪರೀಕ್ಷೆ ಕೊಡಲಿಲ್ಲ. ಅವರು ನ್ಯಾಯಾಲಯಕ್ಕೆ ಹೋಗಿ ಒಂದು ಆಜ್ಞೆಯನ್ನು ತೆಗೆದುಕೊಂಡು ಬಂದರು. ಅದರ ಪ್ರಕಾರ ಪರೀಕ್ಷೆಯನ್ನು ಕೊಡಿ ಆನಂತರ result announce ಮಾಡುವುದಕ್ಕಿಂತ

ಮುಂಚೆ ಕಾನೂನು ಎಲ್ಲವನ್ನು ನೋಡಿ ಎಂದು ಇದೆ. 147 ಸಂಸ್ಥೆಗಳಲ್ಲಿ ನಾಲ್ಕುವರೆ ಸಾವಿರ ಮಕ್ಕಳನ್ನು ರಾಜಸ್ಥಾನ ಮತ್ತು ಬೇರೆ–ಬೇರೆ ರಾಜ್ಯಗಳಿಂದ ಮಕ್ಕಳನ್ನು ಕರೆದುಕೊಂಡು ಬಂದು ಪರೀಕ್ಷೆಯನ್ನು ಬರೆಯಿಸಿದ್ದಾರೆ. ಆದರೆ theory ಪರೀಕ್ಷೆಯನ್ನು ಆ ಮಕ್ಕಳು ಬರೆದಿದ್ದಾರೆ, ಆದರೆ practical ಪರೀಕ್ಷೆಯನ್ನು ಬೇರೆಯವರು ಬಂದು ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ನಾವು ಎಲ್ಲವನ್ನು ತಪಾಸಣೆ ಮಾಡಲು ಹೋದಾಗ, ಈ Nursing Board ಅನ್ನು ಅಲ್ಲಿಗೆ ಕಳುಹಿಸಿದ್ದೆವು. ಅವರು ಹೋಗಿ ಗುಲ್ಬರ್ಗಾ ಹೈಕೋರ್ಟ್‌ನಲ್ಲಿ ಸ್ಟೇ ತಂದರು. ಇದು ರಿಜಿಸ್ಟರ್ ಆಗಿರುವ ಸಂಸ್ಥೆ ಅಲ್ಲ, ಇದಕ್ಕೆ ಯಾವುದೇ ಅಧಿಕಾರವಿಲ್ಲ ಎಂದು. ಈ ಎಲ್ಲ ವಿಚಾರಗಳು ಬಂದಾಗ, ಎರಡು Board ಗಳನ್ನ merge ಮಾಡಿ ಒಂದು authority ಯನ್ನು constitute ಮಾಡಿ ಪರೀಕ್ಷಾ ಪದ್ಧತಿಗಳಲ್ಲಿ, quality of education ಇವೆಲ್ಲವನ್ನು ಸರಿದೂಗುವಂತಹ ವಿಚಾರವನ್ನು ತಂದಿದ್ದೇವೆ. ಈ ರೀತಿ ಯಾರ್‍ಯಾರು ಅಕ್ರಮವಾಗಿ ಸಂಸ್ಥೆಗಳನ್ನು ನಡೆಸುತ್ತಾರೆ, ಅವರಿಗೆ 10,000 ರೂ.ಗಳ ದಂಡ, 6 ತಿಂಗಳ ಕಾಲ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಶುಲ್ಕವನ್ನು ಜಾಸ್ತಿ ತೆಗೆದುಕೊಳ್ಳುವುದನ್ನು ನಾವು ನೋಡಿದ್ದೇವೆ. ಇಲ್ಲಿಯವರೆಗೆ ಎಸ್‌ಸಿ/ಎಸ್‌ಟಿಗೆ ಇರುವ ಮೀಸಲಾತಿಯನ್ನು ಯಾರು ಕೊಡುತ್ತಾ ಇರಲಿಲ್ಲ. ನಾವು ಹೋದ ವರ್ಷದಿಂದ ಎಸ್‌ಸಿ/ಎಸ್‌ಟಿಗೆ ಇದ್ದಂತಹ ಮೀಸಲಾತಿಯನ್ನು ಕೇಂದ್ರದ ಸಿಇಟಿ ಮಾಡಿ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಕೇವಲ 25,000 ರೂಪಾಯಿಗಳ ಶುಲ್ಕವನ್ನು ತೆಗೆದುಕೊಳ್ಳಬೇಕಾದಂತಹ ಕೆಲವು ಸಂಸ್ಥೆಗಳು ಒಂದರಿಂದ ಒಂದುವರೆ ಲಕ್ಷ ರೂ.ಗಳ ಶುಲ್ಕವನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿ ಹಿಂದೆ ಇತ್ತು. ಈ ರೀತಿ ಈಗ ಯಾರಾದರೂ ಹೆಚ್ಚಿನ ಶುಲ್ಕವನ್ನು ತೆಗೆದುಕೊಂಡರೆ ಅವರು ಹಣವನ್ನು ವಾಪಸ್ ಕೊಡಬೇಕು ಮತ್ತು 6 ತಿಂಗಳ ಕಾಲ ಜೈಲು ಶಿಕ್ಷೆಯನ್ನು ಕೊಡಲು ಅನುಕೂಲವಾಗುವಂತೆ ಈ ವಿಧೇಯಕದ ಮೂಲಕ ಕಾನೂನನ್ನು ತರುವಂತಹ ಕೆಲಸವನ್ನು ಮಾಡಿದ್ದೇವೆ. ಯಾವುದಾದರು registration cancel ಆಗುವಂತಹ ಸಂದರ್ಭ ಬಂದಾಗ, ಅಂತಹ ಸಂಸ್ಥೆಗಳನ್ನು ಮುಚ್ಚಬೇಕು ಮತ್ತು ಇರುವ ಮಕ್ಕಳನ್ನು ಬೇರೆ ಕಡೆ

ತೆಗೆದುಕೊಂಡು ಹೋಗಲು ನೋಟಿಸ್ ಕೊಡುವಂತಹ ಕೆಲಸವನ್ನು ಮಾಡಬೇಕು. ಪರೀಕ್ಷಾ ಪದ್ಧತಿಗಳಲ್ಲಿಯೂ ಕೂಡ ವಿಶೇಷವಾದ ಬದಲಾವಣೆ ತರುವಂತಹ ಕೆಲಸವನ್ನು ಮಾಡಿದ್ದೇವೆ. Ragging ತುಂಬಾ ನಡೆಯುತ್ತಿತ್ತು. Ragging ಮಾಡಿದರೆ ಕಠಿಣವಾದ ಶಿಕ್ಷಯನ್ನು ಕೊಡುವಂತಹ ಕಾನೂನನ್ನು ಈ ವಿಧೇಯಕದ ಮೂಲಕ ತರುವಂತಹ ಕೆಲಸವನ್ನು ಮಾಡಿದ್ದೇವೆ. ಈಗಾಗಲೇ ನಾಲ್ಕುವರೆ ಸಾವಿರ ಮಕ್ಕಳು ಪರೀಕ್ಷೆ ಬರೆದಿರುವ ಬಗ್ಗೆ ಹೇಳಿದೆ. ಇಲ್ಲಿ practical ಪರೀಕ್ಷೆಯಲ್ಲಿ ಬರೆದಿರುವಂತಹ handwriting ಬೇರೆ ಇದೆ, theory ಪರೀಕ್ಷೆಯಲ್ಲಿ ಬರೆದಿರುವ handwriting ಬೇರೆ ಇದೆ. 147 ಮಕ್ಕಳ ಸಹಿಯನ್ನು ಒಂದೇ ಸಂಸ್ಥೆಯ ಅಧ್ಯಕ್ಷರು ತಾವೆ ಮಾಡಿದ್ದಾರೆ. ಈ ರೀತಿಯಾದ ಅಕ್ರಮಗಳು ಬಹಳ ನಡೆಯುತ್ತಿದ್ದವು. ಸುಮಾರು 48,000 ಮಕ್ಕಳು ಪ್ರತಿ ವರ್ಷ ಈ ಪರೀಕ್ಷೆಯನ್ನು ಬರೆಯುತ್ತಿದರು. ಈ ಎಲ್ಲ ಅಕ್ರಮಗಳನ್ನು ತೆಗೆದು ಹಾಕುವ ದೃಷ್ಟಿಯಿಂದಲೇ ಇವತ್ತು ನಾವು ಈ ವಿಧೇಯಕವನ್ನು ತಂದಿದ್ದೇವೆ. ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ನಾವು ಈ ವಿಧೇಯಕವನ್ನು ತರುವಂತಹ ಕೆಲಸವನ್ನು ಮಾಡಿದ್ದೇವೆ. ಇದು ವಿಶೇಷವಾಗಿ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳನ್ನು ಸರಿಯಾದಂತಹ ರೀತಿಯಲ್ಲಿ, ಒಂದು qualitative education ಕೊಡುವಂತಹ ವಿಧೇಯಕ ಇದು ಆಗಿದೆ. ಹೀಗಾಗಿ ಈ ವಿಧೇಯಕಕ್ಕೆ ಸದನ ಒಪ್ಪಿಗೆಯನ್ನು ಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.

ಖಂಡ 2 ಮತ್ತು 62

**ಸಭಾಪತಿಯವರು:–** "ಖಂಡ 2 ರಿಂದ 62 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 62ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಆ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಸಹಕಾರಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಸಹಕಾರಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ವಿಶೇಷವಾಗಿ ಸಹಕಾರಿ ಸಂಘಗಳು ಇನ್ನಷ್ಟು ಹೆಚ್ಚು ಪ್ರಜಾಸತ್ತಾತ್ಮಕವಾಗಿ ನಡೆಯಬೇಕು ಎಂದು ಸಂವಿಧಾನಕ್ಕೆ 97ನೇ ತಿದ್ದುಪಡಿ ಮಾಡಲಾಯಿತು. ಈ ರೀತಿಯ ಸಹಕಾರಿ ಸಂಘಗಳನ್ನು ರಚಿಸುವುದು ಯಾವುದೇ ನಾಗರೀಕನ ಮೂಲಭೂತ ಹಕ್ಕು ಎಂದು ತೀರ್ಮಾನ ಮಾಡಿ ಈ 97ನೇ ತಿದ್ದುಪಡಿ ಬಂದಿದೆ. ಅದರ ಆಧಾರದ ಮೇಲೆ ನಮ್ಮ ರಾಜ್ಯದಲ್ಲಿಯು ಕೂಡ ಈ ಮಹತ್ವದ ತಿದ್ದುಪಡಿಯನ್ನು ನಾವು ಮಾಡುತ್ತಿದ್ದೇವೆ. ಫೆಬ್ರವರಿ 15ನೇ ತಾರೀಖಿನ ಒಳಗೆ ಈ ತಿದ್ದುಪಡಿಯನ್ನು ನಮ್ಮ ರಾಜ್ಯದಲ್ಲಿ ಮಾಡಬೇಕು. ಅದಕ್ಕಾಗಿ ತುರ್ತಾಗಿ ಈ ಬಿಲ್‌ನ್ನು ತಂದಿದ್ದೇವೆ. ಇದರಲ್ಲಿ ಬಹಳ ಮುಖ್ಯವಾದ ಅಂಶಗಳು ಎಂದರೆ, ವಿಶೇಷವಾಗಿ ಸದಸ್ಯರಿಗೆ ಬೋರ್ಡ್ ಆಫ್ ಕೋ–ಆಪರೇಟಿವ್ ಸೊಸೈಟಿಸ್ ಎಂದು ಏನು ಕರೆಯುತ್ತೇವೆ ಅದರಲ್ಲಿ ನಾವು ಮೊದಲ ಬಾರಿಗೆ ಕೆಲವು ಮೀಸಲಾತಿಗಳನ್ನು ತಂದಿದ್ದೇವೆ. ಪರಿಶಿಷ್ಟ ಜಾತಿ, ಮಹಿಳೆಯರು ಮತ್ತು ಹಿಂದೂಳಿದ ವರ್ಗಕ್ಕೆ ನಾವು ತಂದಿದ್ದೇವೆ. ಯಾವುದೇ ಕಾರಣಕ್ಕಾಗಿ ಈ ಸೊಸೈಟಿಗಳನ್ನು ಹಿಂದೆ ಸೂಪರ್‌ಸೀಡ್ ಮಾಡುತ್ತಿದ್ದರು, ಆ ಸೂಪರ್‌ಸೀಡ್ ಮಾಡಬೇಕಾದರು ಕೂಡ 6 ತಿಂಗಳ ಒಳಗೆ ಈ ಚುನಾವಣೆ

ನಡೆಯಬೇಕು. ಕಡ್ಡಾಯವಾಗಿ ನಿಗದಿತ ಸಮಯದಲ್ಲಿಯೇ ಚುನಾವಣೆ ನಡೆಯಬೇಕು ಎಂದು ಮಾಡಲಾಗಿದೆ. ಯಾವುದೇ ಸಹಕಾರಿ ಸಂಘದಲ್ಲಿ ಸರ್ಕಾರದ ಹಣ ಯಾವುದೇ ರೂಪದಲ್ಲಿಯೂ ಇಲ್ಲ ಎಂದಾಗ ಆ ಸಹಕಾರಿ ಸಂಘವನ್ನು ಸೂಪರ್‌ಸೀಡ್ ಮಾಡಲು ಬರುವುದಿಲ್ಲ. ಸರ್ಕಾರದ ಏನಾದರು ಪಾತ್ರ ಅಲ್ಲಿ ಇದ್ದರೆ ಮಾತ್ರ ಬರುತ್ತದೆ. ಒಟ್ಟಾರೆ 97ನೇ ತಿದ್ದುಪಡಿ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ಮತ್ತು ಇನ್ನೊಂದು ಸೌಹಾರ್ದ ಸಹಕಾರಿ ಸಂಘಗಳ ತಿದ್ದುಪಡಿ ವಿಧೇಯಕ ಎರಡೂ ಮಹತ್ವದ ವಿಧೇಯಕಗಳನ್ನು ತಂದಿದ್ದೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 54ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 54 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 54ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸಹಕಾರಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಇ) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎಸ್. ಸುರೇಶ್‌ಕುಮಾರ್:-** 1997ರಲ್ಲಿ ತಂದಂತಹ ಅಮೆಂಡ್‌ಮೆಂಟ್ ಆಧಾರದ ಮೇಲೆ ಸೌಹಾರ್ದ ಸಹಕಾರಿ ಎಂದು ಮಾಡುತ್ತಿದ್ದೇವೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಾರಿಜೆಂಡಮ್‌ನಲ್ಲಿ in Clause 12 in the first Proviso for one seat read two seats ಎಂದು ಇದೆಯಲ್ಲ, ಇದರ ಬಗ್ಗೆ ವಿವರಣೆ ಕೊಡಬೇಕು.

**ಶ್ರೀ ಎಸ್. ಸುರೇಶ್‌ಕುಮಾರ್:-** ಹಿಂದೆ ಒಂದು ಸ್ಥಾನವನ್ನು ಮಾಡಬೇಕೆಂದು ಮಾಡಿದ್ದು, ನಿನ್ನೆ ಅಲ್ಲಿ ತಿದ್ದುಪಡಿಯಾದ ಮೇಲೆ ಹಿಂದುಳಿದ ವರ್ಗಕ್ಕೆ 2 ಸ್ಥಾನ ಎಂದು ಮಾಡಿದ್ದೇವೆ. ಅದು ಸಣ್ಣ ತಪ್ಪಿನಿಂದ ಒಂದು ಎಂದು ಬಂದಿದ್ದು, ಅದಕ್ಕಾಗಿ ಕಾರಿಜೆಂಡಮ್ ಮಾಡಿದ್ದೇವೆ.

**Sri ARUN SHAHAPUR:-** Under Section 12, in the proviso, "one seat Shall be reserved in favour of members belonging to Schedule Castes. . . ."**ಎಂದು ಇದೆ. ಅಲ್ಲಿ ಒಂದು ಸ್ಥಾನವನ್ನು ಎರಡು ಎಂದು ಓದಿಕೊಳ್ಳಬೇಕೆ**?

**ಶ್ರೀ ಎಸ್. ಸುರೇಶ್‌ಕುಮಾರ್:-** ಹೌದು.

**ಶ್ರೀ ಅರುಣ ಶಹಾಪುರ:-** ಇಲ್ಲ ಸಾರ್, ಪರಿಶಿಷ್ಟ ಜಾತಿಗೆ ಒಂದೇ ಸ್ಥಾನ ಇರುವುದು. ಆದರೆ ಕಾರಿಜೆಂಡಮ್ ಪ್ರಕಾರ ಎರಡಕ್ಕೂ ಎರಡು ಎಂದು ಆಗುತ್ತದೆ.

**ಶ್ರೀ ಎಸ್. ಸುರೇಶ್‌ಕುಮಾರ್:-** ಇಲ್ಲ.

**ಶ್ರೀ ಅರುಣ ಶಹಾಪುರ:-** ಎಸ್‌ಸಿ, ಅಥವಾ ಎಸ್‌ಟಿ ಎಂದು ಹೇಳಿದ್ದಾರೆಯೇ? ಆ ಪ್ಯಾರಾದಲ್ಲಿ 1 ಇರುವಲ್ಲಿ 2 ಸ್ಥಾನ ಎಂದು ಓದಬೇಕಾಗಿರುವುದರಿಂದ ಸ್ವಲ್ಪ ಕನ್‌ಫ್ಯುಷನ್ ಆಗುತ್ತದೆ. ಆಗ ಎರಡಕ್ಕೂ ಎರಡೆರಡು ಎಂದು ಆಗುತ್ತದೆ.

**ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ:-** ಶಬ್ದಗಳಲ್ಲಿ ಸರಿಪಡಿಸಿಕೊಳ್ಳಬೇಕು.

**ಶ್ರೀ ಎಸ್. ಸುರೇಶ್‌ಕುಮಾರ್:–** ನಿನ್ನೆ ಇದರ ಬಗ್ಗೆ ಚರ್ಚೆಯಾಗಿ ಓರಿಜಿನಲ್ ಆಗಿ ಎರಡು ಸ್ಥಾನಗಳನ್ನು ಕೊಡಬೇಕೆಂದು ಆಗಿತ್ತು. ಆದರೆ ಚರ್ಚೆಗೆ ಬರುವ ಸಮಯದಲ್ಲಿ 9 ಸ್ಥಾನಗಳಿದ್ದಾಗ ಶೇಕಡ 50ಕ್ಕಿಂತ ಮೀರುತ್ತದೆ ಎಂದು ಆಯಿತು. ಏಕೆಂದರೆ ಮೊದಲನೆಯ ಬಾರಿಗೆ ಕರ್ನಾಟಕದಲ್ಲಿ ಹಿಂದುಳಿದ ವರ್ಗಕ್ಕೆ ಸ್ಥಾನ ಕೊಡುತ್ತಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಮಹಿಳೆಯರಿಗೆ ಸ್ಥಾನ ಕೊಡುವ ಅವಕಾಶ ಇದ್ದೇ ಇದೆ. ಆದರೆ ಸಂವಿಧಾನಾತ್ಮಕ ತಿದ್ದುಪಡಿ ಇಲ್ಲದಿರುವ ಅವಕಾಶವನ್ನು ನಾವು ಸೃಷ್ಟಿ ಮಾಡಿ ಹಿಂದುಳಿದ ವರ್ಗಕ್ಕೆ ಒಂದು ಸ್ಥಾನವನ್ನು ಕೊಡುತ್ತಿದ್ದೇವೆ. ನಿನ್ನೆ ಚರ್ಚೆಯ ಸಮಯದಲ್ಲಿ ಕನಿಷ್ಠ 11 ನಿರ್ದೇಶಕರು ಇರುವುದರಿಂದ 2 ಸ್ಥಾನ ಕೊಟ್ಟರೆ ಶೇಕಡ 50ರಷ್ಟು ಕ್ರಾಸ್ ಆಗುವುದಿಲ್ಲ ಎಂದು ತಿಳಿದು ಬಂದಿತು. ಆದ್ದರಿಂದ, ಹಿಂದುಳಿದ ವರ್ಗಕ್ಕೆ 2 ಸ್ಥಾನ ಮಾಡಿದ್ದೇವೆ. ಅದನ್ನು ಕರೆಕ್ಷನ್ ಮಾಡಿ ಕೊಟ್ಟಿದ್ದೇವೆ.

**ಶ್ರೀ ಸಿದ್ದರಾಜು:–** ಎಸ್‌ಸಿ ಅಥವಾ ಎಸ್‌ಟಿ ಎಂದು ಇದೆಯೇ? ಅಥವಾ ಎಸ್‌ಸಿ ಗೆ ಮಾತ್ರ ಇದೆಯೇ ಎಂಬುದನ್ನು ಕ್ಲಾರಿಫೈ ಮಾಡಬೇಕು.

**ಶ್ರೀ ಎಸ್. ಸುರೇಶ್‌ಕುಮಾರ್:–** ಎಸ್‌ಸಿ ಅಥವಾ ಎಸ್‌ಟಿ ಎಂದು ಇದೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ ಖಂಡ 2ರಿಂದ 52ರವರೆಗೆ**

**ಸಭಾಪತಿಯವರು:–** “ಖಂಡ 2ರಿಂದ 52ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 52ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ”

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## (ಈ) ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ವಿಧೇಯಕ, 2012,

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಕನಿಷ್ಠ ಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವ ಸಫಾಯಿ ಕರ್ಮಚಾರಿಗಳ ಕಲ್ಯಾಣಕ್ಕೋಸ್ಕರ ಒಂದು ಆಯೋಗ ಮಾಡಬೇಕು ಹಾಗೂ ಅವರ ತೊಂದರೆ ಮತ್ತು ಸಮಸ್ಯೆಗಳನ್ನು ಪರಿಹರಿಸಬೇಕು, ಇದರ ಬಗ್ಗೆ ಕೇಂದ್ರ ಸರ್ಕಾರದ ಕಾಯ್ದೆ ಕೂಡ ಬಂದಿದೆ. ಅದರ ಅನುಸಾರವಾಗಿ ನಮ್ಮ ರಾಜ್ಯದಲ್ಲಿಯೂ ತರಬೇಕು ಎಂಬುದು ನಮ್ಮ ಸರ್ಕಾರದ ಕಮಿಟ್‌ಮೆಂಟ್. ಅದರ ಮೂಲಕ ಎಲ್ಲಾ ಸಫಾಯಿ ಕರ್ಮಚಾರಿಗಳ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ಆಯೋಗ ತರುತ್ತಿದ್ದೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2ರಿಂದ 18ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 18ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 18ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:–** ಕೆಲವು ಸದಸ್ಯರು ಮಧ್ಯಾಹ್ನ ನನ್ನ ಬಳಿ ಬಂದು 'ಖಂಡ–ಖಂಡ' ಎಂದರೆ ಏನು ಎಂದು ಕೇಳಿದರು. ಕನ್ನಡ ಪದವಾದ ಇದು ಬಹಳ ಜನರಿಗೆ ಬೇಗ ಅರ್ಥವಾಗಿಲ್ಲ. ಇದು paras ಎಂದು ಇಂಗ್ಲಿಷ್‌ನಲ್ಲಿ ಬರುತ್ತದೆ. ಇದನ್ನು clause by clause ಎಂದು ಹೇಳುತ್ತೇವೆ. ಇದಕ್ಕೆ ಕನ್ನಡದಲ್ಲಿ ಖಂಡಿಕೆ ಎನ್ನುವ ಬದಲಾಗಿ 'ಖಂಡ–ಖಂಡ' ಎಂದು ಹೇಳುತ್ತೇವೆ. ಹಾಗಾಗಿ ಇಂಗ್ಲಿಷ್ ಪದ ಬಹಳ ಬಳಕೆಯಾಗಿ ಜನರಿಗೆ ಕನ್ನಡ ಪದ ಮರೆತುಹೋಗಿದೆ. ಕೆಲವರು 'ಖಂಡ–ಖಂಡ' ಎಂದರೆ ಏನು? ಎಂದು ಕೇಳಿದರು. ಇದು ತಪ್ಪು ಅರ್ಥವಾಗಿ 'ಖಂಡವಿದಿಕೋ–ಮಾಂಸವಿದಿಕೋ' ಅಲ್ಲಿಗೆ ಹೋಗಿಬಿಡುತ್ತಾರೆ.

**ಶ್ರೀ ವಿ. ಉಮೇಶ್ ಕತ್ತಿ:–** ಈಗ ಪ್ರಶ್ನೆ ಏನೆಂದರೆ ಏನು?

**ಸಭಾಪತಿಯವರು:–** ಅಂದರೆ ಸಭೆಯ ಮುಂದೆ ಈಗ ಏನು ವಿಷಯ ಇದೆ ಎಂದು ಆಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕನ್ನಡದಲ್ಲಿ ವಿಧೇಯಕಗಳನ್ನು ಬರೆಯುವಾಗ ಕನ್ನಡ ಭಾಷೆಯ ಬಗ್ಗೆ ಸ್ವಲ್ಪ ಕಾಳಜಿಯನ್ನು ವಹಿಸಬೇಕಾಗುತ್ತದೆ, ಕೆಲವು ತಪ್ಪುಗಳು ಪುನರಾವರ್ತನೆ ಆಗದೇ ಇರುವ ಹಾಗೆ ನೋಡಿಕೊಳ್ಳಬೇಕಾಗುತ್ತದೆ. ಕೆಲವು ಸರಳ ವ್ಯಾಕರಣ ತಪ್ಪುಗಳನ್ನು ಸಹ ನೋಡಿ ತಿದ್ದುವುದಿಲ್ಲ ಎಂದರೆ ಕಷ್ಟವಾಗುತ್ತದೆ. ನಾವು ಕನ್ನಡ ನಾಡಿನಲ್ಲಿದ್ದೇವೆ, ಆದ್ದರಿಂದ ಕನ್ನಡ ಭಾಷೆಯ

ಬಗ್ಗೆ ಹೆಚ್ಚು ಕಾಳಜಿಯನ್ನು ಇಟ್ಟುಕೊಂಡು ಈ ತಪ್ಪುಗಳನ್ನು ತಿದ್ದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, 'ಭಾಷಾ ಭಾರತಿ' ಎನ್ನುವಂತಹ ಒಂದು ಸಂಸ್ಥೆ ಇದೆ ಅವರಿಗೆ ಕೊಟ್ಟರೆ ಅವರು ಪರಿಶೀಲನೆ ಮಾಡಿ ಕೊಡುತ್ತಾರೆ.

**ಸಭಾಪತಿಯವರು:-** ಮಾನ್ಯ ಗಣೇಶ್ ಕಾರ್ಣಿಕ್‌ರವರೇ, ಈ ವಿಚಾರವನ್ನು ನಾನೇ ಹೇಳಬೇಕೆಂದು ಇದ್ದೆ. ಅಷ್ಟರಲ್ಲಿ ತಾವೇ ಪ್ರಸ್ತಾಪ ಮಾಡಿದ್ದೀರಿ. ಸಮಸ್ಯೆ ಏನೆಂದರೆ, ಇಲ್ಲಿರುವಂತಹ ಬಹಳಷ್ಟು ಜನ ಅಧಿಕಾರಿಗಳು ಬೇರೆ ರಾಜ್ಯದಿಂದ ಬಂದಿರುವವರು ಅವರ ಮಾತೃ ಭಾಷೆ ಕನ್ನಡ ಅಲ್ಲ. ಅವರು ಪದವಿಯನ್ನು ಇಂಗ್ಲೀಷ್‌ನಲ್ಲಿ ಅಥವಾ ಬೇರೆ ಭಾಷೆಯಲ್ಲಿ ಓದಿರುತ್ತಾರೆ. ಬಿಲ್‌ಗಳ ಡ್ರಾಫ್ಟಿಂಗ್‌ನ್ನು ಸಾಮಾನ್ಯವಾಗಿ ಇಂಗ್ಲೀಷ್‌ನಲ್ಲಿ ಮಾಡುತ್ತಾರೆ. ಅದರಲ್ಲಿ ಅಪರೂಪಕ್ಕೊಂದು ತಪ್ಪಿರುತ್ತದೆ. ಇಂಗ್ಲೀಷ್‌ನಲ್ಲಿ ಡ್ರಾಫ್ಟಿಂಗ್ ಆದ ಬಿಲ್‌ಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಲು ಇಲ್ಲಿಗೆ ಕಳುಹಿಸಿಕೊಡಲಾಗುತ್ತದೆ. ಈ ಕಾರ್ಯವನ್ನು ಮಾಡಲು ಭಾಷಾಂತರ ವಿಭಾಗ ಬೇರೆಯೇ ಇದೆ. ಭಾಷಾಂತರ ವಿಭಾಗದಲ್ಲಿ ಕನ್ನಡದಲ್ಲಿ ವಿಧೇಯಕಗಳನ್ನು ತಯಾರು ಮಾಡುವಾಗ ತಪ್ಪುಗಳು ಆಗುತ್ತಿರುವುದನ್ನು ತಾವು ಗಮನಿಸಿ ಅದನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ನನಗೆ ನೆನಪಿರುವ ಹಾಗೆ ಕಳೆದ 20 ವರ್ಷಗಳ ಹಿಂದೆ ನಾನು ಹೊಸದಾಗಿ ಸದಸ್ಯನಾಗಿ ಬಂದಿದ್ದೆ, ಆಗ, 'ವಿಧೇಯಕಗಳ ಕನ್ನಡ ಭಾಷಾಂತರದಲ್ಲಿ ತಪ್ಪಿದೆ ಅದನ್ನು ಸರಿ ಮಾಡಬೇಕು' ಎಂದು ನಾನು ಸದನದಲ್ಲಿ ಧರಣಿ ಸತ್ಯಾಗ್ರಹ ಮಾಡಿದ್ದೆ. ಆದರೆ, ಆಗ ಏನೂ ಮಾಡುವುದಕ್ಕೆ ಆಗಲಿಲ್ಲ. ನಿರ್ದಿಷ್ಟವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಇದನ್ನು ಗಮನಿಸಬೇಕಾಗುತ್ತದೆ. ಸರ್ಕಾರ ಇದರ ಕಡೆ ಗಮನಹರಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

**ಪ್ರೊ: ಎಸ್.ಆರ್. ಲೀಲಾ (ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಬೇಕಾದರೆ ನಾನೇ ಸ್ವತಃ ಆಸಕ್ತಿಯನ್ನು ವಹಿಸಿ ತರ್ಜುಮೆ ಮಾಡಿಕೊಡುತ್ತೇವೆ.

**ಸಭಾಪತಿಯವರು:–** ಪ್ರೊ:ಲೀಲಾರವರೇ, ಆ ರೀತಿ ಯಾರೂ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಸರ್ಕಾರದ ಅಧಿಕೃತ ಇಲಾಖೆಯೊಂದು ಇದೆ.

**ಪ್ರೊ: ಎಸ್.ಆರ್. ಲೀಲಾ:–** ಸನ್ಮಾನ್ಯ ಸಭಾಪತಿಯವರೇ, ಆ ಇಲಾಖೆಯವರು ಸಿದ್ಧಗೊಳಿಸಿ ಕೊಟ್ಟ ವಿಧೇಯಕವನ್ನು ಪರಿಶೀಲಿಸಿ, ತಿದ್ದುಪಡಿ ಮಾಡುವಂತಹ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳುತ್ತೇನೆ. ದಯವಿಟ್ಟು ನನಗೆ ಅವಕಾಶ ಕೊಡಿ.

**ಶ್ರೀ ಬಾನುಪ್ರಕಾಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಹೊರ ರಾಜ್ಯದ ಅಧಿಕಾರಿಗಳ ಕೆಲಸವನ್ನು ಶ್ಲಾಘನೆ ಮಾಡುತ್ತೇವೆ. ಹಾಗೆಯೇ, ಅವರು ಕನ್ನಡದಲ್ಲಿ ಮಾತನಾಡುವುದನ್ನು ಸಹ ತುಂಬಾ ಸಹಿಸಿಕೊಂಡಿದ್ದೇವೆ. ಉಪ ಮುಖ್ಯಮಂತ್ರಿಗಳಾಗಿರುವಂತಹ ಮಾನ್ಯ ಈಶ್ವರಪ್ಪನವರು ಇಲ್ಲಿಯೇ ಇದ್ದಾರೆ. ಅವರಿಗೆ ಗೊತ್ತಿರುವಂತೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬರು ಎಸ್.ಪಿ. ಇದ್ದರು. ಯಾವುದೋ ಒಂದು ಸಂದರ್ಭದಲ್ಲಿ ಅವರಲ್ಲಿಗೆ ಹೋದಾಗ, ಮಾನ್ಯ ಈಶ್ವರಪ್ಪನವರಿಗೆ, 'ನಿಮ್ಮ ಹೆಣದ ಮೇಲೆ ಬರೆದಿದೆ' ಎನ್ನುವಂತಹ ಮಾತನ್ನು ಹೇಳಿದ್ದರು. ಅದನ್ನೂ ಸಹ ನಾವು ಸಹಿಸಿಕೊಂಡಿದ್ದೇವೆ. ಆದರೆ, ಮುದ್ರಣದಲ್ಲಿ ತಪ್ಪು ಮಾಡಿದರೆ ಅದನ್ನು ಹೇಗೆ ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ತಾವೇ ಹೇಳಬೇಕಾಗಿದೆ. ಈ ವಿಧೇಯಕ ನಾಳೆ ಕಾನೂನು ಆಗುತ್ತದೆ. ಕಾನೂನು ಆದ ಮೇಲೆ ಕೆಳಗೆ ಇರುವಂತಹ ಅಧಿಕಾರಿಗಳು ಆ ಪದವನ್ನು ಹಿಡಿದುಕೊಂಡು ತಮಗೆ ಬೇಕಾದ ಹಾಗೆ ತಿರುಚಿಕೊಳ್ಳುತ್ತಾರೆ. ಹಾಗಾಗಿ ಇದರಲ್ಲಿ ಸ್ವಲ್ಪನೂ ವ್ಯತ್ಯಾಸ ಆಗದೇ ಇರುವ ಹಾಗೆ ನೋಡಿಕೊಳ್ಳುವಂತಹ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕೆನ್ನುವುದು ನಮ್ಮ ವಿನಂತಿಯಾಗಿದೆ.

**ಸಭಾಪತಿಯವರು:–** ಇದು ಇವತ್ತಿನ ಸಮಸ್ಯೆ ಅಲ್ಲ, ಬಹಳ ವರ್ಷಗಳಿಂದ ಈ ಸಮಸ್ಯೆ ಇದೆ. ಸರ್ಕಾರದ ಪರವಾಗಿ ಯಾರಾದರು ಇದರ ಬಗ್ಗೆ ಪ್ರಕ್ರಿಯೆಯನ್ನು ವ್ಯಕ್ತಪಡಿಸಬೇಕು.

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ಶಾಸನಗಳನ್ನು ಇಂಗ್ಲೀಷ್‌ನಲ್ಲಿ ಮಾಡುತ್ತಾರೆ. ಅದೊಂದು ಪದ್ಧತಿಯಾಗಿದೆ. ವಿಧಾನಸೌಧದಲ್ಲಿ ಭಾಷಾಂತರ ಇಲಾಖೆ ಇದೆ. ಅವರು ಕನ್ನಡಕ್ಕೆ ತರ್ಜುಮೆ ಮಾಡುತ್ತಾರೆ. ಈ 'ಪರಂತು' ಇಂದ ಹಿಡಿದು ಎಲ್ಲವನ್ನೂ ತರ್ಜುಮೆ ಮಾಡಲಾಗುತ್ತದೆ. ಅದೊಂದು ಅಭ್ಯಾಸಬಲವಾಗಿದೆ. ಈ ರೀತಿ ಕನ್ನಡದ ವಿಧೇಯಕಗಳಲ್ಲಿ ಕಾಗುಣಿತ ಮತ್ತು ವ್ಯಾಕರಣಗಳಲ್ಲಿ ಏನು ದೊಡ್ಡ ತಪ್ಪುಗಳು ಆಗುತ್ತಿವೆ. ಅದನ್ನು ಸರಿಪಡಿಸಿವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ ಇದರಲ್ಲಿ 'ಪರಂತುಗ' ಎಂದು ಇದೆ ಅದು ಏನು ಎನ್ನುವುದು ಅರ್ಥವಾಗಿಲ್ಲ.

**ಡಾ॥ ದೊಡ್ಡರಂಗೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಎಲ್ಲ ಆದ ಮೇಲೆ ಅದನ್ನು ಪರಿಶೀಲಿಸಿ ಕೊಡುವುದಕ್ಕೆ 2–3 ಜನ ಭಾಷಾ ವಿದ್ವಾಂಸರುಗಳನ್ನು ಒಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡಬಹುದು.

**ಸಭಾಪತಿಯವರು:–** ಸರ್ಕಾರದ ಅಧಿಕೃತ ಇಲಾಖೆಯಾದ ಭಾಷಾಂತರ ಇಲಾಖೆ ನಮ್ಮಲ್ಲಿ ಇದೆ. ಅಲ್ಲಿ ಈ ರೀತಿಯ ತಪ್ಪುಗಳು ಆಗುತ್ತಿವೆ. ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಗಮನಹರಿಸಬೇಕಾಗುತ್ತದೆ. ಬೇರೆ ಹೊಸ ಸಮಿತಿಯನ್ನು ರಚನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಸಿ.ಹೆಚ್. ವಿಜಯ ಶಂಕರ್ (ವಿಧಾನ ಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಲೋಕಸಭೆಯಲ್ಲಿ ನಾವು ಗಮನಿಸಿದಂತೆ ದೇಶದಲ್ಲಿ ಎಷ್ಟು ಭಾಷೆಗಳಿವೆ ಅಷ್ಟು ಭಾಷೆಗಳನ್ನು ಮಾತನಾಡುವಂತಹ ಸದಸ್ಯರುಗಳನ್ನು ನಾವು ಕಾಣುತ್ತೇವೆ. ಸದಸ್ಯರು ಮಾತನಾಡಿದ ಘಳಿಗೆಯಲ್ಲಿಯೇ ತರ್ಜುಮೆ ಆಗುವಂತಹ ವ್ಯವಸ್ಥೆ ಇದೆ. ಅಲ್ಲಿ ಈ ರೀತಿಯ ತಪ್ಪುಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಆಗುವುದನ್ನು ನಾವು ಕಂಡಿದ್ದೇವೆ. ಇದಕ್ಕೆ ಕನಿಷ್ಠ ಬದ್ಧತೆ ಮತ್ತು ಕಾಳಜಿಯ ಅವಶ್ಯಕತೆ ಇದೆ. ಕಾಳಜಿ ಇಲ್ಲದಿದ್ದರೆ ಈ ರೀತಿಯ ವ್ಯತ್ಯಾಸಗಳನ್ನು

ನಾವು ಕಾಣುತ್ತೇವೆ. ಆದ್ದರಿಂದ ಈ ಬಗ್ಗೆ ಕಾಳಜಿಯನ್ನು ವಹಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಸ್. ಸುರೇಶ್‌ಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳ ಮಾತುಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವೆಲ್ಲರೂ ನೋಡಿದಂತೆ ಮದರ್ ಆಫ್ ಪಾರ್ಲಿಮೆಂಟ್ಸ್ ಆಗಿರುವಂತಹ ಇಂಗ್ಲೆಂಡ್ ಪಾರ್ಲಿಮೆಂಟ್‌ನಲ್ಲಿ ವಿಧೇಯಕಗಳ ಚರ್ಚೆಗೆ ಒಂದು ಹೊಸ ನೀತಿ ಇದೆ. ಫಸ್ಟ್ ರೀಡಿಂಗ್ ಸೆಕೆಂಡ್ ರೀಡಿಂಗ್ ಮತ್ತು ಥರ್ಡ್ ರೀಡಿಂಗ್ ಎಂದು ಮಾಡುತ್ತಾರೆ. ಅಂದರೆ ಬಹಳ ವಿಶದವಾಗಿ ನೋಡುತ್ತಾರೆ ಎನ್ನುವುದು ನನ್ನ ಭಾವನೆಯಾಗಿದೆ. ನನಗೆ ಈ ವಿಚಾರವನ್ನು ಈ ನಾಡಿನ ಶ್ರೇಷ್ಠ ನ್ಯಾಯಮೂರ್ತಿಗಳಾದ ವೆಂಕಟಾಚಲಯ್ಯನವರು ಹೇಳಿದರು. ಲಂಡನ್ Waterworth ನ ವಿಧೇಯಕ ಬಂದಿತ್ತು. ಇಂಗ್ಲೆಂಡ್‌ನಲ್ಲಿ ಕ್ಯಾಥೋಲಿಕ್‌ಗಳ ಮಧ್ಯೆ ಆಗಿರುವ ಮದುವೆಗಳನ್ನು dissolution ಮಾಡುವುದು ಬಹಳ ಕಷ್ಟ. ಅಲ್ಲಿಯ ಡ್ರಾಫ್ಟ್‌ಮನ್ ವಾಟರ್ ಸಪ್ಲೈಯರ್ ಅವರ ಸಹಾಯವನ್ನು ಪಡೆಯುವಂತಹ ಸಂದರ್ಭದಲ್ಲಿ, ಡ್ರಾಫ್ಟ್‌ಮನ್ ಆ ವಾಟರ್‌ಮನ್‌ನ ಹೆಸರನ್ನು ಹಾಕಿ His marriage is herewith dissolved ಎಂದು 17th clause ನಲ್ಲಿ ಹಾಕಿಬಿಟ್ಟ. ಬಿಲ್ ಫಸ್ಟ್ ರೀಡಿಂಗ್, ಸೆಕೆಂಡ್ ರೀಡಿಂಗ್ ಮತ್ತು ಥರ್ಡ್ ರೀಡಿಂಗ್ ಎಲ್ಲ ಆಗಿ ಹೋಗಿತ್ತು. ಬಹಳ ವರ್ಷಗಳ ನಂತರ ನಮ್ಮ ಗಣೇಶ್ ಕಾರ್ಣಿಕ್ ಅಂತಹವರು ಬಿಲ್‌ನ್ನು ಅಧ್ಯಯನ ಮಾಡುತ್ತಾ ಕುಳಿತುಕೊಂಡಾಗ, 17ನೇ ಕ್ಲಾಸ್ ಏನು ಹೇಳುತ್ತದೆ ಎಂದು ನೋಡಿದಾಗ, 'Waterworth ಮತ್ತು marriage dissolution' ಗೂ ಏನು ಸಂಬಂಧ ಎಂದು ಯೋಚನೆ ಮಾಡಿ ಆಮೇಲೆ ಪತ್ತೆ ಹಚ್ಚಿ ಮಧ್ಯೆ ಬೇರೆ ಏನನ್ನೋ ಸೇರಿಸಿದರು. ಅದಕ್ಕೆ ಹೋಲಿಸಿದರೆ ನಮ್ಮ ರಾಜ್ಯ ಬಹಳ ಚೆನ್ನಾಗಿದೆ ಆ ರೀತಿ ತಪ್ಪುಗಳನ್ನು ಮಾಡುವುದಿಲ್ಲ.

**ಸಭಾಪತಿಯವರು:–** ಈಗ ಇವತ್ತಿನ ಕಲಾಪಗಳಲ್ಲಿ ಮಾನ್ಯ ಮೋನಪ್ಪ ಭಂಡಾರಿಯವರು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ ಅದನ್ನು ತೆಗೆದುಕೊಳ್ಳಲಾಗುತ್ತದೆ.

## 14. ಗಮನ ಸೆಳೆಯುವ ಸೂಚನೆಗಳು

**(ಅ) ರಾಜ್ಯದ ಕರಾವಳಿ ಭಾಗದಲ್ಲಿ ಸಮುದ್ರ ಮೀನುಗಾರಿಕೆ ವೃತ್ತಿಯು ಬೃಹದಾಕಾರದ ಉದ್ಯಮವಾಗಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ವೈಜ್ಞಾನಿಕ ಮತ್ತು ವ್ಯವಸ್ಥಿತ ಮೀನುಗಾರಿಕೆಗೆ ಉತ್ತೇಜನ ನೀಡುವ ಕುರಿತು.**

**ಶ್ರೀ ಮೋನಪ್ಪ ಕೆ. ಭಂಡಾರಿ:–** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಕರಾವಳಿ ಭಾಗದಲ್ಲಿ ಸಮುದ್ರ ಮೀನುಗಾರಿಕೆ ವೃತ್ತಿಯು ಬೃಹದಾಕಾರದ ಉದ್ಯಮವಾಗಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ವೈಜ್ಞಾನಿಕ ಮತ್ತು ವ್ಯವಸ್ಥಿತ ಮೀನುಗಾರಿಕೆಗೆ ಉತ್ತೇಜನ ನೀಡುವ ಕುರಿತು ಮಾನ್ಯ ಮೀನುಗಾರಿಕೆ ಸಚಿವರ ಗಮನ ಸೇಳೆಯುತ್ತಿದ್ದೇನೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮುಜರಾಯಿ ಸಚಿವರು):–** ಮಾನ್ಯ ಸಭಾಪತಿಯವರೆ, ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಕರ್ನಾಟಕ ಕರಾವಳಿ ಭಾಗದಲ್ಲಿ ವೈಜ್ಞಾನಿಕ ಮತ್ತು ವ್ಯವಸ್ಥಿತ ಮೀನುಗಾರಿಕೆಗೆ ಉತ್ತೇಜನ ನೀಡಲು ಸರ್ಕಾರ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಕರಾವಳಿ ಭಾಗದಲ್ಲಿ ಮೀನುಗಾರಿಕೆ ಬಂದರುಗಳ, ಜೆಟ್ಟಿಗಳ ನಿರ್ಮಾಣ, ನಿರ್ವಹಣೆ ಹಾಗೂ ದುರಸ್ತಿಗೆ ಕ್ರಮಕೈಗೊಳ್ಳಲಾಗುತ್ತಿದೆ. ಆ ಮೇರೆಗೆ ಮಲ್ಪೆ ಮತ್ತು ಮಂಗಳೂರಿನಲ್ಲಿ ಮೀನುಗಾರಿಕೆ ಬಂದರುಗಳ ವಿಸ್ತರಣೆ ಕಾಮಗಾರಿ ಪ್ರರಂಭಿಸಲಾಗಿದೆ. ಹೊನ್ನಾವರ ಮೀನುಗಾರಿಕೆ ಬಂದರಿನ ವಿಸ್ತರಣೆಗೆ ಅನುಮೋದನೆ ನೀಡಿ ಟೆಂಡರ್ ಕರೆಯಲಾಗಿದೆ. ಗಂಗೊಳ್ಳಿ, ಭಟ್ಕಳ ಬಂದರುಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತಿದೆ. ಹಂಗಾರಕಟ್ಟೆ, ಗಂಗಾವಳಿ, ಮಂಜುಗುಣಿ, ಬೆಳಂಬಾರ, ಕೊಡೇರಿ, ಬೇಲೇಕೇರಿ, ವನ್ನಳ್ಳಿಗಳಲ್ಲಿ ಜೆಟ್ಟಿಗಳ ನಿರ್ಮಾಣ ಕೈಗೊಳ್ಳಲಾಗುತ್ತಿದೆ. ಭಟ್ಕಳ, ಮಂಗಳೂರು, ಆಮದಳ್ಳಿ, ಮಲ್ಪೆ,

ಅಂಗಾರ ಕಟ್ಟೆ ಮತ್ತು ಕೋಡಿ ಬೇಂಗ್ರೆ ಮೀನುಗಾರಿಕೆ ಕೇಂದ್ರಗಳಲ್ಲಿ ಹೂಳೆತ್ತಲು ಕ್ರಮ ವಹಿಸಲಾಗಿದೆ.

ಕರಾವಳಿ ಪ್ರದೇಶದ ಯಾಂತ್ರಿಕ ದೋಣಿಗಳು ಬಳಸುವ ಡೀಸೆಲ್‌ನ ಮೇಲೆ ರಾಜ್ಯ ಸರ್ಕಾರದಿಂದ ಮಾರಾಟಕರ ವಿನಾಯ್ತಿ ನೀಡುತ್ತಿದ್ದು 2012–13 ನೇ ಸಾಲಿನಲ್ಲಿ 125000 KL ಮಾರಾಟಕರ ರಹಿತ ಡೀಸಲನ್ನು ಸರಬರಾಜು ಮಾಡಲು ಅವಕಾಶ ನೀಡಿ ಬಿಡುಗಡೆ ಮಾಡಲಾಗುತ್ತಿದೆ.

ರಾಜ್ಯದ ನಾಡದೋಣಿಗಳನ್ನು ಮೋಟರೀಕೃತಗೊಳಿಸಲು ಸರ್ಕಾರ ಯೋಜನೆಯನ್ನು ಹಮ್ಮಿಕೊಂಡಿದ್ದು ಸದರಿ ಸಾಲಿನಲ್ಲಿ ₹ 85.20 ಲಕ್ಷ ಸಹಾಯಧನ ಕಾಯ್ದಿರಿಸಲಾಗಿದೆ. ಈ ಯೋಜನೆಯಡಿ ಘಟಕ ವೆಚ್ಚದ ಶೇ. 50 ರಷ್ಟು ಗರಿಷ್ಟ ₹ 30000 ಸಹಾಯಧನ ನೀಡಲು ಅವಕಾಶವಿದ್ದು, ಸಹಾಯಧನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮವಾಗಿ ಭರಿಸುತ್ತವೆ.

ಸಮುದ್ರದಲ್ಲಿ ಮೀನುಗಾರರ ಸುರಕ್ಷತೆಗಾಗಿ ಶೇ.75ರ ಸಹಾಯಧನದಲ್ಲಿ ಜಿಪಿಎಸ್, ಫಿಶ್ ಫೈಂಡರ್, ಸಂವಹನ ಉಪಕರಣ, ಹಾಗೂ ಸರ್ಚ್ ಆಂಡ್ ರೆಸ್ಕ್ಯೂ ಬೀಕಾನ್‌ಗಳನ್ನು ನೀಡಲಾಗುತ್ತಿದೆ.

ಸುಧಾರಿತ ಮಾದರಿಯ ಯಾಂತ್ರೀಕೃತ ದೋಣಿಗಳ ನಿರ್ಮಾಣಕ್ಕೆ ಶೇ.10 ರಷ್ಟು ಸಹಾಯಧನದಂತೆ ಪ್ರತಿ ದೋಣಿಗೆ ಗರಿಷ್ಟ ₹ 6.0 ಲಕ್ಷಗಳ ಸಹಾಯಧನ ನೀಡಲಾಗುವುದು. 2012–13ನೇ ಸಾಲಿನಲ್ಲಿ ಇದಕ್ಕಾಗಿ 200 ಲಕ್ಷ ಅನುದಾನ ನೀಡಲಾಗಿದೆ.

ಮೀನುಗಾರಿಕೆ ದೋಣಿಗಳ ಅಂತರಜಾಲ ನೊಂದಣಿ (ಆನ್–ಲೈನ್) ಮಾಡಲಾಗುತ್ತಿದೆ.

ಮಂಜುಗಡ್ಡೆ ಮತ್ತು ಶೈತ್ಯಾಗಾರ ಘಟಕಗಳ ಪುನಶ್ಚೇತನಕ್ಕಾಗಿ ಪ್ರತಿಯೊಂದು ಘಟಕ ಬಳಸುವ ವಿದ್ಯುತ್ ಯೂನಿಟ್‌ಗೆ ₹ 1.25 ರಂತೆ ಪ್ರತಿ ಘಟಕಕ್ಕೆ ಗರಿಷ್ಠ ₹ 2.50 ಲಕ್ಷದಂತೆ ಮಿತಿಗೊಳಿಸಿ ಸಹಾಯಧನ ನೀಡುವ

ಯೋಜನೆಯಡಿ 167 ಮಂಜುಗಡ್ಡೆ ಕಾರ್ಖಾನೆಗಳಿಗೆ ₹ 87.40 ಲಕ್ಷಗಳ ಸಹಾಯಧನ ನೀಡಲಾಗಿದೆ.

ಮೀನು ಮಾರಾಟಕ್ಕಾಗಿ ಸುಸಜ್ಜಿತ ಮೀನು ಮಾರುಕಟ್ಟೆಗಳನ್ನು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ ಆರ್ಥಿಕ ನೆರವಿನಿಂದ ಹಾಗು ರಾಜ್ಯ ಸರ್ಕಾರದ ಅನುದಾನದಿಂದ ನಿರ್ಮಿಸಲಾಗುತ್ತಿದೆ ಮತ್ತು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಮೂಲಕ ಮೀನುಮಾರಾಟ ಕೇಂದ್ರಗಳನ್ನು ತೆರೆಯಲಾಗಿದೆ.

ಕಪ್ಪೆ ಬೋಂಡಾಸ್ ಮೀನನ್ನು ಅವೈಜ್ಞಾನಿಕ ವಿಧಾನಗಳಿಂದ ಹಿಡಿಯುವುದನ್ನು ನಿಷೇಧಿಸಲಾಗಿದೆ.

ಇದಲ್ಲದೆ ರಾಜ್ಯದ ಆಳಸಮುದ್ರ ಮೀನು ಶಿಕಾರಿಯಲ್ಲಿ ಇತ್ತೀಚಿಗೆ ಅಧಿಕ ಅಶ್ವಶಕ್ತಿಯ ಇಂಜಿನ್ ಅಳವಡಿಸಿ ಮೀನು ಹಿಡಿಯುವ ಪದ್ಧತಿಯಿಂದಾಗಿ ಮೀನಿನ ಸಂತಾನ ಕಡಿಮೆಯಾಗುವ ಸಾಧ್ಯತೆ ಇರುವುದರಿಂದ ಈ ಬಗ್ಗೆ ಸೆಂಟ್ರಲ್ ಇನ್ಸಿಟ್ಯೂಟ್ ಆಫ್ ಫಿಶರೀಸ್ ಟೆಕ್ನಾಲಜಿ, ಕೊಚ್ಚಿ ಹಾಗೂ ಮೀನುಗಾರಿಕೆ ಕಾಲೇಜ್, ಮಂಗಳೂರುರವರ ತಾಂತ್ರಿಕ ಅಭಿಪ್ರಾಯವನ್ನು ಪಡೆದು 250 ಹೆಚ್.ಪಿ. ಗಿಂತ ಹೆಚ್ಚಿನ ಅಶ್ವಶಕ್ತಿಯ ಇಂಜಿನ್‌ಗಳನ್ನು ಆಳವಡಿಸುವುದನ್ನು ಸರ್ಕಾರದ ಆದೇಶ ಸಂಖ್ಯೆ ಪಸಂಮೀ 142 ಮೀಇಯೋ 2012 ದಿನಾಂಕ 09.07.2012 ರಲ್ಲಿ ನಿಷೇಧಿಸಿದೆ. ಈಗಾಗಲೇ 250 ಹೆಚ್.ಪಿ. ಗಿಂತ ಹೆಚ್ಚಿನ ಅಶ್ವಶಕ್ತಿ ಇಂಜಿನ್ ಹೊಂದಿರುವ ಹಾಗೂ ಇಲಾಖೆಯಲ್ಲಿ ನೊಂದಣಿಯಾಗಿರುವ ಯಾಂತ್ರೀಕೃತ ದೋಣಿಗಳ ಇಂಜಿನ್‌ನ್ನು ಬದಲಾಯಿಸಲು ಒಂದು ವರ್ಷದ ಸಮಯಾವಕಾಶ ನೀಡಲಾಗಿದೆ.

ರಾಜ್ಯದ ಕಡಲ ಮೀನು ಸಂಪತ್ತನ್ನು ಕಾಪಾಡುವ ಉದ್ದೇಶದಿಂದ ಸದರಿ ಆದೇಶವನ್ನು ಸರ್ಕಾರ ಜಾರಿಗೊಳಿಸಿದ್ದು ಇದರಿಂದ ಮುಂಬರುವ ವರ್ಷಗಳಲ್ಲಿ ಬರಬಹುದಾದ ಮೀನು ಕ್ಷಾಮವನ್ನು ನಿಯಂತ್ರಿಸಿ ಮೀನುಗಾರರಿಗೆ ಪ್ರಯೋಜನಕಾರಿಯಾಗಬಲ್ಲದು.

(4.00 ಗಂಟೆ)

**ಶ್ರೀ ಮೋನಪ್ಪ ಕೆ. ಭಂಡಾರಿ:–** ಮಾನ್ಯ ಸಭಾಪತಿಗಳೆ, ಮೀನುಗಾರಿಕೆ ಒಳ್ಳೆಯ ಉದ್ಯಮವಾಗಿದೆ. ಕರಾವಳಿಯ ಹೆಚ್ಚು ಯುವಕರು ಇದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಂಥವರಿಗೆ ಆದ್ಯತೆ ಕೊಡುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ. ಮೀನುಗಾರಿಕೆಯಿಂದ ಉದ್ಯೋಗ ಸೃಷ್ಟಿಯಾಗುತ್ತದೆ. ಇನ್ನೊಂದು ಕಡೆ ಮೀನಿನ ಉತ್ಪತ್ತಿ ಹೆಚ್ಚಾಗಿ ಅದರ ರಫ್ತಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಮೀನುಗಾರ ಸಮುದಾಯವು ಸಮುದ್ರ ಕಿನಾರೆಯ ಸುತ್ತಮುತ್ತಲು ವಾಸ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಸಮುದ್ರ ಕೊರತೆ ತಡೆಯಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಮಾಹಿತಿ ನೀಡಬೇಕು. ಮೀನುಗಾರರು ತೀರ ಬಡವರು. ಅವರಿಗೆ ಮನೆಗಳಿಲ್ಲ ಎಂದು ಹೇಳುತ್ತಾರೆ. ಅವರಿಗೆ ಮನೆಗಳನ್ನು ಕಟ್ಟುವ ನಿಟ್ಟಿನಲ್ಲಿ ಸರ್ಕಾರ ಏನು ಕ್ರಮಕೈಗೊಂಡಿದೆ ಎನ್ನುವುದನ್ನು ಹೇಳಬೇಕು. ಇವರ ಮನೆಗಳು ಸಿಆರ್‌ಜೆಡ್ ವ್ಯಾಪ್ತಿಯಲ್ಲಿ ಬರುತ್ತವೆ. ಮನೆ ಕಟ್ಟುವುದಕ್ಕೆ ಅನುಮತಿ ಕೇಳಲು ಹೋದರೆ ಅಧಿಕಾರಿಗಳು, ಸಿಆರ್‌ಜೆಡ್‌ನಿಂದ ಅನುಮತಿ ತೆಗೆದುಕೊಂಡು ಬರಬೇಕು ಎಂದು ಹೇಳುತ್ತಾರೆ. ಆದರೆ ಇದಕ್ಕೆ ಅನುಮತಿ ಸಿಗುವುದಿಲ್ಲ. ಇದರ ಬಗ್ಗೆ ಸರ್ಕಾರದ ನಿಲುವು ಏನು, ಯಾವರೀತಿ ಅವರಿಗೆ ಸರ್ಕಾರ ಸಹಾಯ ಮಾಡುತ್ತದೆ ಎಂಬ ಮಾಹಿತಿ ನೀಡಬೇಕು.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮೀನುಗಾರರ ಮನೆಗಳ ಭದ್ರತೆಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಉಲ್ಲೇಖ ಮಾಡಿದರು. ಕರ್ನಾಟಕ ರಾಜ್ಯದಲ್ಲಿ 300 ಕಿ.ಮೀ. ಕಡಲ ಕಿನಾರೆ ಇದೆ. ಈ ಕರಾವಳಿ ಪ್ರದೇಶಗಳಲ್ಲಿ ಮೀನುಗಾರರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಕಡಲ ಕೊರೆತದಿಂದ ಮೀನುಗಾರರ ಬದುಕಿಗೆ ಅಪಾಯ ಉಂಟಾಗುವ ಸಾಧ್ಯತೆಗಳಿರುತ್ತವೆ. ಆ ಹಿನ್ನೆಲೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಎಡಿಬಿ ಯೋಜನೆ ಅಡಿ 911 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಶಾಶ್ವತ

ತಡೆಗೋಡೆ ನಿರ್ಮಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿವೆ. ಅದರ ಪ್ರಥಮ ಹಂತದ ಕಾಮಗಾರಿ ಮಂಗಳೂರು ಜಿಲ್ಲೆಯ ಉಳ್ಳಾಲದಲ್ಲಿ ಜರುಗುತ್ತದೆ. ಈ ಯೋಜನೆ ಪೂರ್ಣಗೊಂಡ ನಂತರ, ಕಡಲ ತೀರದ 300 ಕಿ.ಮೀ. ವ್ಯಾಪ್ತಿಯಲ್ಲಿರುವ ಮೀನುಗಾರರಿಗೆ ಭದ್ರತೆ ಸಿಗುತ್ತದೆ. ಅವರ ಆಸ್ತಿ–ಪಾಸ್ತಿ ರಕ್ಷಣೆ ಮಾಡಲಾಗುತ್ತದೆ. ಮಾನ್ಯ ಸದಸ್ಯರು, ಮೀನುಗಾರರು ಬಹಳ ಬಡವರು, ಅವರು ವಾಸ ಮಾಡುವ ಪ್ರದೇಶ CRZ ವ್ಯಾಪಿಗೆ ಬರುತ್ತಿದ್ದು, ಅಲ್ಲಿ ಮನೆ ಕಟ್ಟಲು ಗ್ರಾಮ ಪಂಚಾಯಿತಿಯವರು ಅವರಿಗೆ ಅನುಮತಿ ಕೊಡುವುದಿಲ್ಲ ಎಂಬ ಮಾತನ್ನು ಹೇಳಿ, ಅವರಿಗೆ ಮನೆ ಕಟ್ಟಿಕೊಡಲು ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ ಎಂದು ಕೇಳಿದರು. ವಾಸ್ತವಿಕವಾಗಿ ಸರ್ಕಾರ ಆ ಕಡಲ ಕಿನಾರೆಯಲ್ಲಿ ವಾಸ ಮಾಡುವಂತಹ ಮೀನುಗಾರರಿಗೆ ನಾಲ್ಕು ಸಾವಿರ ಮೀನುಗಾರಿಕಾ ಮನೆಗಳನ್ನು ಈ ವರ್ಷ ಮಂಜೂರು ಮಾಡಿದೆ. ವಿಶೇಷ ಎಂದರೆ, 60 ಸಾವಿರ ಘಟಕ ವೆಚ್ಚದ ಮನೆ ಪೂರ್ಣ ಉಚಿತವಾಗಿರುತ್ತದೆ. CRZ ವ್ಯಾಪ್ತಿಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಸ್ಥಳೀಯ ಸಂಸ್ಥೆಗಳು ಅನುಮತಿ ಕೊಡುತ್ತಿಲ್ಲ ಎಂಬ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಅಂತಹ ಸಮಸ್ಯೆಗಳಿದ್ದರೆ ಮೀನುಗಾರಿಕೆ ಇಲಾಖೆ ಮೂಲಕ ಆ ರಿಯಾಯಿತಿಯನ್ನು ಕೊಡುವಂತಹ ಕೆಲಸ ಮಾಡುತ್ತೇವೆ. ಯಾವ CRZ ವ್ಯಾಪ್ತಿಯಲ್ಲಿ ಮೀನುಗಾರರು ವಾಸ್ತವ್ಯ ಮಾಡಿಕೊಂಡಿದ್ದಾರೋ ಅವರು ಮೀನುಗಾರಿಕೆ ಮಾಡುವುದಕ್ಕೆ ಅದೇ ಪ್ರದೇಶದಲ್ಲಿರಬೇಕಾಗುತ್ತದೆ, ಬೇರೆ ಪ್ರದೇಶಕ್ಕೆ ಹೋಗಿ ಇರುವುದಕ್ಕೆ ಆಗುವುದಿಲ್ಲ. CRZ ಪ್ರದೇಶದಲ್ಲಿ ಅವರು ಮನೆಗಳನ್ನು ಕಟ್ಟಿಕೊಂಡರೂ ಕೂಡ ಅವರಿಗೆ ಮನೆಗಳನ್ನು ಮಂಜೂರು ಮಾಡುತ್ತೇವೆ, ಮನೆಗಳನ್ನು ಕಟ್ಟಲು ಇರುವ ನಿಯಮದಲ್ಲಿ ಸಡಿಲತೆಯನ್ನು ಅನುಸರಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ನಿಯಮ 72 ಅಡಿ ಎತ್ತಿರುವ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಿದರು. ಮೀನುಗಾರರಿಗೆ ಮೀನು ಹಿಡಿಯುವುದು ಮತ್ತು ಮೀನು ಮಾರಾಟ ಮಾಡುವುದು ಪ್ರಮುಖವಾಗಿರುತ್ತದೆ. ಈ ಎಲ್ಲಾ

ಕ್ರಮಗಳಿಂದ ಮೀನಿನ ಕ್ಷಾಮ ಎದುರಾಗುತ್ತಿದೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಲಿಚ್ಛಿಸುವುದೇನೆಂದರೆ, ಯಾಂತ್ರೀಕೃತ ದೋಣಿ ಬಳಸುವುದರಿಂದ, ಡೀಸೆಲ್ ಸಬ್ಸಿಡಿ ಕೊಡುವುದರಿಂದ ಕೂಡ ಬಹಳ ದೊಡ್ಡ ಸಂಖ್ಯೆಯಲ್ಲಿ deep sea fishing ಹೋಗುತ್ತಿದ್ದಾರೆ. ಆದರೆ breeding time ಏನಿದೆ, ಅದಕ್ಕೆ ಅವಕಾಶ ಕೊಡದೇ ಇರುವುದರಿಂದ ಮೀನಿನ ಕ್ಷಾಮ ಉಂಟಾಗುತ್ತಿದೆ. ಹಾಗಾಗಿ fisheries college ಅವರ ಸಲಹೆಯಂತೆ ಹೆಚ್ಚು ಮೀನು ಬೆಳೆಯುವುದಕ್ಕೆ ಅವಕಾಶ ಕೊಡುವ ಹಾಗೆ ಒಳನಾಡಿನಲ್ಲಿ ಏನಾದರೂ ಕಾರ್ಯಕ್ರಮ ಹಮ್ಮಿಕೊಂಡಿದ್ದೀರಾ? ಮೀನುಗಾರರಿಗೆ ಮೀನು ಸಿಕ್ಕರೆ ಅಲ್ಲವೇ ಅವರು ಮೀನು ಹಿಡಿಯುವುದಕ್ಕೆ ಹೋಗುವುದು? ಮೀನು ಸಿಗುವ ಹಾಗೆ ಮಾಡುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ? ತಮ್ಮ ಎಲ್ಲಾ ಕಾರ್ಯಕ್ರಮಗಳು ಮೀನು ಹಿಡಿಯುವುದಕ್ಕೆ ಮತ್ತು ಅದರ ಮಾರುಕಟ್ಟೆಗೆ ಸಂಬಂಧಪಟ್ಟಂತೆ ಇವೆ. ಸಮುದ್ರದಲ್ಲಾಗಲಿ, ಒಳನಾಡಿನ ನೀರಿನಲ್ಲಾಗಲಿ ಮೀನು ಬೆಳೆದರೆ ಮಾತ್ರ ಮೀನನ್ನು ಹಿಡಿಯುವುದಕ್ಕೆ ಸಾಧ್ಯವಿದೆ. ಹಾಗಾಗಿ, ವೈಜ್ಞಾನಿಕ ಮತ್ತು ವ್ಯವಸ್ಥಿತ ಮೀನುಗಾರಿಕೆಗೆ ಉತ್ತೇಜನ ಕೊಡುವುದಕ್ಕಾಗಿ ತಮ್ಮ ಇಲಾಖೆಯಿಂದ ಯಾವರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕು.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮೀನಿನ ಉತ್ಪಾದನೆ ಹೆಚ್ಚು ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಮಾತನಾಡಿದರು. ಮೀನುಗಾರಿಕಾ ಬಂದರುಗಳಲ್ಲಿ ಮೀನುಗಾರಿಕೆ ಹೆಚ್ಚು ಮಾಡಲು ಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮೀನು ಮರಿಯನ್ನು ಉತ್ಪಾದನೆ ಮಾಡುವುದಕ್ಕೆ ಮೀನುಗಾರಿಕಾ ಕಲ್ಯಾಣ ಯೋಜನೆಗಳ ಮೂಲಕ ಒಳನಾಡು ಪ್ರದೇಶಗಳಲ್ಲಿ ಮೀನು ಮರಿಗಳನ್ನು ಸಾಕುವುದರ ಮೂಲಕ, ಅವುಗಳನ್ನು ಅಭಿವೃದ್ಧಿ ಮಾಡುವುದರ ಮೂಲಕ ಮತ್ತು ವಿತರಣೆ ಮಾಡುವ ಮೂಲಕ ಅಲ್ಲಿಯೂ ಕೂಡ ಮೀನುಗಾರಿಕೆ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಈ ನಿಟ್ಟಿನಲ್ಲಿ ಮಾನ್ಯ ಸದಸ್ಯರು ಸಲಹೆ

ಕೊಟ್ಟರೆ ನಾನು ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಬೇಕಾದಂತಹ ಯೋಜನೆಗಳನ್ನು ರೂಪಿಸಿ ಮಾಹಿತಿ ಕೊಡುತ್ತೇನೆ.

**(ಆ) ರಾಜ್ಯದಲ್ಲಿ ರೈತರು ಬೆಳೆದ ಪ್ರತಿ ಮೆಟ್ರಿಕ್ ಟನ್ ಕಬ್ಬು ಖರೀದಿಗೆ ₹ 112.00 ಗಳಷ್ಟು ತೆರಿಗೆ ವಿಧಿಸಿರುವುದು ರೈತರಿಗೆ ಹೊರೆಯಾಗಿದ್ದು, ನೆರೆಯ ರಾಜ್ಯವಾದ ಮಹಾರಾಷ್ಟ್ರದಲ್ಲಿ ತೆರಿಗೆಯನ್ನು ರದ್ದುಗೊಳಿಸಿ ಸಕ್ಕರೆ ಅಡುವಿನ ಸಾಲಕ್ಕೆ ಶೇ.4ರ ಬಡ್ಡಿ ದರದಲ್ಲಿ ಸಾಲವನ್ನು ನೀಡುತ್ತಿರುವ ರೀತ್ಯ ರಾಜ್ಯ ರೈತರಿಗೂ ಆ ರೀತಿಯಲ್ಲಿ ಸೌಲಭ್ಯ ನೀಡುವ ಬಗ್ಗೆ.**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಭೀಕರ ಬರಗಾಲ ಇರುವಂತಹ ಸಂದರ್ಭದಲ್ಲಿ ರೈತರಿಗೆ ಸಹಾಯ ಹಸ್ತ ನಿಡುವುದು ಸರ್ಕಾರದ ಕರ್ತವ್ಯ. ನಮ್ಮ ರಾಜ್ಯದಲ್ಲಿ ಪ್ರತಿ ಮೆಟ್ರಿಕ್ ಟನ್ ಕಬ್ಬು ಖರೀದಿಗೆ ₹ 1112.00 ತೆರಿಗೆ ಪಾವತಿ ಮಾಡಬೇಕಾಗಿದ್ದು ಇದು ಪರೋಕ್ಷವಾಗಿ ರೈತರಿಗೆ ಹೊರೆಯಾಗುತ್ತಿದೆ. ಪಕ್ಕದ ಮಹಾರಾಷ್ಟ್ರ ಸರ್ಕಾರ ಕಬ್ಬು ಖರೀದಿ ತೆರಿಗೆಯನ್ನು ರದ್ದುಗೊಳಿಸಿ, ರೈತರ ಮತ್ತು ಕಾರ್ಖಾನೆಗಳ ಸಂಕಷ್ಟಕ್ಕೆ ಸ್ಪಂದಿಸಿದೆ. ಸಕ್ಕರೆ ಅಡವಿನ ಸಾಲಕ್ಕೆ ಶೇಕಡ 4 ರಷ್ಟು ಬಡ್ಡಿದರದಲ್ಲಿ ಸಹಾಯ ನೀಡಿ ಸಹಾಯ ಹಸ್ತ ಚಾಚಿದೆ. ಹೀಗಾಗಿ, ಕಾರ್ಖಾನೆಗಳು ರೈತರಿಗೆ ಸ್ಪಂದಿಸಿ ಕಬ್ಬಿಗೆ ಯೋಗ್ಯ ಬೆಲೆ ಕೊಡಲು ಮುಂದಾಗಿವೆ. ಅದೇರೀತಿ ನಮ್ಮ ಸರ್ಕಾರ ಕೂಡ ಈ ಸಮಸ್ಯೆಗೆ ಸ್ಪಂದಿಸಲಿದೆಯೇ ಎಂದು ಕೇಳಬಯಸುತ್ತೇನೆ.

**ಶ್ರೀ ಜಗದೀಶ್‌ಶೆಟ್ಟರ್ (ಮುಖ್ಯ ಮಂತ್ರಿಗಳು):–** ಮಾನ್ಯ ಸಭಾಪತಿಗಳೆ,

ಕರ್ನಾಟಕದಲ್ಲಿ ಪ್ರಸ್ತುತ ಸಕ್ಕರೆ ಕಾರ್ಖಾನೆಗಳು ಕಬ್ಬಿನ ಮೇಲೆ ಸಕ್ಕರೆ ಇಳುವರಿ ದರವು ಶೇ.10.5ಕ್ಕಿಂತ ಹೆಚ್ಚಾಗಿದ್ದರೆ ಪ್ರತಿ ಮೆಟ್ರಿಕ್ ಟನ್‌ಗೆ ₹ 65/– ಖರೀದಿ ತೆರಿಗೆಯನ್ನು ಮತ್ತು ₹ 10/– ರೋಡ್ ಸೆಸ್ ಪಾವತಿಸಬೇಕಾಗಿರುತ್ತದೆ ಮತ್ತು ಇತರ ಪ್ರಕರಣಗಳಲ್ಲಿ ಪ್ರತಿ ಮೆಟ್ರಿಕ್ ಟನ್‌ಗೆ ₹ 50/– ರಂತೆ ಖರೀದಿ ತೆರೆಗೆ ಹಾಗೂ ₹ 10/– ರಂತೆ ರೋಡ್ ಸೆಸ್ ಇರುತ್ತದೆ. ಮಹಾರಾಷ್ಟ್ರ

ರಾಜ್ಯದಲ್ಲಿ, ಸಕ್ಕರೆ ಕಾರ್ಖಾನೆಗಳು ಕಬ್ಬಿನ ಖರೀದಿ ಮೌಲ್ಯದ ಶೇ.3 ರಂತೆ ಖರೀದಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ.

ಸಕ್ಕರೆ ಕಾರ್ಖಾನೆಗಳಿಗೆ ಯಾವುದೇ ತೆರಿಗೆ ವಿನಾಯಿತಿ ನೀಡಿದಲ್ಲಿ, 2011–12 ರ ಮಟ್ಟಲ್ಲಿ ₹ 165.95 ಕೋಟಿಯಷ್ಟು ಖರೀದಿ ತೆರಿಗೆ ಹಾಗೂ ₹ 30.30 ಕೋಟಿಯಷ್ಟು ಸೆಸ್‌ನ ಆದಾಯ ನಷ್ಟವುಂಟಾಗುತ್ತದೆ. ಈ ನಷ್ಟವನ್ನು ಬೇರೆ ಸಂಪನ್ಮೂಲಗಳಿಂದ ಭರಿಸಲು ಕಷ್ಟವಾಗುತ್ತದೆ. ಹಾಗೂ ಪ್ರಸ್ತುತ ಮಾರುಕಟ್ಟೆಯಲ್ಲಿ ಸಕ್ಕರೆ ಮಾರಾಟದ ದರ ಉತ್ತಮವಾಗಿದ್ದು, ಪ್ರತಿ ಕ್ವಿಂಟಾಲಿಗೆ ₹ 3200/– ರಿಂದ 3400/– ರವರೆಗೆ ಸಕ್ಕರೆ ಮಾರಾಟವಾಗುತ್ತಿದೆ.

ಕಬ್ಬು ಖರೀದಿ ತೆರಿಗೆಯನ್ನು ಸಕ್ಕರೆ ಕಾರ್ಖಾನೆಗಳು ಪಾವತಿಸುವ ಪದ್ಧತಿ ಇರುವುದರಿಂದ ಹಾಗೂ ಉತ್ಪಾದನೆಯಾದ ಸಕ್ಕರೆಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇರುವುದರಿಂದ ರಾಜ್ಯ ಸರ್ಕಾರದಿಂದ ಸಕ್ಕರೆ ಕಾರ್ಖಾನೆಗಳಿಗೆ ಯಾವುದೇ ಆರ್ಥಿಕ ಸೌಲಭ್ಯ ನೀಡುವ ಪ್ರಶ್ನೆ ಸರ್ಕಾರದ ಮುಂದೆ ಇರುವುದಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಮುಖ್ಯಮಂತ್ರಿಗಳು, ಮಹಾರಾಷ್ಟ್ರದಲ್ಲಿ ಪ್ರತಿಶತ ಮೂರರಷ್ಟು ತೆರಿಗೆ ಇರುವುದರ ಬಗ್ಗೆ ಹೇಳಿದರು. ಆದರೆ 2006 ಮತ್ತು 2007ರಲ್ಲಿ ಮಹಾರಾಷ್ಟ್ರದಲ್ಲಿದ್ದಂತಹ ಸಕ್ಕರೆ ಕಾರ್ಖಾನೆಗಳು ಸಹವಿದ್ಯುತ್ ಘಟಕವನ್ನು ಅಳವಡಿಸಿ, ಅಲ್ಲಿರುವ 6 ಮೆ.ವ್ಯಾ. ವಿದ್ಯುತ್ತನ್ನು ಮಹಾರಾಷ್ಟ್ರದ ಗ್ರಿಡ್‌ಗಳಿಗೆ ಒದಗಿಸಿದಾಗ ಅಂಥವರಿಗೆ ಸಂಪೂರ್ಣವಾದಂತಹ ಖರೀದಿ ತೆರಿಗೆಯಿಂದ ಮುಕ್ತ ಮಾಡಲಾಗಿತ್ತು. ಅದಕ್ಕಾಗಿ ಅಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕೊಟ್ಟಿರತಕ್ಕಂಥ ಸಹಾಯಧನವನ್ನು ಇವತ್ತು ನಮ್ಮ ರಾಜ್ಯದಲ್ಲಿರತಕ್ಕಂಥ ಸಕ್ಕರೆ ಕಾರ್ಖಾನೆಗಳಿಗೂ ಕೊಟ್ಟರೆ, ಅದು ಪರೋಕ್ಷವಾಗಿ ಆ ಕಾರ್ಖಾನೆಗಳ ಮುಖಾಂತರ ನಮ್ಮ ರೈತರಿಗೆ ಸಹಾಯ ಮಾಡಿದಂತಾಗುತ್ತದೆ ಎನ್ನುವಂತಹ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಉತ್ತರ ಕರ್ನಾಟಕದಲ್ಲಿರುವ ಅಥವಾ ನಮ್ಮ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಸಕ್ಕರೆ ಕಾರ್ಖಾನೆಗಳಿಗೆ

ಸಹಾಯಧನವನ್ನು ಕೊಡುವುದರ ಮುಖಾಂತರ ಸರ್ಕಾರ ರೈತರ ಸಮಸ್ಯೆಗೆ ಸ್ಪಂದಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗಡಿ ಭಾಗದಲ್ಲಿರತಕ್ಕಂತಹ ಬೆಳಗಾವಿ ಜಿಲ್ಲೆ ಇರಬಹುದು, ಬೀದರ್ ಜಿಲ್ಲೆ ಇರಬಹುದು, ಅಥವಾ ಬೇರೆ ಯಾವುದೇ ಜಿಲ್ಲೆ ಇರಬಹುದು, ಅಲ್ಲಿಯ ಕಬ್ಬು ಬೆಳೆಗಾರರು ಮಹಾರಾಷ್ಟ್ರ ರಾಜ್ಯಕ್ಕೆ ಕಬ್ಬನ್ನು ಸರಬರಾಜು ಮಾಡತಕ್ಕಂತಹ ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿರುವಂತಹ ಸಕ್ಕರೆ ಕಾರ್ಖಾನೆಗಳ ಜೊತೆಗೆ ನಮ್ಮ ರಾಜ್ಯ ಸ್ಪಂದಿಸಬೇಕು ಮತ್ತು ನಮ್ಮ ರೈತರಿಗೂ ಕೂಡ ಒಳ್ಳೆಯ ಬೆಲೆಯನ್ನು ಕೊಡುವಂತಹ ವಿಚಾರದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರ ಸಹಾಯ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ನಮ್ಮ ರಾಜ್ಯದ ಅನೇಕ ಜಿಲ್ಲೆಗಳಿಂದ ಮಹಾರಾಷ್ಟ್ರಕ್ಕೆ ಕಬ್ಬು ಹೋಗುತ್ತಿರುವಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕಾಗಿ ಸಕ್ಕರೆ ಕಾರ್ಖಾನೆಗಳಿಗೆ ಹಾಕಿರುವ ತೆರಿಗೆಯನ್ನು ರದ್ದುಗೊಳಿಸಿದರೆ ಆ ಮುಖಾಂತರ ರೈತರಿಗೂ ಕೂಡ ಸಹಾಯ ಹಸ್ತವನ್ನು ಚಾಚಿದ ಹಾಗೆ ಆಗುತ್ತದೆ ಎನ್ನುವ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಸಹಾಯ ಹಸ್ತವನ್ನು ಕೊಡಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠರವರು ಮಹಾರಾಷ್ಟ್ರದಲ್ಲಿರುವಂತಹ ವ್ಯವಸ್ಥೆಯ ಬಗ್ಗೆ ಹೇಳುತ್ತಾ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿದರು. ಅವೆಲ್ಲವನ್ನು ಪರಿಶೀಲನೆ ಮಾಡುತ್ತೇನೆ. ಮಹಾರಾಷ್ಟ್ರದಲ್ಲಿರತಕ್ಕಂಥ ವ್ಯವಸ್ಥೆ ಏನಿದೆ, ಅಲ್ಲಿ ಯಾವ ರೀತಿ ವಿನಾಯಿತಿಯನ್ನು ಕೊಟ್ಟಿದ್ದಾರೆ, ಇವೆಲ್ಲಾ ಮಾಹಿತಿಯನ್ನು ತರಿಸಿಕೊಂಡು ಯಾವ ರೀತಿ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಪರಿಶೀಲನೆಯನ್ನು ಮಾಡುತ್ತೇನೆ.

## 15. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:–** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

ಮಣಿಪಾಲ್ ವಿಶ್ವವಿದ್ಯಾಲಯ ವಿಧೇಯಕ, 2012

ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ, 2012

ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕ, 2012

## 16. ಶಾಸನ ರಚನೆ

### ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಮಣಿಪಾಲ್ ವಿಶ್ವವಿದ್ಯಾಲಯ ವಿಧೇಯಕ, 2012

ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಮಣಿಪಾಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಮಣಿಪಾಲ್ ಒಂದು ಪ್ರತಿಷ್ಠಿತ ಸಂಸ್ಥೆ. ದೇಶದಲ್ಲಿ ನಾಲ್ಕು ವಿಶ್ವವಿದ್ಯಾಲಯಗಳನ್ನು ನಡೆಸುತ್ತಿದೆ. ಇದೇ ರೀತಿ ಎರಡು ಖಾಸಗಿ ವಿಶ್ವವಿದ್ಯಾಲಯಗಳು ಹಿಂದಿನ ಅವಧಿಯಲ್ಲಿ ಮಂಜೂರಾತಿಯನ್ನು ಪಡೆದುಕೊಂಡಿವೆ. ಇದರಲ್ಲಿ ಒಂದಷ್ಟು ಸುಧಾರಣೆಯನ್ನು ತಂದಿದ್ದೇವೆ. ಅದರಲ್ಲಿ ಬೆಂಗಳೂರು ನಗರದಲ್ಲಿ 25 ಎಕರೆ compact land ಇರಬೇಕು. ಹಾಗೆಯೇ ಬೆಂಗಳೂರು ಬಿಬಿಎಂಪಿಯನ್ನು

ಹೊರತುಪಡಿಸಿ ಹೊರಗಡೆ ಏರಿಯಾದಲ್ಲಿ 40 ಎಕರೆ compact land ಇರಬೇಕು, ಬೇರೆ ಜಿಲ್ಲೆಗಳಲ್ಲಿ 60 ಎಕರೆ compact land ಇರಬೇಕೆಂದು ಮಾಡಿದ್ದೇವೆ. ಮುಂಚೆ ಅವರು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಶೇಕಡ 25ರಷ್ಟು ಸೀಟ್‌ನ್ನು ಕೊಡಬೇಕಾಗಿತ್ತು. ಈಗ ಶೇಕಡ 40ರಷ್ಟು ಸೀಟ್‌ನ್ನು ಮೀಸಲಿಡಬೇಕೆಂದು ಮಾಡಿದ್ದೇವೆ. ಇದಲ್ಲದೆ ಶುಲ್ಕ ನಿಗದಿ ಮಾಡುವುದಕ್ಕೆ ಮುಂಚೆ ಮ್ಯಾನೇಜ್‌ಮೆಂಟ್‌ನವರೇ ನಿವೃತ್ತ ನ್ಯಾಯಧೀಶರ ನೇತೃತ್ವದ ಸಮಿತಿಯನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಇತ್ತು. ಆದರೆ, ಈ ಬಾರಿ ರಾಜ್ಯ ಸರ್ಕಾರ ಸೂಚಿಸತಕ್ಕಂಥ ಹೈಕೋರ್ಟ್ ಅಥವಾ ಸುಪ್ರೀಮ್‌ಕೋರ್ಟಿನ ನಿವೃತ್ತ ನ್ಯಾಯಾಧೀಶರ ಸಮಿತಿ ಶುಲ್ಕ ನಿಗದಿ ಮಾಡಬೇಕು ಮತ್ತು ಅದು ವಾಸ್ತವಿಕ ವೆಚ್ಚವನ್ನು ಆಧರಿಸಿ ಶುಲ್ಕ ನಿಗದಿ ಮಾಡಬೇಕೆನ್ನುವುದನ್ನು ಈ ಮಸೂದೆಯಲ್ಲಿ ತಂದಿದ್ದೇವೆ. ಇದಲ್ಲದೆ ಏನಾದರೂ ಅಕ್ರಮಗಳು ನಡೆದರೆ, malpractice ನಡೆದರೆ ಆ malpractice ಗೆ ಮುಂಚೆ ದಂಡನೆ ವಿಧಿಸುವಂಥದ್ದು ಇರಲಿಲ್ಲ. ದಂಡ ಮಾತ್ರ ಇತ್ತು. ಈಗ ಐವತ್ತು ಸಾವಿರದಿಂದ ಹತ್ತು ಲಕ್ಷ ದಂಡದ ಜೊತೆಗೆ ಅವರಿಗೆ 6 ತಿಂಗಳಿನಿಂದ 2 ವರ್ಷಗಳವರೆಗೆ ದಂಡನೆ ವಿಧಿಸುವುದನ್ನು ಇದರೊಳಗೆ ಸೇರಿಸಿದ್ದೇವೆ. ಹಾಗಾಗಿ ಇವತ್ತು ನಮಗೆ ಜಾಗತಿಕ ಮಟ್ಟದಲ್ಲಿ ಆಗಿರತಕ್ಕಂಥ ಬದಲಾವಣೆ ಮತ್ತು ಜ್ಞಾನಾಧಾರಿತವಾಗಿರತಕ್ಕಂಥ ಆರ್ಥಿಕ ವ್ಯವಸ್ಥೆ ರೂಪುಗೊಂಡಿರುವ ಹಿನ್ನೆಲೆಯಲ್ಲಿ ಹೆಚ್ಚೆಚ್ಚು ವಿಶ್ವವಿದ್ಯಾಲಯಗಳು ಬರಬೇಕಾದ ಅವಶ್ಯಕತೆ ಇದೆ. Knowledge Commission ಕೂಡ ಒಂದೂವರೆ ಸಾವಿರ ವಿಶ್ವವಿದ್ಯಾನಿಲಯಗಳು ನಮ್ಮ ದೇಶಕ್ಕೆ ಅವಶ್ಯಕತೆ ಇದೆ ಎಂದು ವರದಿಯನ್ನು ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕದವರು ಖಾಸಗಿಯವರ ಸಹಭಾಗಿತ್ವದೊಂದಿಗೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ದೊಡ್ಡ ಕ್ರಾಂತಿಯನ್ನು ಸಾಧಿಸಿದ್ದೇವೆ. 181 ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿದ್ದರೆ, ಕೇವಲ 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿವೆ. ಒಟ್ಟು 195 ಇಂಜಿನಿಯರಿಂಗ್ ಕಾಲೇಜುಗಳಿವೆ. ಹಾಗಾಗಿ ಖಾಸಗಿ ಸಹಭಾಗಿತ್ವದಿಂದ Silicon City ಎಂದು ಹೆಸರು ಬರುವುದಕ್ಕೆ ಕಾರಣವಾಗಿದೆ. ಖಾಸಗಿ ವಿಶ್ವವಿದ್ಯಾಲಯಗಳು ಬಂದರೆ

ನಮ್ಮ ಒಟ್ಟು ಪ್ರವೇಶಾತಿ ಅನುಪಾತ, GER (Gross Enrolment Ratio) ಏನಿದೆ, ಅದು ಹೆಚ್ಚಾಗುವುದಕ್ಕೆ ಸಹಾಯವಾಗುತ್ತದೆ. 2020ನೇ ಇಸವಿಯ ಹೊತ್ತಿಗೆ ಶೇಕಡ 30ರಷ್ಟು ದಾಟಬೇಕೆಂದು ಇದೆ. ಈಗ ಇರುವುದು 18 ಪರ್ಸೆಂಟ್. ಹಾಗಾಗಿ ಅದನ್ನು ದಾಟುವುದಕ್ಕೆ ಖಾಸಗಿ ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆ. ಗುಣಮಟ್ಟದ ಶಿಕ್ಷಣ ಕೊಡುವುದಕ್ಕೋಸ್ಕರ ಕೆಲವು ನಿಯಂತ್ರಣಗಳೊಂದಿಗೆ, ಸಾಮಾಜಿಕ ನ್ಯಾಯದ ಜೊತೆಗೆ, ಈ ಖಾಸಗಿ ವಿಶ್ವವಿದ್ಯಾಲಯದ ವಿಧೇಯಕವನ್ನು ಮಂಡಿಸಿದ್ದೇವೆ. ಯಾವುದೇ ವ್ಯತ್ಯಾಸವಿಲ್ಲದೆ ಇದೇ ಮಾದರಿಯಲ್ಲಿ ಇನ್ನೂ 13 ವಿಶ್ವವಿದ್ಯಾಲಯಗಳು ಬರುತ್ತಿವೆ. ಈಗ ಅದು ಕೆಳಮನೆಯಲ್ಲಿ ಪಾಸ್ ಆಗಿದೆ. ಹಾಗಾಗಿ ಈ ವಿಧೇಯಕಕ್ಕೆ ಅನುಮೋದನೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ ಖಾಸಗಿ ವಿಶ್ವವಿದ್ಯಾಲಯಗಳ ಸುಮಾರು 13 ವಿಧೇಯಕಗಳನ್ನು ಮಂಡಿಸುತ್ತಿದ್ದಾರೆ. ಆದರೆ, ಇಲ್ಲಿಯವರೆಗೂ ಕರ್ನಾಟಕ ರಾಜ್ಯದಲ್ಲಿರುವಂತಹ ಸರ್ಕಾರಿ ವಿಶ್ವವಿದ್ಯಾಲಯಗಳ ಸ್ಥಿತಿಗತಿಗಳೇನು? ಇವತ್ತು knowledge Commission ನ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆಗೊಂದು ವಿಶ್ವವಿದ್ಯಾಲಯ ಆಗಬೇಕೆಂದು ಸರ್ಕಾರ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿದೆ. ಆದರೆ, ಈಗ ಇರುವ ಸರ್ಕಾರಿ ವಿಶ್ವವಿದ್ಯಾಲಯಗಳಿಗೇ ಇವತ್ತು ಹಣ ಕೊಡುವಂತಹ ಸ್ಥಿತಿಯಲ್ಲಿ ಸರ್ಕಾರ ಇಲ್ಲದಿರುವಂತಹ ಸಂದರ್ಭದಲ್ಲಿ ಈ ರೀತಿ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅವಕಾಶ ಕೊಡುವುದರಿಂದ ಯಾವ ಪ್ರಯೋಜನವಾಗುತ್ತದೆ? ಈ ಖಾಸಗಿ ವಿಶ್ವವಿದ್ಯಾಲಯಗಳು ಯಾವ ತರಹದ ಕೋರ್ಸ್‌ಗಳನ್ನು ನಡೆಸುತ್ತವೆ? ಈ ವಿಶ್ವವಿದ್ಯಾಲಯಗಳು, ಉದಾಹರಣೆಗೆ, ವೈದ್ಯಕೀಯ ಶಿಕ್ಷಣ, ಈ ರೀತಿ ಬೇಡಿಕೆ ಇರುವ ಅಥವಾ ಇವತ್ತು ಮಾರ್ಕೆಟ್‌ನಲ್ಲಿ hot cake ಆಗಿರುವಂತಹ ಕೋರ್ಸ್‌ಗಳನ್ನೇ ನಡೆಸುತ್ತವೆ. ಈ ಹಿನ್ನೆಲೆಯಲ್ಲಿ ನಾಳೆ ಸರ್ಕಾರಿ ವಿಶ್ವವಿದ್ಯಾಲಯಗಳು suffer ಆಗುವಂತಹ ಎಲ್ಲಾ ಸಾಧ್ಯತೆಗಳಿವೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಬೆಂಗಳೂರನ್ನು ಕೇಂದ್ರಿತವಾಗಿಟ್ಟುಕೊಂಡು ಇವತ್ತು ಈ ವಿಶ್ವವಿದ್ಯಾನಿಲಯಗಳು

ಬರುತ್ತಿವೆ. ಬೆಂಗಳೂರನ್ನು ಕೇಂದ್ರಿತವಾಗಿಟ್ಟುಕೊಂಡು ಬರುತ್ತಿರುವುದರಿಂದ ಉಳಿದ ಭಾಗಗಳ ಬೆಳವಣಿಗೆ ಬಗ್ಗೆ ಏನು? ಈ ನಿಟ್ಟಿನಲ್ಲಿ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಎರಡನೆಯದು, ಈ ಹಿಂದೆ ಸರ್ಕಾರ ಎರಡು ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ನೀಡಿದೆ. ಇದೇ ಸದನದಲ್ಲಿ ಎರಡು ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಈ ನಿಟ್ಟಿನಲ್ಲಿ ಸರ್ಕಾರದ ನೀತಿ ಏನು? ಸರ್ಕಾರದ ಮಾದರಿ ಕಾಯ್ದೆ ಯಾವುದು? ಒಂದೊಂದು ವಿಶ್ವವಿದ್ಯಾಲಯಕ್ಕೂ ಒಂದೊಂದು ಕಾನೂನನ್ನು ಮಾಡುವುದರ ಬದಲಾಗಿ ಒಂದು ಮಾದರಿ ಕಾಯ್ದೆಯನ್ನು ಸರ್ಕಾರ ಮಾಡಬೇಕಾದ ಅಗತ್ಯವಿದೆ. ನಾವು ಪೂರ್ತಿಯಾಗಿ ಖಾಸಗಿ ವಿಶ್ವವಿದ್ಯಾಲಯವನ್ನು ಕಡೆಗಣಿಸುವುದಕ್ಕೆ ಆಗುವುದಿಲ್ಲ. ಆದರೆ, Medical, Engineering ಈ ರೀತಿಯ ಬೇಡಿಕೆ ಆಧಾರಿತ ಕೋರ್ಸ್‌ಗಳ ಜೊತೆಗೆ Social Science, Basic Science ಈ ರೀತಿಯ ಕೋರ್ಸ್‌ಗಳನ್ನೂ ಸಹ ನಡೆಸಿ ಎಂದು ಈ ಖಾಸಗಿ ವಿಶ್ವವಿದ್ಯಾಲಯಗಳಿಗೆ ಹೇಳಬೇಕಾಗಿರುವ ಅಗತ್ಯತೆ ಇದೆ. ಯಾವುದಕ್ಕೆ ಮಾರುಕಟ್ಟೆಯಲ್ಲಿ ಬೆಲೆ ಇದೆ ಆ ಕೋರ್ಸ್‌ಗಳನ್ನು ಮಾತ್ರ ನಡೆಸುತ್ತೇವೆ ಎಂದರೆ ಆಗುವುದಿಲ್ಲ. ಅವರಿಗೆ ಸಾಮಾಜಿಕ ಜವಾಬ್ದಾರಿಯೂ ಇರಬೇಕಾಗುತ್ತದೆ. ಅದನ್ನೂ ಅವರು ನಿರ್ವಹಿಸಬೇಕಾದಂತಹ ಅಗತ್ಯತೆ ಇದೆ. ಎರಡನೆಯದು, fee structure ಇತ್ಯಾದಿ. ಎಲ್ಲಾ ಸರಿಯಾಗಿದೆ. ಆದರೆ, ಇವರ admission ಪ್ರಕ್ರಿಯೆ ಹೇಗೆ ನಡೆಯುತ್ತದೆ? ಯಾರು ಈ entrance examination ನಡೆಸುತ್ತಾರೆ? ಇಷ್ಟೊಂದು ವಿಶ್ವವಿದ್ಯಾಲಯಗಳೆಲ್ಲಾ ತಮ್ಮ ತಮ್ಮ entrance examination ನಡೆಸಿದರೆ ಆ ವಿದ್ಯಾರ್ಥಿ ಹೇಗೆ entrance examination ಗಳಿಗೆ ಕಟ್ಟುತ್ತಾ ಹೋಗುತ್ತಾನೆ? ಈ ನಿಟ್ಟಿನಲ್ಲಿ ಒಂದು single entrance examination ನಡೆಸುವುದಕ್ಕಾಗುತ್ತದೆಯೇ ಎಂಬುದನ್ನು ಗಮನಿಸಬೇಕು. ಹಿಂದೆ ಕೊಟ್ಟಿರುವಂತಹ ವಿಶ್ವವಿದ್ಯಾಲಯಗಳಲ್ಲಿ ನಮ್ಮ quota ದಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ನೀಡಲಾಗಿದೆ? ಈ ನಿಟ್ಟಿನಲ್ಲಿ ಸರ್ಕಾರ ಒಂದು ಅಧ್ಯಯನ ನಡೆಸಲಿ. ಒಂದು ಮಾದರಿ ಕಾಯ್ದೆಯನ್ನು ಮಾಡಿ

ಮುಂಬರುವ ದಿನಗಳಲ್ಲಿ ಸ್ಪಷ್ಟ ನೀತಿಯನ್ನು ತೆಗೆದುಕೊಳ್ಳಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರರವರು ಹೇಳಿದ್ದಕ್ಕೆ ಪೂರಕವಾಗಿ ಹೇಳಬಯಸುತ್ತೇನೆ. ವಿಧೇಯಕದ 6ನೇ ನಿಯಮದನ್ವಯ "ಘಟಕ ಕಾಲೇಜು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಅಧಿಕಾರ ಇದೆ" ಎಂದು ವಿಧೇಯಕದಲ್ಲಿ ಹೇಳಿದ್ದಾರೆ. ಈಗ ಇರುವ ರಾಜ್ಯ ಸರ್ಕಾರದ ವಿಶ್ವವಿದ್ಯಾಲಯಗಳಿಗೆ ಒಂದು ವ್ಯಾಪ್ತಿ ಪ್ರದೇಶ ಎಂದು ಇದೆ. ಅವರವರ ವ್ಯಾಪ್ತಿ ಬಿಟ್ಟು ಬೇರೆ ಕಡೆ ಹೋಗಿ ಕಾಲೇಜು affiliate ಮಾಡುವುದಕ್ಕೆ ಅವರಿಗೆ ಬರುವುದಿಲ್ಲ. ನೀವು ಖಾಸಗಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡುತ್ತೀರಿ. "ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ ಮತ್ತು ಇತರ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ಗುಣಮಟ್ಟಗಳಿಗೆ ಒಳಪಟ್ಟು ವಿಶ್ವವಿದ್ಯಾಲಯವು, ರಾಜ್ಯದಲ್ಲಿ ತನಗೆ ಸೂಕ್ತವೆನಿಸುವಂಥ ಸ್ಥಳಗಳಲ್ಲಿ ಘಟಕ ಕಾಲೇಜುಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಹೊಂದಿರಬಹುದು" ಎಂದು ವಿಧೇಯಕದಲ್ಲಿ ಹೇಳಿದ್ದಾರೆ. ಈಗ ಯಾವ ಯಾವ ವಿಶ್ವವಿದ್ಯಾಲಯಗಳು ಎಲ್ಲೆಲ್ಲಿ ಕಾಲೇಜು ಪ್ರಾರಂಭ ಮಾಡಬಹುದು ಎಂದು ನಾವು ಮುಂಚೆಯೇ ಆಲೋಚನೆ ಮಾಡದಿದ್ದರೆ, ಅದಕ್ಕೆ ನಿಯಮಾವಳಿ ರೂಪಿಸದಿದ್ದರೆ ನಾಳೆ ಎಲ್ಲರೂ ಬಂದು ಬೆಂಗಳೂರಿನಲ್ಲಿಯೇ ಸ್ಥಾಪನೆ ಮಾಡುತ್ತಾರೆ.

**ಸಭಾಪತಿಯವರು:–** ಸರ್ಕಾರದ ಅನುಮೋದನೆ ಬೇಕು ಎಂದು ಇದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಸರ್ಕಾರದ ಅನುಮೋದನೆ ಬೇಕು. ಅದಕ್ಕೆ ಯಾವ ಮಾನದಂಡವನ್ನು ಹಾಕಿಕೊಂಡಿದ್ದಾರೆ? ಅದನ್ನು ಯಾವ ರೀತಿ ಅನುಷ್ಠಾನಗೊಳಿಸುತ್ತಾರೆ? ಖಾಸಗಿ ವಿಶ್ವವಿದ್ಯಾಲಯಗಳ ಮೂಲಕ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ

ಕೊಡುವ ಅವಕಾಶ ಇರಬೇಕು ಎನ್ನುವ ಕಾರಣಕ್ಕಾಗಿ ಇದನ್ನು ತರುತ್ತಿದ್ದೇವೆ. ಅದನ್ನು ಉದ್ದೇಶದಲ್ಲಿ ಹೇಳಿದ್ದಾರೆ. ನಾಳೆ ಎಲ್ಲರೂ ಬಂದು ಬೆಂಗಳೂರಿನಲ್ಲಿಯೇ ತಮ್ಮ ಕೇಂದ್ರವನ್ನು ಸ್ಥಾಪನೆ ಮಾಡಿದರೆ ನಾವು ಯಾವ ಉದ್ದೇಶಕ್ಕಾಗಿ ಇದೆ ಸ್ಥಾಪನೆಗೆ ಅವಕಾಶವನ್ನು ಕೊಡುತ್ತಿದ್ದೇವೆ ಅದು ಈಡೇರುವುದಿಲ್ಲ. ಎರಡು ಹೋಟೆಲುಗಳು ಅಕ್ಕಪಕ್ಕದಲ್ಲಿ ಶುರುವಾದ ಹಾಗೆ, ಇಲ್ಲಿ ಎರಡು ಕಾಲೇಜುಗಳು ಅಕ್ಕಪಕ್ಕದಲ್ಲಿ ಪ್ರಾರಂಭವಾಗುವ ಅವಕಾಶಗಳೂ ಕೂಡ ಇವೆ. ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಬೇರೆ ಘಟಕವನ್ನು ಸ್ಥಾಪನೆ ಮಾಡಬೇಕೆಂದು ಅಪೇಕ್ಷೆ ಪಟ್ಟರೆ ಅದಕ್ಕೆ ಸರಿಯಾದ ನಿಯಮಾವಳಿಯನ್ನು ರೂಪಿಸುವ ಅವಶ್ಯಕತೆ ಇದೆ. ಇಲ್ಲದಿದ್ದರೆ unhealthy competition develop ಆಗಬಹುದು. ಆದುದರಿಂದ ಸರ್ಕಾರ ಇದರ ಬಗ್ಗೆ ಗಮನಹರಿಸಬೇಕೆಂದು ವಿನಂತಿ ಮಾಡುತ್ತೇನೆ. Model Bylaw ಬಗ್ಗೆ ಇಲ್ಲಿ ಹೇಳಬೇಕಾಗಿದೆ. ಒಂದು ಖಾಸಗಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವ ಸಲುವಾಗಿ ಯಾರೇ ಮುಂದೆ ಬಂದರೂ ಕೂಡ ಇದಕ್ಕೆ ಒಂದು ಪ್ರತ್ಯೇಕ ವಿಧೇಯಕವನ್ನು ತರುವುದಕ್ಕಿಂತ, ಒಂದು Model Bylaw ವನ್ನು ಮಾಡಿಕೊಂಡರೆ ಎಲ್ಲರೂ ಕೂಡ ಅದರನ್ವಯ ಅರ್ಜಿಯನ್ನು ಸಲ್ಲಿಸುವುದಕ್ಕೆ ಒಂದು ಅಗತ್ಯವಾದ ಪ್ಲಾನ್ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, ಸುಪ್ರೀಂಕೋರ್ಟಿನವರು **Chhattisgarh vs. Prof. Yashpal** ಅವರ ಪ್ರಕರಣದಲ್ಲಿ ಅಲ್ಲಿ ಇರುವಂಥ ಎಲ್ಲಾ 28 ಯೂನಿವರ್ಸಿಟಿಗಳನ್ನು quash ಮಾಡಿಸಿತು. ಆ ನಿಮಿತ್ತವಾಗಿ ಸರ್ಕಾರ ಅಲ್ಲಿಯ ಸದನಗಳಲ್ಲಿ ಪ್ರತಿಯೊಂದಕ್ಕೂ Act ಮಾಡಿಕೊಡಬೇಕೆಂದು verdict ಅನ್ನು ಕೊಟ್ಟಿದೆ. ಆ ಹಿನ್ನೆಲೆಯಲ್ಲಿ ನಮ್ಮ ಶಿಕ್ಷಣ ಸಚಿವರು ಇಲ್ಲಿ ವಿಧೇಯಕವನ್ನು ತರುತ್ತಿದ್ದಾರೆ. ಏನೋ ಒಂದು ಗೈಡ್‌ಲೈನ್ಸ್ ಅನ್ನು ಮಾಡಿ ಅದರ ಆಧಾರದ ಮೇಲೆ ಆರ್ಡರ್ ಮಾಡುವುದಕ್ಕಾಗುವುದಿಲ್ಲ. ಎರಡೂ ಸದನಗಳಲ್ಲಿ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕಾಗತ್ತದೆ. ಮಾನ್ಯ ಸದಸ್ಯರ ಗಮನದಲ್ಲಿ ಇರಲಿ ಎಂದು ಈ ವಿಚಾರವನ್ನು ಹೇಳುತ್ತಿದ್ದೇನೆ.

**ಡಾ॥ ಎಸ್.ಆರ್. ಲೀಲಾ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೆ, ಈ ವಿಧೇಯಕದ ಪುಟ 11ರಲ್ಲಿ ಕುಲಾಧಿಪತಿಗಳು ಅವರ ನೇಮಕದ ವಿಚಾರ ಬಂದಿದೆ. ಕುಲಾಧಿಪತಿಯವರನ್ನು ಪ್ರಾಯೋಜಕ ಸಂಸ್ಥೆಯವರೇ ನೇಮಿಸತಕ್ಕದ್ದು ಎಂದು ಇದೆ, ಇದು ಸರಿಯೇ? ಪ್ರಾಯೋಜಕ ಸಂಸ್ಥೆಯ ಸಂಸ್ಥಾಪಕ ನ್ಯಾಸದಾರಿಯು ಮೊದಲನೆಯ ಕುಲಾಧಿಪತಿ ಗಳಾಗಿರತಕ್ಕದ್ದು ಎಂದು ಇದೆ, ಇದೇನು ನಿಯಮವೇ? ಅವರು ನೇಮಿಸುವ ಹಾಗಿದ್ದರೆ ಸಂಸ್ಥಾಪಿತ ನ್ಯಾಸದಾರಿಯೇ ಮೊದಲನೆಯವರಾಗಿರಬೇಕೆಂದು ನಿಯಮವನ್ನು ಹಾಕುವುದು ಎಷ್ಟರ ಮಟ್ಟಿಗೆ ಸರಿ ಎಂದು ವಿಚಾರ ಮಾಡಬೇಕಾಗಿದೆ. ಅವರು ತಮ್ಮ ಜೀವನಪರ್ಯಂತ ಅಥವಾ ತಮ್ಮ ಪದವಿಯನ್ನು ಬಿಟ್ಟು ಕೊಡುವವರೆಗೆ ಕುಲಾಧಿಪತಿಗಳಾಗಿರತಕ್ಕದ್ದು, ಪದಧಾರಣ ಮಾಡಿರತಕ್ಕದ್ದು ಎಂದು ಇದೆ. 80–90ರ ತರುಣರು ಇರಬಹುದು. ಆದರೂ ಕೂಡ ಕುಲಾಧಿಪತಿಗಳು ಎನ್ನುವ ಸ್ಥಾನದಲ್ಲಿ ಇರುವಾಗ ಸಾಕಷ್ಟು ಆಕ್ಟೀವ್ ಆಗಿ ಇರಬೇಕಾಗುತ್ತದೆ. ಇದಕ್ಕೆ ಒಂದು ಏಜ್ ಲಿಮಿಟ್ ಹಾಕಿದರೆ ಒಳ್ಳೆಯದೆಂದು ನನ್ನ ಭಾವನೆ. ಇವತ್ತು ನಮ್ಮ demography ಏನಾಗಿದೆ ಎಂದರೆ ಬೇಕಾದಷ್ಟು ಜನ ಚಿಕ್ಕ ವಯಸ್ಸಿನವರೇ ಇರುವುದರಿಂದ ಕುಲಾಧಿಪತಿಗಳೂ ಕೂಡ ಸ್ವಲ್ಪ ಹೆಚ್ಚಿನ ಮಟ್ಟಿಗೆ ಚುರುಕಾಗಿ ಇರಬೇಕಾಗುತ್ತದೆ. ಆದುದರಿಂದ ಈ ಒಂದು ವಯಸ್ಸನ್ನು 70 ರಿಂದ 75 ವರ್ಷಗಳು ಎಂಬ ಒಂದು ನಿಯಮವನ್ನು ಈ ನಿಯಮಾವಳಿಯಲ್ಲಿ ಹಾಕಿಕೊಳ್ಳಬೇಕು. 80–90 ವಯಸ್ಸಾದರೂ ಕೂಡ ಅವರು ಕುಲಾಧಿಪತಿಗಳಾಗಿ ಮುಂದುವರಿಯುವುದು ಎಷ್ಟರ ಮಟ್ಟಿಗೆ ಸರಿಯಾಗುತ್ತದೆಯೋ ನನಗೆ ಅರ್ಥವಾಗುತ್ತಿಲ್ಲ. ಅಲ್ಲಿಂದ ಮೇಲೆ ಸಂದರ್ಶಕರು ಎಂದು ಇದೆ. "ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ಕರ್ನಾಟಕ ವಿಶ್ವವಿದ್ಯಾಲಯದ ಸಂದರ್ಶಕರಾಗಿರತಕ್ಕದ್ದು ಎಂದು ಇದೆ". ಈ ಸಂದರ್ಶಕರು ಅಂದರೆ ಏನು ಎಂದು ನನಗೆ ಅರ್ಥವಾಗಲಿಲ್ಲ. ಸಾಮಾನ್ಯವಾಗಿ ಸಂದರ್ಶಕರು ಎನ್ನುವ ಪದವನ್ನು ಇಂಟರ್‌ವ್ಯೂ ಮಾಡುವವರು ಎನ್ನುವ ಅರ್ಥದಲ್ಲಿ ನಾವು ಉಪಯೋಗಿಸುತ್ತಿದ್ದೇವೆ. ಇದು ನನಗೆ ಅರ್ಥವಾಗಲಿಲ್ಲ.

**ಸಭಾಪತಿಯವರು:–** ಇಂಗ್ಲೀಷಿನಲ್ಲಿ ಏನು ಇದೆ ಅದನ್ನು ನೋಡಿ.

**ಡಾ|| ಎಸ್.ಆರ್. ಲೀಲಾ:–** ವಿಸಿಟಿಂಗ್ ಪ್ರೊಫೆಸರ್ ಕೂಡ ಇದು ಆಗುವುದಿಲ್ಲ. ವಿಸಿಟಿಂಗ್ ಪ್ರೊಫೆಸರ್ ಅಂದರೆ ಅತಿಥಿ ಉಪನ್ಯಾಸಕರು ಎಂದು ಹೇಳುತ್ತೇವೆ. ಸಂದರ್ಶಕರು ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆಗಾಗಿ, ಸುಧಾರಣೆಗಾಗಿ ಸಲಹೆಗಳನ್ನು ನೀಡಬಹುದು ಎಂದು ಇದೆ, ಅದು ಸರಿ. ಆದರೆ ಇಲ್ಲಿ ಸಂದರ್ಶಕರು ಎನ್ನುವುದನ್ನು ಯಾವ ಅರ್ಥದಲ್ಲಿ ಬಳಸುತ್ತಿದ್ದಾರೆ ಎಂಬುದು ಸ್ಪಷ್ಟ ಆಗಬೇಕು.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಖಾಸಗಿ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ಮಂಡಿಸಿದ್ದಾರೆ. 2012 ರಲ್ಲಿ ಇರತಕ್ಕಂಥಹ ನಾವುಗಳು ವಿಶ್ವ ಭಾರತದ ಕಡೆಗೆ ನೋಡತಕ್ಕಂಥಹ ಇಂದಿನ ದಿನಮಾನಗಳಲ್ಲಿ ವಿಶೇಷವಾಗಿ ಶಿಕ್ಷಣ ಕೇತ್ರದಲ್ಲಿ ನಮ್ಮ ಕರ್ನಾಟಕ ತನ್ನದೇ ಆದ ಸ್ಥಾನವನ್ನು ಹೊಂದಿದೆ. ಅದರಲ್ಲೂ ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಬೆಂಗಳೂರು ಮಹಾನಗರ ಇರಬಹುದು ಅಥವಾ ಇಡೀ ಕರ್ನಾಟಕ ರಾಜ್ಯ ಇರಬಹುದು, ನಮ್ಮ ರಾಜ್ಯದಲ್ಲಿರತಕ್ಕಂತಹ ಖಾಸಗಿ ಶಿಕ್ಷಣ ಸಂಸ್ಥೆಗಳು ಏನು ಇವೆ, ಅದು ನಮ್ಮ ಶರಣ ಬಸವೇಶ್ವರ ಶಿಕ್ಷಣ ಸಂಸ್ಥೆ ಇರಬಹುದು, ಪಿ.ಇ.ಎಸ್. ಶಿಕ್ಷಣ ಸಂಸ್ಥೆ ಇರಬಹುದು, ಡಾ|| ಅಂಬೇಡ್ಕರ್ ಸಂಸ್ಥೆ ಇರಬಹುದು, ಕೆ.ಎಲ್.ಇ. ಸಂಸ್ಥೆ ಇರಬಹುದು, ಇಂತಹ ಅನೇಕ ಶಿಕ್ಷಣ ಸಂಸ್ಥೆಗಳು ಹಲವಾರು ದಶಕಗಳಿಂದ ಶಿಕ್ಷಣದ ಬೇಡಿಕೆಯನ್ನು ಆ ಭಾಗದಲ್ಲಿರತಕ್ಕಂತಹ ಜನಗಳ ಬೇಡಿಕೆಗನುಗುಣವಾಗಿ ಸ್ಪಂದಿಸಿ ಅತ್ಯುತ್ತಮವಾಗಿರತಕ್ಕಂಥ ಶಿಕ್ಷಣವನ್ನು ಕೊಡುವುದರ ಮುಂಖಾಂತರವಾಗಿ ಈ ರಾಜ್ಯವನ್ನು ಶಿಕ್ಷಣ ಕ್ಷೇತ್ರದಲ್ಲಿ ಭಾರತ ದೇಶದಲ್ಲಿ ಮುಕುಟಪ್ರಾಯವಾಗಿ ಇರತಕ್ಕಂಥ ರಾಜ್ಯವನ್ನಾಗಿ ಮಾಡಿದೆ ಎಂದು ಬಹಳ ಅಭಿಮಾನದಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಖಾಸಗಿ ವಿಶ್ವವಿದ್ಯಾನಿಲಯಗಳ ಬಗ್ಗೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಖಾಸಗಿ ವಿಶ್ವವಿದ್ಯಾನಿಲಯಗಳು ಇರಬಹುದು, ಸರ್ಕಾರದ ಯೂನಿವರ್ಸಿಟಿಗಳು

ಇರಬಹುದು, ನಾವು ವಿಶ್ವ ಭಾರತದ ಕಡೆ ನೋಡತಕ್ಕಂಥ ಸಂದರ್ಭದಲ್ಲಿ ನಮ್ಮನ್ನು ನಾವು ಅಂದರೆ, ನಮ್ಮವ್ಯವಸ್ಥೆಯಲ್ಲಿ ಅತ್ಯುನ್ನತವಾಗಿರತಕ್ಕಂಥ ಶಿಕ್ಷಣದ ವ್ಯವಸ್ಥೆಯನ್ನು ಕೊಟ್ಟಾಗ ಮಾತ್ರ ಆ ವಿಶ್ವವಿದ್ಯಾನಿಲಯಗಳು ಮಾರುಕಟ್ಟೆಯಲ್ಲಿ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಆ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮಲ್ಲಿರತಕ್ಕಂತಹ ಬೋಧಕ ವರ್ಗ ಇರಬಹುದು, ಶಿಕ್ಷಣದ ವ್ಯವಸ್ಥೆ ಇರಬಹುದು, ನಾವು ವಿಶ್ವದ ಒಂದು ಕುಟುಂಬ ಎಂದು ನೋಡತಕ್ಕಂಥ ಇಂದಿನ ದಿನ ಮಾನಗಳಲ್ಲಿ ನಮ್ಮನ್ನು ನಾವು ಅಂತಹ ಒಂದು ಇಡೀ ವಿಶ್ವದ ವ್ಯವಸ್ಥೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಬೇಕಾಗುತ್ತದೆ. ಇಂತಹ ಒಂದು ವಿಧೇಯಕವನ್ನು ಅತ್ಯಂತ ಹರ್ಷದಿಂದ ಸ್ವಾಗತಿಸುತ್ತೇನೆ. ಇವುಗಳಿಂದ ನಮ್ಮ ಕರ್ನಾಟಕಕ್ಕೆ ಇನ್ನೂ ಹೆಚ್ಚಿನ ಗೌರವ ಸಿಗುತ್ತದೆ ಎಂದು ಹೇಳುತ್ತಾ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

**ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ನನಗೆ ಅವಕಾಶವನ್ನು ಮಾಡಿಕೊಟ್ಟದ್ದಕ್ಕಾಗಿ ತಮಗೆ ವಂದನೆಗಳು. ಇಂದಿನ ಜ್ಞಾನ ಮುಖೀ ಯುವಜನರ ಹಿತದೃಷ್ಟಿಯಿಂದ ಖಾಸಗಿ ವಿಶ್ವವಿದ್ಯಾನಿಲಯಗಳ ಅಗತ್ಯ ಇದೆ ಈ ಒಂದು ಅಭಿಪ್ರಾಯದ ಹಿನ್ನೆಲೆಯಲ್ಲಿ ಖಾಸಗಿ ವಿಶ್ವವಿದ್ಯಾನಿಲಯಗಳ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಈ ಕುರಿತು ನನ್ನ 2-3 ಅನಿಸಿಕೆಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ಈ ಹೊತ್ತಿನ ವಿಶ್ವವಿದ್ಯಾನಿಲಯಗಳಲ್ಲಿ ಬೇಸಿಕ್ ಸೈನ್ಸ್/ಮೂಲಭೂತ ವಿಜ್ಞಾನವನ್ನು ಕಲಿಯುವವರ ಸಂಖ್ಯೆಯೇ ಬಹಳವಾಗಿ ಕಡಿಮೆಯಾಗುತ್ತಿದೆ. ಇನ್ನು ಕಲಾ ವಿಭಾಗಗಳಂತೂ ಸಂಪೂರ್ಣವಾಗಿ ನಿರ್ಲ್ಯಕ್ಷಕ್ಕೆ ಒಳಗಾಗಿವೆ. ಆದ್ದರಿಂದ ಸರ್ಕಾರದ ಸಾಮಾನ್ಯ ನೀತಿ ಇದಕ್ಕೆ ಇರಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಖಾಸಗೀ ವಿಶ್ವವಿದ್ಯಾನಿಲಯಗಳು ಕೆಲವೇ ಲಾಭದಾಯಕವಾದಂತಹ ವಿಷಯಗಳನ್ನು ಕಲಿಸುವಂತಹ ವಿಶ್ವವಿದ್ಯಾನಿಲಯಗಳಾಗಿಬಿಟ್ಟರೆ, ಸಮಾಜದ ಏರುಪೇರುಗಳು ತುಂಬಾ ಆಗುತ್ತಾ ಹೋಗುತ್ತವೆ. ಆದ್ದರಿಂದ ಆಧುನಿಕ ಜೀವನ ಶೈಲಿಗೆ ಅತ್ಯವಶ್ಯಕವಾಗಿ ಬೇಕಾಗಿರುವಂತಹ ವಿಷಯಗಳನ್ನು ಕಲಿಸುವ ನಿಜವಾಗಿ ಇರತಕ್ಕಂಥಹ

ಒಂದು ಅಳವಡಿಕೆ ಇದರಲ್ಲಿ ಅಂದರೆ ಈ ವಿಧೇಯಕದಲ್ಲಿ ಆಗುವುದಾದರೆ ಅದು ಅತ್ಯಂತ ಆರೋಗ್ಯಕರ ಮತ್ತು ಸೂಕ್ತವೆಂದು ನನ್ನ ಅಭಿಪ್ರಾಯ. ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಅರುಣ್ ಶಹಾಪುರ್ ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಹಾಗೂ ಮಾನ್ಯ ಸದಸ್ಯರಾದ ಡಾ॥ ಲೀಲಾ ಮತ್ತು ಮಾನ್ಯ ಸದಸ್ಯರಾದ ಡಾ॥ ದೊಡ್ಡರಂಗೇಗೌಡ ಅವರುಗಳು ವ್ಯಕ್ತಪಡಿಸಿರತಕ್ಕಂಥ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಮತ್ತು ಅವರ ಭಾವನೆಗಳನ್ನು ನಾನು ಗೌರವಿಸುತ್ತೇನೆ. ಮಾನ್ಯ ಸದಸ್ಯರಾದ ಅರುಣ್ ಶಹಾಪುರ್ ಅವರು ಹೇಳಿದ ರೀತಿಯಲ್ಲಿ ನಮ್ಮ ಸರ್ಕಾರೀ ವಿಶ್ವವಿದ್ಯಾನಿಲಯಗಳ ಸ್ಥಿತಿ ಏನು ಎಂದು ಅವರು ಕೇಳಿದರು. ಈಗ ನಾವು ಏನು ಖಾಸಗೀ ವಿಶ್ವವಿದ್ಯಾನಿಲಯಗಳಿಗೆ ಅನುಮತಿಯನ್ನು ಕೊಡುತ್ತಿದ್ದೇವೆ ಅವೆಲ್ಲವೂ ಯೂನಿಟರಿ ವಿಶ್ವವಿದ್ಯಾನಿಲಯಗಳು ಆಗಿರುತ್ತವೆ. ಏಕಾತ್ಮಕ ವಿಶ್ವವಿದ್ಯಾನಿಲಯಗಳಾಗಿರಬೇಕೆಂದು ಸ್ಪಷ್ಟಪಡಿಸಿವೆ. ಇದರಿಂದ ಖಾಸಗಿ ವಿಶ್ವವಿದ್ಯಾನಿಲಯಗಳು ಇತರೆ ಕಾಲೇಜುಗಳನ್ನು ಅಫಿಲಿಯೇಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಇಲ್ಲ. ಈ ರೀತಿ ಅಫಿಲಿಯೇಟ್ ಮಾಡಿಕೊಳ್ಳಲು ಅವಕಾಶ ಇಲ್ಲವೆಂದಾದಾಗ, ಸರ್ಕಾರದ ವಿಶ್ವವಿದ್ಯಾನಿಲಯಗಳ ಹಿತಾಸಕ್ತಿಗೆ ಬಾಧಕವಾಗುವುದಿಲ್ಲ. ನಮ್ಮ ಧಾರವಾಡದ ಸರ್ಕಾರಿ ವಿಶ್ವವಿದ್ಯಾನಿಲಯವೆಂದು ಅಂದರೆ, 300 ಕಾಲೇಜುಗಳು ಅದಕ್ಕೆ ಅಫಿಲಿಯೇಟ್ ಆಗಿರುತ್ತವೆ. ಇವರಿಗೆ ಆ ರೀತಿ ಏನೂ ಇಲ್ಲ. ಇವರು ಇವರದ್ದೇ ಆದಂತಹ ಸ್ವಂತ ಇವರದ್ದೇ ಒಡೆತನದ ಕಾಲೇಜುಗಳನ್ನು ಬೇರೆ ಕಡೆಗಳಲ್ಲಿ ತೆರೆಯಬಹುದೇ ಹೊರತು, ಇವರು ಅಫಿಲಿಯೇಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಇಲ್ಲ. ಆದುದರಿಂದ ಯಾವುದೇ ರೀತಿಯಲ್ಲಿ ಧಕ್ಕೆಯಾಗುವುದಿಲ್ಲ. 4–5 ಬಾರಿ ಶಿಕ್ಷಣ ತಜ್ಞರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ, ವಿದ್ಯಾರ್ಥಿ ಸಂಘಟನೆಗಳ ಜೊತೆಯಲ್ಲಿ ಸಮಾಲೋಚನೆ ನಡೆಸಿ ತುಂಬಾ ಸುಧಾರಣೆಗಳೊಂದಿಗೆ ಈ ಒಂದು ಮಸೂದೆಯನ್ನು ಇಲ್ಲಿ ಮಂಡಿಸುತ್ತಿದ್ದೇನೆ.

ಏಕಾ ಏಕಿ ಇಲ್ಲಿ ಮಂಡಿಸುತ್ತಿಲ್ಲ. ನನಗೆ 4 ತಿಂಗಳ ಕಾಲ ಅವಕಾಶ ಸಿಕ್ಕಿತ್ತು. ಕಳೆದ ಸಾರಿಯೇ ಈ ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡನೆ ಮಾಡಲಾಗಿತ್ತು. 4 ತಿಂಗಳ ನಂತರ ಪ್ರತಿಯೊಂದು ಹಂತದಲ್ಲೂ ಕೂಡ 4–5 ಬಾರಿ ಸಭೆಯನ್ನು ಕರೆದು ಚರ್ಚೆ ಮಾಡಲಾಗಿತ್ತು. ನಮ್ಮ Knowledge Commission, Higher Education Council, retired Vice Chancellors ಮತ್ತು ಖಾಸಗೀ ವಿಶ್ವವಿದ್ಯಾನಿಲಯಗಳನ್ನು ಯಾರು ಪ್ರಮೋಟ್ ಮಾಡುತ್ತಿದ್ದಾರೆ ಆ ಪ್ರಮೋಟರ್ಸ್, ಯೂನಿವರ್ಸಿಟಿಯ ರಿಜಿಸ್ಟ್ರಾರ್‌ಗಳು ಹಾಗು ವಿದ್ಯಾರ್ಥಿ ಸಂಘಟನೆಗಳು ಅವರುಗಳೆಲ್ಲರ ಜೊತೆಯಲ್ಲಿ ಸಾಕಷ್ಟು ಚರ್ಚೆಯನ್ನು ಮಾಡಿ ಈ ಒಂದು ವಿಧೇಯಕವನ್ನು ಇಲ್ಲಿ ತರಲಾಗಿದೆ. ಈ ಗವರ್ನಿಂಗ್ ಬಾಡಿಯಲ್ಲಿ ಸರ್ಕಾರದ ಪ್ರತಿನಿಧಿಗಳೂ ಕೂಡ ಇರುತ್ತಾರೆ. ಪ್ರಧಾನ ಕಾರ್ಯದರ್ಶಿಗಳೂ ಇರುತ್ತಾರೆ. ಅವರುಗಳು ಮನಸೋ ಇಚ್ಛೆ ಮಕ್ಕಳಿಗೆ ಶುಲ್ಕವನ್ನು ವಿಧಿಸುವಂತಿಲ್ಲ. ಇದನ್ನು ತಡೆಯುವುದಕ್ಕೋಸ್ಕರವಾಗಿ ನಿವೃತ್ತ ನ್ಯಾಯಾಧೀಶರಿದ್ದವರನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಇದು ಈ ವಿಧೇಯಕದಲ್ಲಿ ಇದೆ. ಮತ್ತು ಕ್ಯಾಂಪಸ್ ಕರ್ನಾಟಕದಲ್ಲಿ ಮಾತ್ರ ಸ್ಥಾಪಿಸುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಇವರು ಹೇಳಿದ ರೀತಿಯಲ್ಲಿ ದೂರ ಶಿಕ್ಷಣಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಈ ಒಂದು modified Bill ನಲ್ಲಿ ಅದನ್ನು ನಿರ್ಬಂಧ ಮಾಡಿದ್ದೇವೆ. ಹಾಗಾಗಿ ಯಾವುದೇ ರೀತಿಯ ಸಮಸ್ಯೆಯಾಗದ ರೀತಿಯಲ್ಲಿ ಸಾಮಾಜಿಕ ನ್ಯಾಯವನ್ನು ಕೂಡ ರಕ್ಷಣೆ ಮಾಡಿದ್ದೇವೆ. ಶೇಕಡ 40 ರಷ್ಟು ಸೀಟ್ ಕರ್ನಾಟಕದವರಿಗೆ ಕೊಡಲೇಬೇಕಾಗುತ್ತದೆ. ಅದನ್ನು ಯಾರಿಗೆ ಕೊಡಬಹುದೆಂದು ರಾಜ್ಯ ನಿರ್ಧಾರ ಮಾಡುತ್ತದೆ. ಆ 40 ಪರ್ಸೆಂಟ್ ಸೀಟನ್ನು ಮೆರಿಟ್ ಆಧಾರದ ಮೇಲೆ ಸೀಟನ್ನು ಕೊಡಲಾಗುತ್ತದೆ. ಯಾವ ರೀತಿ roster maintain ಮಾಡಬೇಕೆನ್ನುವುದನ್ನು ರಾಜ್ಯ ಸರ್ಕಾರ ನಿರ್ಧಾರ ಮಾಡುತ್ತದೆ. ನಮ್ಮದು ಅಂದರೆ ಸರ್ಕಾರದ ಒಂದು ರೂಪಾಯಿ ಬಂಡವಾಳವಿಲ್ಲದೆ ನಮ್ಮ ಮಕ್ಕಳಿಗೆ ನಾವು ಹೇಳಿದ ಶುಲ್ಕದ ದರದಲ್ಲಿ ಶೇಕಡ 40 ಪರ್ಸೆಂಟ್ ಸೀಟು ನಮಗೆ ಸಿಗುತ್ತದೆ.

(4.30 ಗಂಟೆ)

ಸನ್ಮಾನ್ಯ ಸಭಾಪತಿಯವರೇ, ಅಷ್ಟರ ಮಟ್ಟಿಗೆ ನಮಗೆ ಬೋನಸ್, ನಮ್ಮ ವಿಶ್ವವಿದ್ಯಾನಿಲಯಗಳನ್ನು ಮೇಲ್ದರ್ಜೆಗೇರಿಸಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಉಳಿಯುವಿಕೆಗಾಗಿ ಹೋರಾಟ ನಡೆಸಬೇಕಾಗುತ್ತದೆ. ಯಾರು ಒಳ್ಳೆಯ ಗುಣಮಟ್ಟವನ್ನು ತೋರಿಸುತ್ತಾರೆ ಅವರು ಉಳಿದುಕೊಳ್ಳುತ್ತಾರೆ. ಇಲ್ಲದಿದ್ದರೆ ಸ್ಪರ್ಧೆಯಿಂದ ಹೊರ ಹೋಗುತ್ತಾರೆ. ಗುಣಮಟ್ಟದ ಶಿಕ್ಷಣಕ್ಕೆ ನಾವು ಆದ್ಯತೆಯನ್ನು ಕೋಟ್ ಮಾಡಿದ್ದೇವೆ. ನಾನು ಕೆಳಮನೆಯಲ್ಲಿ ಮಾತನಾಡುತ್ತಾ, ವಿಶ್ವದ 10 ಉತ್ತಮ ವಿಶ್ವವಿದ್ಯಾಲಯಗಳ ಸ್ಥಾನವನ್ನು ಖಾಸಗಿ ವಿಶ್ವವಿದ್ಯಾನಿಲಯಗಳು ಪಡೆದುಕೊಂಡಿವೆ. ಅಮೆರಿಕಾ ದೇಶದಲ್ಲಿ grass endowment ratio ಸುಮಾರು ಶೇಕಡಾ 75ರಷ್ಟು ಇದೆ. ಜಪಾನ್ ದೇಶದಲ್ಲಿ ಶೇಕಡಾ 87ರಷ್ಟು ಇದೆ. ವಿಶ್ವದ 10 ಉತ್ತಮ ವಿಶ್ವವಿದ್ಯಾಲಯಗಳ ಸ್ಥಾನವನ್ನು ಖಾಸಗಿ ವಿಶ್ವವಿದ್ಯಾನಿಲಯಗಳು ಪಡೆದುಕೊಂಡಿರುವ ಹಿನ್ನೆಲೆಯಲ್ಲಿ ಸ್ಪರ್ಧೆ ಅನಿವಾರ್ಯವಾಗಿದೆ. ಗುಣಮಟ್ಟವನ್ನು ಕಾಪಾಡುವುದಕ್ಕಾಗಿ ನಾವು ಖಾಸಗಿ ವಿಶ್ವವಿದ್ಯಾನಿಲಯಗಳಿಗೆ ಲಗಾಮು ಹಾಕಿದ್ದೇವೆ. ಕೆಲವರು ಕಾಲುಕಟ್ಟಬೇಕೆಂದು ಬಯಸುತ್ತಾರೆ. ನಮ್ಮದು ಕಮ್ಯುನಿಸ್ಟ್ ರಾಜ್ಯವಲ್ಲ, ನಾವು ಕಾಲುಕಟ್ಟಲು ಸಾಧ್ಯವಿಲ್ಲ. ಅವರನ್ನು ಓಡುವುದಕ್ಕೆ ಬಿಡಬೇಕು, ತಪ್ಪು ದಾರಿಗೆ ಹೋಗದಂತೆ ಲಗಾಮು ಹಾಕಬೇಕು. ಅದಕ್ಕಾಗಿಯೇ ದಂಡ ಮತ್ತು ದಂಡನೆ ಎರಡನ್ನೂ ಇಟ್ಟಿದ್ದೇವೆ. ಯು.ಜಿ.ಸಿ. ಮತ್ತು ಎ.ಐ.ಸಿ.ಸಿ. ನಿಯಮಾವಳಿಗಳನ್ನು ಅವರು ಪಾಲಿಸಲೇಬೇಕಾಗಿದೆ. ಮೆಡಿಕಲ್ ಕಾಲೇಜುಗಳು ಎಂ.ಸಿ.ಎ.ಐ.ನ ನಿಯಮಾವಳಿಗಳನ್ನು ಅವರು ಪಾಲಿಸಲೇಬೇಕಾಗಿದೆ. ಹೀಗೆ ಎಲ್ಲ ನಿಯಮಾವಳಿಗಳನ್ನು ಪಾಲನೆ ಮಾಡುವ ಮೂಲಕ ರಕ್ಷಣೆ ಮಾಡುವಂತಹ ಕಾರ್ಯವನ್ನು ನಾವು ಮಾಡಿದ್ದೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತದ ರೂಪದಲ್ಲಿರುವ 2012ರ ಮಣಿಪಾಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2ರಿಂದ 62ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 62ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 62ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಮಣಿಪಾಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಮಣಿಪಾಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**17. ಪ್ರಕಟಣೆ**

**ಸಭಾಪತಿಯವರು:–** ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2012ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ ವಿಧೇಯಕವನ್ನು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 121ರ ಮೇರೆಗೆ ವಿಧಾನಸಭೆಯು ದಿನಾಂಕ:13.12.2012ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅನುಮೋದಿಸಿದೆಯೆಂದು ಸದನದ ಗಮನಕ್ಕೆ ತರಲಾಗಿದೆ.

## 18. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## (ಅ) ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕ, 2012

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಹಾಗೂ ಲೋಕಶಿಕ್ಷಣ, ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಹಾಗೂ ಲೋಕಶಿಕ್ಷಣ, ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಇದರ ಉದ್ದೇಶ ಇಷ್ಟೇ ಮೊದಲ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಿಂದ ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ(ತಿದ್ದುಪಡಿ) ವಿಧೇಯಕವನ್ನು ಸರ್ವಾನುಮತದಿಂದ ಪಾಸ್ ಮಾಡಿ ಕಳುಹಿಸಿಕೊಡಲಾಗಿತ್ತು. ಅದು ಕೇಂದ್ರದಲ್ಲಿನ ರಾಷ್ಟ್ರಪತಿಗಳ ಅಂಗೀಕಾರಕ್ಕೆ ಹೋಗಿ ಅಲ್ಲಿಯೇ ಬಾಕಿ ಉಳಿದ ಕಾರಣ ನಮ್ಮ ಗೃಹ ಕಾರ್ಯದರ್ಶಿಗಳಿಗೆ ಅಲ್ಲಿನ ಗೃಹ ಕಾರ್ಯದರ್ಶಿಗಳು ಒಂದು ಪತ್ರವನ್ನು ಬರೆದಿದ್ದರು. ಕೋಣ ಮತ್ತು ಎಮ್ಮೆಯನ್ನು ಹೊರತುಪಡಿಸಿ ಗೋವಿನ ವಿಷಯವಾದರೆ ಪರಿಗಣಿಸಬಹುದೆಂದು ಹೇಳಿದ್ದಾರೆ. ಅದಕ್ಕಾಗಿ ಕೋಣ ಮತ್ತು ಎಮ್ಮೆಗಳನ್ನು ಹೊರತುಪಡಿಸಿ ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತರಲಾಗಿದೆ. ಇಂದು ಮಂಡಿಸಿರುವಂತಹ ತಿದ್ದುಪಡಿ ವಿಧೇಯಕವು ಭಾರತದ ಸರ್ವೋಚ್ಚ ನ್ಯಾಯಾಲಯದ ಮತ್ತು ಭಾರತ ಸರ್ಕಾರದ ನಿರ್ದೇಶನಕ್ಕೆ ಅನುಗುಣವಾಗಿ

ಸಂಪೂರ್ಣ ಗೋಹತ್ಯೆ ನಿಷೇಧ ಕಾನೂನು ಜಮ್ಮು-ಕಾಶ್ಮೀರ, ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ, ದೆಹಲಿ ಮತ್ತು ಗುಜರಾತ್ ಹೀಗೆ ಹತ್ತು ರಾಜ್ಯಗಳಲ್ಲಿ ಈ ಕಾನೂನು ಜಾರಿಯಲ್ಲಿದೆ. ಗೋ ಮಾತೆಯ ರಕ್ಷಣೆಯ ಸಲುವಾಗಿ ತಂದಿರುವಂತಹ ಈ ವಿಧೇಯಕಕ್ಕೆ ಸದನವು ತನ್ನ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತದ ರೂಪದಲ್ಲಿರುವ 2012ರ ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2ರಿಂದ 5ರವರೆಗೆ**

**ಸಭಾಪತಿಯವರು:-** "ಖಂಡ 2ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 5ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.

**ಪ್ರಸ್ತಾವದ ಅಂಗೀಕಾರ**

**ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಹಾಗೂ ಲೋಕಶಿಕ್ಷಣ, ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಆ) ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ ಚುನಾವಣೆಗಳಲ್ಲಿ ಪಕ್ಷಾಂತರ ಮಾಡುವಂತಹ ಸಂದರ್ಭದಲ್ಲಿ ಅನಾರೋಗ್ಯಕರವಾದ ಪ್ರಶ್ನೆಗಳು ಉದ್ಭವಿಸಿದ ಹಿನ್ನೆಲೆಯಲ್ಲಿ ಅದರ ಕಾಲ ಮಿತಿಯನ್ನು ವಿಸ್ತರಣೆ ಮಾಡಬೇಕೆನ್ನುವ ಅಂಶ ಹಿಂದೆ 30 ದಿನಗಳಲ್ಲಿ ಮುಗಿಸಬೇಕೆಂದು ಇತ್ತು. ಈಗ ಅದನ್ನು 60 ದಿನಗಳಿಗೆ ಮುಗಿಸಬೇಕೆನ್ನುವ ತಿದ್ದುಪಡಿಯನ್ನು ತರುವ ಮೂಲಕ ಈ ವಿಧೇಯಕವನ್ನು ಸದನದ ಮುಂದೆ ಮಂಡಿಸಲಾಗುತ್ತಿದೆ. ಇದಕ್ಕೆ ಸದನವು ತನ್ನ ಒಪ್ಪಿಗೆಯನ್ನು ಸೂಚಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತದ ರೂಪದಲ್ಲಿರುವ 2012ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

## 19. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ:13–12–2012ರಂದು ಕೆಳಕಂಡ ವಿಧೇಯಕಗಳನ್ನು ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆ ಎಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತ ನೀಡಬೇಕೆಂದು ಕೋರಿರುತ್ತಾರೆ.

1. ರಾಯ್ ತಾಂತ್ರಿಕ ವಿಶ್ವವಿದ್ಯಾಲಯ ಬೆಂಗಳೂರು, ವಿಧೇಯಕ, 2012
2. ಪಿ.ಇ.ಎಸ್. ವಿಶ್ವವಿದ್ಯಾಲಯ ವಿಧೇಯಕ, 2012
3. ಅಮೃತ ಸಿಂಚನ ಸ್ಪಿರಿಚ್ಯುಯಲ್ ವಿಶ್ವವಿದ್ಯಾಲಯ ವಿಧೇಯಕ, 2012
4. ರೇವಾ ವಿಶ್ವವಿದ್ಯಾಲಯ ವಿಧೇಯಕ, 2012
5. ಕೆ.ಎಲ್.ಇ. ಟೆಕ್ನಾಲಾಜಿಕಲ್ ವಿಶ್ವವಿದ್ಯಾಲಯ ವಿಧೇಯಕ, 2012

**ಸಭಾಪತಿಯವರು:–** ಈಗ ಮಾನ್ಯ ಮುಖ್ಯಮಂತ್ರಿಗಳು ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ಮಾಡುತ್ತಾರೆ.

## 20. ಸಚಿವರ ಹೇಳಿಕೆ

**ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸುವಂತೆ ಕೋರಿ ಪ್ರತಿಭಟನಾಕಾರರು ಪ್ರತಿಭಟಿಸುತ್ತಿದ್ದ ಸಮಯದಲ್ಲಿ ಅವರ ಮೇಲೆ ಪೊಲೀಸರು ಲಾಠಿಪ್ರಹಾರ ನಡೆಸಿರುವ ಬಗ್ಗೆ–**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ಬಗ್ಗೆ ವಿರೋಧ ಪಕ್ಷದ ನಾಯಕರು ಹಾಗೂ

ಇನ್ನಿತರ ಸದಸ್ಯರು ಪ್ರಸ್ತಾಪ ಮಾಡಿದ್ದರು. ಅದರ ಬಗ್ಗೆ ಎಲ್ಲ ಕಡೆಗಳಲ್ಲಿ ಚರ್ಚೆ ಆಗುತ್ತಿದೆ. ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ನಮ್ಮ ಸಚಿವ ಸಂಪುಟದ ಮುಂದೆ ಆದಷ್ಟು ಬೇಗನೆ ಮಂಡಿಸಿ, ವರದಿಯ ಹಿನ್ನೆಲೆಯಲ್ಲಿ ಅದರ ಸಾಧಕ–ಬಾಧಕಗಳ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಿ ಮುಂದೆ ಸೂಕ್ತ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ದಲಿತ ಸಂಘಟನೆಗಳು ಮತ್ತು ಎಸ್.ಸಿ., ಎಸ್.ಟಿ. ಸಮಾಜದ ಹೋರಾಟಗಳು ಏನು ನಡೆಯುತ್ತಿವೆ ಅವರುಗಳು ಶಾಂತಿಯನ್ನು ಕಾಪಾಡಿಕೊಳ್ಳಬೇಕೆನ್ನುವ ಮನವಿಯನ್ನು ಮಾಡುತ್ತಿದ್ದೇನೆ. ಇದನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಬಹಳ ದಿನಗಳಿಂದ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಮಂಡಿಸಬೇಕೆಂದು ರಾಜ್ಯದ ಎಲ್ಲಾ ಕಡೆಗಳಲ್ಲಿ ಹೋರಾಟಗಳು ನಡೆಯುತ್ತಿದ್ದವು. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಅದನ್ನು ಸಚಿವ ಸಂಪುಟದ ಸಭೆಯ ಮುಂದಿಟ್ಟು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಭರವಸೆಯನ್ನು ನೀಡಿದ್ದಾರೆ. ಅವರಿಗೆ ಮೊಟ್ಟಮೊದಲನೆಯದಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಈ ಸದನದ ಮೂಲಕ ನಾನು ದಲಿತ ಮತ್ತು ಎಸ್.ಸಿ., ಎಸ್.ಟಿ., ಸಂಘಟನೆಗಳು ಜನಗಳ ಮಧ್ಯೆ ವೈಮನಸ್ಸನ್ನುಂಟು ಮಾಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಬಾರದೆಂದು ವಿನಂತಿ ಮಾಡುತ್ತಿದ್ದೇನೆ. ಇವತ್ತಿನ ದಿನಪತ್ರಿಕೆಯೊಂದರಲ್ಲಿ ಸಚಿವರುಗಳಾದ ಮಾನ್ಯ ಅರವಿಂದ ಲಿಂಬಾವಳಿ ಮತ್ತು ಮಾನ್ಯ ರೇವೂನಾಯಕ್ ಬೆಳಮಗಿಯವರ ಬಗ್ಗೆ ವಿನಾ ಕಾರಣ ಕೆಲವು ಸಂಘಟನೆಗಳನ್ನು ಮಾಡಿದ್ದಾರೆ. ಇದು ಸರಿಯಾದುದ್ದಲ್ಲ. ಈ ರೀತಿ ನಡೆದುಕೊಳ್ಳಬಾರದೆಂದು ವಿನಂತಿಯನ್ನು ಮಾಡುತ್ತಿದ್ದೇನೆ.

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು

ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಸಚಿವ ಸಂಪುಟದ ಮುಂದೆ ಮಂಡಿಸಿ ಅದರ ಸಾಧಕ–ಬಾಧಕಗಳ ಬಗ್ಗೆ ಯೋಚನೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎನ್ನುವಂತಹ ಹೇಳಿಕೆಯನ್ನು ನೀಡಿದ್ದಾರೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತಿದ್ದೇನೆ. ಇವತ್ತು ವಿಶೇಷವಾಗಿ ಆ ಸಮಾಜದಲ್ಲಿ ಸಾಮರಸ್ಯವನ್ನು ಕಾಪಾಡಬೇಕೆನ್ನುವುದು ಬಹಳ ಮುಖ್ಯವಾಗಿರುವಂತಹ ಅಂಶವಾಗಿದೆ. ಈ ವಿಚಾರದ ಬಗ್ಗೆ ಹಿರಿಯ ಸಚಿವರಾಗಿರುವಂತಹ ಮಾನ್ಯ ಗೋವಿಂದ ಕಾರಜೋಳರವರು ಸಹ ಮಾತನಾಡಿದ್ದಾರೆ. ಅನಗತ್ಯವಾಗಿ ನನ್ನ ಮತ್ತು ರೇವೂನಾಯಕ್ ಬೆಳಮಗಿಯವರ ಹೆಸರನ್ನು ಮಧ್ಯೆ ಎಳೆದು ತರಲಾಗಿದೆ. ಈ ರೀತಿಯ ಚಟುವಟಿಕೆಗಳನ್ನು ಮಾಡಬಾರದೆಂದು ಅವರೂ ವಿನಂತಿಯನ್ನು ಮಾಡಿಕೊಂಡಿದ್ದಾರೆ. ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇಡೀ ಸಮಾಜ ಒಂದು. ಅದರಲ್ಲಿ ಯಾರು ಅತೀ ಹಿಂದುಳಿದಿದ್ದಾರೆ ಅಂತಹವರೆಲ್ಲ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವುದರಲ್ಲಿ ತಪ್ಪಿಲ್ಲ. ಆದರೆ, ಒಟ್ಟಿಗೆ ಸೇರಿ ಸಾಮರಸ್ಯದಿಂದ ನಾವು ಬದುಕಬೇಕಾಗಿದೆ. ಬರೀ ಹಿಂದುಳಿದವರು ಅಷ್ಟೇ ಅಲ್ಲ ಹಿಂದುಳಿದ ಸಮಾಜ ಮತ್ತು ಮುಂದುವರೆದಂತಹ ಸಮಾಜ ಇಡೀ ಸಮಾಜವೇ ಸಾಮರಸ್ಯದಿಂದ ಬದುಕಬೇಕು. ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಅನಗತ್ಯವಾಗಿ ಗೊಂದಲವನ್ನು ಸೃಷ್ಟಿಸಿದೆ. ಹಿಂದೆ ಮಾನ್ಯ ಡಿ.ವಿ. ಸದಾನಂದ ಗೌಡರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಈ ಆಯೋಗ ವರದಿಯನ್ನು ನೀಡುವುದರ ಜೊತೆಗೆ ವರದಿಯನ್ನು ಪತ್ರಿಕೆಗಳಿಗೆ ಬಹಿರಂಗಪಡಿಸಿರುವುದು ನಿಜಕ್ಕೂ ಅಕ್ಷಮ್ಯ ಅಪರಾಧವಾಗಿದೆ. ಸಮಿತಿಗಳಾಗಲೀ ಅಥವಾ ಆಯೋಗಗಳಾಗಲೀ ಆ ರೀತಿ ವರದಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಬಾರದು, ವರದಿಯ ಗೌಪ್ಯತೆಯನ್ನು ಕಾಪಾಡಿಕೊಳ್ಳುವುದು ಆಯೋಗ ಮತ್ತು ಸಮಿತಿಗಳ ಕರ್ತವ್ಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳಾದ ಮಾನ್ಯ ಈಶ್ವರಪ್ಪನವರು, ಮಾನ್ಯ ಗೋವಿಂದ ಕಾರಜೋಳರವರು ಎಲ್ಲ ಹಿರಿಯ ಸಚಿವರು ಈಗ ನಿರ್ಮಾಣವಾಗಿರುವಂತಹ ಗೊಂದಲಗಳನ್ನು ನಿವಾರಣೆ ಮಾಡಿ

ಸಾಮರಸ್ಯದಿಂದ ಸಮಾಜವನ್ನು ಮುಂದಕ್ಕೆ ತೆಗೆದುಕೊಂಡು ಹೋಗುವಂತಹ ಕೆಲಸವನ್ನು ಮಾಡೇ ಮಾಡುತ್ತಾರೆಂಬ ಬಲವಾದ ವಿಶ್ವಾಸ ನನಗಿದೆ. ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರು:–** ಈಗ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದೂಡಲಾಗಿದೆ.

**(4 ಗಂಟೆ 47 ನಿಮಿಷಗಳಲ್ಲಿ ಮೇಲಿದ್ದ ಸದನವು ಪುನಃ 5 ಗಂಟೆ 41 ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದ್ದರು)**

## 21. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ: 13–12–2012ರಂದು ಕರ್ನಾಟಕ ಭೂ ಕಂದಾಯ (ಎರಡನೆ ತಿದ್ದುಪಡಿ) ವಿಧೇಯಕ, 2012ಅನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

## 22. ಸಭೆಯ ಮುಂದಿಡಲಾಗದ ಕಾಗದ ಪತ್ರಗಳು

**ಕಾರ್ಯದರ್ಶಿ:–** ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1) ಅರ್ಕ ವಿಶ್ವವಿದ್ಯಾಲಯ ವಿಧೇಯಕ, 2012

2) ದಯಾನಂದ ಸಾಗರ ವಿಶ್ವವಿದ್ಯಾಲಯ ವಿಧೇಯಕ, 2012

3) ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2012

4) ವೆಲ್ಲೂರು ತಾಂತ್ರಿಕ ಸಂಸ್ಥೆ, ಬೆಂಗಳೂರು ವಿಧೇಯಕ, 2012

5) ಶ್ರೀ ದೇವರಾಜ್ ಅರಸ್ ವಿಶ್ವವಿದ್ಯಾಲಯ ವಿಧೇಯಕ, 2012

6) ಶರಣ ಬಸವ ವಿಶ್ವವಿದ್ಯಾಲಯ ವಿಧೇಯಕ, 2012

7) ಆದಿಚುಂಚನಗಿರಿ ವಿಶ್ವವಿದ್ಯಾಲಯ ವಿಧೇಯಕ, 2012

8) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2012

**23. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**(ಅ) ಅರ್ಕ ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಅರ್ಕ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಅರ್ಕ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 62**

**ಸಭಾಪತಿಯವರು:–** "ಖಂಡ 2 ರಿಂದ 62ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 62ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–**ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಅರ್ಕ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಅರ್ಕ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಆ) ದಯಾನಂದ ಸಾಗರ ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ದಯಾನಂದ ಸಾಗರ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ದಯಾನಂದ ಸಾಗರ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 61**

**ಸಭಾಪತಿಯವರು:–** "ಖಂಡ 2 ರಿಂದ 61ರವರೆಗೆ ಎರಡೂ ಸೇರಿದಂತೆ ಈ ವಿಧೆಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 61ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ದಯಾನಂದ ಸಾಗರ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ದಯಾನಂದ ಸಾಗರ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಇ) ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರ:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 61**

**ಸಭಾಪತಿಯವರು:–** "ಖಂಡ 2 ರಿಂದ 61ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತ 61ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಈ) ವೆಲ್ಲೂರು ತಾಂತ್ರಿಕ ಸಂಸ್ಥೆ, ಬೆಂಗಳೂರು ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ವೆಲ್ಲೂರು ತಾಂತ್ರಿಕ ಸಂಸ್ಥೆ, ಬೆಂಗಳೂರು ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರ:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ವೆಲ್ಲೂರು ತಾಂತ್ರಿಕ ಸಂಸ್ಥೆ, ಬೆಂಗಳೂರು ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 61**

**ಸಭಾಪತಿಯವರು:–** "ಖಂಡ 2 ರಿಂದ 61ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 61ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ವೆಲ್ಲೂರು ತಾಂತ್ರಿಕ ಸಂಸ್ಥೆ, ಬೆಂಗಳೂರು ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012ರ ವೆಲ್ಲೂರು ತಾಂತ್ರಿಕ ಸಂಸ್ಥೆ, ಬೆಂಗಳೂರು ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಉ) ಶ್ರೀ ದೇವರಾಜ್ ಅರಸ್ ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಶ್ರೀ ದೇವರಾಜ್ ಅರಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಶ್ರೀ ದೇವರಾಜ್ ಅರಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2ರಿಂದ 61ರವರೆಗೆ**

**ಸಭಾಪತಿಯವರು:-** "ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 61ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012 ಶ್ರೀ ದೇವರಾಜ್ ಅರಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012 ಶ್ರೀ ದೇವರಾಜ್ ಅರಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಊ) ಶರಣ ಬಸವ ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಶರಣ ಬಸವ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಶರಣ ಬಸವ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2ರಿಂದ 61ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 61ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012 ಶರಣ ಬಸವ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012 ಶರಣ ಬಸವ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಋ) ಆದಿ ಚುಂಚನಗಿರಿ ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಆದಿ ಚುಂಚನಗಿರಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಆದಿ ಚುಂಚನಗಿರಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2ರಿಂದ 61ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 61ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ

ಅಂಗೀಕೃತವಾದ ರೂಪದಲ್ಲಿರುವ 2012 ಆದಿ ಚುಂಚನಗಿರಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012 ಆದಿ ಚುಂಚನಗಿರಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಋೂ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2ರಿಂದ 18ರವರೆಗೆ**

**ಸಭಾಪತಿಯವರು:–** “ಖಂಡ 2ರಿಂದ 18ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 18ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2012 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(6.00 ಗಂಟೆ)**

## 24. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:–** ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತೇನೆ.

1. ರಾಯ್ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು ವಿಧೇಯಕ, 2012
2. ಪಿ.ಇ.ಎಸ್. ವಿಶ್ವವಿದ್ಯಾಲಯ ವಿಧೇಯಕ, 2012
3. ಅಮೃತ ಸಿಂಚನ ಸ್ಪಿರಿಚ್ಯುಯಲ್ ವಿಶ್ವವಿದ್ಯಾಲಯ ವಿಧೇಯಕ, 2012
4. ರೇವಾ ವಿಶ್ವವಿದ್ಯಾಲಯ ವಿಧೇಯಕ, 2012
5. ಕೆ.ಎಲ್.ಇ. ಟೆಕ್ನಾಲಾಜಿಕಲ್ ವಿಶ್ವವಿದ್ಯಾಲಯ ವಿಧೇಯಕ, 2012
6. ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2012

## 25. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## (ಅ) ರಾಯ್ ತಾಂತ್ರಿಕ ವಿಶ್ವವಿದ್ಯಾಲಯ ಬೆಂಗಳೂರು ವಿಧೇಯಕ, 2012

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ರಾಯ್ ತಾಂತ್ರಿಕ ವಿಶ್ವವಿದ್ಯಾಲಯ ಬೆಂಗಳೂರು ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ರಾಯ್ ತಾಂತ್ರಿಕ ವಿಶ್ವವಿದ್ಯಾಲಯ ಬೆಂಗಳೂರು ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2ರಿಂದ 61ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ರಾಯ್ ತಾಂತ್ರಿಕ ವಿಶ್ವವಿದ್ಯಾಲಯ ಬೆಂಗಳೂರು ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ರಾಯ್ ತಾಂತ್ರಿಕ ವಿಶ್ವವಿದ್ಯಾಲಯ ಬೆಂಗಳೂರು ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಆ) ಪಿ.ಇ.ಎಸ್. ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ

ಪಿ.ಇ.ಎಸ್. ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತದ ರೂಪದಲ್ಲಿರುವ 2012ರ ಪಿ.ಇ.ಎಸ್. ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2ರಿಂದ 62ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 62ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 62ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಪಿ.ಇ.ಎಸ್. ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಪಿ.ಇ.ಎಸ್. ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಇ) ಅಮೃತ ಸಿಂಚನ ಸ್ಪಿರಿಚ್ಯುಯಲ್. ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಅಮೃತ ಸಿಂಚನ ಸ್ಪಿರಿಚ್ಯುಯಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> "ವಿಧಾನಸಭೆಯಿಂದ ಅಂಗೀಕೃತದ ರೂಪದಲ್ಲಿರುವ 2012ರ ಅಮೃತ ಸಿಂಚನ ಸ್ಪಿರಿಚ್ಯುಯಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2ರಿಂದ 61ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಅಮೃತ ಸಿಂಚನ ಸ್ಪಿರಿಚ್ಯುಯಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಅಮೃತ ಸಿಂಚನ ಸ್ಪಿರಿಚ್ಯುಯಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಈ) ರೇವಾ ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ರೇವಾ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತದ ರೂಪದಲ್ಲಿರುವ 2012ರ ರೇವಾ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2ರಿಂದ 61ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 61ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ರೇವಾ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ರೇವಾ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಉ) ಕೆ.ಎಲ್.ಇ. ಟೆಕ್ನಾಲಾಜಿಕಲ್ ವಿಶ್ವವಿದ್ಯಾಲಯ ವಿಧೇಯಕ, 2012**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕೆ.ಎಲ್.ಇ. ಟೆಕ್ನಾಲಾಜಿಕಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕೆ.ಎಲ್.ಇ. ಟೆಕ್ನಾಲಾಜಿಕಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2ರಿಂದ 62**

**ಸಭಾಪತಿಯವರು:–** "ಖಂಡ 2ರಿಂದ 62ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 62ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು.)

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕೆ.ಎಲ್.ಇ. ಟೆಕ್ನಾಲಾಜಿಕಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕೆ.ಎಲ್.ಇ. ಟೆಕ್ನಾಲಾಜಿಕಲ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

**(ಊ) ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2012**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಕೆ.ಎಸ್. ಈಶ್ವರಪ್ಪ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012 ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

**ಶ್ರೀ ಕೆ.ಎಸ್. ಈಶ್ವರಪ್ಪ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012ರ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಸೂದೆಗೆ ಒಪ್ಪಿಗೆ ನೀಡಲಾಯಿತು.**

## 26. ತಿದ್ದುಪಡಿ ಪ್ರಸ್ತಾವನೆ

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೆ, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿಗೆ ಮಾನ್ಯ ಸಭಾಪತಿಗಳು ಅಧ್ಯಕ್ಷರಾಗಿರುತ್ತಾರೆಂದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮಾವಳಿಗಳ ನಿಯಮ 350(2)ಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿಗೆ ಮಾನ್ಯ ಸಭಾಪತಿಗಳು ಅಧ್ಯಕ್ಷರಾಗಿರುತ್ತಾರೆಂದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮಾವಳಿಗಳ ನಿಯಮ 350(2) ಕ್ಕೆ ತಿದ್ದುಪಡಿ ತರುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

## 27. ಸಾರಾಂಶ

**ಸಭಾಪತಿಯವರು:–** ವಿಧಾನ ಪರಿಷತ್ತಿನ 120ನೇ ಉಪವೇಶನವನ್ನು ಮುಂದೂಡುವ ಪೂರ್ವದಲ್ಲಿ ಒಂದೆರಡು ವಿಷಯಗಳನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಬಹಳ ಪ್ರಮುಖವಾದಂತಹ ವಿಧೇಯಕಗಳನ್ನು ನಾವು ಪಾಸ್ ಮಾಡಿದ್ದೇವೆ. ಕಳೆದ ಅಧಿವೇಶನದಿಂದ ಈಚೆಗೆ ಮೃತರಾದ ಗಣ್ಯ ವ್ಯಕ್ತಿಗಳಿಗೆ ಸಂತಾಪ ವ್ಯಕ್ತ ಮಾಡಿದ್ದೇವೆ. ಸಭೆಯ ಮುಂದಿಡಲಾಗುವ ಕಾಗದ

ಪತ್ರಗಳು, ಲೆಕ್ಕಪತ್ರಗಳ ಸಮಿತಿ ವರದಿ, ಅರ್ಜಿ ಸಮಿತಿಯ ವರದಿಗಳನ್ನು ಇಟ್ಟಿದ್ದೇವೆ. ಜಂಟಿ ಸದನಸಮಿತಿಗಳ ಕಾಲಾವಕಾಶವನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ನಿರ್ಣಯಗಳನ್ನು ಒಪ್ಪಿದ್ದೇವೆ. ಪ್ರಸ್ತುತ ಅಧಿವೇಶನದಲ್ಲಿ 472 ಪ್ರಶ್ನೆಗಳನ್ನು ಸ್ವೀಕರಿಸಿದ್ದೆವು. ಅದರಲ್ಲಿ 90 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳೆಂದು ಅಂಗೀಕರಿಸಿದ್ದು 75 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ನೀಡಲಾಯಿತು ಹಾಗೂ 15 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು. ಒಟ್ಟು 381 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ 291 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಗಿದೆ. ನಿಯಮ 72ರ ಅಡಿಯಲ್ಲಿ, ನಿಯಮ 68ರ ಅಡಿಯಲ್ಲಿ ಸೂಚನೆಗಳನ್ನು ಸ್ವೀಕರಿಸಿ ಅದರಲ್ಲಿನ ಕೆಲವು ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡಿದ್ದೇವೆ. ಬೆಳಗಾವಿಯ ಸುವರ್ಣಸೌಧದಲ್ಲಿ ಐತಿಹಾಸಿಕ ಅಧಿವೇಶನವನ್ನು ನಡೆಸಿದ್ದೇವೆ. ಬೆಳಗಾವಿ ಮತ್ತು ಉತ್ತರ ಕರ್ನಾಟಕದ ಜನರು, ವಿದ್ಯಾರ್ಥಿಗಳು ಹಾಗೂ ಗಣ್ಯ ವ್ಯಕ್ತಿಗಳು ಬಂದು ನಮ್ಮ ಕಲಾಪಗಳನ್ನು ವೀಕ್ಷಿಸಿ ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ, ಸಭಾನಾಯಕರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿವರ್ಗದವರಿಗೆ, ಸರ್ಕಾರಿ ಮುಖ್ಯ ಸಚೇತಕರಿಗೆ, ವಿವಿಧ ಶಾಸಕಾಂಗ ಪಕ್ಷದ ನಾಯಕರುಗಳಿಗೆ ಪತ್ರಿಕಾ ಹಾಗೂ ಮಾಧ್ಯಮಗಳ ವರದಿಗಾರರಿಗೆ, ಸಚಿವಾಲಯದ ಅಧಿಕಾರಿ–ನೌಕರ ವರ್ಗದವರಿಗೆ ಹಾಗೂ ಬೆಳಗಾವಿಯ ಜಿಲ್ಲಾಧಿಕಾರಿಗಳಿಗೆ ಸದನ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಎಸ್. ಸುರೇಶ್‌ಕುಮಾರ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೆ, ನಾವು ಮೂರನೆಯ ಬಾರಿಗೆ ಬೆಳಗಾವಿಯಲ್ಲಿ ಅಧಿವೇಶನ ನಡೆಸುತ್ತಿದ್ದೇವೆ. ಈ ಬಾರಿಯ ಅಧಿವೇಶನ ಐತಿಹಾಸಿಕ ಅಧಿವೇಶನ. ಭವ್ಯವಾದ ಸುವರ್ಣಸೌಧದಲ್ಲಿ 8 ದಿವಸಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿದ್ದೇವೆ. ಪ್ರಾಯಶಃ ಈ ಒಂದು ಅಧಿವೇಶನ ರಾಜ್ಯದ ಜನತೆಯಲ್ಲಿ ಅದರಲ್ಲೂ

ವಿಶೇಷವಾಗಿ ಕರ್ನಾಟಕದ ಉತ್ತರ ಭಾಗದ ಜನತೆಯಲ್ಲಿ ವಿಶೇಷವಾದ ಕುತೂಹಲವನ್ನು ಉಂಟು ಮಾಡಿತ್ತು. ಈ ಬಾರಿ ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ವಿಷಯಗಳು ಪ್ರಸ್ತಾಪವಾಗುತ್ತವೆ, ನಮ್ಮ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತವೆ ಎನ್ನುವ ಭಾವನೆ ಇಲ್ಲಿನ ಜನರಲ್ಲಿ ಇತ್ತು. ಬಹಳ ವಿಚಿತ್ರವಾದ ಸನ್ನಿವೇಶದಲ್ಲಿ ಕಾಕತಾಳಿಯ ನ್ಯಾಯ ಎನ್ನುವ ರೀತಿಯಲ್ಲಿ ಸದನದ ಮೊದಲನೆಯ ದಿನವೇ ಕಾವೇರಿ ವಿಚಾರದಲ್ಲಿ ಸುಪ್ರೀಮ್ ಕೋರ್ಟಿನ ತೀರ್ಪು ಬಂದಿರುವ ಹಿನ್ನೆಲೆಯಲ್ಲಿ ಎಲ್ಲೋ ಉದ್ದೇಶದ ದಿಕ್ಕು ಬದಲಾಯಿತು. ಅದನ್ನು ಹೊರತುಪಡಿಸಿದರೆ ಅನೇಕ ವಿಚಾರಗಳು ಇಲ್ಲಿ ಚರ್ಚೆಯಾಗಿವೆ. ತಾವು ಹೇಳಿದ ರೀತಿಯಲ್ಲಿ ಈ ಭಾಗದ ನಾಗರೀಕರಿಗೆ ಇಲ್ಲಿ ಬಂದು ಸದನದ ಕಾರ್ಯಕಲಾಪಗಳನ್ನು ವೀಕ್ಷಿಸುವ ಅವಕಾಶ ಸಿಕ್ಕಿದೆ. ನಾನು ವೈಯುಕ್ತಿಕವಾಗಿ ಈ ಅಧಿವೇಶನ ವೀಕ್ಷಿಸಲು ಬಂದ ಶಾಲಾ ಮಕ್ಕಳನ್ನು ನಾನು ಮಾತನಾಡಿಸಿ ನಿಮಗೆ ಏನು ಅನಿಸುತ್ತಿದೆ ಎಂದು ಕೇಳಿದೆ. ಅವರು ತಮ್ಮ ಸಂತೋಷವನ್ನು, ಹೆಮ್ಮೆಯನ್ನು ಪ್ರಕಟ ಮಾಡಿದ್ದು ನನಗೆ ನಿಜವಾಗಿಯೂ ಕೂಡ ಮನಸ್ಸಿಗೆ ಹಿತ ಅನಿಸಿತು. ನಮ್ಮ ಶಾಲೆಯಲ್ಲೂ ಕೂಡ ನಾವು ಅಣಕು ಪಾರ್ಲಿಮೆಂಟ್ ಮಾಡಿದ್ದೇವೆ ಎಂದು ಹೇಳಿದರು. ಅದರಲ್ಲಿ ನಿಮ್ಮ ಲಾ ಮಿನಿಸ್ಟರ್ ಯಾರಾಗಿದ್ದರು ಎಂದು ನಾನು ಕೇಳಿದೆ. ಒಬ್ಬರನ್ನು ಕರೆದುಕೊಂಡು ಬಂದು ನನ್ನ ಮುಂದೆ ನಿಲ್ಲಿಸಿದರು. ನನಗಿಂತ ಚೆನ್ನಾಗಿ ಕೆಲಸ ಮಾಡುವಂತಹ ವಿಶ್ವಾಸ ಅವರಲ್ಲಿ ಕಾಣಿಸಿತು. ಈ ರೀತಿ ಭರವಸೆಗಳನ್ನುಂಟು ಮಾಡಿ ಸ್ವಲ್ಪ ಆ ದಿಕ್ಕಿನಲ್ಲಿ ಸಾಗಿದ ಒಂದು ಅಧಿವೇಶನ ಇದು. ವಿಶೇಷವಾಗಿ ವಿಧಾನ ಪರಿಷತ್ತಿನ ಸಭಾಪತಿಗಳಾದ ತಾವು ಅಧಿವೇಶನ ನಡೆಸುವುದು ಯಾವ ರೀತಿ ಎಂದು ಬಹಳ ಚೆನ್ನಾಗಿ ಇವತ್ತು ತೋರಿಸಿ ಕೊಟ್ಟಿದ್ದೀರಿ. ಯಾರ್‍ಯಾರು ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕು ಎಂದಿದ್ದರು, ಅವರಿಗೆಲ್ಲಾ ಅವರ ಭಾವನೆಗಳನ್ನು ಇಲ್ಲಿ ವ್ಯಕ್ತ ಮಾಡುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ವಿಶೇಷವಾಗಿ ಸುವರ್ಣಸೌಧದಲ್ಲಿ ನಡೆಯುತ್ತಿರುವ ಮೊದಲ ಅಧಿವೇಶನ ಮುಕ್ತಾಯಗೊಳ್ಳುವ ಈ ಕ್ಷಣದಲ್ಲಿ ನಾನು ಸಭಾಪತಿಗಳಾದ ತಮಗೆ ಇಡೀ ಸದನದ ಪರವಾಗಿ ನನ್ನ ಧನ್ಯವಾದಗಳನ್ನು

ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಕೂಡ ಎರಡೂ ಸದನಗಳಲ್ಲಿ ಉಪಸ್ಥಿತರಿದ್ದು ತಮ್ಮ ಭಾಗದ ಕೆಲಸವನ್ನು ಬಹಳ ಚೆನ್ನಾಗಿ ನಿರ್ವಹಿಸಿದ್ದಾರೆ. ಒಟ್ಟು ಇಲ್ಲಿ ಎಲ್ಲ ವ್ಯವಸ್ಥೆಯನ್ನು ಮಾಡುವುದಕ್ಕೆ ಮುತುವರ್ಜಿಯನ್ನು ವಹಿಸಿದ್ದಾರೆ. ಅವರಿಗೂ ಕೂಡ ನಾನು ಧನ್ಯವಾದಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಈ ಸದನದ ಸಭಾನಾಯಕರಿಗೆ, ಉಪಮುಖ್ಯಮಂತ್ರಿಗಳಿಗೆ, ನಮ್ಮ ಸಚಿವ ಸಂಪುಟದ ಎಲ್ಲಾ ಸದಸ್ಯರುಗಳಿಗೆ, ಪ್ರತಿಪಕ್ಷದ ನಾಯಕರುಗಳಿಗೆ, ಎಲ್ಲರಿಗೂ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಸದನದಲ್ಲಿ ಭಾಗಿಯಾಗಿರುವ ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಬಹಳ ದೂರದಿಂದ ಬಂದು ಇಲ್ಲಿ ಉಳಿದಾಗ ಸ್ವಲ್ಪ ತೊಂದರೆ ಉಂಟಾಗಿರಬಹುದು. ಸದನದಲ್ಲಿ ವಿಶೇಷವಾಗಿ ನನಗೆ ಖುಷಿ ಕೊಟ್ಟಿದ್ದು ಎಂದರೆ ಮಾನ್ಯ ಸದಸ್ಯರು ಬಹಳ ಫೋರ್ಸ್‌ಫುಲ್ ಆಗಿ 'ಹೌದು' ಎಂದು ಹೇಳಿದ ರೀತಿ. ನಾನು ಯಾವ ಸದನವನ್ನು ಪ್ರತಿನಿಧಿಸುತ್ತೇನೆ ಅಲ್ಲೂ ಹೋಗಿ ಇದನ್ನು ಹೇಳಬೇಕೆಂದು ಅನಿಸಿದೆ. ಆ ಸದನದಲ್ಲಿ ಅಲ್ಲಿಯ ಮಾನ್ಯ ಸದಸ್ಯರು ಹೌದು ಎನ್ನುವುದನ್ನು ಯಾವ ರೀತಿ ಹೇಳಿದರು ಎಂದು ನಾನು ಆಮೇಲೆ ಹೇಳುತ್ತೇನೆ.

(ಗೊಂದಲ)

ಅನೇಕ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ, ನಿರ್ಣಯಗಳನ್ನು ನಾವು ಮಾಡಿದ್ದೇವೆ. ಪ್ರತಿಪಕ್ಷದವರು ಕೂಡ ಇವತ್ತು ಮಧ್ಯಾಹ್ನದವರೆಗೂ ಇಲ್ಲಿ ಉಪಸ್ಥಿತರಿದ್ದರು. ಅವರು ಸಾಕಷ್ಟು ಸಹಕಾರವನ್ನೆಲ್ಲಾ ಕೊಟ್ಟಿದ್ದಾರೆ. ಈ ಘಳಿಗೆಯವರೆಗೆ ಅವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಸುಮಾರು 13 ಮಹತ್ವದ ವಿಶ್ವವಿದ್ಯಾನಿಲಯದ ವಿಧೇಯಕಗಳನ್ನು ನಾವು ಪಾಸ್ ಮಾಡಿದ್ದೇವೆ. ಜೊತೆಗೆ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಪಂಚಾಯತ್ ವ್ಯವಸ್ಥೆಯ ಬಗ್ಗೆ ಒಂದು ವಿಧೇಯಕವನ್ನು ಪಾಸ್ ಮಾಡಿದ್ದಾರೆ. ಬೆಳಗಾವಿ ಜಿಲ್ಲಾಡಳಿತ, ಸುವರ್ಣಸೌಧದ ಸುತ್ತಮುತ್ತಲಿನ ವಾತಾವರಣ ಬಂದೋಬಸ್ತ್ ಮಾಡುವುದರ ಜೊತೆಗೆ ಉಳಿಯವುದಕ್ಕೆ, ವಸತಿ, ಊಟ, ಎಲ್ಲದಕ್ಕೂ ಅವರ ಇತಿಮಿತಿಯನ್ನು ಮೀರಿ ಸಾಕಷ್ಟು ಸಹಕಾರ ಮಾಡಿದ್ದಾರೆ. ಜಿಲ್ಲಾಡಳಿತಕ್ಕೂ ಕೂಡ ನಾನು

ಧನ್ಯವಾದಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಇಡೀ ರಾಜ್ಯದಿಂದ, ರಾಜ್ಯದ ರಾಜಧಾನಿಯಾದ ಬೆಂಗಳೂರಿನಿಂದ ಬಂದ ಮತ್ತು ವಿಶೇಷವಾಗಿ ಬೆಳಗಾವಿಯ ಮಾಧ್ಯಮದ ಮಿತ್ರರಿಗೆ ನನ್ನ ಧನ್ಯವಾದಗಳನ್ನು ತಿಳಿಸಲು ಇಷ್ಟಪಡುತ್ತೇನೆ. ಎರಡೂ ಸದನದ ಕಲಾಪಗಳನ್ನು ರಾಜ್ಯದ ಜನಕ್ಕೆ ತಲುಪಿಸುವುದಕ್ಕೆ ಅವರೂ ಕೂಡ ಶ್ರಮಪಟ್ಟಿದ್ದಾರೆ. ಬೆಳಗಾವಿಯ ಮತ್ತು ಒಟ್ಟು ಜನತೆಗೆ ಒಂದು ಸಂದೇಶ ಹೋಗಲಿ. ಅವರ ಹಿತಕ್ಕೋಸ್ಕರ, ಅವರ ಸಮಸ್ಯೆಗಳ ಪರಿಹಾರಕೋಸ್ಕರ ಈ ಅಧಿವೇಶನಗಳು ವಿನಿಯೋಗವಾಗುತ್ತದೆ ಎನ್ನುವ ಸಂದೇಶ ಇಲ್ಲಿಂದ ಹೋಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರ:–** ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

**(ರಾಷ್ಟ್ರಗೀತೆಯೊಂದಿಗೆ ಸದನವು ಸಂಜೆ 6 ಗಂಟೆ 25 ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)**